ಶಿವಮೊಗ್ಗ
ಬುಧವಾರ, 18 ಮಾರ್ಚ್ 2026
ಸಂಪುಟ 16, ಸಂಚಿಕೆ 325, ಪುಟಗಳು 12+8
■ಬೆಂಗಳೂರು ■ಮಂಗಳೂರು ■ಶಿವಮೊಗ್ಗ ■ಹುಬ್ಬಳ್ಳಿ ₹4
RNI: KAR KAN 2010/64051
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

# ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಐಸಿಸ್ ನಂಟು: ಬಿಡಿಎಸ್ ವಿದ್ಯಾರ್ಥಿ ಸೆರೆ | ೧೦ | ಸಂಸತ್ತಲ್ಲಿ ಪೋಸ್ಟರ್ ಪ್ರದರ್ಶಿಸುವಂತಿಲ್ಲ | ೧೦ | ಮಕ್ಕಳಿಗೆ ಉತ್ತಮ ಶಿಕ್ಷಣ ಅತ್ಯವಶ್ಯ | ೧೦

## ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಪೂರ್ವಭಾದ್ರ

## ದಿನದ ಮಾತು

ಜ್ಞಾನವು ಮನಸ್ಸು ಮತ್ತು ಹೃದಯವನ್ನು ಪರಿಶುದ್ಧಗೊಳಿಸುವುದು.

ರಾಮಕೃಷ್ಣ ಪರಮಹಂಸ

### ಗೆದ್ದೋನು ಸೋತ, ಸೋತವನು ಸತ್ತು ಗೆದ್ದ

ಖಾರಾ ಬಾತ್

• ವಿನಾಯಕ ಭಟ್ಟ ಮೂರೂರು

• ಪುಟ ೬

## ಕಿರುಸುದ್ದಿ

### ಲೋಕಾ ಬಲೆಗೆ ಬಿದ್ದ ಪಿಡಿಒ ಮಂಜುಳಾ ಆತ್ಮಹತ್ಯೆ ಯತ್ನ

• **ಮೈಸೂರು:** ನೀರುಗಂಟಿಗೆ ಬಾಕಿ ಸಂಬಳ ನೀಡಲು 25 ಸಾವಿರ ರೂ. ಲಂಚ ಪಡೆಯುತ್ತಿದ್ದ ಹುಣಸೂರು ತಾಲೂಕಿನ ಮುಳ್ಳೂರು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ(ಪಿಡಿಒ) ಮಂಜುಳಾ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ. ದಾಳಿ ವೇಳೆ ಹರಿತವಾದ ಆಯುಧದಿಂದ ಕೈ ಕೊಯ್ದುಕೊಂಡು ಆತ್ಮಹತ್ಯೆಗೆ ಯತ್ನಿಸಿದ ಘಟನೆಯೂ ನಡೆದಿದೆ.

• ಪುಟ ೦೭

### ಇಂದಿನಿಂದ ರಾಜ್ಯಾದ್ಯಂತ ಎಸ್‌ಎಸ್‌ಎಲ್‌ಸಿ ಪರೀಕ್ಷೆ

• **ಬೆಂಗಳೂರು:** ಇಂದಿನಿಂದ (ಮಾ.18) ರಾಜ್ಯಾದ್ಯಂತ ಎಸ್‌ಎಸ್‌ಎಲ್‌ಸಿ ಪರೀಕ್ಷೆಯು ಆರಂಭವಾಗಲಿದ್ದು, ಶಿಕ್ಷಣ ಇಲಾಖೆಯು ಸಿಸಿ ಕ್ಯಾಮೆರಾ ಕಣ್ಗಾವಲಿನಲ್ಲಿ ಕಟ್ಟುನಿಟ್ಟಿನ ಭದ್ರತೆಯೊಂದಿಗೆ ಪರೀಕ್ಷಾ ಕೇಂದ್ರಗಳು ಸಿದ್ಧಗೊಂಡಿವೆ. ಮೊದಲ ದಿನ ಪ್ರಥಮ ಭಾಷೆ ವಿಷಯದ ಪರೀಕ್ಷೆ ನಡೆಯಲಿದೆ. ಪರೀಕ್ಷೆಗೆ ಒಟ್ಟು 9,02,899 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದಾರೆ.

• ಪುಟ ೩

### ಗುಜರಾತ್ ಸಿಎಂಗೆ ಏನಾಸಂ ವರದಿ ಸಲ್ಲಿಸಿದ ಸಮಿತಿ

• ಪುಟ ೧೦

### ಎನ್‌ಎಚ್‌ಆರ್‌ಸಿ ನೋಟಿಸ್ ಕೆಡಿ ಅಶ್ಲೀಲ ಹಾಡು ಸ್ಥಗಿತ

• ಪುಟ ೧೦

### ಅಕ್ರಮ ಮದ್ಯ ತಡೆಗೆ ಹೊಸ ಕಾಯ್ದೆ?

• ಪುಟ ೦೭

### ರಾಜ್ಯಸಭೆಯಲ್ಲಿ ಬಹುಮತದತ್ತ ಎನ್‌ಡಿಎ

• ಪುಟ ೧೦

### ಕನ್ನಡಿಗರಿಗೆ ಕೇಂದ್ರ ದ್ರೋಹ: ಸಿದ್ದರಾಮಯ್ಯ

• ಪುಟ ೩

### ಸವಾಲು ಎದುರಿಸಿ ಬೆಳೆದ ಆರ್‌ಎಸ್‌ಎಸ್

• ಪುಟ ೩

ಅಫ್ಘಾನ್ ಸೇನಾ ನೆಲೆಗಳ ಮೇಲೆ ಪಾಕ್ ವೈಮಾನಿಕ ದಾಳಿ

# ಅಮಾನುಷ ದಾಳಿ




• **ಇಸ್ಲಾಮಾಬಾದ್:** ಅಫ್ಘಾನಿಸ್ತಾನದ ಮಿಲಿಟರಿ ನೆಲೆಗಳು ಮತ್ತು ಭಯೋತ್ಪಾದಕ ಮೂಲಸೌಕರ್ಯಗಳ ಮೇಲೆ ಪಾಕಿಸ್ತಾನ ವೈಮಾನಿಕ ದಾಳಿ ನಡೆಸಿದೆ. ಈ ವೇಳೆ ಕಾಬೂಲ್‌ನಲ್ಲಿರುವ ಆಸ್ಪತ್ರೆ ಗುರಿಯಾಗಿಸಿ ಪಾಕ್ ನಡೆಸಿದ ದಾಳಿಯಲ್ಲಿ ಕನಿಷ್ಠ 400 ಮಂದಿ ಮೃತಪಟ್ಟಿದ್ದಾರೆ. 250ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಸುಮಾರು 2,000 ಹಾಸಿಗೆಗಳ ಸಾಮರ್ಥ್ಯವಿರುವ ದೊಡ್ಡ ಆಸ್ಪತ್ರೆಗೆ ಮಂಗಳವಾರ ರಾತ್ರಿ ಸುಮಾರು 9 ಗಂಟೆ ವೇಳೆಗೆ ದಾಳಿ ನಡೆದಿದ್ದು, ಅಫ್ಘಾನಿಸ್ತಾನದ ಇತಿಹಾಸದಲ್ಲೇ ಇದು ಅತ್ಯಂತ ಭೀಕರ ಘಟನೆಗಳಲ್ಲಿ ಒಂದಾಗಿ ದಾಖಲಾಗಿದೆ.

**ಆಪರೇಷನ್ ಗಜಬ್ ಲಿಲ್ ಹಕ್:** ಫೆ.26ರಂದು ಪ್ರಾರಂಭವಾದ ಆಪರೇಷನ್ ಗಜಬ್ ಲಿಲ್ ಹಕ್‌ನ ಭಾಗವಾಗಿ ಕಾಬೂಲ್ ಮತ್ತು ನಂಗರ್‌ಹಾರ್‌ನಲ್ಲಿ ಈ ದಾಳಿ ನಡೆಸಲಾಗಿದೆ ಎಂದಿರುವ ಪಾಕ್ ಮಾಹಿತಿ ಸಚಿವ ಅತ್ತಾವುಲ್ಲಾ ತರಾರ್ ತಾಂತ್ರಿಕ ಬೆಂಬಲ ಮೂಲಸೌಕರ್ಯ, ಮದ್ದುಗುಂಡು ಡಿಪೋಗಳು ಮತ್ತು 252 ತಾಲಿಬಾನ್ ಪೋಸ್ಟ್‌ಗಳನ್ನು ನಾಶಪಡಿಸಲಾಗಿದೆ ಎಂದಿದ್ದಾರೆ. ಈವರೆಗೆ 684 ಅಫ್ಘಾನ್ ತಾಲಿಬಾನ್ ಕಾರ್ಯಕರ್ತರು ಕೊಲ್ಲಲ್ಪಟ್ಟಿದ್ದಾರೆ ಮತ್ತು 912 ಮಂದಿ ಗಾಯಗೊಂಡಿದ್ದಾರೆ. 229 ಟ್ಯಾಂಕ್‌ಗಳು ಮತ್ತು ಶಸ್ತ್ರಸಜ್ಜಿತ ವಾಹನಗಳು ಸೇರಿದಂತೆ ದೊಡ್ಡ ಪ್ರಮಾಣದ ಮಿಲಿಟರಿ ಆಸ್ತಿಗಳನ್ನು ಹತ್ತಿಕ್ಕಲಾಗಿದೆ ಎಂದು ವರದಿಯಾಗಿದೆ.

**ನಾಗರಿಕರ ಸಾವು ತಿರಸ್ಕರಿಸಿದ ಪಾಕ್:** ನಾಗರಿಕ ಸಾವು–ನೋವುಗಳ ಬಗ್ಗೆ ಕೇಳಿಬಂದಿರುವ ಆರೋಪಗಳನ್ನು ಪಾಕಿಸ್ತಾನದ ಮಾಹಿತಿ ಸಚಿವಾಲಯ ತಿರಸ್ಕರಿಸಿದೆ. ➡ಪುಟ ೩

### ಪ್ರತಿದಾಳಿ ಎಚ್ಚರಿಕೆ

ಪಾಕಿಸ್ತಾನದ ಬಾಂಬ್ ದಾಳಿಯು ಕಾಬೂಲ್‌ನಲ್ಲಿರುವ ಮಾದಕ ವ್ಯಸನ ಮುಕ್ತ ಕೇಂದ್ರವನ್ನು ಗುರಿಯಾಗಿಸಿಕೊಂಡಿದೆ ಎಂದು ಅಫ್ಘಾನ್ ಸರ್ಕಾರದ ವಕ್ತಾರ ಹಮ್ದುಲ್ಲಾ ಫಿತ್ರಾತ್ ಆರೋಪಿಸಿದ್ದಾರೆ. ಅಫ್ಘಾನ್ ಅಧಿಕಾರಿಗಳ ಪ್ರಕಾರ, ಕನಿಷ್ಠ 400 ಜನರು ಕೊಲ್ಲಲ್ಪಟ್ಟಿದ್ದಾರೆ ಮತ್ತು 250 ಜನರು ಗಾಯ ಗೊಂಡಿದ್ದಾರೆ. ಈ ದಾಳಿ 3,000 ರೋಗಿಗಳನ್ನು ಹೊಂದಿದ್ದ ಸಂಕೀರ್ಣದ ಐದು ಬ್ಲಾಕ್‌ಗಳನ್ನು ನಾಶ ಪಡಿಸಿದೆ. ಈ ಆಕ್ರಮಣಕ್ಕೆ ಬಲವಾದ ಪ್ರತಿಕ್ರಿಯೆ ನೀಡಲಾಗುವುದು ಎಂದು ತಿಳಿಸಲಾಗಿದೆ.


### ಅನಾಗರಿಕ, ಹೇಡಿತನದ ಕೃತ್ಯ: ಭಾರತ ಖಂಡನೆ

• **ಹೊಸದಿಲ್ಲಿ:** ಅಫ್ಘಾನಿಸ್ತಾನದ ರಾಜಧಾನಿ ಕಾಬೂಲ್‌ನಲ್ಲಿರುವ ಆಸ್ಪತ್ರೆ ಮೇಲೆ ಪಾಕಿಸ್ತಾನ ನಡೆಸಿದ ವೈಮಾನಿಕ ದಾಳಿಯನ್ನು ಭಾರತ ತೀವ್ರವಾಗಿ ಖಂಡಿಸಿದ್ದು, ಈ ದಾಳಿಯನ್ನು ಅನಾಗರಿಕ ಮತ್ತು ಹೇಡಿತನದ ಕೃತ್ಯ ಎಂದು ಆಕ್ರೋಶ ವ್ಯಕ್ತಪಡಿಸಿದೆ. ಆಸ್ಪತ್ರೆಯನ್ನು ಗುರಿಯಾಗಿಸಿಕೊಂಡು ನಡೆಸಿದ ಈ ದಾಳಿ ಪಾಕಿಸ್ತಾನದ ಆಕ್ರಮಣಕಾರಿ ನಡೆ ಆಗಿದ್ದು, ಅಫ್ಘಾನಿಸ್ತಾನದ ಸಾರ್ವಭೌಮತ್ವದ ಮೇಲೆ ದಾಳಿ ಎಂದು ಭಾರತದ ವಿದೇಶಾಂಗ ಸಚಿವಾಲಯ ಹೇಳಿದೆ. ಇದು ಪ್ರಾದೇಶಿಕ ಶಾಂತಿ ಮತ್ತು ಸ್ಥಿರತೆಗೆ ಗಂಭೀರ ಬೆದರಿಕೆಯಾಗಿದೆ ಎಂದು ತಿಳಿಸಿದೆ. ಪವಿತ್ರ ರಂಜಾನ್ ತಿಂಗಳಲ್ಲಿ ಇಂತಹ ದಾಳಿ ನಡೆದಿರುವುದು ಅತ್ಯಂತ ಖಂಡನೀಯ. ಶಾಂತಿ, ಕರುಣೆ ಮತ್ತು ಆತ್ಮಪರಿಶೀಲನೆಯ ಕಾಲದಲ್ಲಿ ಆಸ್ಪತ್ರೆ ಹಾಗೂ ರೋಗಿಗಳನ್ನು ಗುರಿಯಾಗಿಸುವುದಕ್ಕೆ ಯಾವುದೇ ನೈತಿಕ ಸಮರ್ಥನೆ ಇಲ್ಲ ಎಂದು ಪಾಕಿಸ್ತಾನ ವಿರುದ್ಧ ಭಾರತ ಆಕ್ರೋಶ ವ್ಯಕ್ತಪಡಿಸಿದೆ.

### ಪ್ರತೀಕಾರದ ಪ್ರತಿಜ್ಞೆ ಮಾಡಿದ ಇರಾನ್

• **ಟೆಹ್ರಾನ್:** ಇರಾನ್‌ನ ಸರ್ವೋಚ್ಚ ನಾಯಕ ಮೊಜ್ತಬಾ ಖಮೇನಿ ಮಧ್ಯಸ್ಥಿಕೆ ರಾಷ್ಟ್ರಗಳ ಕದನ ವಿರಾಮ ಪ್ರಸ್ತಾಪಗಳನ್ನು ತಿರಸ್ಕರಿಸಿದ್ದಾರೆ. ಅಮೆರಿಕ ಮತ್ತು ಇಸ್ರೇಲ್‌ನಿಂದ ಪರಿಹಾರ ಪಡೆಯುವುದು ಅಥವಾ ಅವುಗಳ ಆಸ್ತಿ ನಾಶಪಡಿಸುವ ಇರಾನ್‌ನ ಗುರಿಯನ್ನು ಅವರು ಪುನರುಚ್ಚರಿಸಿದ್ದಾರೆ. • ವಿವರ ಪುಟ ೧೦

### ಇಸ್ರೇಲ್ ದಾಳಿ: ಇರಾನ್ ಭದ್ರತಾ ಮುಖ್ಯಸ್ಥ ಹತ!



• **ಜೆರುಸಲೇಂ:** ಇಸ್ರೇಲ್ ಮಿಲಿಟರಿ ನಡೆಸಿದ ರಾತ್ರಿವೇಳೆಯ ನಿಖರ ದಾಳಿಯಲ್ಲಿ, ಇರಾನ್‌ನ ಭದ್ರತಾ ಮುಖ್ಯಸ್ಥ ಅಲಿ ಲಾರಿಜಾನಿ ಹತರಾಗಿದ್ದಾರೆ ಎಂದು ಇಸ್ರೇಲ್ ರಕ್ಷಣಾ ಸಚಿವ ಇಸ್ರೇಲ್ ಕಾಟ್ಜ್ ಹೇಳಿದ್ದಾರೆ. • ವಿವರ ಪುಟ ೧೦

ನಿಗದಿತ ಸಮಯಕ್ಕೆ ಮಾಹಿತಿ ಒದಗಿಸಲು ಸೂಚನೆ

# ಸದನಕ್ಕೆ ಸಿಕ್ಕ ಉತ್ತರದ ವಿವರ ನೀಡಿದ ಸ್ಪೀಕರ್



• **ವಿಧಾನಸಭೆ:** ಸಚಿವರು ಹಾಗೂ ಅಧಿಕಾರಿಗಳು ಶಾಸಕರಿಗೆ ಸರಿಯಾಗಿ ಉತ್ತರ ನೀಡುತ್ತಿಲ್ಲ ಎಂದು ಬೇಸರದಿಂದ ಸೋಮವಾರ ಸಭಾತ್ಯಾಗ ಮಾಡಿದ್ದ ಸ್ಪೀಕರ್ ಯು.ಟಿ. ಖಾದರ್, ಮಂಗಳವಾರ ಯಾವ ಯಾವ ಇಲಾಖೆಯಿಂದ ಎಷ್ಟೆಷ್ಟು ಉತ್ತರಗಳು ಸಲ್ಲಿಸಲ್ಪಟ್ಟಿವೆ ಎಂದು ಸದನಕ್ಕೆ ವಿವರಿಸಿದರು.

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ 22 ಗಮನ ಸೆಳೆಯುವ ಸೂಚನೆಗೆ 6 ಉತ್ತರ, ಆರ್ಥಿಕ ಇಲಾಖೆ 33ಕ್ಕೆ 6 ಉತ್ತರ ನೀಡಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಇಲಾಖೆ 9ಕ್ಕೆ ಒಂದೂ ಉತ್ತರನೀಡಿಲ್ಲ, ಯುವಸಬಲೀಕರಣ ಇಲಾಖೆ 10ಕ್ಕೆ ಒಂದೇ ಒಂದು ಉತ್ತರ ನೀಡಿಲ್ಲ, ಸಹಕಾರ ಇಲಾಖೆ 12ಕ್ಕೆ ಒಂದೂ ಉತ್ತರ ನೀಡಿಲ್ಲ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಒಂದಕ್ಕೆ ಒಂದು ಉತ್ತರ ನೀಡಿದೆ. ಜಲಸಂಪನ್ಮೂಲ ಇಲಾಖೆ 33ಕ್ಕೆ 4, ನಗರಾಭಿವೃದ್ಧಿ ಇಲಾಖೆ 23ಕ್ಕೆ 8 ಉತ್ತರಗಳನ್ನು, ಒಳಾಡಳಿತ 35ಕ್ಕೆ 26 ಉತ್ತರಗಳನ್ನು, ಕಾನೂನು ಇಲಾಖೆ 5ಕ್ಕೆ 3 ಉತ್ತರಗಳನ್ನು, ಪ್ರವಾಸೋದ್ಯಮ ಇಲಾಖೆ 25ಕ್ಕೆ ಒಂದು ಉತ್ತರವನ್ನು, ಸಣ್ಣ ನೀರಾವರಿ ಇಲಾಖೆ 19ಕ್ಕೆ 13 ಉತ್ತರಗಳನ್ನು ನೀಡಿದೆ. ಮಾಹಿತಿ ತಂತ್ರಜ್ಞಾನ ಇಲಾಖೆ 2 ಗಮನ ಸೆಳೆಯುವ ಪ್ರಶ್ನೆಗೆ ಉತ್ತರ ನೀಡಿದೆ ಎಂದು ಸಭಾಧ್ಯಕ್ಷರು ತಿಳಿಸಿದರು.

ಈ ಕುರಿತು ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ನಿಗದಿತ ಸಮಯಕ್ಕೆ ಉತ್ತರಗಳನ್ನು ನೀಡಲು ಗಮನಹರಿಸುವಂತೆ ಸೂಚಿಸಿದರು.

> ಸಚಿವರು ಹಾಗೂ ಅಧಿಕಾರಿಗಳು ಶಾಸಕರ ಪ್ರಶ್ನೆಗಳಿಗೆ ಉತ್ತರಿಸದೆ ಇರುವುದಕ್ಕೆ ಸಭಾಧ್ಯಕ್ಷರು ತೀವ್ರ ಅಸಮಾಧಾನ ವ್ಯಕ್ತಪಡಿಸಿರುತ್ತಾರೆ. ಆದ್ದರಿಂದ ತಮ್ಮ ಇಲಾಖೆಯ ವತಿಯಿಂದ ಉತ್ತರಿಸಬೇಕಾದ ಪ್ರಶ್ನೆಗಳಿಗೆ ಉತ್ತರವನ್ನು ಸಕಾಲದಲ್ಲಿ ವಿಧಾನಮಂಡಲಕ್ಕೆ ಕಳುಹಿಸದೇ ಇರುವ ಬಗ್ಗೆ ಇಲಾಖಾ ಕಾರ್ಯದರ್ಶಿಗಳ ವಿವರಣೆಯನ್ನು ತಕ್ಷಣ ನೀಡಲು ಸೂಚಿಸಿದ್ದೇನೆ.
>
> ■ ಸಿದ್ದರಾಮಯ್ಯ, ಮುಖ್ಯಮಂತ್ರಿ

### ಸಚಿವರಿಗೆ ಸಿಎಂ ಪತ್ರ

ಶಾಸಕರಿಗೆ ಸಚಿವರು ಉತ್ತರ ನೀಡದ ಹಿನ್ನೆಲೆಯಲ್ಲಿ ಸಭಾಧ್ಯಕ್ಷ ಖಾದರ್ ಅಸಮಾಧಾನ ವ್ಯಕ್ತಪಡಿಸಿದ ಬೆನ್ನಲ್ಲೇ ಸಿಎಂ ಸಿದ್ದರಾಮಯ್ಯ ಎಲ್ಲ ಸಚಿವರಿಗೆ ಪತ್ರ ಬರೆದಿದ್ದಾರೆ. ಈ ಪತ್ರದಲ್ಲಿ 1ನೇ ಅಧಿವೇಶನದಿಂದ 9ನೇ ಅಧಿವೇಶನದವರೆಗೆ ಉತ್ತರ ಬಾರದಿರುವ ಇಲಾಖಾವಾರು ಪ್ರಶ್ನೆಗಳ ಪಟ್ಟಿಯನ್ನು ಮತ್ತು ದಿನಾಂಕ:16.03.2026ರಂದು ನಡೆದ ಸದನ ಸಭೆಯಲ್ಲಿ 245 ಪ್ರಶ್ನೆಗಳಲ್ಲಿ ಇದುವರೆಗೂ 90 ಪ್ರಶ್ನೆಗಳಿಗೆ ಮಾತ್ರ ಉತ್ತರವನ್ನು ಒದಗಿಸಿರುವುದು ಕಂಡು ಬಂದಿರುತ್ತದೆ (ಪಟ್ಟಿ ಲಗತ್ತಿಸಿದೆ). ತಮ್ಮ ಇಲಾಖೆಗೆ ಸಂಬಂಧಿಸಿದಂತೆ ಸದನದಲ್ಲಿ ಉತ್ತರಿಸಲು ಬಾಕಿ ಇರುವ ಪ್ರಶ್ನೆಗಳಿಗೆ ಉತ್ತರಗಳನ್ನು ಇದುವರೆಗೂ ಕಳುಹಿಸದೇ ಇರುವುದು ವಿಧಾನಸಭಾ ಸದಸ್ಯರುಗಳು ಸದನದಲ್ಲಿ ಚರ್ಚಿಸಲು ಅನಾನುಕೂಲತೆಯನ್ನುಂಟುಮಾಡಿರುತ್ತದೆ. ➡ಪುಟ ೩

### 8 ಐಎಎಸ್ ಅಧಿಕಾರಿಗಳಿಗೆ ಶೋಕಾಸ್ ನೋಟಿಸ್

ದಿಢೀರ್ ಬದಲಾಯ್ತು ಹವಾಮಾನ | ಸಿಡಿಲಿಗೆ ರೈತ ಬಲಿ

# ಬಿರುಗಾಳಿಸಹಿತ ಆಲಿಕಲ್ಲು ಮಳೆ

• **ಬೆಂಗಳೂರು:** ರಾಜ್ಯದ ಹಲವು ಜಿಲ್ಲೆಗಳಲ್ಲಿ ವಾತಾವರಣ ಏಕಾಏಕಿ ಬದಲಾವಣೆಯಾಗಿದ್ದು, ಹಲವು ಜಿಲ್ಲೆಗಳಲ್ಲಿ ಬಿರುಗಾಳಿ, ಆಲಿಕಲ್ಲು ಸಹಿತ ಭಾರೀ ಮಳೆಯಾಗಿದೆ. ಮಂಗಳವಾರ ಕಿತ್ತೂರು ಮತ್ತು ಕಲ್ಯಾಣ ಕರ್ನಾಟಕ ಪ್ರದೇಶಗಳ ಹಲವು ಭಾಗಗಳಲ್ಲಿ ಗುಡುಗುಸಹಿತ ಮಳೆಯಾಗಿದೆ. ಧಾರವಾಡ, ವಿಜಯಪುರ, ವಿಜಯನಗರ, ಕಲಬುರಗಿ, ಕೊಡಗು, ಚಾಮರಾಜನಗರ, ಬೆಂಗಳೂರಿನ ಹಲವೆಡೆ ವ್ಯಾಪಕ ಮಳೆಯಾಗಿದೆ.

ಉತ್ತರ ಕರ್ನಾಟಕದ ಹೆಚ್ಚಿನ ಭಾಗಗಳಲ್ಲಿ ಗರಿಷ್ಠ ತಾಪಮಾನ 40 ಡಿಗ್ರಿ ಸೆಲ್ಸಿಯಸ್ ತಲುಪಿತ್ತು. ಸಂಜೆ ಸುರಿದ ಮಳೆಯು ಈ ಪ್ರದೇಶಗಳಲ್ಲಿ ವಾತಾವಾರಣ ಸ್ವಲ್ಪ ತಂಪಾಯಿತು. ಹುಮ್ನಾಬಾದ್ ಮತ್ತು ಚಿಟಗುಪ್ಪ ತಾಲೂಕುಗಳ ಅನೇಕ ಭಾಗಗಳಲ್ಲಿ ಗುಡುಗು ಸಹಿತ ಮಧ್ಯಮ ಮಳೆಯಾಗಿದೆ. ➡ಪುಟ ೩



24 ಗಂಟೆಯಲ್ಲಿ ಮತ್ತಷ್ಟು ಮಳೆ • ಪುಟ ೩

ಗುಜರಾತ್ ತಲುಪಿದ 2ನೇ ಎಲ್‌ಪಿಜಿ ವಾಹಕ ನೌಕೆ ನಂದಾದೇವಿ

# ದೇಶದ ಅನಿಲ ಆತಂಕ ಇನ್ನಷ್ಟು ಇಳಿಕೆ

• **ಅಹ್ಮದಾಬಾದ್:** ಪಶ್ಚಿಮ ಏಷ್ಯಾದ ಸಂಘರ್ಷ ಮುಂದುವರಿದಿರುವ ನಡುವೆಯೇ, ಭಾರತದ 2ನೇ ಎಲ್‌ಪಿಜಿ ವಾಹಕ ನೌಕೆ 'ನಂದಾದೇವಿ' ಇರಾನ್ ಬಳಿಯ ಅಪಾಯಕಾರಿ ಹಾರ್ಮುಜ್ ಜಲಸಂಧಿಯನ್ನು ದಾಟಿ ಸುರಕ್ಷಿತವಾಗಿ ಗುಜರಾತಿನ ವಡ್ನೀರ್ ಬಂದರನ್ನು ಬಂದು ತಲುಪಿದೆ. ಈ ನೌಕೆ 46,500 ಮೆಟ್ರಿಕ್ ಟನ್ ದ್ರವೀಕೃತ ಪೆಟ್ರೋಲಿಯಂ ಗ್ಯಾಸ್ ಹೊತ್ತು ಬಂದಿದೆ. ಇದರೊಂದಿಗೆ ಭಾರತ ಹೊಂದಿದ್ದ ಅನಿಲ ಕುರಿತ ಆತಂಕ ಇನ್ನಷ್ಟು ತಗ್ಗಿದಂತಾಗಿದೆ.

ಇದಕ್ಕೂ ಮುನ್ನ ಭಾರತೀಯ ನೌಕೆ ಶಿವಾಲಿಕ್ ಸೋಮವಾರ ಮುಂದ್ರಾ ಬಂದರಿಗೆ ಆಗಮಿಸಿತ್ತು. ಇದರ ಬೆನ್ನಿಗೇ ಇದೀಗ 'ನಂದಾದೇವಿ' ಕೂಡ ದೇವಭೂಮಿ ದ್ವಾರಕಾ ಜಿಲ್ಲೆಯಲ್ಲಿನ ವಡ್ನೀರ್ ಬಂದರಿನಲ್ಲಿ ಲಂಗರು ಹಾಕಿದೆ. ಇದೀಗ ಈ ನೌಕೆಯಿಂದ ಎಲ್‌ಪಿಜಿ ಸರಕನ್ನು ಇನ್ನೊಂದು ನೌಕೆ ಬಿಡಬ್ಲ್ಯು ಬಿರ್ಚ್‌ಗೆ ವರ್ಗಾಯಿಸುವ ಪ್ರಕ್ರಿಯೆ ನಡೆದಿದೆ ಎಂದು ದೀನದಯಾಳ್




ಬಂದರು ಪ್ರಾಧಿಕಾರದ ಅಧ್ಯಕ್ಷ ಸುಶೀಲ್ ಕುಮಾರ್ ಸಿಂಗ್ ತಿಳಿಸಿದ್ದಾರೆ. ಈ ನೌಕೆ ಭಾಗಶಃ ಅನಿಲವನ್ನು ತಮಿಳುನಾಡಿನ ಎಣ್ಣೋರ್ ಬಂದರು ಮತ್ತು ಪಶ್ಚಿಮ ಬಂಗಾಳದ ಹಲ್ದಿಯಾ ಬಂದರು ಹಾಗೂ ಪೂರ್ವದ ಕರಾವಳಿಗೆ ವಿತರಿಸಲಿದೆ. ➡ಪುಟ ೩

# ಹುದ್ದೆ ಭರ್ತಿ ಆಗ್ರಹಿಸಿ ಪ್ರತಿಭಟನೆ

• **ಬೆಳಗಾವಿ:** ಖಾಲಿ ಹುದ್ದೆ ಭರ್ತಿ ಸೇರಿದಂತೆ ವಿವಿಧ ಬೇಡಿಕೆ ಈಡೇರಿಸಲು ಆಗ್ರಹಿಸಿ ಬೃಹತ್ ಪ್ರತಿಭಟನೆ ನಡೆಸಿದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಸಂಘಟನೆಯ ವಿದ್ಯಾರ್ಥಿಗಳನ್ನು ಪೊಲೀಸರು ಬಂಧಿಸಿ ನಂತರ ಬಿಡುಗಡೆಗೊಳಿಸಿದರು. ಎಬಿವಿಪಿ ಕಾರ್ಯಕರ್ತರು ನಗರದ ಸರ್ದಾರ್ ಮೈದಾನದಿಂದ ಮಂಗಳವಾರ ಪಾದಯಾತ್ರೆ ಮೂಲಕ ಚನ್ನಮ್ಮ ವೃತ್ತಕ್ಕೆ ಆಗಮಿಸಿದ ಪ್ರತಿಭಟನಾಕಾರರು ಚನ್ನಮ್ಮ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆ ಸ್ಥಳಕ್ಕೆ ಬೆಳಗಾವಿ ಜಿಲ್ಲಾಧಿಕಾರಿ ಮಹಮ್ಮದ್ ರೋಷನ್ ಬರಬೇಕೆಂದು ಎಬಿವಿಪಿ ಕಾರ್ಯಕರ್ತರು ಪಟ್ಟುಹಿಡಿದರು. ಯಾವುದೇ ಅನುಮತಿ ಇಲ್ಲದೆ ಪ್ರತಿಭಟನೆಗೆ ಅವಕಾಶ ಕೊಡುವುದಿಲ್ಲ ಎಂದು ಪೊಲೀಸರು ಮನವರಿಕೆ ಮಾಡುವ ಕೆಲಸ ಮಾಡಿದರು. ➡ಪುಟ ೩

» ಸರ್ಕಾರದ ವಿರುದ್ಧ ಘೋಷಣೆ
» ವಿದ್ಯಾರ್ಥಿಗಳ ಬಂಧನ, ಬಿಡುಗಡೆ

ಕ್ಷೇತ್ರೀಯ ಕಾರ್ಯವಾಹ ನಾ. ತಿಪ್ಪೇಸ್ವಾಮಿ ಮಾಹಿತಿ

# ಆರೆಸ್ಸೆಸ್‌ನಿಂದ ಹಿಂದು ಧರ್ಮದ ಪುನರುತ್ಥಾನ, ಸಮಾಜ ಸಂಘಟನೆ

• **ಬೆಂಗಳೂರು:** ಹಿಂದು ಧರ್ಮ ಎಂದಿಗೂ ನಶಿಸುವುದಿಲ್ಲ, ಇದು ಒಳಗೊಳ್ಳುವಿಕೆಯ ತತ್ವವನ್ನು ಹೊಂದಿದೆ. ಸಾವಿರಾರು ವರ್ಷಗಳಿಂದ ಅನೇಕ ಸವಾಲುಗಳನ್ನು ಎದುರಿಸಿಯೂ ಹಿಂದು ಧರ್ಮ ಉಳಿದುಕೊಂಡಿದೆ. ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್) ಕೇವಲ ಧರ್ಮದ ಪುನರುತ್ಥಾನ ಮತ್ತು ಸಮಾಜ ಸಂಘಟಿಸುವ ಕೆಲಸ ಮಾಡುತ್ತಿದೆ ಎಂದು ಆರ್‌ಎಸ್‌ಎಸ್‌ನ ಕ್ಷೇತ್ರೀಯ ಕಾರ್ಯವಾಹ ನಾ.ತಿಪ್ಪೇಸ್ವಾಮಿ ಹೇಳಿದರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ವಾರ್ಷಿಕ ನೀತಿ ನಿರೂಪಕ ಮಹಾಸಭೆ ಅಖಿಲ ಭಾರತೀಯ ಪ್ರತಿನಿಧಿ ಸಭೆಯ ಕುರಿತು ರಾಷ್ಟ್ರೋತ್ಥಾನ ಪರಿಷತ್‌ನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ವರ್ಷಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ವಿಜಯದಶಮಿ ಉತ್ಸವ ನಡೆದಿದ್ದು, ಆರ್‌ಎಸ್‌ಎಸ್‌ಗೆ ನೂರು ವರ್ಷದ ಹಿನ್ನೆಲೆಯಲ್ಲಿ ನಡೆದ ಹಿಂದು ಸಮಾಜೋತ್ಸವ ಮತ್ತು ಗೃಹಸಂಪರ್ಕ ಅಭಿಯಾನಕ್ಕೆ ಅಭೂತಪೂರ್ವ ಬೆಂಬಲ ವ್ಯಕ್ತವಾಗಿದೆ. ಆರ್‌ಎಸ್‌ಎಸ್ ಕಾರ್ಯ ಚಟುವಟಿಕೆಗಳ ಬಗ್ಗೆ ಕೋಟ್ಯಂತರ ಮಂದಿ ಮೆಚ್ಚಿಕೊಂಡಿದ್ದಾರೆ. ➡ಪುಟ ೩




### ಕರ್ನಾಟಕದಲ್ಲಿ ನಡೆದ ವಿಶೇಷ ಕಾರ್ಯಕ್ರಮ

ಕರ್ನಾಟಕ ದಕ್ಷಿಣ ಪ್ರಾಂತದಲ್ಲಿ 18ರಿಂದ 25 ವರ್ಷದೊಳಗಿನ ಯುವಕರಿಗಾಗಿ ನವೋನ್ಮೇಷ ಕಾರ್ಯಕ್ರಮ 48 ಸ್ಥಾನಗಳಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಯುವಕರಿಗೆ ಸಂಘದ ಕುರಿತು ಮಾಹಿತಿ ನೀಡಲಾಯಿತು. ➡ಪುಟ ೩

### ವಿದ್ಯುತ್ ತಗುಲಿ ಹುಲಿ ಸಾವು

ಗುಂಡ್ಲುಪೇಟೆಯ ಪಡಗೂರಲ್ಲಿ ದುರಂತ

• **ಗುಂಡ್ಲುಪೇಟೆ:** ತಾಲೂಕಿನ ಪಡಗೂರು ಗ್ರಾಮದಲ್ಲಿನ ಅಡವಿ ಮಠಕ್ಕೆ ಹೊಂದಿಕೊಂಡಂತೆ ಇರುವ ಜಮೀನೊಂದರಲ್ಲಿ ವಿದ್ಯುತ್ ಪ್ರವಹಿಸಿ ಒಂದೂವರೆ ಅಥವಾ ಎರಡು ವರ್ಷದ ಹೆಣ್ಣು ಹುಲಿ ಮೃತಪಟ್ಟಿರುವ ಘಟನೆ ನಡೆದಿದೆ.

ಆಂಧ್ರ ಮೂಲದ ರವೀಶ್ ಎಂಬುವರಿಗೆ ಪಡಗೂರು ಗ್ರಾಮದಲ್ಲಿ ಜಮೀನು ಹೊಂದಿದ್ದು ಈ ಜಮೀನನ್ನು ಗ್ರಾಮದ ಪರಮೇಶ್ವರಪ್ಪ ಎಂಬುವರು ಗುತ್ತಿಗೆ ಪಡೆದು ವ್ಯವಸಾಯ ಮಾಡುತ್ತಿದ್ದರು. ಫಸಲು ರಕ್ಷಣೆಗಾಗಿ ಅಕ್ರಮವಾಗಿ ಜಮೀನಿನ ಸುತ್ತ ಹಾಕಲಾಗಿದ್ದ ವಿದ್ಯುತ್ ಬೇಲಿ ಸ್ಪರ್ಶಿಸಿ ಸಾವಿಗೀಡಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ➡ಪುಟ ೩




ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,75,000(2,70,000) ಅಪರಂಜಿ ಚಿನ್ನ: 1,58,080(1,57,420) ಆಭರಣ ಚಿನ್ನ: 1,44,900(1,44,300) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿ.ಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ) | ಷೇರು ಸೂಚ್ಯಂಕ ಬಿಎಸ್‌ಇ 76,070(567↑) ಎನ್‌ಎಸ್‌ಇ 23,581(172↑) | $1=₹92.36

## ಸಂಪಾದಕೀಯ

### ಉತ್ತರದಾಯಿತ್ವ ಮತ್ತು ಅಧಿಕಾರ

ಸರ್ಕಾರದ ಸಚಿವರು ಸಮರ್ಪಕ ಉತ್ತರ ನೀಡುತ್ತಿಲ್ಲವೆಂದು ವಿಧಾನ ಸಭಾಧ್ಯಕ್ಷರು ಸಭಾತ್ಯಾಗ ಮಾಡಿದ ಘಟನೆ ಇತಿಹಾಸದಲ್ಲೇ ಮೊದಲು ಎಂಬುದು ಎಷ್ಟು ಸತ್ಯವೋ ಎಲ್ಲಾ ಕಾಲದಲ್ಲೂ ಸಚಿವರು ಒಂದು ಹಂತದ ನಂತರ ಅಸಹಾಯಕರೇ ಎನ್ನುವುದು ಕೂಡ ಅಷ್ಟೇ ಸತ್ಯ. ಸರ್ಕಾರದ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳಿಂದ ಮೊದಲುಗೊಂಡು ಕೆಳಹಂತದ ಗುಮಾಸ್ತರವರೆಗೆ ಎಲ್ಲರೂ ಸಚಿವರುಗಳ ಕಣ್ಣಿಗೆ ಮಣ್ಣೆರಚುವ ತಂತ್ರ ಚೆನ್ನಾಗಿ ಅರಿತವರೆ. ಎಲ್ಲಾ ಕಾಲದಲ್ಲೂ ಯಾಮಾರುವ ಸಚಿವರು ಇದ್ದೇ ಇರುತ್ತಾರೆ ಎಂಬುದನ್ನು ಈ ಹೊತ್ತಿನಲ್ಲಿ ಗಮನಿಸಬೇಕಾಗಿದೆ. ಒಂದು ಕ್ಷೇತ್ರದ ಶಾಸಕ ತನ್ನೂರಿನ ಸಮಸ್ಯೆಯನ್ನು ಸಂಬಂಧಪಟ್ಟ ಸಚಿವರ ಬಳಿಗೆ ತೆಗೆದುಕೊಂಡು ಹೋಗುತ್ತಾನೆ. ಆದರೆ ಸಚಿವರಿಗೆ ತಮ್ಮ ಇಲಾಖೆಗಳ ಸಂಪೂರ್ಣ ಕಾರ್ಯವೈಖರಿ ಮತ್ತು ನಿಯಮಗಳ ಅರಿವಂತೂ ಇರಲು ಸಾಧ್ಯವಿಲ್ಲ. ಒಂದು ಇಲಾಖೆಯ ಸಂಪೂರ್ಣ ಒಳತೋಟಿಯನ್ನು ಅರಿಯುವ ಸಚಿವ ಉತ್ತಮ ರಾಜಕಾರಣಿ ಎನಿಸಿಕೊಳ್ಳುವುದೂ ಇಲ್ಲ, ರಾಜಕಾರಣದಲ್ಲಿ ಇಲಾಖೆ ಆತನಿಗೆ ಒಂದು ಭಾಗವೇ ಹೊರತು ಆತನ ರಾಜಕೀಯ ಬದುಕಿನ ಎಲ್ಲವೂ ಅಲ್ಲ. ಅಂಥಲ್ಲಿ ಸಚಿವರು ಇಲಾಖೆಯ ಅಧಿಕಾರಿಗಳನ್ನು ನೆಚ್ಚಿಕೊಳ್ಳಲೇಬೇಕು. ಇಂಥ ಎಷ್ಟೋ ಸಚಿವರನ್ನು ಈ ಮೊದಲೂ ಕಂಡಿರುವ ಅಧಿಕಾರಿಗಳು ಅತಿ ಜಾಣರು! ಸಚಿವರಿಗೆ ಇಂಥವರನ್ನು ನಂಬಲೇಬೇಕಾದ ಅನಿವಾರ್ಯತೆ.

ಅಧಿಕಾರಿಗಳಿಗೆತುರ್ತುಎಂಬುದಿರುವುದಿಲ್ಲ,ಸಚಿವ,ಶಾಸಕರಿಗಿರುವಂತೆ ಯಾರಿಗೂ ಮುಖ ಕೊಟ್ಟು ಉತ್ತರಿಸುವ ಪ್ರಮೇಯವೂ ಇಲ್ಲ. ಇಲಾಖೆಗಳಲ್ಲಿ ಕಾರ್ಯಗಳು ನಡೆಯುವ ಒಂದು ಸಿದ್ಧಸೂತ್ರವಿರುತ್ತದೆ. ಅದರನ್ವಯ ಕಾರ್ಯಗಳೂ ನಡೆಯುತ್ತಿರುತ್ತವೆ. ಲೋಕ ಎಷ್ಟೇ ಎಐ ಕಾಲಕ್ಕೇ ಹೋಗಿರಲಿ ಸರ್ಕಾರಿ ಯಂತ್ರ ಮಾತ್ರ ಇನ್ನೂ ಐವತ್ತರ ದಶಕದ ಕಾರ್ಯವೈಖರಿಯನ್ನೇ ನೆಚ್ಚಿಕೊಂಡಿರುತ್ತವೆ. ಅಧಿಕಾರಿ ವರ್ಗಕ್ಕೆ ಆಡಳಿತ ಯಂತ್ರದ ವೇಗ ಹೆಚ್ಚಿಸುವುದು ಬೇಕಾಗಿಲ್ಲ, ವೇಗ ಹೆಚ್ಚಿದರೆ ಅವರಿಗೆ ತಮ್ಮ ಕರ್ತವ್ಯವನ್ನೂ ಹೆಚ್ಚಿಸಿಕೊಳ್ಳಬೇಕಾಗುತ್ತದೆ. ಕಂಪ್ಯೂಟರ್ ಯುಗಕ್ಕಿಂತ ಸಾಕಷ್ಟು ಮುನ್ನ ಆಡಳಿತ ವ್ಯವಸ್ಥೆಯ ಭಾಗವಾಗಿರುವ ದೊಡ್ಡ ಅಧಿಕಾರಿ ವರ್ಗ ಇಂದಿಗೂ ರಾಜ್ಯದ ವ್ಯವಸ್ಥೆಯಲ್ಲಿದೆ. ಸುಲಭಕ್ಕೆ ಬದಲಾವಣೆಗೆ ತೆರೆದುಕೊಳ್ಳದ ಪರಿಸ್ಥಿತಿ ಅವರಲ್ಲಿದೆ. ಆದರೆ ಸಮಾಜ ಸಾಕಷ್ಟು ಮುಂದೆ ಸಾಗಿದೆ. ಸಮಾಜದಲ್ಲಿ ಕಾಲದ ನಡೆಗೆ ತಕ್ಕಂತೆ ಸಮಸ್ಯೆಗಳೂ ನಿರ್ಮಾಣವಾಗಿವೆ ಮತ್ತು ಬೇಡಿಕೆಗಳೂ ಸೃಷ್ಟಿಯಾಗಿವೆ. ಸಚಿವಗಣಕ್ಕೂ ಸಮಾಜವನ್ನು ಕಾಲದ ನಡೆಗೆ ತಕ್ಕಂತೆ ಕೊಂಡೊಯ್ಯುವ ಮನಸ್ಸಿರುತ್ತದೆ. ಆದರೆ ಮಾರ್ಗವಿರುವುದಿಲ್ಲ, ಆದ್ದರಿಂದ ಇಂದಿಗೂ ರಾಜ್ಯದ ಕಂದಾಯ ಇಲಾಖೆಯಂಥ ಜಾಗಗಳಲ್ಲಿ ಕೆಲಸಗಳು ಕುಂಟುತ್ತಾ ಸಾಗುತ್ತವೆ. ವರ್ಷಗಟ್ಟಲೆ ಕಾಯುವಂಥ ಸ್ಥಿತಿ ನಿರ್ಮಾಣವಾಗುತ್ತದೆ. ಇದರ ನಡುವೆಯೇ ಅಧಿಕಾರಿ ವರ್ಗಕ್ಕೆ ಸಚಿವರನ್ನು ಹಿತಾಸಕ್ತಿಗೆ ತೆಗೆದುಕೊಳ್ಳುವ ತಂತ್ರಗಾರಿಕೆಯೂ ತಿಳಿಯುತ್ತದೆ. ಇದರ ಪರಿಣಾಮ ಸಚಿವರು ಉತ್ತರ ನೀಡದ ಉತ್ತರ ಕುಮಾರರಾಗುತ್ತಾರೆ. ಈ ಪರಿಸ್ಥಿತಿ ಸುಧಾರಣೆಯಾಗದ್ದೇನಲ್ಲ, ಸಚಿವರು ಅಧಿಕಾರಿಗಳ ಮೇಲೆ ತೀಕ್ಷ್ಣವಾದ ಕಣ್ಣಿಟ್ಟರೆ ಇಂಥ ಪರಿಸ್ಥಿತಿಯಿಂದ ಹೊರಬರಬಹುದು ಮತ್ತು ಆಡಳಿತ ವ್ಯವಸ್ಥೆಯಲ್ಲಿ ವೇಗವನ್ನು ತರಬಹುದು.

## ಪರಿಣಾಮದಿಂದ ಸಾಫಲ್ಯವನ್ನು ಅಳೆಯಬೇಕು

**ವಿದ್ಯಾಭ್ಯಾಸಸ್ಯ ಸಾಫಲ್ಯಂ ಜ್ಞೇಯಂ ನ ಪರಿಮಾಣತಃ ।**
**ಜ್ಞೇಯಂ ತತ್ಸರ್ವಥಾ ಲೋಕೇ ಮನುಷ್ಯೇ ಪರಿಣಾಮತಃ ॥ -ಸುವಚನಶತಕಂ**

ವಿದ್ಯಾಭ್ಯಾಸದ ಸಫಲತೆಯನ್ನು ವಿದ್ಯಾರ್ಥಿ ಎಷ್ಟು ಕಲಿತಿದ್ದಾನೆ ಎಂಬ ಪರಿಮಾಣದಿಂದ ಅಳೆಯಬಾರದು. ಅವನ ಮೇಲೆ ಅದು ಎಷ್ಟು ಪರಿಣಾಮವನ್ನು ಬೀರಿದೆ ಎಂಬುದರಿಂದ ಸಾಫಲ್ಯವನ್ನು ಅಳೆಯಬೇಕು- ಎಂಬುದು ಶ್ಲೋಕಾರ್ಥ.

ಶ್ಲೋಕ ಸಾಗರ

• ಡಾ.ಸೋಂದಾ ಭಾಸ್ಕರ ಭಟ್

ಶಿಕ್ಷಣ ಮೂಲಭೂತ ಹಕ್ಕುಗಳಲ್ಲೊಂದು. ಎಲ್ಲ ಶಿಕ್ಷಿತರಾಗಬೇಕು ಎಂಬುದು ಇದರ ಹಿಂದಿರುವ ಆಶಯ. ಶಿಕ್ಷಿತನು ಚೆನ್ನಾಗಿ ಅರ್ಥಮಾಡಿಕೊಂಡು ಬದುಕಬಲ್ಲ, ಸಮಾಜವನ್ನು ಕಟ್ಟಬಲ್ಲ ಸಮಾಜದಲ್ಲಿರುವ ಓರೆ ಕೋರೆಗಳನ್ನು ಸರಿಪಡಿಸಬಲ್ಲ, ಸುಂದರ ಹಾಗೂ ಸಮೃದ್ಧ ಸಮಾಜಕ್ಕೆ ಮುನ್ನುಡಿಯಾಗಬಲ್ಲ, ಅರ್ಥಪೂರ್ಣ ಸಮಾಜ ಬದುಕಿಗೆ ಕಾರಣನಾಗಬಲ್ಲ, ತಾನೂ ಅರಳಿ ಇತರರನ್ನೂ ಅರಳಿಸಬಲ್ಲ.

ಈ ಎಲ್ಲ ಕಾರಣಕ್ಕಾಗಿಯೇ ಸರ್ವ ಶಿಕ್ಷಣ ಅಭಿಯಾನದಂತಹ ಕ್ರಾಂತಿಕಾರಿ ಯೋಜನೆಯನ್ನು ತರಲಾಗಿದೆ. ಇಂದಿನ ಕಾಲಘಟ್ಟದಲ್ಲಿ ಓದಿ ಪದವಿ ಪಡೆದರೆ ಶಿಕ್ಷಿತ ಎಂಬ ಹಣೆಪಟ್ಟಿಕಟ್ಟುತ್ತೇವೆ. ಶಾಲೆಗಳಿಗೆ ತೆರಳಿ ಓದದಿದ್ದರೂ ಸಮಾಜದ ನಡುವೆ ಅನ್ಯಾನ್ಯ ಚಟುವಟಿಕೆಗಳಲ್ಲಿ ತೊಡಗಿಕೊಂಡು ಕೃಷಿಯನ್ನೋ, ವ್ಯಾಪಾರವನ್ನೂ ಸಮುದಾಯ ಮೆಚ್ಚುವಂತೆ ನಡೆಸಿಕೊಂಡು ಬಂದವನೂ ಶಿಕ್ಷಿತನೆ. ಪರಿಸರವೇ ಗುರು. ಸಮಾಜವೇ ಶಾಲೆ. ಪರಿಶ್ರಮದಿಂದ ದುಡಿದು ಪಡೆದ ಅನುಭವವೇ ಪದವಿ. ಸಮಾಜಕ್ಕೆ ಪೂರಕವಾಗಿ ಬದುಕು ನಡೆಸುತ್ತಿದ್ದರೇ ವಿನಾ ಅವರೆಂದೂ ಸಮಾಜಕ್ಕೆ ಮಾರಕವಾಗಿರಲಿಲ್ಲ.

ಇಂದು ಎಷ್ಟು ಕಲಿತಿದ್ದಾನೆ ಎಂಬುದನ್ನು ಅರಿತು ಸಾಫಲ್ಯವನ್ನು ಗುರುತಿಸುತ್ತೇವೆ. ಉನ್ನತ ಪದವಿಯನ್ನು ಪಡೆದಿದ್ದರೂ ಹೆಚ್ಚು ಡಿಗ್ರಿಗಳನ್ನು ಹೊಂದಿದ್ದಾನೆ ಎಂಬುದರ ಹಿನ್ನೆಲೆಯಲ್ಲಿ ಜೀವನದ ಸಫಲತೆಯನ್ನು ಲೆಕ್ಕ ಹಾಕುವ ಪದ್ಧತಿಯಿದೆ. ಇದು ತಪ್ಪು. ರಾಕ್ಷಸರಂತೆ ವ್ಯವಹರಿಸುವ ಸಾಕ್ಷರರಿದ್ದಾರೆ. ಅಪರೂಪದ ಪದವಿ ಪಡೆದು ಲೋಕಕಂಟಕರಾದವರಿದ್ದಾರೆ.

ಜಗತ್ತಿನಲ್ಲಿ ಭಯೋತ್ಪಾದನೆ ಮಾಡುವವರು, ಪ್ರೇರೇಪಿಸುವವರು, ಅವರನ್ನು ಸಮರ್ಥಿಸುವವರು... ಇವರೆಲ್ಲರೂ ವಿದ್ಯಾಭ್ಯಾಸ ಪಡೆದವರೆ. ನಕ್ಸಲ್ ಚಟುವಟಿಕೆಗಳಲ್ಲಿ ತೊಡಗಿದವರು ನಿರಕ್ಷರಕುಕ್ಷಿಗಳಲ್ಲ, ಇವರ ಬೆಂಬಲಕ್ಕೆ ನಿಲ್ಲುವ ಅರ್ಬನ್ ನಕ್ಸಲರು ಓದಿಕೊಂಡವರೇ. ಇವರನ್ನೆಲ್ಲ ಇವರ ಪದವಿ, ವಿದ್ಯಾಭ್ಯಾಸದ ಹಿನ್ನೆಲೆಯಲ್ಲಿ ಅಳೆಯಲು ಸಾಧ್ಯವೇ? ಸಂಸ್ಕಾರದ ಗಂಧವಿಲ್ಲದ ಇವರ ವಿದ್ಯಾ ರಾಷ್ಟ್ರ ಮಾರಕ. ಸಮಾಜ ವಿದ್ರೋಹಕ. ಓದಿದ್ದೊಂದು, ಮಾಡುವುದೊಂದು ಎಂಬಂತಾಗಬಾರದು. ದೇಶಕ್ಕೆ ವ್ಯವಸ್ಥೆಗೆ, ಇನ್ನೊಬ್ಬರ ಸಂಪತ್ತಿಗೆ ಕನ್ನ ಹಾಕುವವರು ವಿದ್ಯಾವಂತ ಸಮಾಜ ವಿಧ್ವಂಸಕರು. ಆದ್ದರಿಂದ ವಿದ್ಯಾಭ್ಯಾಸದ ಸಫಲತೆಯನ್ನು ಪಡೆದ ಪದವಿಯಿಂದ ಗುರುತಿಸಬಾರದು. ಅದು ಸಮಾಜದ ಮೇಲೆ ಎಷ್ಟು ಒಳ್ಳೆಯ ಪರಿಣಾಮವನ್ನು ಬೀರಿದೆ ಎಂಬುದರ ಮೇಲೆ ಅಳೆಯಬೇಕು. ವಿದ್ಯಾವಂತನು, ಪದವೀ ಧರನು ಸಮಷ್ಟಿಯ ಹಿತಚಿಂತನೆಯನ್ನು ಬೆಳೆಸಿಕೊಳ್ಳಬೇಕು. ತನ್ನ ಜ್ಞಾನವನ್ನು ಸಮಾಜೋನ್ನಯನಕ್ಕೆ ಬಳಸಬೇಕು. ಆಗಲೇ ವಿದ್ಯಾಭ್ಯಾಸ ಸಾಫಲ್ಯವನ್ನು ಪಡೆಯುತ್ತದೆ.

# ಗೆದ್ದೋನು ಸೋತ, ಸೋತವನು ಸತ್ತು ಗೆದ್ದ


ಎಷ್ಟು ದುಬಾರಿಯ ಸಾಧನವಿದೆ ಎಂಬುದಕ್ಕಿಂತ ಎಷ್ಟು ಚಾಲಾಕಿ ಅಥವಾ ಚತುರ ಸಾಧನ ನಿಮ್ಮ ಬಳಿ ಇದೆ ಎಂಬುದು ಹೆಚ್ಚು ಮುಖ್ಯವಾಗುತ್ತಿದೆ.

ಖಾರಾ ಬಾತ್
• ವಿನಾಯಕ ಭಟ್ಟ ಮೂರೂರು
vakradanta@gmail.com


ಯುದ್ಧದ ರೀತಿ ಬದಲಾಗಿದೆ. ಈಗಿನ ಯುದ್ಧಗಳಲ್ಲಿ ಯಾರೂ ಎಲ್ಲಿಗೂ ಹೋಗುವ ಅಗತ್ಯವೇ ಇಲ್ಲ, ಕುಳಿತಲ್ಲಿಂದಲೆ ಕ್ಷಿಪಣಿ, ಡ್ರೋಣ್ ಹಾರಿಸಿದರಾಯಿತು. ಇನ್ನೊಂದು ದೇಶದವರೂ ಅಷ್ಟೇ ಕುಳಿತಲ್ಲಿಂದಲೇ ಅವುಗಳನ್ನು ಹೊಡೆದುರುಳಿಸುತ್ತಾರೆ. ಅವರೂ ಪ್ರತಿಯಾಗಿ ಕ್ಷಿಪಣಿ–ಡ್ರೋಣ್ ಹಾರಿಸುತ್ತಾರೆ. ಯಾವ್ಯಾವುದೋ ತಂತ್ರಜ್ಞಾನದ ಮೂಲಕ ಯಾರು ಎಲ್ಲಿದ್ದಾರೆ, ಪ್ರಮುಖ ಅಸ್ತ್ರಗಳನ್ನು ಎಲ್ಲಿಟ್ಟಿದ್ದಾರೆ ಎಂಬುದನ್ನೆಲ್ಲ ಪತ್ತೆ ಮಾಡಿ, ಅಲ್ಲಿಗೆ ಸರಿಯಾಗಿ ದಾಳಿ ಮಾಡಿದರಾಯಿತು. ಇನ್ನೊಂದು ದೇಶಕ್ಕೆ ಹೋಗಬೇಕೆಂದಿಲ್ಲ, ಅವರ ವಾಯು ಗಡಿ ದಾಟಬೇಕೆಂದಿಲ್ಲ, ದುಬಾರಿ ವಿಮಾನ ಹಾರಿಸಿ, ಅದರೊಳಗೊಬ್ಬ ಪೈಲಟ್ ಕುಳಿತು, ಆ ವಿಮಾನ ವೈರಿ ನೆಲದಲ್ಲಿ ಬಿದ್ದು, ಪೈಲಟ್‌ನನ್ನು ಅವರು ಯುದ್ಧ ಖೈದಿಯಾಗಿಸಿಕೊಳ್ಳುವ ಕತೆಗಳೆಲ್ಲ ಈಗ ಹಳೆಯದಾಯಿತು. ಈಗೇನಿದ್ದರೂ ಆತ್ಮಹತ್ಯಾ ಡ್ರೋಣ್‌ಗಳ ಕಾಲ. ಅದು ನಾಶವಾಗಲೆಂದೇ ಹಾರಿಸುವುದು. ಒಂದೋ ವೈರಿಗಳು ಅದನ್ನು ಹೊಡೆದುಹಾಕುತ್ತಾರೆ ಅಥವಾ ಅದೇ ಬಿದ್ದು ಸ್ಫೋಟಿಸಿಕೊಳ್ಳುತ್ತದೆ. ಒಟ್ಟಿನಲ್ಲಿ ನಾಶವಾಗುತ್ತದೆ.

ಪಾಕಿಸ್ತಾನದ ಮೇಲೆ ಭಾರತ ನಡೆಸಿದ ಆಪರೇಷನ್ ಸಿಂದೂರ ಕೂಡ ಹೆಚ್ಚುಕಡಿಮೆ ಇದೇ ಮಾದರಿಯದ್ದು. ಭಾರತೀಯ ಯುದ್ಧ ವಿಮಾನಗಳು ಪಾಕಿಸ್ತಾನ ವಾಯುಪ್ರದೇಶವನ್ನು ಪ್ರವೇಶಿಸಲೇ ಇಲ್ಲ, ಕುಳಿತಲ್ಲಿಂದಲೆ ನಿರ್ದಿಷ್ಟ ಗುರಿಗೆ ಕ್ಷಿಪಣಿ ಹಾರಿಸಿ, ಯಶ ಸಾಧಿಸಲಾಯಿತು. ಈಗ ಅಮೆರಿಕ-ಇಸ್ರೇಲ್ ಹಾಗೂ ಇರಾನ್ ಯುದ್ಧದ ರೀತಿ ಇನ್ನೂ ವಿಚಿತ್ರ. ಅಮೆರಿಕ ಬಳಿ ಆಧುನಿಕ ಶಸ್ತ್ರಾಸ್ತ್ರ, ರಾಡಾರ್ ಗಳಿವೆ. ಅಮೆರಿಕದಷ್ಟು ಅತ್ಯಾಧುನಿಕ ಶಸ್ತ್ರಾಸ್ತ್ರಗಳು ಇರಾನ್ ಬಳಿ ಇಲ್ಲ, ಆದರೂ ಯುದ್ಧದಲ್ಲಿ ಹೆಚ್ಚು ನಷ್ಟವಾಗುತ್ತಿರುವುದು ಅಮೆರಿಕಕ್ಕೆ ಅಂದರೆ ನಂಬುತ್ತೀರಾ?

ಇರಾನ್ ಒಳಗೆ ಇಸ್ರೇಲ್ ಹಾಗೂ ಅಮೆರಿಕ ಸಾಕಷ್ಟು ಹಾನಿ ಮಾಡಿರಬಹುದು. ಒಂದೇ ಹೊಡೆತಕ್ಕೆ ಇರಾನ್ ಮುಖ್ಯಸ್ಥನನ್ನೇ ಕೊಂದು ವಿಶ್ವಕ್ಕೆ ಅಚ್ಚರಿ ಮೂಡಿಸಿರಬಹುದು. ಆದರೆ ಯುದ್ಧ ಹೆಚ್ಚು ದಿನ ನಡೆದಂತೆ ಅಮೆರಿಕಕ್ಕೆ ಹೆಚ್ಚು ನಷ್ಟವಾಗುವ ಲಕ್ಷಣಗಳು ಗೋಚರಿಸುತ್ತಿವೆ. ಯಾಕೆಂದರೆ ಅಮೆರಿಕದ ಬಳಿ ಶಸ್ತ್ರಾಸ್ತ್ರಗಳೆಲ್ಲ ಇವೆಯಾದರೂ, ಅವೆಲ್ಲ ದುಬಾರಿ ಸಾಧನಗಳು. ಅಮೆರಿಕದಲ್ಲಿ ಉತ್ಪಾದನಾ ವೆಚ್ಚ ಹೆಚ್ಚು, ಹಾಗಾಗಿಯೇ ನಾಸಾಗಿಂತ ನಮ್ಮ ಇಸ್ರೋದವರು ಕಡಿಮೆ ಕರ್ಚಿನಲ್ಲಿ ಚಂದ್ರಯಾನ ಮಾಡಲು ಸಾಧ್ಯವಾಗಿದ್ದು, ಹಾಗೆ ಅಮೆರಿಕದ ಹೆಚ್ಚು ವೆಚ್ಚಗಳ ಶಸ್ತ್ರಾಸ್ತ್ರಗಳನ್ನು ಎದುರಿಸಲು ಇರಾನ್ ಹೆಚ್ಚು ಕರ್ಚು ಮಾಡುತ್ತಿಲ್ಲ, ಉದಾಹರಣೆಗೆ ಇರಾನ್ ಕೇವಲ 20 ಲಕ್ಷ ರೂಪಾಯಿ ವೆಚ್ಚದ ಡ್ರೋಣ್‌ಗಳನ್ನು ಬಳಸುತ್ತಿದೆ. ಆ ಡ್ರೋಣ್‌ಗಳನ್ನು ಹೊಡೆದುರುಳಿಸಲು ಅದಕ್ಕಿಂತ ಮೂರ್ನಾಲ್ಕು ಪಟ್ಟು ಹೆಚ್ಚು ವೆಚ್ಚದ ಸಾಧನಗಳನ್ನು ಬಳಸಲಾಗುತ್ತಿದೆ. ಇತ್ತೀಚೆಗೆ ಅರಬ್ ದೇಶಗಳಲ್ಲಿದ್ದ ಅಮೆರಿಕದ ಅತ್ಯಾಧುನಿಕ ರಾಡಾರ್ ಒಂದನ್ನು ಇರಾನ್ ಡ್ರೋನ್ ಮೂಲಕ ನಾಶಪಡಿಸಿಬಿಟ್ಟಿತು. ಈ ಲೆಕ್ಕಾಚಾರ ನೋಡಿದರೆ ಹೆಚ್ಚು ದಿನ ಯುದ್ಧ ನಡೆದಷ್ಟೂ ನಷ್ಟ ಅಮೆರಿಕಕ್ಕೆ ಎಂಬುದು ಸ್ಪಷ್ಟ. ಇರಾನ್‌ಗೆ ನಷ್ಟವಾಗುತ್ತದೆ. ಆದರೆ ಅದರ ನಷ್ಟದ ಪ್ರಮಾಣ ಕಡಿಮೆ. ಅಮೆರಿಕ ಆರ್ಥಿಕವಾಗಿ ಬಲಿಷ್ಠವಾಗಿದೆ. ಹಾಗಾಗಿ ಅದಕ್ಕಾಗುವ ನಷ್ಟವೂ ಅಷ್ಟೇ ಬಲವಾಗಿರುತ್ತದೆ.



ಇರಾನ್‌ನ ನೌಕಾಪಡೆ ಬಳಿ ಇರುವ ಯುದ್ಧ ನೌಕೆಗಳಲ್ಲಿ ಬಹುತೇಕ ನೌಕೆಗಳು ಮೊದಲು ಸರಕುಸಾಗಣೆ ನೌಕೆಗಳಾಗಿದ್ದವು. ಅವುಗಳನ್ನೆ ಬದಲಾಯಿಸಿ ಯುದ್ಧನೌಕೆ ಮಾಡಲಾಗಿದೆ. ಹಾಗಾಗಿ ಅಮೆರಿಕದ ಒಂದು ಯುದ್ಧ ನೌಕೆಯ ಕರ್ಚು, ಇರಾನ್‌ನ ನಾಲ್ಕೈದು ಯುದ್ಧ ನೌಕೆ ನಿರ್ಮಾಣವಾಗಬಿಡುತ್ತದೆ. ಅಮೆರಿಕ ಈಗಾಗಲೇ ಇರಾನ್‌ನ ನಾಲ್ಕು ಯುದ್ಧ ನೌಕೆಗಳನ್ನು ಹೊಡೆದುಹಾಕಿದ್ದಾಗಿ ಹೇಳಿಕೊಂಡಿದೆ. ಆದರೆ ಇರಾನ್ ಏನಾದರೂ ಅಮೆರಿಕದ ಒಂದು ಯುದ್ಧ ನೌಕೆಯನ್ನು ಹೊಡೆದುರುಳಿಸಿದರೆ ಆಗ ದುಡ್ಡಿನ ಲೆಕ್ಕಾಚಾರದಲ್ಲಿ ಅಮೆರಿಕ ಹೆಚ್ಚು ನಷ್ಟದಲ್ಲಿರುತ್ತದೆ.

ಇನ್ನೊಂದು ಅತ್ಯಂತ ಆಸಕ್ತಿಕರ ಸಂಗತಿಯಿದೆ. ಅಮೆರಿಕದ ಅತ್ಯಾಧುನಿಕ ಯುದ್ಧ ನೌಕೆಯೊಂದನ್ನು ಅತ್ಯಂತ ಕಡಿಮೆ ವೆಚ್ಚದಲ್ಲಿ ನಿರ್ಮಿಸಿದ್ದ ಸಬ್ ಮೆರಿನ್ ಒಂದು ಹೊಡೆದುರುಳಿಸಲು ಯಶಸ್ವಿಯಾಗಿತ್ತು ಎಂದರೆ ನಿಮಗೆ ಅಚ್ಚರಿಯಾಗಬಹುದು. ವಿಮಾನ ಮತ್ತು ಕ್ಷಿಪಣಿವಾಹಕ ಯುದ್ಧನೌಕೆಗಳು ಸಾಮಾನ್ಯವಾಗಿ ಏಕಾಂಗಿಯಾಗಿ ಸಮುದ್ರಕ್ಕಿಳಿಯುವುದಿಲ್ಲ, ಬದಲಾಗಿ ಅಕ್ಕಪಕ್ಕದಲ್ಲಿ ರಕ್ಷಣಾ ಹಡಗುಗಳು ಕೂಡ ಇರುತ್ತವೆ. ಹೆಲಿಕಾಪ್ಟರ್‌ಗಳು, ಸಬ್ ಮೆರಿನ್ ಸ್ಕ್ಯಾನರ್‌ಗಳು ಎಲ್ಲವೂ ಇರುತ್ತವೆ. ಅಮೆರಿಕ 45,500ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿದ ಯುದ್ಧ ನೌಕೆ ಅಂದು ಉತ್ತರ ಅಂಟ್ಲಾಂಟಿಕ್ ಸುಮುದ್ರದಲ್ಲಿ ಹೋಗುತ್ತಿತ್ತು. ಇಷ್ಟೆಲ್ಲ ಅತ್ಯಾಧುನಿಕ ಸಾಧನಗಳಿದ್ದರೂ ಕೇವಲ 660ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗಿದ್ದ ಸಬ್ ಮೆರಿನ್‌ಒಂದು ಈ ಯುದ್ಧನೌಕೆಯನ್ನು ಹೊಡೆದುರುಳಿಸುವ ಹಂತ ತಲುಪಿತ್ತು. ನಿಜವಾದ ಯುದ್ಧ ಸಂದರ್ಭವಾಗಿದ್ದರೆ ಅಮೆರಿಕದ ಯುದ್ಧ ನೌಕೆ ಬಲಿಯಾಗುತ್ತಿತ್ತು.

ನ್ಯಾಟೊ ಪಡೆಗಳು ಯುದ್ಧಾಭ್ಯಾಸ ಮಾಡುತ್ತಿದ್ದ ಸಂದರ್ಭವದು. ಅಮೆರಿಕದ ವಿಮಾನವಾಹಕ ಯುದ್ಧನೌಕೆ ಡಿ. ಐಸಿನ್ ಹೋವರನ್ನು ತೇಲಾಡುವ ವಾಯುನೆಲೆ ಎಂದೇ ಕರೆಯಲಾಗುತ್ತದೆ. ಯುದ್ಧದ ಸಂದರ್ಭದಲ್ಲಿ ಒಂದು ಡಜನ್‌ಗೂ ಹೆಚ್ಚು ಯುದ್ಧ ನೌಕೆಗಳನ್ನು ಉಡಾವಣೆ ಮಾಡಬಹುದಾದ ಸಾಮರ್ಥ್ಯ ಈ ಹಡಗಿಗಿದೆ. ಹಡಗಿನ ಕೆಳಭಾಗದಲ್ಲಿ ಸೊನಾರ್ ವೇವ್‌ಗಳ ಮೂಲಕ ಹಾಗೂ ಆಗಸದಲ್ಲಿ ಹೆಲಿಕಾಪ್ಟರ್ ಹಾಗೂ ರಾಡಾರ್‌ಗಳು ಯಾವುದೇ ದಾಳಿಯನ್ನು, ವೈರಿಯ ನಡೆಯನ್ನು ಮೊದಲೇ ಗುರುತಿಸಲು ಸಿದ್ಧವಾಗಿದ್ದವು. ಇದೆಲ್ಲದರ ನಡುವೆ ಕೆನಡಾದ ನೌಕಾಪಡೆಯ ಸಣ್ಣ ಸಬ್‌ಮೆರಿನ್ ಒಂದು ಸಮುದ್ರದಾಳದಲ್ಲಿ ತಣ್ಣಗೆ ಅಮೆರಿಕದ ಯುದ್ಧ ನೌಕೆಯ ಕಡೆಗೆ ಬರುತ್ತಿತ್ತು. ಯುದ್ಧ ನೌಕೆ ಹಾಗೂ ಆಸುಪಾಸಿನ ಭದ್ರತಾ ಹಡುಗಳಲ್ಲಿರುವ ಸಾಧನಗಳು ಸಬ್ ಮೆರಿನ್ ಸೇರಿದಂತೆ ಯಾವುದೇ ವೈರಿ ದೇಶದ ಸಾಧನಗಳು ಅನತಿ ದೂರದಲ್ಲಿರುವಾಗಲೆ ಪತ್ತೆ ಮಾಡಿ, ಪ್ರತಿ ದಾಳಿಯನ್ನು ರೂಪಿಸಿ ಯುದ್ಧ ನೌಕೆಯನ್ನು ಕಾಪಾಡುತ್ತವೆ. ಆದರೆ ಇಲ್ಲಿ ಕೆನಡಾದ ಚಿಕ್ಕ ಸಬ್‌ಮೆರಿನ್ ಪತ್ತೆ ಮಾಡಲು ಅಮೆರಿಕದ ಅತ್ಯಾಧುನಿಕ ಯುದ್ಧ ನೌಕೆ ಹಾಗೂ ಅದರ ಭದ್ರತಾ ಹಡಗುಗಳು ವಿಫಲವಾದವು.

ಯುದ್ಧಾಭ್ಯಾಸದ ಸಮಯದಲ್ಲಿ ಯಾರೂ ಶಸ್ತ್ರ ಚಲಾಯಿಸುವುದಿಲ್ಲ, ಕೆಲವು ಲೆಕ್ಕಾಚಾರಗಳ ಆಧಾರದಲ್ಲಿ ಅಂತಿಮ ತೀರ್ಮಾನಕ್ಕೆ ಬರಲಾಗುತ್ತದೆ. ಈ ಲೆಕ್ಕಾಚಾರದ ಆಧಾರದಲ್ಲಿ ಅಮೆರಿಕ ಯುದ್ಧ ನೌಕೆ ನಾಶವಾಯಿತು ಎಂದು ಯುದ್ಧಾಭ್ಯಾಸದಲ್ಲಿ ಘೋಷಿಸಲಾಯಿತು.

ಇದಕ್ಕೆ ಕಾರಣವಿತ್ತು. ಸಾಮಾನ್ಯವಾಗಿ ಸಬ್ ಮೆರಿನ್‌ಗಳು ಒಂದು ಹಂತದ ಶಬ್ದವನ್ನು ಹೊರಡಿಸುತ್ತವೆ. ಯುದ್ಧ ನೌಕೆ ಹಾಗೂ ಅದರ ಭದ್ರತಾ ನೌಕೆಗಳಲ್ಲಿರುವ ಸೊನಾರ್ ವ್ಯವಸ್ಥೆ ನೀರಿನ ಆಳದಲ್ಲಿ ಓಡಾಡುವ ಸಾಧನಗಳ ಎಂಜಿನ್ ಶಬ್ದ, ಅದರ ಬೇರೆ ಬೇರೆ ಮೆಕಾನಿಕಲ್ ಶಬ್ದಗಳನ್ನು ಆಧರಿಸಿ ಅದರ ಸೂಚನೆಯನ್ನು ಯುದ್ಧ ನೌಕೆಗೆ ನೀಡುತ್ತದೆ. ಆದರೆ ಕೆನಡಾ ಸಬ್‌ಮೆರಿನ್ ನಿರ್ಮಿಸುವಾಗ ಹೊಸ ತಂತ್ರಜ್ಞಾನ ಅಳವಡಿಸಿತ್ತು. ಸಾಮಾನ್ಯವಾಗಿ ಸಬ್‌ಮೆರಿನ್‌ಗಳು ನ್ಯೂಕ್ಲಿಯರ್ ಶಕ್ತಿ ಬಳಸಿದರೆ, ಈ ಸಬ್ ಮೆರಿನನ್ನು ಡೀಸೆಲ್ ಎಂಜಿನ್ ಹಾಗೂ ಬ್ಯಾಟರಿ ಬಳಸಿ ನಿರ್ಮಿಸಲಾಗಿತ್ತು. ಹೇಗೆ ಬ್ಯಾಟರಿ ಸ್ಕೂಟರ್ ಅಥವಾ ಕಾರುಗಳು ಶಬ್ದ ಮಾಡುವುದೇ ಇಲ್ಲವೋ ಹಾಗೆ ಬ್ಯಾಟರಿ ಬಳಸಿದ ಸಬ್‌ಮೆರಿನ್ ಸಾಧಾರಣ ಸಬ್‌ಮೆರಿನ್‌ಗಿಂತ ತುಂಬಾ ಕಡಿಮೆ ಶಬ್ದ ಮಾಡುತ್ತಿತ್ತು. ಇದರಿಂದಾಗಿ ಸಮುದ್ರದಾಳದ ಬೇರೆ ಬೇರೆ ಸದ್ದುಗಳ ಜತೆಗೆ ಈ ಸಬ್‌ಮೆರಿನ್ ಶಬ್ದವನ್ನು ಪ್ರತ್ಯೇಕಿಸಿ ಗುರುತಿಸಲು ಅಮೆರಿಕದ ಯುದ್ಧ ನೌಕೆಯ ಸೊನಾರ್ ವ್ಯವಸ್ಥೆ ವಿಫಲವಾಯಿತು. ಇದರಿಂದಾಗಿ ಸಬ್‌ಮೆರಿನ್ ಅಪಾಯಕಾರಿಯಾಗುವಷ್ಟು ಹತ್ತಿರದ ತನಕ ಬರುವವರೆಗೂ ಅದನ್ನು ಗುರುತಿಸಲು ಯುದ್ಧ ನೌಕೆಗೆ ಸಾಧ್ಯವಾಗಿಲ್ಲ.

ಇದನ್ನು ಗಮನಿಸಿದಾಗ ಎಷ್ಟು ಅತ್ಯಾಧುನಿಕ ತಂತ್ರಜ್ಞಾನ ಹಾಗೂ ಹೆಚ್ಚು ದುಡ್ಡಿನಿಂದ ನಿರ್ಮಿಸಿದ ಸಾಧನಗಳನ್ನು ನೀವು ಹೊಂದಿದ್ದೀರಿ ಎಂಬುದಕ್ಕಿಂತ ಅದೆಲ್ಲ ತಂತ್ರಜ್ಞಾನವನ್ನು ಏಮಾರಿಸುವ ಹೊಸ ಮಾದರಿಯ, ನಾವಿನ್ಯವಿರುವ ಸಾಧನ ನಿಮ್ಮ ಬಳಿ ಇದೆಯೆ ಎಂಬುದು ಹೆಚ್ಚು ಮುಖ್ಯವಾಗುತ್ತದೆ. ಎಷ್ಟು ದುಬಾರಿಯ ಸಾಧನವಿದೆ ಎಂಬುದಕ್ಕಿಂತ ಎಷ್ಟು ಚಾಲಾಕಿ ಅಥವಾ ಚತುರ ಸಾಧನ ನಿಮ್ಮ ಬಳಿ ಇದೆ ಎಂಬುದು ಹೆಚ್ಚು ಮುಖ್ಯವಾಗುತ್ತಿದೆ.

# ಪ್ರಜಾಸತ್ತೆಗೆ ಮರಳಿದ ಬಾಂಗ್ಲಾ ಮತ್ತು ನೇಪಾಳ

▸ ರಾಮ್ ಮಾಧವ್

ಭಾರತವು ವಿಶ್ವದ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಷ್ಟೇ ಅಲ್ಲದೇ ಅತ್ಯಂತ ಯಶಸ್ವಿ ಪ್ರಜಾಪ್ರಭುತ್ವ ರಾಷ್ಟ್ರವೂ ಹೌದು. ದ. ಏಷ್ಯಾದ ಇತರ ದೇಶಗಳಿಗೂ ಭಾರತದ ಪ್ರಜಾತಂತ್ರವು ಒಂದು ಮಾದರಿಯಾಗಿದೆ. ಕಳೆದ ಕೆಲವು ದಶಕಗಳಲ್ಲಿ ದಕ್ಷಿಣ ಏಷ್ಯಾದ ಬಹುತೇಕ ರಾಷ್ಟ್ರಗಳು ಪ್ರಜಾಪ್ರಭುತ್ವವನ್ನು ಅಪ್ಪಿಕೊಂಡಿವೆ. ಅಲ್ಲಿನ ಜನರನ್ನು ಇದಕ್ಕೆ ಅಭಿನಂದಿಸಬೇಕಾದುದು ಸಹಜವಾದರೂ, ಇದರಲ್ಲಿ ಭಾರತದ ಶ್ರೇಯಸ್ಸು ಕೂಡಾ ಇದೆ.

ಇದೇವೇಳೆ, ಕಳೆದ ಎರಡು ತಿಂಗಳಲ್ಲಿ ಭಾರತದ ಎರಡು ನೆರೆರಾಷ್ಟ್ರಗಳು ಪ್ರಜಾತಂತ್ರಕ್ಕೆ ಮರಳಿರುವುದು ಸ್ವಾಗತಾರ್ಹ ಬೆಳವಣಿಗೆ. ರಾಜಕೀಯ ಅಸ್ಥಿರತೆಗೆ ಗುರಿಯಾಗಿದ್ದ ಬಾಂಗ್ಲಾದೇಶ ಮತ್ತು ನೇಪಾಳಗಳಲ್ಲಿ ಚುನಾವಣೆಗಳು ನಡೆದು ಪ್ರಜಾತಾಂತ್ರಿಕವಾಗಿ ಆಯ್ಕೆಯಾದ ಸರಕಾರಗಳು ಅಧಿಕಾರಕ್ಕೆ ಬಂದವು.


ಬಾಂಗ್ಲಾದಲ್ಲಿ ಫೆ. 12ರಂದು ಚುನಾವಣೆ ನಡೆಯುವ ಮೂಲಕ ಮಹಮ್ಮದ್ ಯೂನುಸ್‌ರ 18 ತಿಂಗಳ ಹಂಗಾಮಿ ಆಡಳಿತಕ್ಕೆ ತೆರೆ ಬಿತ್ತು. ನೇಪಾಳದಲ್ಲಿ ಐದು ತಿಂಗಳ ಹಿಂದೆ ಯುವಜನಾಂಗದಿಂದ ಕ್ರಾಂತಿ ನಡೆದು ಚುನಾಯಿತ ಸರಕಾರವು ಪದಚ್ಯುತಗೊಂಡಿತ್ತು. ಅಲ್ಲಿ ಮಾರ್ಚ್ 5ರಂದು ಚುನಾವಣೆ ನಡೆದು ಹೊಸ ಸರಕಾರವೊಂದು ಅಧಿಕಾರ ವಹಿಸಿಕೊಂಡಿತು. ಎರಡೂ ದೇಶಗಳಲ್ಲಿನ ಚುನಾವಣೆಗಳು ಶಾಂತಿಯುತವಾಗಿ ನಡೆದುದು ಹಾಗೂ ಮತದಾರರು ತಮ್ಮ ಸರಕಾರವನ್ನು ಆರಿಸುವಲ್ಲಿ ಪ್ರಬುದ್ಧತೆಯನ್ನು ಮೆರೆದುದು ಗಮನಾರ್ಹ ಅಂಶವಾಗಿದೆ.

ಬಾಂಗ್ಲಾ ಮತ್ತು ನೇಪಾಳ ಎರಡೂ ದೇಶಗಳಲ್ಲಿ ಹಿಂದಿನ ಆಡಳಿತದ ವಿರುದ್ಧ ಜನರು ದಂಗೆ ಎದ್ದಿದ್ದರು. ಬಾಂಗ್ಲಾದಲ್ಲಿ 2024ರ ಆಗಸ್ಟ್‌ನಲ್ಲಿ ಶೇಖ್ ಹಸೀನಾ ಸರಕಾರವನ್ನು ಉರುಳಿಸಲಾಗಿದ್ದರೆ, 2025ರ ಸೆಪ್ಟೆಂಬರ್‌ನಲ್ಲಿ ನೇಪಾಳದಲ್ಲಿ ಕೆ.ಪಿ. ಶರ್ಮಾ ಒಲಿ ಸರಕಾರವನ್ನು ಉರುಳಿಸಲಾಗಿತ್ತು. ಇವೆರಡು ದಂಗೆಗಳು ಶಾಂತಿಯುತವಾಗಿರಲಿಲ್ಲ, ಹಿಂಸಾತ್ಮಕ ಪ್ರತಿಭಟನೆಗಳು ನಡೆದಿದ್ದವು. ಬಾಂಗ್ಲಾದಲ್ಲಿ ನಡೆದ ಹಿಂಸೆಯಲ್ಲಂತೂ 850 ಜನರು ಸತ್ತಿರುವುದಾಗಿ ಅಲ್ಲಿನ ಆಡಳಿತ ತಿಳಿಸಿದೆ. ಆದರೆ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ತನಿಖಾ ವರದಿ ಹೇಳುವ ಪ್ರಕಾರ ಸತ್ತವರ ಸಂಖ್ಯೆ 1400ಕ್ಕಿಂತ ಅಧಿಕ. ನೇಪಾಳದಲ್ಲಿ 76 ಮಂದಿ ಸತ್ತಿರುವುದಾಗಿ ಅಧಿಕೃತವಾಗಿ ಹೇಳಲಾಗಿತ್ತು. ಆದರೆ ಅಲ್ಲಿನ ಹಿಂಸಾಚಾರದಲ್ಲಿ ಅದಕ್ಕಿಂತ ಹೆಚ್ಚು ಮಂದಿ ಸತ್ತಿರುವ ಸಾಧ್ಯತೆಗಳಿವೆ.

ನೇಪಾಳ ಮತ್ತು ಬಾಂಗ್ಲಾ ಎರಡೂ ದೇಶಗಳಲ್ಲಿ ಹಠಾತ್ತನೆ ಹಿಂಸಾಚಾರ ಸ್ಫೋಟಗೊಂಡುದ್ದನ್ನು ಕಾಣುವಾಗ ಇದರ ಹಿಂದೆ ವಿದೇಶೀ ಕೈವಾಡದ ಸಂಚಿದೆ ಎಂಬ ಅನುಮಾನ ಮೂಡಿತ್ತು. ಆಡಳಿತ ಬದಲಾವಣೆಯ ಉದ್ದೇಶದಿಂದ ವಿದೇಶಿ ಶಕ್ತಿಗಳು ಈ ಹಿಂಸಾತ್ಮಕ ಪ್ರತಿಭಟನೆಗೆ ಕುಮ್ಮಕ್ಕು ನೀಡಿರಬೇಕೆಂದು ಆರೋಪ ಕೇಳಿಬಂದಿತ್ತು.ಇದೇವೇಳೆ ಇವೆರಡೂ ದೇಶಗಳಲ್ಲಿ ಜನರು ದಂಗೆ ಏಳಲು ಬೇಕಾದ ಪರಿಸ್ಥಿತಿಯೂ ಉಂಟಾಗಿತ್ತೆಂಬುದು ಸುಳ್ಳಲ್ಲ. ಎರಡೂ ದೇಶಗಳಲ್ಲಿ ಜನರ ಬವಣೆ ಹೆಚ್ಚಿತ್ತು. ಆಡಳಿತದಲ್ಲಿ ಭ್ರಷ್ಟಾಚಾರ ಮಿತಿಮೀರಿತ್ತು. ಇವನ್ನೆಲ್ಲಾ ಸಹಿಸಲಾಗದೆ ಜನರು ದಂಗೆ ಎದ್ದಿರುವುದೂ ಸಹಜವಾಗಿದೆ.

ದಂಗೆಯ ಬಳಿಕ ಬಾಂಗ್ಲಾ ದೇಶವು ಬಳಿಕ ಚುನಾಯಿತವಲ್ಲದ ಮಹಮ್ಮದ್ ಯೂನುಸ್ ಆಡಳಿತದ ಕೈವಶದಲ್ಲಿತ್ತು. ಆದರೆ ಈ ಮಧ್ಯಂತರ ಸರಕಾರದ ಆಡಳಿತ ಕೂಡಾ ಸಮಾಧಾನಕರವಾಗಿರಲಿಲ್ಲ, ಅಲ್ಲಿನ ಜನರಿಗೂ ಈ ಆಡಳಿತದ ಧೋರಣೆ ರೋಸಿಹೋಗಿತ್ತು. ಜತೆಗೇ ಭಾರತಕ್ಕೆ ಕೂಡಾ ಯೂನುಸ್ ಆಡಳಿತವು ಅಸಹನೀಯ ಪರಿಸ್ಥಿತಿಗಳನ್ನು ಸೃಷ್ಟಿಸಿತ್ತು. ಯೂನುಸ್ ಸರಕಾರವು ಭಾರತ ವಿರೋಧಿ ನಿಲುವನ್ನು ನಿರ್ಲಜ್ಜವಾಗಿ ಪ್ರದರ್ಶಿಸಿದ್ದರಿಂದ ಉಭಯ ದೇಶಗಳ ನಡುವಿನ ಸಂಬಂಧವು ಹಿಂದೆಂದೂ ಕಾಣದಷ್ಟು ಪ್ರಪಾತಕ್ಕೆ ಕುಸಿದಿತ್ತು.

ಬಾಂಗ್ಲಾ ಚುನಾವಣೆಗೆ ಸಿದ್ಧತೆ ನಡೆದಂತೆಯೇ ಹಿಂದಿನ ಸರಕಾರದ ಪದಚ್ಯುತಿಯಲ್ಲಿ ಪ್ರಮುಖಪಾತ್ರ ವಹಿಸಿದ್ದ ವಿದ್ಯಾರ್ಥಿಗಳ ಸಂಘಟನೆಗಳನ್ನು ಒಳಗೊಂಡ ನ್ಯಾಷನಲ್ ಸಿಟಿಜನ್ಸ್ ಪಾರ್ಟಿ ಮೂಲಭೂತವಾದಿ ಜಮಾತ್-ಇ-ಇಸ್ಲಾಮೀ ಪಕ್ಷದೊಂದಿಗೆ ಕೈಜೋಡಿಸಿತ್ತು. ಈ ಮೈತ್ರಿಕೂಟಕ್ಕೆ ಮಧ್ಯಂತರ ಸರಕಾರದ ಪರೋಕ್ಷ ಬೆಂಬಲವೂ ಇತ್ತು. ಹಾಗಾಗಿ ಜಮಾತ್-ಇ-ಇಸ್ಲಾಮೀ ಮತ್ತು ಎನ್‌ಸಿಪಿ ಮೈತ್ರಿಕೂಟವು ಚುನಾವಣೆಯಲ್ಲಿ ಗೆಲುವು ಸಾಧಿಸಬಹುದು ಎಂಬುದಾಗಿ ಎಲ್ಲರೂ ಭಾವಿಸಿದ್ದರು. ಚುನಾವಣೆ ಸಂದರ್ಭದಲ್ಲಿ ಕೂಡಾ ಭಾರೀ ಹಿಂಸಾಚಾರ ನಡೆಯಬಹುದೆಂದು ಭೀತಿ ಪಡಲಾಗಿತ್ತು.



ಆದರೆ ಬಾಂಗ್ಲಾದ ಮತದಾರರು ಬುದ್ಧಿವಂತಿಕೆ ಮತ್ತು ಪ್ರಬುದ್ಧತೆಯನ್ನು ಪ್ರದರ್ಶಿಸಿದರು.ಚುನಾವಣೆ ವೇಳೆ ಹಿಂಸಾಚಾರಕ್ಕೆ ಹೆಚ್ಚಿನ ಅಸ್ಪದ ನೀಡಲಿಲ್ಲ, ಮೂಲಭೂತವಾದಿ ಪಕ್ಷವನ್ನು ತ್ಯಜಿಸಿ ಬಾಂಗ್ಲಾದೇಶ್ ನ್ಯಾಷನಲ್ ಪಾರ್ಟಿ (ಬಿಎನ್‌ಪಿ)ಗೆ ಭಾರೀ ಬಹುಮತ ನೀಡಿದರು.ಅಧಿಕ ಜನಸಂಖ್ಯೆ ಹೊಂದಿರುವ ಬಾಂಗ್ಲಾದೇಶಕ್ಕೆ ಈ ಸಂಕೀರ್ಣ ಸಮಯದಲ್ಲಿ ಒಂದು ವಿಶ್ವಾಸಾರ್ಹ ಹಾಗೂ ಅನುಭವೀ ಸರಕಾರದ ಅಗತ್ಯವಿತ್ತು. ಜನರು ಈ ಕಾರಣದಿಂದಲೇ ತಾರೀಖ್ ರೆಹಮಾನ್ ನೇತೃತ್ವದ ಬಿಎನ್‌ಪಿಯನ್ನು ಅಧಿಕಾರಕ್ಕೆ ಏರಿಸಿದರು.

ಬಾಂಗ್ಲಾದಲ್ಲಿ ಹಲವು ರಾಜಕೀಯ ಸುಧಾರಣೆ ಮತ್ತು ಸಾಂವಿಧಾನಿಕ ಬದಲಾವಣೆಗೆ ಚುನಾವಣೆ ಸಂದರ್ಭದಲ್ಲಿಯೇ ಜನಮತ ಗಣನೆ ನಡೆದಿತ್ತು. ಈ ಸುಧಾರಣೆಗಳಿಗೆ ಬಾಂಗ್ಲಾ ಜನರು ಸಮ್ಮತಿ ಸೂಚಿಸಿದ್ದರು. ಅದನ್ನು ಅನುಷ್ಠಾನಕ್ಕೆ ತರುವುದು ಈಗ ಬಿಎನ್‌ಪಿ ಸರಕಾರದ ಆದ್ಯತೆಯಾಗಿದೆ. ಜನಮನತಗಣನೆಯಲ್ಲಿ ಪಾಲ್ಗೊಂಡ 87 ಮಿಲಿಯ ಮತದಾರರಲ್ಲಿ ಶೇ. 83ರಷ್ಟು ಮಂದಿ ಸಾಂವಿಧಾನಿಕ ಸುಧಾರಣೆಗಳಿಗೆ ಸಮ್ಮತಿ ಸೂಚಿಸಿದ್ದಾರೆ. ಪ್ರಧಾನಿಯ ಅಧಿಕಾರಾವಧಿಯನ್ನು ಎರಡು ಅವಧಿಗಳಿಗೆ ಸೀಮಿತಗೊಳಿಸುವುದು, ಸಂಸತ್ತಿನಲ್ಲಿ ಮತ್ತು ಸರಕಾರಿ ಹುದ್ದೆಗಳಲ್ಲಿ ಯುವಕರಿಗೆ ಶೇ. 5ರಷ್ಟು ಪ್ರಾತಿನಿಧ್ಯ ಕಲ್ಪಿಸುವುದು, ಸ್ವತಂತ್ರ ಭ್ರಷ್ಟಾಚಾರ ವಿರೋಧಿ ಮಂಡಳಿ ಸ್ಥಾಪಿಸುವುದು, ಅಲ್ಪಸಂಖ್ಯಾತರಿಗೆ ಸಮಾನ ಶಿಕ್ಷಣ ಮತ್ತು ಆರೋಗ್ಯದ ಹಕ್ಕು ಕಲ್ಪಿಸುವುದು ಮುಂತಾದವು ಈ ಸುಧಾರಣೆಗಳಲ್ಲಿ ಸೇರಿದೆ. ಯೂನುಸ್ ಆಡಳಿತವು ಸಂಪೂರ್ಣವಾಗಿ ಭಾರತ ವಿರೋಧಿ ನೀತಿಯನ್ನು ಅನುಸರಿಸಿದ್ದರೆ ನೂತನ ಪ್ರಧಾನಿ ರೆಹಮಾನ್ ಅವರು ಭಾರತದೊಂದಿಗಿನ ಸಂಬಂಧವನ್ನು ಸುಧಾರಿಸುವ ಇಂಗಿತ ವ್ಯಕ್ತಪಡಿಸಿರುವುದು ಸ್ವಾಗತಾರ್ಹ.

**ನೇಪಾಳದಲ್ಲಿ ಹೊಸ ಸರಕಾರ**

ನೇಪಾಳದಲ್ಲಿ ಜನರು ಹೊಸದಾದ ಪಕ್ಷವೊಂದನ್ನು ಅಧಿಕಾರಕ್ಕೆ ಏರಿಸಿದ್ದಾರೆ. ಕೆಲವೇ ವರ್ಷಗಳ ಹಿಂದೆ ಅಸ್ತಿತ್ವಕ್ಕೆ ಬಂದ ರಾಷ್ಟ್ರೀಯ ಸ್ವತಂತ್ರ ಪಾರ್ಟಿ (ಎನ್‌ಸಿಪಿ) ಭಾರೀ ಬಹುಮತ ಪಡೆದು ಅಧಿಕಾರಕ್ಕೆ ಏರಿದೆ. ಪತ್ರಕರ್ತನಾಗಿದ್ದುಕೊಂಡು ರಾಜಕಾರಣಿಯಾದ 50ರ ಹರೆಯದ ರವಿ ಲಮಿಚನೆ ಮತ್ತು 35ರ ಹರೆಯದ ರ‍್ಯಾಪ್ ಸಂಗೀತಗಾರ ಬಾಲೇಂದ್ರ ಷಾ ಈ ಪಕ್ಷವನ್ನು ಕಟ್ಟಿದವರು. ನೇಪಾಳದಲ್ಲಿ ಯುವ ಮತದಾರರು ಶೇ. 40ರಷ್ಟಿದ್ದು, ಅವರು ಹೊಸಬರನ್ನೇ ಆಡಳಿತಕ್ಕೆ ಏರಿಸುವ ಉತ್ಸಾಹ ತೋರಿದ್ದಾರೆ. ಬಾಲೇಂದ್ರ ಷಾ ನೇಪಾಳದ ಹೊಸ ಪ್ರಧಾನಿಯಾಗಿದ್ದಾರೆ. ಬಹುಕಾಲದಿಂದ ಅಸ್ತಿತ್ವದಲ್ಲಿದ್ದ ನೇಪಾಳಿ ಕಾಂಗ್ರೆಸ್ ಮತ್ತು ನೇಪಾಳಿ ಕಮ್ಯುನಿಸ್ಟ್ ಪಕ್ಷ ಮೊದಲಾದವು ಮೂಲೆಗುಂಪಾಗಿವೆ. ಈ ಎರಡು ಪಕ್ಷಗಳ ಪ್ರಮುಖ ಮುಖಂಡರನ್ನು ಕೂಡಾ ಜನರು ಮೂಲೆಗೆ ತಳ್ಳಿದ್ದಾರೆ.

1991ರಲ್ಲಿ ರಾಜಸತ್ತೆಯ ಬದಲಿಗೆ ನೇಪಾಳವು ಪ್ರಜಾಸತ್ತೆಯನ್ನು ಅಪ್ಪಿಕೊಂಡಿತ್ತು. ಆದರೆ ಅಲ್ಲಿಂದ ಬಳಿಕ ನೇಪಾಳದಲ್ಲಿ ಸ್ಥಿರ ಸರಕಾರವೊಂದು ರೂಪುಗೊಂಡಿರಲೇ ಇಲ್ಲ. 1990ರಿಂದ 2008ರ ಅವಧಿಯಲ್ಲಿ 16 ಪ್ರಧಾನಿಗಳು ಆಳಿದ್ದರು. 2008ರಲ್ಲಿ ರಾಜಸತ್ತೆಯನ್ನು ಸಂಪೂರ್ಣ ಅಳಿಸಿಹಾಕಲಾಯಿತು. ಅಲ್ಲಿಂದ ಬಳಿಕ ಕೂಡಾ 15 ಪ್ರಧಾನಿಗಳು ನೇಪಾಳವನ್ನು ಆಳಿದ್ದಾರೆ. 2008ರಿಂದಾರಂಭಿಸಿ ಕಳೆದ 4 ಚುನಾವಣೆಗಳಲ್ಲಿ ನೇಪಾಳದ ಜನರು ಯಾವ ಪಕ್ಷಕ್ಕೂ ಬಹುಮತ ನೀಡಿರಲಿಲ್ಲ, ಹಾಗಾಗಿ ಸರಕಾರಗಳು ಪದೇ ಪದೇ ಬದಲಾಗುತ್ತಿದ್ದವು. ಈ ಹಿನ್ನೆಲೆಯಲ್ಲಿ ಮೊನ್ನೆ ನಡೆದ ಚುನಾವಣೆ ನೇಪಾಳದ ಪ್ರಜಾತಾಂತ್ರಿಕ ಇತಿಹಾಸದಲ್ಲಿ ಮಹತ್ವದ ಬೆಳವಣಿಗೆಯಾಗಿದೆ. ಏಕಪಕ್ಷವು ಬಹುಮತ ಪಡೆಯಲು ಸಫಲವಾಗಿದೆ. ಇದರಿಂದಾಗಿ ಅಲ್ಲಿ ಸ್ಥಿರ ಸರಕಾರವೊಂದು ರೂಪುಗೊಳ್ಳುವ ಆಶಾವಾದ ಮೂಡಿದೆ.

''ಪ್ರಜಾಪ್ರಭುತ್ವ ಒಳ್ಳೆಯದು. ಬೇರೆ ವ್ಯವಸ್ಥೆಗಳು ಕೆಟ್ಟದಾಗಿರುವುದರಿಂದ ನಾನಿದನ್ನು ಹೇಳುತ್ತಿದ್ದೇನೆ'' ಎಂದು ನೆಹರೂ ಹಿಂದೊಮ್ಮೆ ಹೇಳಿದ್ದರು. ಯಾವುದೇ ಪ್ರಜಾಪ್ರಭುತ್ವವು ಪರಿಪೂರ್ಣವಲ್ಲ, ಯಾವುದೇ ಚುನಾವಣೆಯೂ ಸಂಪೂರ್ಣ ದೋಷಪೂರಿತವಲ್ಲ, ಆದರೆ ಭಾರತವು ಪ್ರಜಾತಂತ್ರವನ್ನು ಅನುಸರಿಸುವಲ್ಲಿ ಇತರ ದೇಶಗಳಿಗೆ ಯಾವಾಗಲೂ ಮಾದರಿಯಾಗಿದೆ. ಪಾಕಿಸ್ತಾನ ಹೊರತುಪಡಿಸಿದರೆ ಭಾರತದ ಉಳಿದೆಲ್ಲಾ ನೆರೆದೇಶಗಳು ಪ್ರಜಾಪ್ರಭುತ್ವವನ್ನು ಅನುಸರಿಸುತ್ತಿವೆ. ಪಾಕಿಸ್ತಾನದಲ್ಲಿ ಮಾತ್ರ ಹೆಸರಿಗೆ ಪ್ರಜಾಪ್ರಭುತ್ವ ಸರಕಾರವಿದ್ದರೂ ಆಡಳಿತದ ಹಿಡಿತ ಇರುವುದು ಸೇನೆಯಲ್ಲಿ, ಮೂರು ವರ್ಷಗಳ ಹಿಂದೆ ಮಾಲ್ದೀವ್ಸ್ ಮತ್ತು ಶ್ರೀಲಂಕಾಗಳಲ್ಲೂ ಶಾಂತಿಯುತ ಮತದಾನ ನಡೆದು ಆಡಳಿತ ಬದಲಾವಣೆ ಉಂಟಾಗಿತ್ತು. ಕಳೆದ ವರ್ಷ ಡಿಸೆಂಬರ್‌ನಲ್ಲಿ ಮ್ಯಾನ್ಮಾರ್‌ನಲ್ಲಿ ಕೂಡಾ ಸಂಸದೀಯ ಚುನಾವಣೆ ನಡೆದಿತ್ತು. ಹೊಸ ಸರಕಾರದಡಿಯಲ್ಲಿ ಇವೆಲ್ಲ ದೇಶಗಳು ಭಾರತದೊಂದಿಗೆ ಉತ್ತಮ ಸಂಬಂಧವನ್ನು ಹೊಂದಿವೆ.

ನೆರೆ ದೇಶಗಳ ಜನರೊಂದಿಗೆ ನಮ್ಮ ದೇಶದ ಜನರೂ ಕೂಡಾ ಉತ್ತಮ ಬಾಂಧವ್ಯವನ್ನು ಹೊಂದಿದ್ದಾರೆ. ಈ ಹಿನ್ನೆಲೆಯಲ್ಲಿ ಭಾರತ ಸರಕಾರವು ನೇಪಾಳ ಮತ್ತು ಬಾಂಗ್ಲಾದೇಶಗಳ ನೂತನ ಸರಕಾರಗಳೊಂದಿಗೆ ಉತ್ತಮ ಬಾಂಧವ್ಯ ಬೆಳೆಸಿಕೊಂಡು ದ್ವಿಪಕ್ಷೀಯ ಸಂಬಂಧವನ್ನು ಬೆಳೆಸಿಕೊಳ್ಳಬಹುದಾಗಿದೆ.ಕಳೆದೊಂದು ವರ್ಷದಿಂದ ಈ ದೇಶಗಳೊಂದಿಗೆ ಹದಗೆಟ್ಟ ಸಂಬಂಧವನ್ನು ಮತ್ತೆ ಸರಿದಾರಿಗೆ ತರಬಹುದಾಗಿದೆ. ಅಟಲ್‌ಬಿಹಾರಿ ವಾಜಪೇಯಿ ಹಿಂದೊಮ್ಮೆ ಹೇಳಿದ್ದರಲ್ಲವೆ ''ನಾವು ನಮ್ಮ ಸ್ನೇಹಿತರನ್ನು ಬದಲಾಯಿಸಬಹುದು, ಆದರೆ ನೆರೆಕರೆಯನ್ನು ಬದಲಾಯಿಸಲಾಗುವುದಿಲ್ಲ''.

# 'ಆರ್ಡರ್ಲಿ' ಪದ್ಧತಿ ಇನ್ನೂ ರದ್ದುಗೊಂಡಿಲ್ಲವೆ?

ಆರ್ಡರ್ಲಿ ವ್ಯವಸ್ಥೆ ರದ್ದುಗೊಂಡಿದೆ ಎಂದೇ ಭಾವಿಸಲಾಗಿತ್ತು. ಆದರೆ ಇನ್ನೂ ಇದೆ ಎಂಬುದು ಪೊಲೀಸ್ ವರಿಷ್ಠಾಧಿಕಾರಿಯ ಮಾತಿನಿಂದ ಸಾಬೀತಾಗಿದೆ.

▸ ಹೊಸೂರು ರತ್ನಾಕರ ಶೆಟ್ಟಿ

ಜನಸಾಮಾನ್ಯರ ನೆನಪು ಮಾಸುವುದು ಬಹು ಬೇಗ. ಕಹಿ ನೆನಪುಗಳಾಗಲಿ, ಸಮಾಜವೇ ತಲೆ ತಗ್ಗಿಸುವ ಘಟನೆಗಳಾಗಲಿ ಮುನ್ನೆಲೆಗೆ ಬಂದಾಗ ಆಂದೋಲನೆಯೇ ನಡೆದು, ತದನಂತರ ಸರ್ಕಾರದ ಕ್ರಮ/ಭರವಸೆಯ ನಂತರ ಎಲ್ಲವೂ ಸರಿಹೋಯಿತೆಂದು ಮುನ್ನಡೆಯುವ ಜನರು ಕ್ರಮೇಣ ಅಂತಹ ಘಟನಾವಳಿಗಳನ್ನ ಮರೆತು ಬಿಡುತ್ತಾರೆ. ಆದರೆ ವಾಸ್ತವವಾಗಿ ಅಂತಹ ಅನಿಷ್ಟ ಪದ್ಧತಿಗಳು ತೆರೆಯ ಮರೆಯಲ್ಲಿ ಅವ್ಯಾಹತವಾಗಿ ನಡೆಯುತ್ತಿರುವುದು ಮತ್ತೆ ಮುಖ್ಯವಾಹಿನಿಯಲ್ಲಿ ಸದ್ದು ಮಾಡಿದಾಗ ಬೆಚ್ಚಿಬೀಳುವ ಸರದಿ ಅದೇ ಜನಸಾಮಾನ್ಯರದ್ದು. ನಮ್ಮ ಪೊಲೀಸ್ ವ್ಯವಸ್ಥೆಯಲ್ಲಿ ಅನಾದಿಕಾಲದಿಂದಲೂ ಅನುಸರಿಸಿಕೊಂಡು ಬಂದ 'ಆರ್ಡರ್ಲಿ' (ಮನೆಗೆಲಸದ ಸಿಪಾಯಿಗಳು) ವ್ಯವಸ್ಥೆ ಇನ್ನೂ ಮುಂದುವರಿಯುತ್ತಿದೆ.

ಪೊಲೀಸ್ ವ್ಯವಸ್ಥೆಯ ಕೆಳಹಂತದಲ್ಲಿ ಕೆಲಸಮಾಡುವ ನೌಕರರನ್ನು ಉನ್ನತ ಪೊಲೀಸ್ ಅಧಿಕಾರಿಗಳ ಮನೆಯಲ್ಲಿ ಕೆಲಸ ಮಾಡಲು ಬಳಸಿಕೊಳ್ಳುತ್ತಿರುವುದು ಎಲ್ಲರೂ ಸಮಾನರು ಎನ್ನುವ ಪ್ರಜಾಪ್ರಭುತ್ವ ವ್ಯವಸ್ಥೆಯ ಅಣಕವೇ ಸರಿ. ಶತಮಾನಗಳ ಕಾಲ ನಮ್ಮನ್ನಾಳಿದ ಆಂಗ್ಲರಿಂದ ಬಳುವಳಿ ಪಡೆದ ಹಲವು ಅನಿಷ್ಟ ಪದ್ಧತಿಗಳಲ್ಲಿ ಇದೂ ಒಂದು. ಆದರೆ ಸ್ವಾತಂತ್ರ್ಯದ ಅಮೃತೋತ್ಸವ ದಾಟಿರುವ ಈ ಹಂತದಲ್ಲೂ ಈ ಪದ್ಧತಿ ಇನ್ನೂ ಇರುವುದು ದುರದೃಷ್ಟಕರ. ಕೆಚ್ಚೆದೆಯ, ಸ್ವಾಭಿಮಾನಿಗಳಾದ ಚಂದ್ರಶೇಖರ ಆಜಾದ್, ಭಗತ್ ಸಿಂಗ್, ಸುಭಾಷ್ ಚಂದ್ರ ಬೋಸ್‌ರಂತವರ ಪರಂಪರೆ ಹೊಂದಿರುವ ನಮ್ಮ ಯುವಜನತೆ ಒಂದಿಷ್ಟೂ ಪ್ರತಿಭಟನೆ ತೋರದೆ, ಹೀನಾಯ ವ್ಯವಸ್ಥೆಗೆ ಒಗ್ಗಿಕೊಳ್ಳುತ್ತಿರುವುದು ಮಾತ್ರ ವಿಪರ್ಯಾಸವೇ ಸರಿ.

ದೇಶದ ಕಾನೂನು ಪರಿಸ್ಥಿತಿ ಸುಸ್ಥಿತಿಯಲ್ಲಿರಲು ಸದಾ ಜಾಗರೂಕರಾಗಿರುವ ಕ್ರಿಯಾಶೀಲ ಪೊಲೀಸ್ ವ್ಯವಸ್ಥೆ ಅತ್ಯವಶ್ಯಕ. ಈ ನಿಟ್ಟಿನಲ್ಲಿ ಎಲ್ಲಾ ಚುನಾಯಿತ ಸರ್ಕಾರದ ಪ್ರಥಮ ಆದ್ಯತೆ ಸಮರ್ಪಕ ಕಾನೂನು ಪರಿಪಾಲನೆಯೇ ಆಗಿರುತ್ತದೆ. ಇದಕ್ಕಾಗಿ ಸರ್ಕಾರವು ಪೊಲೀಸ್ ವ್ಯವಸ್ಥೆಯನ್ನು ಕಾಲಕಾಲಕ್ಕೆ ಆಧುನೀಕರಿಸುವುದರ ಜೊತೆಗೆ ಕ್ರಿಯಾಶೀಲತೆಯನ್ನು ಮೈಗೂಡಿಸಿಕೊಂಡು ಪಾರದರ್ಶಕವಾಗಿ ಕಾರ್ಯನಿರ್ವಹಿಸುವತ್ತ ಶ್ರಮಪಡುತ್ತಿದೆ. ಕೆಲವೊಮ್ಮೆ ಪೊಲೀಸ್ ಸಿಬ್ಬಂದಿಗಳ ಕೊರತೆಯಿಂದ ಕಾನೂನು ಸುವ್ಯವಸ್ಥೆ ಕಾಪಾಡಲು ಹರಸಾಹಸ ಪಡುತ್ತಿರುವುದನ್ನು ಕೂಡಾ ನಾವು ಆಗಾಗ ನೋಡುತ್ತಲೇ ಇದ್ದೇವೆ. ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಕಾನೂನುಬದ್ಧವಾಗಿ ಪೊಲೀಸ್ ಇಲಾಖೆಗೆ ನೇಮಕಗೊಂಡು, ತಿಂಗಳುಗಳ ಕಾಲ ಕಠಿಣ ತರಬೇತಿ ಪಡೆದ ಸಿಬ್ಬಂದಿಗಳ ಸೇವೆಯನ್ನು ಅಧಿಕಾರಿಗಳು ತಮ್ಮ ಮನೆಕೆಲಸಗಳಿಗೆ ಬಳಸಿಕೊಳ್ಳುತ್ತಿರುವುದು ಎಷ್ಟು ಸರಿ? ತರಬೇತಿ ಪಡೆದ ಸಿಬ್ಬಂದಿಗಳ ಸೇವೆಯು ಸದಾ ದೇಶಕ್ಕಾಗಿ ಮುಡುಪಿರಲಿ ಎನ್ನುವ ಉದಾತ್ತ ಮನೋಭಾವವುಳ್ಳ ಪೊಲೀಸ್ ಉನ್ನತಾಧಿಕಾರಿಗಳ ಕೊರತೆ ಇದೆಯೆ ?

ಈ 'ಆರ್ಡರ್ಲಿ' ವ್ಯವಸ್ಥೆಯ ಬಗ್ಗೆ ದಶಕಗಳ ಹಿಂದೆಯೇ ಪ್ರತಿಭಟನೆ ನಡೆದಿತ್ತು. ಪ್ರತಿಭಟನೆಯ ಕಾವು ತೀವ್ರಗೊಂಡ ಬಳಿಕ ಇಂತಹ ಅನಿಷ್ಟ ಪದ್ಧತಿಗೆ ಅಂತ್ಯ ಹಾಡುವುದಾಗಿ ಸರ್ಕಾರ ಆಶ್ವಾಸನೆ ನೀಡಿತ್ತು. ಆದರ ನಂತರ ಎಲ್ಲವೂ ಸರಿಹೋಯಿತೆಂದು ಎಲ್ಲರು ತಿಳಿದಿದ್ದರು. ಆದರೆ ಇತ್ತೀಚೆಗೆ ಪೊಲೀಸ್ ಇಲಾಖೆಯ ಮಹಾನಿರ್ದೇಶಕ (ಡಿ.ಜಿ.ಪಿ) ಎಮ್.ಎ.ಸಲೀಮ್‌ರವರು ಹೊರಡಿಸಿದ ಆದೇಶದಲ್ಲಿ ರಾಜ್ಯದಲ್ಲಿರುವ ಸುಮಾರು ಮೂರು ಸಾವಿರ 'ಆರ್ಡರ್ಲಿ'ಗಳ ಸೇವೆಗಳನ್ನು ರದ್ದು ಪಡಿಸಿರುವುದಾಗಿ ಘೋಷಿಸಿರುವುದನ್ನು ಜನರು ಆಶ್ಚರ್ಯಚಕಿತರಾಗಿದ್ದಾರೆ. ದಶಕಗಳ ಹಿಂದೆಯೇ ಈ ಅನಿಷ್ಟ ಪದ್ಧತಿಗೆ ಅಂತ್ಯ ಹಾಡುವುದಾಗಿ ಸರ್ಕಾರ ಘೋಷಿಸಿದ್ದರೂ, ಮದ್ರಾಸ್ ಹೈಕೋರ್ಟ್ ಇದನ್ನು ಅನಾದಿಕಾಲದ ಜೀತ ಪದ್ಧತಿ ಎಂದು ಜರೆದಿದ್ದರೂ ಈ ಪದ್ಧತಿ ಇನ್ನೂ ಚಾಲನೆಯಲ್ಲಿರುವುದು ದಿಟವೆಂದು ಸಾಬೀತಾಗಿದೆ. ಇದು ಹಲವು ಪ್ರಶ್ನೆಗಳಿಗೆ ಎಡೆಮಾಡಿಕೊಡುತ್ತಿದೆ.

ಪ್ರತಿ ತಿಂಗಳು ಸರ್ಕಾರದಿಂದ ಸಂಬಳ ಪಡೆದು, ತನ್ನ ಉಪಯುಕ್ತ ಸೇವೆಯನ್ನು ಮರೆತು, ಮೇಲಧಿಕಾರಿಗಳ ಮನೆಯಲ್ಲಿ ಬಿಟ್ಟಿ ಕೆಲಸ ಮಾಡುತ್ತಿರುವ ಪೊಲೀಸ್ ಸಿಬ್ಬಂದಿಗಳನ್ನು ಗುರುತಿಸುವುದೇಕೆ ಸರಕಾರಕ್ಕೆ ಸಾಧ್ಯವಾಗಿಲ್ಲ? ಇದರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಿಲ್ಲವೇಕೆ? ನಿಯಮಾವಳಿಗಳನ್ನು ರೂಪಿಸುವ ಉನ್ನತಾಧಿಕಾರಿಗಳೇ ಈ ಅನಿಷ್ಟ ಪದ್ಧತಿಗೆ ಸಮರ್ಥನೆ ನೀಡುತ್ತಿದ್ದಾರೆ ಎನ್ನುವ ಅನುಮಾನ ಎಲ್ಲರನ್ನು ಕಾಡುತ್ತಿದೆ. ಉನ್ನತಾಧಿಕಾರಿಗಳೇ ಸ್ವಯಂಪ್ರೇರಿತರಾಗಿ ತಮ್ಮ ಅಡಿಯಾಳಾಗಿ ದುಡಿಯುತ್ತಿರುವ ಸಿಬ್ಬಂದಿಗಳನ್ನು ಬಿಡುಗಡೆಗೊಳಿಸಬಹುದು. ಆ ಮೂಲಕ ಸಿಬ್ಬಂದಿಗಳು ಇಲಾಖೆಯ ಮುಖ್ಯವಾಹಿನಿಗೆ ಬಂದು ಸಿಬ್ಬಂದಿಗಳ ಕೊರತೆಯಿಂದ ಹೆಣಗಾಡುವ ವ್ಯವಸ್ಥೆಯನ್ನು ತುಸು ತಿಳಿಗೊಳಿಸುವಂತೆ ಮಾಡಬಹುದು.

ಪ್ರಸ್ತುತ ಕರ್ನಾಟಕದಲ್ಲಿರುವ ಹಲವಾರು ಸಮಸ್ಯೆಗಳು ವೈರುಧ್ಯಗಳಿಂದ ಕೂಡಿದ್ದು ಹರಿತವಾದ ಕತ್ತಿಯ ಉಭಯ ತುದಿಗಳಂತೆ ಯಾವ ಕಡೆ ವಾಲಿದರೂ ಹಾನಿಯು ನಿಶ್ಚಿತವೆನ್ನುವಂತಿದೆ. ಉದಾಹರಣೆಗೆ ಜಾತಿ ಒಳ ಮೀಸಲಾತಿ ಜಾರಿ ಮಾಡಿದರೆ ಒಂದು ವರ್ಗಕ್ಕೆ ಅನ್ಯಾಯವಾದರೆ, ಜಾರಿ ಮಾಡದಿದ್ದರೆ ಮತ್ತೊಂದು ವರ್ಗಕ್ಕೆ ಅನ್ಯಾಯವಾಗಲಿದೆ. ಆದರೆ ಆರ್ಡರ್ಲಿ ಪದ್ಧತಿಯನ್ನು ನಿರ್ಮೂಲನೆ ಮಾಡುವುದರಿಂದ ಕೇವಲ ಕೆಲವೇ ಮೇಲಾಧಿಕಾರಿಗಳಿಗೆ ಅಸಮಾಧಾನವಾಗಬಹುದೇ ಹೊರತು ಪೊಲೀಸ್ ಇಲಾಖೆ ಹಾಗೂ ಸಮಾಜದ ಮೇಲೆ ಸಕಾರಾತ್ಮಕ ಪರಿಣಾಮ ಬೀರಲಿದೆ.

ಪೊಲೀಸ್ ಇಲಾಖೆಯ ಹೊಣೆ ಹೊತ್ತಿರುವ ಗೃಹಮಂತ್ರಿಗಳು ಮನಸ್ಸು ಮಾಡಿದರೆ ಕೆಲವೇ ಗಂಟೆಗಳಲ್ಲಿ ಈ ಅನಿಷ್ಟ ಪದ್ಧತಿಗೆ ಅಂತಿಮ ಹಾಡಬಹುದು. ಅಂತಹ ಎದೆಗಾರಿಕೆಯ ನಿರ್ಧಾರ ಹೊರಬೀಳಲಿ ಎನ್ನುವುದೇ ಬಹುಜನರ ಆಶಯ ಕೂಡಾ. 'ಆರ್ಡರ್ಲಿ' ವ್ಯವಸ್ಥೆಯಲ್ಲಿ ಸುಮಾರು ಮೂರು ಸಾವಿರ ಸಿಬ್ಬಂದಿಗಳಿದ್ದು, ಇವರ ವಾರ್ಷಿಕ ವೆಚ್ಚ 78 ಕೋಟಿ ರೂಪಾಯಿಯನ್ನು ಆರ್ಥಿಕ ಹೊರೆಯಿಂದ ಬಸವಳಿದ ಕರ್ನಾಟಕ ಸರ್ಕಾರವೇ ಭರಿಸಬೇಕಾಗಿರುವುದು ಅನಿವಾರ್ಯವಾಗಿದೆ. ಹಾಗಾಗಿ ಕರ್ನಾಟಕ ಸರ್ಕಾರ ಈ ನಿಟ್ಟಿನಲ್ಲಿ ತುರ್ತಾಗಿ ಅಗತ್ಯ ಕ್ರಮ ಕೈಗೊಳ್ಳಬೇಕಾಗಿದೆ.

## ಸವಾಲು ಎದುರಿಸಿ ಬೆಳೆದ ಆರ್‌ಎಸ್‌ಎಸ್

• **ಬೆಂಗಳೂರು:** ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್) ಸಮಾಜದ ಹಿತಕ್ಕಾಗಿ ಕೆಲಸ ಮಾಡುತ್ತಿದೆ. ಟೀಕೆ ಮಾಡುವವರು ಸಂಘದ ಹತ್ತಿರ ಬಂದು ಕಾರ್ಯವೈಖರಿಯನ್ನು ನೋಡಿದಾಗ ಮಾತ್ರ ಸತ್ಯದ ಅರಿವಾಗುತ್ತದೆ. ಈ ಹಿಂದೆಯೂ ಸಂಘದ ಮೇಲೆ ನಿಷೇಧ ಹೇರಲಾಗಿತ್ತು, ಆದರೆ ಸಂಘವು ಎಲ್ಲಾ ಸವಾಲುಗಳನ್ನು ಎದುರಿಸಿ ಬೆಳೆದಿದೆ ಎಂದು ಆರ್‌ಎಸ್‌ಎಸ್‌ನ ಕ್ಷೇತ್ರೀಯ ಕಾರ್ಯವಾಹ ನಾ.ತಿಪ್ಪೇಸ್ವಾಮಿ ಹೇಳಿದರು.

ರಾಷ್ಟ್ರೋತ್ಥಾನ ಪರಿಷತ್‌ನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶಾದ್ಯಂತ ಆರ್‌ಎಸ್‌ಎಸ್‌ನ ಶತಾಬ್ದಿ ಕಾರ್ಯಕ್ರಮಗಳು ಅತ್ಯಂತ ಯಶಸ್ವಿಯಾಗಿ ನಡೆಯುತ್ತಿದ್ದು, ಪಂಚಪರಿವರ್ತನೆಯ 5 ವಿಷಯಗಳಾದ ಸಾಮಾಜಿಕ ಸಾಮರಸ್ಯ, ಕುಟುಂಬ ಪ್ರಬೋಧನ, ಪರಿಸರ ಸಂರಕ್ಷಣೆ, ಸ್ವದೇಶಿ ಜೀವನಶೈಲಿ, ನಾಗರಿಕ ಶಿಷ್ಟಾಚಾರ ವಿಷಯಗಳಿಗೆ ಒತ್ತುಕೊಡಲಾಗಿದೆ. ಸಮಾಜದಿಂದ ಅತ್ಯುತ್ತಮ ಪ್ರತಿಕ್ರಿಯೆ ಲಭಿಸಿದೆ ಎಂದು ತಿಳಿಸಿದರು.

**ರಾಜ್ಯದಲ್ಲಿ ರಾಣಿ ಅಬ್ಬಕ್ಕ 500 - ಕಾರ್ಯಕ್ರಮ:** ರಾಣಿ ಅಬ್ಬಕ್ಕ ಅವರ 500ನೇ ಜನ್ಮ ವರ್ಷಾಚರಣೆಯ ಅಂಗವಾಗಿ ಅವರ ಇತಿಹಾಸವನ್ನು ರಾಜ್ಯಾದ್ಯಂತ ತಿಳಿಸುವ ಉದ್ದೇಶದಿಂದ ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶಿಕ್ಷಕ ಸಂಘದ ವತಿಯಿಂದ ಮಂಗಳೂರು ವಿಭಾಗದ ಮೂರು ಜಿಲ್ಲೆಗಳಲ್ಲಿ ರಾಣಿ ಅಬ್ಬಕ್ಕ ಅವರ ಕುರಿತು 100 ಉಪನ್ಯಾಸ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಸುಮಾರು 125 ವಿದ್ಯಾಸಂಸ್ಥೆಗಳ ಸಹಯೋಗದೊಂದಿಗೆ 75 ಜನ ಸಂಪನ್ಮೂಲ ವ್ಯಕ್ತಿಗಳು, 300 ಗಣ್ಯರು ಭಾಗವಹಿಸಿದ್ದು, ಸುಮಾರು 23000 ವಿದ್ಯಾರ್ಥಿಗಳನ್ನು ತಲುಪಿದ್ದು, 2500 ಶಿಕ್ಷಕರು ಕಾರ್ಯಕ್ರಮಕ್ಕೆ ಸಾಕ್ಷಿಯಾದರು ಎಂದು ತಿಳಿಸಿದರು.



ಸಮಾಜವೇ ಜಾಗೃತಗೊಂಡು ಧರ್ಮ ರಕ್ಷಣೆ ಮಾಡಬೇಕು ಎಂಬುದು ಸಂಘದ ಆಶಯವಾಗಿದೆ.
■ ನಾ.ತಿಪ್ಪೇಸ್ವಾಮಿ, ಆರ್‌ಎಸ್‌ಎಸ್ ಕ್ಷೇತ್ರೀಯ ಕಾರ್ಯವಾಹ

ಶತಾಬ್ದಿ ವರ್ಷದ ನಂತರ ಆರ್‌ಎಸ್‌ಎಸ್‌ನ ಭೌಗೋಳಿಕ ರಚನೆಯಲ್ಲಿ ಬದಲಾವಣೆಯಾಗಲಿದ್ದು, ಸುಮಾರು ಪ್ರತಿ ಎರಡು ಕೋಟಿ ಜನಸಂಖ್ಯೆಗೆ ಒಂದು ಸಂಭಾಗವನ್ನು ರಚಿಸಲಾಗುವುದು. ಅದರಂತೆ ಕರ್ನಾಟಕದಲ್ಲಿ ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಮಂಗಳೂರು ಎಂಬ 4 ಸಂಭಾಗಗಳ ರಚನೆಯಾಗಲಿದೆ ಎಂದು ತಿಳಿಸಿದರು.

### ಡ್ರಗ್ಸ್ ಮುಕ್ತ ಕರ್ನಾಟಕ ಅಭಿಯಾನ

ಪರಿವರ್ತನಾ ಟ್ರಸ್ಟ್ ಬೆಂಗಳೂರು ವತಿಯಿಂದ ಕರ್ನಾಟಕ ದಕ್ಷಿಣದ 23 ಜಿಲ್ಲೆಯ 86 ತಾಲ್ಲೂಕುಗಳಲ್ಲಿ ಡ್ರಗ್ಸ್ ಜಾಗೃತಿ ಅಭಿಯಾನವನ್ನು ಆಯೋಜಿಸಲಾಗಿತ್ತು. 55 ದಿನಗಳ ಅವಧಿಯಲ್ಲಿ 181 ಜಾಗೃತಿ ಸಭೆ ಯೋಜನೆ ಮಾಡಲಾಗಿತ್ತು. ಇದರಲ್ಲಿ 52 ವಿವಿಧ ಸಂಘಟನೆಗಳು, 187 ವಿದ್ಯಾಸಂಸ್ಥೆಗಳ ಸಹಯೋಗದಲ್ಲಿ 60500 ವಿದ್ಯಾರ್ಥಿಗಳು, 6,865 ಸಾರ್ವಜನಿಕರು ಭಾಗವಹಿಸಿದ್ದರು. 3,675 ಕಿ.ಮೀ ಜಾಥಾ ನಡೆಸಲಾಗಿದೆ. ಮುಂದಿನ ಐದು ವರ್ಷದವರೆಗೆ ದೀರ್ಘಾವಧಿ ಜಾಗೃತಿ ಅಭಿಯಾನ ನಡೆಸುವ ಬಗ್ಗೆ ಯೋಚಿಸಲಾಗಿದೆ. ವಿದ್ಯಾಸಂಸ್ಥೆಗಳು ಮತ್ತು ಇಲಾಖೆಗಳ ಸಹಕಾರದೊಂದಿಗೆ ಶಾಲಾ ಕಾಲೇಜುಗಳ ದಾಖಲಾತಿ ಸಂದರ್ಭದಲ್ಲಿ ಟೆಸ್ಟಿಂಗ್ ಹಾಗೂ ವ್ಯಸನಿಗಳಿಗೆ ಚಿಕಿತ್ಸೆ ಇತ್ಯಾದಿ ಯೋಜನೆ ಹಮ್ಮಿಕೊಳ್ಳಲಾಗಿದೆ ಎಂದು ತಿಪ್ಪೇಸ್ವಾಮಿ ಮಾಹಿತಿ ನೀಡಿದರು.

## ಇಂದಿನಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ

• **ಬೆಂಗಳೂರು:** ಇಂದಿನಿಂದ (ಮಾ.18) ರಾಜ್ಯಾದ್ಯಂತ ಎಸ್‌ಎಸ್‌ಎಲ್‌ಸಿ ಪರೀಕ್ಷೆಯು ಆರಂಭವಾಗಲಿದ್ದು, ಶಿಕ್ಷಣ ಇಲಾಖೆಯು ಸಿಸಿ ಕ್ಯಾಮೆರಾ ಕಣ್ಗಾವಲಿನಲ್ಲಿ ಕಟ್ಟುನಿಟ್ಟಿನ ಭದ್ರತೆಯೊಂದಿಗೆ ಪರೀಕ್ಷಾ ಕೇಂದ್ರಗಳು ಸಿದ್ಧಗೊಂಡಿವೆ. ಮೊದಲ ದಿನ ಪ್ರಥಮ ಭಾಷೆ ವಿಷಯದ ಪರೀಕ್ಷೆ ನಡೆಯಲಿದೆ. ಪರೀಕ್ಷೆಗೆ ಒಟ್ಟು 9,02,899 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದಾರೆ.

ಏ.2ರವರೆಗೂ ನಡೆಯುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ 8,12,855 ಹೊಸಬರು, 62,845 ಪುನರಾವರ್ತಿತ ಮತ್ತು 27,189 ಖಾಸಗಿ ಅಭ್ಯರ್ಥಿಗಳು ನೋಂದಾಯಿಸಿಕೊಂಡಿದ್ದಾರೆ. ಪರೀಕ್ಷೆಗೆ ಒಟ್ಟು 15,941 ಶಾಲೆಗಳು ನೋಂದಾಯಿಸಿಕೊಂಡಿದ್ದು 2,871 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಫಲಿತಾಂಶವನ್ನು ಏ. 24 ರಂದು ಪ್ರಕಟಿಸಲಾಗುತ್ತದೆ.

ಯಾವುದೇ ಅಕ್ರಮ ಮತ್ತು ಗೊಂದಲಗಳಿಗೆ ಅವಕಾಶವಾಗದೆ ಸುಸೂತ್ರವಾಗಿ ಪರೀಕ್ಷೆ ನಡೆಸಲು ಸಕಲ ಸಿದ್ಧತೆ ಹಾಗೂ ಭದ್ರತಾ ವ್ಯವಸ್ಥೆ ಮಾಡಿಕೊಳ್ಳಲಾಗಿದೆ ಎಂದು ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ತಿಳಿಸಿದೆ.

ಜತೆಗೆ ಎಲ್ಲಾ ಪರೀಕ್ಷಾ ಕೊಠಡಿಗಳಲ್ಲೂ ಸಿಸಿ ಕ್ಯಾಮರಾ ಕಣ್ಗಾವಲು ಮತ್ತು ಜಿಲ್ಲಾ ಕೇಂದ್ರದಲ್ಲಿ ವೆಬ್‌ಕ್ಯಾಸ್ಟಿಂಗ್ ವ್ಯವಸ್ಥೆ ಈ ಬಾರಿಯೂ ಮುಂದುವರಿದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ನಕಲಿ ಪ್ರಶ್ನೆಪತ್ರಿಕೆಗಳನ್ನು ಸಾಮಾಜಿಕ ಜಾಲತಾಣದಲ್ಲಿ ಸುಳ್ಳು ಸುದ್ದಿ ಹಬ್ಬಿಸುವವರ ಮೇಲೆ ನಿಗಾ ಇರಿಸಲಾಗುತ್ತದೆ. ಜತೆಗೆ ಇಂತಹ ಅಕ್ರಮ ಎಸಗಿದವರ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

### ಉಚಿತ ಬಸ್ ವ್ಯವಸ್ಥೆ

ವಿದ್ಯಾರ್ಥಿಗಳ ಅನುಕೂಲಕ್ಕೆ ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಬಸ್‌ಗಳಲ್ಲಿ ಉಚಿತ ಪ್ರಯಾಣ ಸೌಲಭ್ಯವನ್ನು ಘೋಷಿಸಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳು ಪರೀಕ್ಷಾ ಪ್ರವೇಶ ಪತ್ರ (ಹಾಲ್ ಟಿಕೆಟ್) ತೋರಿಸಿ, ಸಾರಿಗೆ ಬಸ್‌ಗಳಲ್ಲಿ ಉಚಿತ ಪ್ರಯಾಣ ಮಾಡಬಹುದಾಗಿದೆ.

### ನಗರ ಪರೀಕ್ಷಾ ಕೇಂದ್ರಗಳ ಸುತ್ತ ನಿಷೇಧಾಜ್ಞೆ

ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಹಿನ್ನೆಲೆಯಲ್ಲಿ ಪರೀಕ್ಷಾ ಕೇಂದ್ರಗಳ ಸುತ್ತ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಕೇಂದ್ರದ 200 ಮೀಟರ್ ವ್ಯಾಪ್ತಿಯಲ್ಲಿರುವ ಝೆರಾಕ್ಸ್ ಅಂಗಡಿಗಳನ್ನು ಮುಚ್ಚುವಂತೆ ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಆದೇಶ ಹೊರಡಿಸಿದ್ದಾರೆ.

### ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

ಭಾರತದಲ್ಲಿ ಹಿಂದೂ ಮುಸ್ಲಿಂ ಸಮಸ್ಯೆಗೆ ಕಾಂಗ್ರೆಸ್ ಕಾರಣ -ನಿತಿನ್ ಗಡ್ಕರಿ
-ವಿಚಿತ್ರವೇನೆಂದರೆ ಇಡೀಗ ಪ್ರತಿ ಚುನಾವಣೆಯಲ್ಲೂ ಅವರ ಸೋಲಿಗೆ ಅದೇ ಕಾರಣ. ಅದು ಹೇಗೆಂದರೆ ಅವರನ್ನು ಈ ಕಡೆ ಹಿಂದುಗಳು ನಂಬೋದಿಲ್ಲ, ಆ ಕಡೆ ಮುಸ್ಲಿಮರೂ ನಂಬೋದಿಲ್ಲ!

### ದಿನ ಭವಿಷ್ಯ

**ಮೇಷ** ಕೆಲಸ, ಮನೆಯ ಕಡೆಗೆ ಗಮನ ಕೊಟ್ಟು ಇತರ ವಿಷಯ ಕಡೆಗಣಿಸಿದ್ದೀರಿ. ಖಾಸಗಿ ವಿಷಯದಲ್ಲೂ ಆದ್ಯತೆ ಕೊಡಿ. ಹೂಡಿಕೆಯಿಂದ ಧನಲಾಭ.

**ವೃಷಭ** ಉದಾಸೀನತೆ. ಅದರಿಂದ ಕೆಲಸ ನಿಧಾನ. ತುರ್ತು ಕಾರ್ಯ ಕಡೆಗಣಿಸಬೇಡಿ. ಶೇರು ಹೂಡಿಕೆಯಲ್ಲಿ ಎಚ್ಚರ ವಹಿಸುವುದೊಳಿತು.

**ಮಿಥುನ** ಉದ್ವಿಗ್ನ ಪರಿಸ್ಥಿತಿ ಎದುರಿಸುವಿರಿ. ಮನಸು ಶಾಂತಗೊಳಿಸಲು ಹೆಚ್ಚು ಗಮನ ಕೊಡಿ. ಆದಾಯ ಮತ್ತು ಖರ್ಚಿನ ಮಧ್ಯೆ ಸಮತೋಲನ ಸಾಧಿಸಿ.

**ಕಟಕ** ಈ ದಿನ ಹೆಚ್ಚು ಎಚ್ಚರ ಅವಶ್ಯ. ಸಣ್ಣ ತಪ್ಪು ದೊಡ್ಡ ಪರಿಣಾಮ ಉಂಟು ಮಾಡೀತು. ಖರೀದಿ ಹುಮ್ಮಸ್ಸಿನಲ್ಲಿ ಖರ್ಚು ಅಧಿಕ. ಬಂಧು ಭೇಟಿ.

**ಸಿಂಹ** ಎಲ್ಲವೂ ನಿಮಗೆ ಪೂರಕವಾಗಿದ್ದರೂ ಏನೋ ಕೊರಗು, ಬೇಸರ. ಪ್ರೀತಿಯಲ್ಲಿ ಹಿನ್ನಡೆ. ನಿಮ್ಮ ಧೋರಣೆ ಬದಲಿಸುವ ಪ್ರಸಂಗ ಬಂದೀತು.

**ಕನ್ಯಾ** ಭವಿಷ್ಯದ ಯೋಜನೆ ರೂಪಿಸಲು ಸಕಾಲ. ಉದ್ಯೋಗ ಪಡೆಯುವಲ್ಲಿ ಸಫಲ. ಧೂಳು ಸಂಬಂಧಿ ಅಲರ್ಜಿ ಉಂಟಾದೀತು. ಕೌಟುಂಬಿಕ ಸೌಹಾರ್ದ.

**ತುಲಾ** ಕಲ್ಪನೆಗೆ ರೆಕ್ಕೆ ಮೂಡಲಿದೆ. ಅದನ್ನು ಸಾಕಾರಗೊಳಿಸಲು ಸಫಲ. ಆತ್ಮೀಯರ ಸಾಧನೆಯ ತೃಪ್ತಿ. ಚಾಲನೆಯಲ್ಲಿ ತುಸು ಎಚ್ಚರವಿರಲಿ.

**ವೃಶ್ಚಿಕ** ಏಕತಾನತೆಯಿಂದ ಹೊರಬರುವ ಹೊಸತನಕ್ಕೆ ಕ್ರಿಯಾಶೀಲರಾಗಿ. ಅನವಶ್ಯ ಜಗಳಕ್ಕೆ ಹೋಗದಿರಿ. ತಾಳ್ಮೆ ಪ್ರದರ್ಶಿಸಿ. ಪ್ರೀತಿಯಲ್ಲಿ ಮಹತ್ವದ ಬೆಳವಣಿಗೆ.

**ಧನು** ಕಡೆಗಣಿಸಿದ್ದ ವಿಷಯವೊಂದು ಮುನ್ನೆಲೆಗೆ ಬರಲಿದೆ. ಆ ಬಗ್ಗೆ ಗಮನ ಹರಿಸಿ. ವೃತ್ತಿಗೆ ಸಂಬಂಧಿಸಿ ಶುಭ ಸುದ್ದಿ ಕೇಳಲಿದೆ. ಧನಪ್ರಾಪ್ತಿ.

**ಮಕರ** ಉದ್ಯೋಗಕ್ಕೆ ಸಂಬಂಧಿಸಿ ಶುಭ ಸುದ್ದಿ. ಆಪ್ತರ ಜತೆಗಿನ ಭಿನ್ನಮತ ಶಮನ. ಹಣದ ವ್ಯವಹಾರದಲ್ಲಿ ಅನಿರೀಕ್ಷಿತ ತೊಡಕು ಉಂಟಾಗಲಿದೆ.

**ಕುಂಭ** ನೀವು ನಿರರ್ಥಕ ಅಂದುಕೊಂಡ ಕೆಲಸ ಉತ್ತಮ ಫಲಿತಾಂಶ ನೀಡಲಿದೆ. ತೃಪ್ತಿಕರ ಆರ್ಥಿಕ ಬೆಳವಣಿಗೆ. ಕೌಟುಂಬಿಕ ಸಾಮರಸ್ಯ.

**ಮೀನ** ವಿವಾಹ ಸಂಬಂಧ ಕೂಡಿಬಂದೀತು. ಉದ್ವಿಗ್ನತೆ ಸೃಷ್ಟಿಸುವ ವಿಷಯಗಳಿಂದ ದೂರವಿರಿ. ವೃತ್ತಿ ಕಾರ್ಯದಲ್ಲಿ ಸಫಲತೆ. ಬಂಧುಗಳ ಸಹಕಾರ.

ರಾಹುಕಾಲ: 12.00-1.30
ಗುಳಿಕಕಾಲ: 10.30-12.00
ಅದೃಷ್ಟ ಸಂಖ್ಯೆ : 5,3,7,1

## ರೈಲ್ವೇ ಇಲಾಖೆಯ ಪರೀಕ್ಷೆ ದಿಢೀರ್ ರದ್ದು: ಸಿಎಂ ಅಸಮಾಧಾನ

# ಕನ್ನಡಿಗರಿಗೆ ಕೇಂದ್ರ ದ್ರೋಹ

• **ಬೆಂಗಳೂರು:** ನೈರುತ್ಯ ರೈಲ್ವೆ ಇಲಾಖೆಯ 194 ಗೂಡ್ಸ್ ರೈಲು ಮ್ಯಾನೇಜರ್ ಹುದ್ದೆಗಳ ಹಾಗೂ ಹುಬ್ಬಳ್ಳಿ ವಿಭಾಗದಲ್ಲಿ ಎಲ್‌ಡಿಟಿಇ 101 ಹುದ್ದೆಗಳಿಗೆ ಮುಂಬಡ್ತಿ ನೀಡುವ ಸಂಬಂಧ ಮಂಗಳವಾರ ನಡೆಯಬೇಕಿದ್ದ ಪರೀಕ್ಷೆಗಳನ್ನು ಕನ್ನಡಿಗರು ಹಾಗೂ ಕನ್ನಡ ಸಂಘಟನೆಗಳ ಭಾರೀ ವಿರೋಧದ ತರುವಾಯ ರೈಲ್ವೆ ಇಲಾಖೆಯು ದಿಢೀರ್ ರದ್ದುಪಡಿಸಿ ಕನ್ನಡಿಗ ಉದ್ಯೋಗಿಗಳನ್ನು ಆತಂಕ ಪರಿಸ್ಥಿತಿಗೆ ತಳ್ಳಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಬರೆದುಕೊಂಡಿರುವ ಅವರು, ಕನ್ನಡ ಭಾಷೆಯಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡಬೇಕೆಂಬ ಬಗ್ಗೆ ಈ ಮೊದಲೇ ಸಾವಿರಾರು ಕನ್ನಡಿಗ ಉದ್ಯೋಗಿಗಳು ಧ್ವನಿಯೆತ್ತಿದ್ದರು. ಶಾಂತ ರೀತಿಯ ಪ್ರತಿಭಟನೆಯನ್ನು, ಪ್ರತಿರೋಧವನ್ನು ನಿರ್ಲಕ್ಷಿಸುತ್ತಾ ಬಂದ ರೈಲ್ವೆ ಇಲಾಖೆ ಪರೀಕ್ಷೆ ಆರಂಭವಾಗುವ ಕೊನೆ ಕ್ಷಣದಲ್ಲಿ ರದ್ದುಮಾಡಿರುವುದು ಈಗಿನ ಗೊಂದಲಕ್ಕೆ ಕಾರಣ ಎಂದಿದ್ದಾರೆ.

ಮುಂಬರುವ ದಿನಗಳಲ್ಲಿ ಕನ್ನಡ ಭಾಷಿಗರಿಗೆ ಭಾಷೆಯ ಹೆಸರಲ್ಲಿ ಅನ್ಯಾಯವಾಗದಂತೆ ಕೇಂದ್ರ ಸರ್ಕಾರ ನೋಡಿಕೊಳ್ಳಬೇಕು. ಪ್ರಧಾನಿ ನರೇಂದ್ರ ಮೋದಿ ಅವರೇ ಮಧ್ಯಪ್ರವೇಶಿಸಿ ಸಂಬಂಧಿತ ಇಲಾಖೆಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಬೇಕು. ರದ್ದುಪಡಿಸಲಾದ ರೈಲ್ವೆ ಇಲಾಖೆಯ ಪರೀಕ್ಷೆಯನ್ನು ಕನ್ನಡದಲ್ಲಿಯೇ ಬರೆಯಲು ಅವಕಾಶ ಕಲ್ಪಿಸಿ ಶೀಘ್ರದಲ್ಲಿಯೇ ನಡೆಸಲು ಕ್ರಮಕೈಗೊಳ್ಳಬೇಕು.
■ ಸಿದ್ದರಾಮಯ್ಯ, ಮುಖ್ಯಮಂತ್ರಿ



### ಕನ್ನಡಿಗರೆಂದರೆ ಕೇಂದ್ರಕ್ಕೆ ತಾತ್ಸಾರ: ಮುಖ್ಯಮಂತ್ರಿ

ಪ್ರಾರಂಭದಲ್ಲಿಯೇ ರೈಲ್ವೆ ಇಲಾಖೆ ಎಚ್ಚೆತ್ತುಕೊಂಡು ತನ್ನ ತಪ್ಪನ್ನು ತಿದ್ದಿಕೊಂಡು ಕನ್ನಡದಲ್ಲಿ ಪರೀಕ್ಷೆಗೆ ಅವಕಾಶ ಮಾಡಿಕೊಟ್ಟಿದ್ದರೆ ಈಗಿನ ಆತಂಕ ಸ್ಥಿತಿ ನಿರ್ಮಾಣವಾಗುತ್ತಿರಲಿಲ್ಲ. ಆ ಪ್ರಯತ್ನವನ್ನೇ ಮಾಡದೆ, ಕನ್ನಡಿಗರನ್ನು ತಾತ್ಸಾರ ಭಾವನೆಯಿಂದ ಕಂಡು, ಪ್ರತಿಭಟನೆಯ ಕಾವು ಹೆಚ್ಚಾದ ಕೂಡಲೆ ತರಾತುರಿಯಲ್ಲಿ ಪರೀಕ್ಷೆ ರದ್ದುಪಡಿಸುವ ನಿರ್ಧಾರಕ್ಕೆ ಬಂದಿರುವುದು ಖಂಡನೀಯ. ಕನ್ನಡಿಗರಿಗೆ ಕೇಂದ್ರ ಸರ್ಕಾರದ ಪರೀಕ್ಷೆಗಳಲ್ಲಿ ಅನ್ಯಾಯವಾಗುತ್ತಿರುವುದು ಇದು ಮೊದಲ ಬಾರಿ ಅಲ್ಲ, ಬಹುಷ ಕೊನೆಯದ್ದೂ ಅಲ್ಲ. ಕೇಂದ್ರದ ಕುಟಿಲತನದಿಂದಾಗಿ ಕನ್ನಡಿಗ ಉದ್ಯೋಗಾಕಾಂಕ್ಷಿಗಳು ಮೊದಲಿಂದಲೂ ಅನ್ಯಾಯಕ್ಕೆ ತುತ್ತಾಗುತ್ತಾ ಬಂದಿದ್ದಾರೆ ಎಂದು ಸಿಎಂ ಸಿಟ್ಟು ಹೊರಹಾಕಿದ್ದಾರೆ. ಸೋಮಣ್ಣನವರು ಕನ್ನಡಿಗರ ಪರವಾಗಿ ನಿಂತು ಅನ್ಯಾಯವನ್ನು ಸರಿಪಡಿಸುವುದಾಗಿ ಎಂಬ ಭರವಸೆಯನ್ನು ನಾನೂ ಇಟ್ಟುಕೊಂಡಿದ್ದೆ, ಆ ನಂಬಿಕೆ ಹುಸಿಯಾಗಿದೆ. ಸೋಮಣ್ಣನವರು ಮಾತನಾಡಲು ಶುರು ಮಾಡಿದರೆ ರೈಲ್ವೆ ಇಲಾಖೆ ಇರುವುದೇ ಕರ್ನಾಟಕಕ್ಕಾಗಿ ಎನ್ನುವಂತೆ ಮಾತಿನ ಅರಮನೆ ಕಟ್ಟುತ್ತಾರೆ. ಅವರು ಮಾತು ಸ್ವಲ್ಪ ಕಡಿಮೆಮಾಡಿ ಕರ್ನಾಟಕಕ್ಕಾಗಿ ಮಾಡಬೇಕಾದ ಕೆಲಸವನ್ನು ನಿಷ್ಠೆಯಿಂದ ಮಾಡಲು ಮುಂದಾಗಬೇಕೆಂದು ಸಿದ್ದರಾಮಯ್ಯ ಮನವಿ ಮಾಡಿದ್ದಾರೆ. ಭಾರತ ರಾಜ್ಯಗಳ ಒಕ್ಕೂಟ, ಈ ರಾಜ್ಯಗಳು ಭಾಷೆಗಳ ಆಧಾರದಲ್ಲಿಯೇ ರಚನೆಯಾಗಿರುವುದನ್ನು ಮರೆಯಬಾರದು. ನಾವು ಹಿಂದಿಯನ್ನು ಭಾಷೆಯಾಗಿ ವಿರೋಧಿಸುತ್ತಿಲ್ಲ, ಹಿಂದಿಯನ್ನು ಕನ್ನಡದ ಮೇಲೆ ಹೇರುವುದನ್ನು ಮಾತ್ರ ಖಂಡಿತ ಸಹಿಸುವುದಿಲ್ಲ. ಆಳುವ ಪಕ್ಷದ ಸಂಸದರು ಬಹುಪಾಲು ಸಮಯ ಬಿದ್ದು ಕನ್ನಡಕ್ಕೆ ಆಗುತ್ತಿರುವ ಅನ್ಯಾಯದ ವಿರುದ್ಧ ದನಿ ಎತ್ತದೆ ಬಾಯಿ ಮುಚ್ಚಿಕೊಂಡಿರಬಹುದು, ಆದರೆ ಕನ್ನಡಿಗರು ಜಾಗೃತರಾಗಿದ್ದಾರೆ. ಕನ್ನಡಿಗರು ಉದ್ಯೋಗಕ್ಕಾಗಿ, ಭಡ್ತಿಗಾಗಿ ಕೇಂದ್ರದ ಮುಂದೆ ಭಿಕ್ಷೆಗೆ ನಿಂತಿಲ್ಲ, ತಾವು ಶಿಕ್ಷಣ ಪಡೆದ ಭಾಷೆಯಲ್ಲೇ ತಮ್ಮ ಹಕ್ಕಿನ ಉದ್ಯೋಗ ಭಡ್ತಿಯನ್ನು ಕೇಳುತ್ತಿದ್ದಾರೆ ಎಂದು ಬರೆದುಕೊಂಡಿದ್ದಾರೆ.

## ಬಿರುಗಾಳಿಸಹಿತ ಆಲಿಕಲ್ಲು ಮಳೆ

ಪುಟ ೧➡ ಕಲಬುರಗಿ ನಗರದಲ್ಲಿ ಲಘು ಮಳೆಯಾಗಿದ್ದರೆ, ಚಿಂಚೋಳಿಯಲ್ಲಿ ಆಲಿಕಲ್ಲು ಮಳೆಯಾಗಿದೆ. ಹೊಸಪೇಟೆ, ಕೂಡ್ಲಿಗಿ ಮತ್ತು ಹಗರಿಬೊಮ್ಮನಹಳ್ಳಿ ಪಟ್ಟಣಗಳು ಸೇರಿದಂತೆ ವಿಜಯನಗರ ಜಿಲ್ಲೆಯ ಹಲವಾರು ಭಾಗಗಳಲ್ಲಿ ಸೋಮವಾರ ಸಂಜೆ ಗುಡುಗುಸಹಿತ ಮಳೆಯಾಗಿದೆ. ಕೂಡ್ಲಿಗಿ ತಾಲ್ಲೂಕಿನ ಯೆಂಬ್ಲಿ ಗ್ರಾಮದಲ್ಲಿ ಸಿಡಿಲು ಬಡಿದ ನಂತರ ಗಾಳಿ ಯಂತ್ರವೊಂದು ಸುಟ್ಟುಹೋಗಿದೆ.

**ಆಲಿಕಲ್ಲು ಸಹಿತ ಮಳೆ:** ಧಾರವಾಡ ನಗರದಲ್ಲಿ ಆಲಿಕಲ್ಲು ಸಹಿತ ಭಾರಿ ಮಳೆ ಆಗಿದ್ದು, ಬಿಸಿಲಿನ ಝಳಕ್ಕೆ ಬಸವಳಿದಿದ್ದ ಉತ್ತರ ಕರ್ನಾಟಕದ ಜನತೆಗೆ ವರುಣ ತಂಪೆರೆದಿದೆ. ಧಾರವಾಡದ ಕೆಲವೆಡೆ ಸಾಧಾರಣ ಮಳೆ ಆದರೆ, ನಗರದಲ್ಲಿ ಭಾರೀ ಮಳೆ ಆಗಿದೆ. ಆದರೆ ಗಾಳಿ ಜೋರಾಗಿ ಬೀಸಿದ್ದರಿಂದ ರೈತರಿಗೆ ಮಾವಿನ ಬೆಳೆಗೆ ಈ ಮಳೆ ಕಂಟಕವಾಗಲಿದೆಯೇ ಎಂಬ ಆತಂಕ ಉಂಟು ಮಾಡಿದೆ.

ಬಳ್ಳಾರಿ ನಗರ, ಸಂಡೂರು ಮತ್ತು ಕಂಪ್ಲಿಯಲ್ಲಿಯೂ ಸಹ ಲಘು ಮಳೆಯಾಗಿದೆ. ದಾವಣಗೆರೆ ನಗರ ಮತ್ತು ಜಿಲ್ಲೆಯ ಕೆಲವು ಭಾಗಗಳಲ್ಲಿ ಆಲಿಕಲ್ಲು ಮಳೆಯಾಗಿದೆ. ಕಲಘಟಗಿ ತಾಲೂಕಿನ ಬಹುತೇಕ ಭಾಗಗಳಲ್ಲಿ ಮಂಗಳವಾರ ಮಧ್ಯಾಹ್ನ ಭಾರೀ ಗಾಳಿ ಮಳೆ ಸುರಿದಿದೆ. ಕಲಘಟಗಿ ಪಟ್ಟಣ, ಮಾಚಾಪುರ, ಬೆಲವಂತರ ಸೋಮನಕೊಪ್ಪ ಹೀಗೆ ಹಲವು ಊರುಗಳ ರಸ್ತೆಗಳಲ್ಲಿ ಆಲಿಕಲ್ಲು ರಾಶಿ ರಾಶಿ ಸುರಿದು ಬಿದ್ದಿದ್ದು, ಮನೆಗಳ ಮೇಲೆ ಕೂಡ ಆಲಿಕಲ್ಲು ರಾಶಿ ಬಿದ್ದಿದ್ದವು. ನಿರಂತರ ಮಳೆ ಜತೆಗೆ ಆಲಿಕಲ್ಲು ಸುರಿದು ಜನ ಆಶ್ಚರ್ಯಚಕಿತರಾದರು.

ಕೊಡಗಿನ ಅನೇಕ ಭಾಗಗಳಲ್ಲಿ ಸೋಮವಾರ ಋತುವಿನ ಮೊದಲ ಮಳೆಯಾಗಿದೆ. ಮಂಗಳವಾರ ಸಂಜೆ ಸುರಿದ ಮಳೆಯು ಗುಡ್ಡಗಾಡು ಜಿಲ್ಲೆಯ ಕಾಫಿ ಬೆಳೆಗಾರರಿಗೆ ಹರ್ಷ ತಂದಿತು.

### ರೈತ ಸಾವು

• **ರೋಣ:** ತಾಲೂಕಿನ ಮೆಣಸಗಿ ಗ್ರಾಮದಲ್ಲಿ ಮಂಗಳವಾರ ಸುರಿದ ಧಾರಾಕಾರ ಮಳೆಯಿಂದ ಸಿಡಿಲು ಬಡಿದು ರೈತ ನಿಂಗಪ್ಪ ರಾಮಪ್ಪ ಅಮಾತಿ (58) ಎಂಬ ರೈತ ಮೃತಪಟ್ಟಿದ್ದಾನೆ. ರೋಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### 24 ಗಂಟೆಯಲ್ಲಿ ಮತ್ತಷ್ಟು ಮಳೆ

ರಾಜ್ಯದ ಜನತೆಗೆ ಹವಾಮಾನ ಇಲಾಖೆ ಮಳೆಯ ಮುನ್ಸೂಚನೆ ನೀಡಿದೆ. ಮುಂದಿನ 24ಗಂಟೆಗಳ ಕಾಲ ಬೆಂಗಳೂರು ಸೇರಿ ರಾಜ್ಯದ ಹಲವು ಜಿಲ್ಲೆಗಳಲ್ಲಿ ಮಳೆಯಾಗುವ ಸಾಧ್ಯತೆಯಿದ್ದು, ಜನರು ಎಚ್ಚರಿಕೆಯಿಂದಿರಲು ಸೂಚಿಸಲಾಗಿದೆ. ರಾಜ್ಯದ ಅಲ್ಲಲ್ಲಿ ಮೋಡಕವಿದ ವಾತಾವರಣವಿರಲಿದ್ದು, ಹಗುರವಾದ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

## ಸಚಿವರಿಗೆ ಸಿಎಂ ಪತ್ರ

ಪುಟ ೧➡ ಇದು ಸರ್ಕಾರಕ್ಕೆ ತೀವ್ರ ಮುಜುಗರ ಉಂಟುಮಾಡುವುದರೊಂದಿಗೆ ಶಾಸಕರುಗಳ ಹಕ್ಕಿಗೆ ಮತ್ತು ಸದನದ ಘನತೆಗೆ ಚ್ಯುತಿಯನ್ನುಂಟು ಮಾಡಿರುತ್ತದೆ. ಈ ಸಂಬಂಧ ನಡೆದ ಸಭೆಯಲ್ಲಿ ಸಭಾಧ್ಯಕ್ಷರು ತೀವ್ರ ಅಸಮಾಧಾನ ವ್ಯಕ್ತಪಡಿಸಿರುತ್ತಾರೆ. ಆದ್ದರಿಂದ ತಮ್ಮ ಇಲಾಖೆಯ ವತಿಯಿಂದ ಉತ್ತರಿಸಬೇಕಾದ ಪ್ರಶ್ನೆಗಳಿಗೆ ಉತ್ತರವನ್ನು ಸಕಾಲದಲ್ಲಿ ವಿಧಾನಮಂಡಲಕ್ಕೆ ಕಳುಹಿಸದೇ ಇರುವ ಬಗ್ಗೆ ಇಲಾಖಾ ಕಾರ್ಯದರ್ಶಿಗಳ ವಿವರಣೆಯನ್ನು ತಕ್ಷಣ ನೀಡಲು ಸೂಚಿಸಲಾಗಿದೆ. ಅಲ್ಲದೆ, ಉತ್ತರ ಕಳುಹಿಸದ ಸಂದರ್ಭದಲ್ಲಿ ಸಂಬಂಧಪಟ್ಟ ಶಾಸಕರಿಗೆ ಪ್ರತ್ಯೇಕ ಪತ್ರವನ್ನು ಕಳುಹಿಸಿ ಹಾಗೂ ಮಾಹಿತಿ ಒದಗಿಸುವ ನಿರ್ದಿಷ್ಟ ಸಮಯವನ್ನು ತಿಳಿಸಲು ಸಹ ಸೂಚಿಸಿದೆ. ಎಂದು ಪತ್ರದಲ್ಲಿ ಸಿದ್ದರಾಮಯ್ಯ ತಿಳಿಸಿದ್ದಾರೆ.

### 8 ಐಎಎಸ್ ಅಧಿಕಾರಿಗಳಿಗೆ ನೋಟಿಸ್

ಕರ್ನಾಟಕದಲ್ಲಿ ಇದೇ ಮೊದಲ ಬಾರಿಗೆ ಕಾರಣ ಕೇಳಿ ಬರೋಬ್ಬರಿ ಎಂಟು ಇಲಾಖೆಯ ಹಿರಿಯ ಐಎಎಸ್ ಅಧಿಕಾರಿಗಳಿಗೆ ಶೋಕಾಸ್ ನೋಟಿಸ್ ಜಾರಿ ಮಾಡಲಾಗಿದೆ. ಅಧಿವೇಶನದಲ್ಲಿ ಶಾಸಕರುಗಳ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ಕೊಡದ ಇಲಾಖೆ ಕಾರ್ಯದರ್ಶಿಗಳಿಗೆ ನೋಟಿಸ್ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ ಬೆನ್ನಲ್ಲೇ, ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಅವರು 8 ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳಿಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡಿದ್ದಾರೆ. ಸದನದಲ್ಲಿ ಶಾಸಕರ ಪ್ರಶ್ನೆಗೆ ಉತ್ತರ ನೀಡದ ಹಿನ್ನೆಲೆಯಲ್ಲಿ 8 ಇಲಾಖೆಯ ಕಾರ್ಯದರ್ಶಿಗಳಿಗೆ ಶೋಕಾಸ್ ನೋಟಿಸ್ ನೀಡಲಾಗಿದೆ.

- ಆರ್. ವಿನೋತ್ ಪ್ರಿಯಾ -ಪಶುಸಂಗೋಪನಾ ಇಲಾಖೆ
- ಮೋಹನ್ ರಾಜ್ ಕೆ.ಪಿ. -ವಸತಿ ಇಲಾಖೆ
- ಎನ್.ವಿ ಪ್ರಸಾದ್ - ಸಾರಿಗೆ ಇಲಾಖೆ
- ಆರ್.ಗಿರೀಶ್ - ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ
- ಆದಿತ್ಯ ಆಮ್ಲನ್ ಬಿಸ್ವಾಸ್ - ಲೋಕೋಪಯೋಗಿ ಇಲಾಖೆ
- ರಾಜೇಂದ್ರ ಕುಮಾರ್ ಕಟಾರಿಯಾ - ಕಂದಾಯ ಇಲಾಖೆ

## ಅಮಾನುಷ ದಾಳಿ

ಪುಟ ೧➡ ಸ್ಫೋಟದ ನಂತರ ಸಂಭವಿಸಿದ ದ್ವಿತೀಯ ಹಂತದ ಸ್ಫೋಟಗಳು ಅಲ್ಲಿ ಮದ್ದುಗುಂಡುಗಳ ಸಂಗ್ರಹವಿರುವುದನ್ನು ಖಚಿತಪಡಿಸಿವೆ ಎಂದು ಸಚಿವಾಲಯ ಪ್ರತಿಪಾದಿಸಿದೆ.

ನಂಗರ್‌ಹಾರ್‌ನಲ್ಲಿ ಡ್ರೋನ್ ಜೋಡಣೆ ಕೇಂದ್ರಗಳಿದ್ದವು ಎಂದು ಭದ್ರತಾ ಮೂಲಗಳು ತಿಳಿಸಿವೆ. ಪಾಕಿಸ್ತಾನದ ಭೂಪ್ರದೇಶದ ಮೇಲೆ ಪದೇ ಪದೇ ನಡೆದ ಗಡಿ ದಾಳಿಗಳ ಹಿನ್ನೆಲೆಯಲ್ಲಿ ಈ ಕಾರ್ಯಾಚರಣೆ ಪ್ರಾರಂಭಿಸಲಾಗಿದೆ ಎಂದು ಪಾಕ್ ಸಮರ್ಥಿಸಿಕೊಂಡಿದೆ.

## ಹುದ್ದೆ ಭರ್ತಿ ಆಗ್ರಹಿಸಿ ಪ್ರತಿಭಟನೆ

ಪುಟ ೧➡ ಪೊಲೀಸರ ಮನವೊಲಿಕೆಗೂ ಬಗ್ಗದ ಹಿನ್ನೆಲೆಯಲ್ಲಿ ಎಬಿವಿಪಿ ಕಾರ್ಯಕರ್ತರನ್ನು ವಶಕ್ಕೆ ಪಡೆಯಲು ಪೊಲೀಸರು ಮುಂದಾದಾಗ ಪೊಲೀಸರು ಹಾಗೂ ವಿದ್ಯಾರ್ಥಿಗಳು, ಕಾರ್ಯಕರ್ತರ ನಡುವೆ ವಾಗ್ವಾದ ಹಾಗೂ ಮಾತಿನ ಚಕಮಕಿ ನಡೆಯಿತು. ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ 2.50 ಲಕ್ಷಕ್ಕೂ ಹೆಚ್ಚಿನ ಹುದ್ದೆಗಳು ಖಾಲಿ ಇದ್ದು, ಆ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವಲ್ಲಿ ರಾಜ್ಯ ಸರ್ಕಾರ ವಿಳಂಬ ಮಾಡುತ್ತಿದೆ ಎಂದು ಆರೋಪಿಸಿದ ಕಾರ್ಯಕರ್ತರು, ಕಳೆದ ಐದು ವರ್ಷಗಳಿಂದ ಯಾವುದೇ ನೇಮಕಾತಿ ನಡೆದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಎಬಿವಿಪಿ ವಿಭಾಗ ಸಂಘಟನಾ ಕಾರ್ಯದರ್ಶಿ ಸಚಿನ್ ಹಿರೇಮಠ, ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ಪವಿರಾಘವೇಂದ್ರ, ದೇಸಾಯಿ, ರಾಜ್ಯ ಸಹಕಾರ್ಯದರ್ಶಿ ಕುಶಾಲ ಗೋಧಗೇರಿ, ರಾಜ್ಯ ಕಾರ್ಯಸಮಿತಿ ಸದಸ್ಯ ಯಲ್ಲಪ್ಪ ಬಮ್ಮನಳ್ಳಿ, ದರ್ಶನ್ ಮಾಷಣ್ಣವರ, ಶಿವಯ್ಯ ಮಠಪತಿ, ಸಾಯಿ ಬೋಸ್ಲೆ, ನಾಗರಾಜ ಹಂಜಿ, ಪ್ರಥಮಗೌಡ ಪಾಟೀಲ, ಮಹಾಂತೇಶ, ಬಾಲಾಜಿ ಜವಳಕರ, ಸೌರಭ ಮೊದಲಾದವರಿದ್ದರು.

## ದೇಶದ ಅನಿಲ ಆತಂಕ ಇನ್ನಷ್ಟು ಇಳಿಕೆ

ಪುಟ ೧➡ ಈ ವರ್ಗಾವಣೆ ಪ್ರಕ್ರಿಯೆ ಪ್ರತಿ ಗಂಟೆಗೆ 1000 ಟನ್‌ಗಳಂತೆ ನಡೆಯುತ್ತಿದ್ದು, 2 ದಿನಗಳಲ್ಲಿ ಈ ಪ್ರಕ್ರಿಯೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಕೇಂದ್ರ ಬಂದರು ಸಚಿವಾಲಯದ ನಿರ್ದೇಶನದಂತೆ ವಡ್ನೀರ್ ಬಂದರು ಈ ಕಾರ್ಯಾಚರಣೆಯನ್ನು ಸುಗಮವಾಗಿ ನಿರ್ವಹಿಸುತ್ತಿದೆ. ಇದರಲ್ಲಿ ಬಹು ಏಜೆನ್ಸಿಗಳ ಪಾಲ್ಗೊಳ್ಳುವಿಕೆ ಇದ್ದು, ಎಲ್ಲ ಪ್ರಕ್ರಿಯೆಗಳನ್ನೂ ನಿಕಟವಾಗಿ ಮೇಲ್ವಿಚಾರಣೆ ನಡೆಸಲಾಗುತ್ತಿದೆ. ಹಾಗೆಯೇ ಸಚಿವಾಲಯವು ಎಲ್‌ಪಿಜಿ ನೌಕೆಗಳನ್ನು ಸುರಕ್ಷಾ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ನಿರ್ವಹಿಸುವಂತೆ ಮತ್ತು ಯಾವುದೇ ನಿಯಮಾವಳಿಗಳನ್ನು ಮೀರದಂತೆ ನಿರ್ದೇಶನ ನೀಡಿದೆ.

ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಭಾರತ ಹೊಂದಿರುವ ಬಲವಾದ ರಾಜತಾಂತ್ರಿಕ ಬಾಂಧವ್ಯಗಳಿಂದಾಗಿ ಭಾರತೀಯ ನೌಕೆಗಳು ಹಾರ್ಮುಜ್ ಜಲಸಂಧಿಯನ್ನು ಸುರಕ್ಷಿತವಾಗಿ ದಾಟಿ ಬರುತ್ತಿದ್ದು, ದೇಶದ ತೈಲ ಮತ್ತು ಅನಿಲ ಪೂರೈಕೆಯನ್ನು ಖಾತ್ರಿಪಡಿಸಿಕೊಳ್ಳಲಾಗುತ್ತಿದೆ ಎಂದು ಗುಜರಾತಿನ ಸಚಿವ ಜಿತು ವಾಘಾನಿ ತಿಳಿಸಿದ್ದಾರೆ. ಭಾರತ ತನ್ನ ಬೇಡಿಕೆಯ ಕಚ್ಚಾತೈಲದ ಶೇ.88ಕ್ಕೆ ಆಮದನ್ನೇ ನೆಚ್ಚಿಕೊಳ್ಳಬೇಕಾಗಿದ್ದು, ಆದಾಗ್ಯೂ ಮೋದಿ ಸರಕಾರ ರಷ್ಯಾ ಸೇರಿದಂತೆ ಬಹುಮೂಲಗಳಿಂದ ತೈಲ ಆಮದು ಮಾಡಿಕೊಳ್ಳುವ ಮೂಲಕ ದೇಶದ ಜನತೆಯ ಹಿತವನ್ನು ರಕ್ಷಿಸುತ್ತಿರುವುದನ್ನು ಇಲ್ಲಿ ಸ್ಮರಿಸಬಹುದು. ಅಮೆರಿಕ, ಚೀನಾ, ಕೊಲ್ಲಿ ದೇಶಗಳಲ್ಲಿ ಕೂಡ ತೈಲ ಬೆಲೆ ಏರಿಕೆಯಾಗಿದ್ದರೂ ಭಾರತದಲ್ಲಿ ತೈಲ ಬೆಲೆ ಏರಿಕೆಯಾಗಿಲ್ಲ ಎಂಬುದಿಲ್ಲಿ ಉಲ್ಲೇಖನೀಯ.

### ಸಿಲುಕಿರುವ ಹಡಗುಗಳ ಸ್ಥಿತಿ

ಪರ್ಷಿಯನ್ ಗಲ್ಫ್ ಪ್ರದೇಶದಲ್ಲಿ ಸಿಲುಕಿರುವ ಉಳಿದ 22 ಹಡಗುಗಳ ಸುರಕ್ಷಿತ ಪ್ರಯಾಣಕ್ಕಾಗಿ ಬಂದರು ಮತ್ತು ಹಡಗು ಸಚಿವಾಲಯ ಹಾಗೂ ಹಡಗು ನಿರ್ದೇಶನಾಲಯ ನಿರಂತರ ಪ್ರಯತ್ನ ನಡೆಸುತ್ತಿದೆ. ಈ ಹಡಗುಗಳಲ್ಲಿ 611 ನಾವಿಕರಿದ್ದು, ಇವುಗಳಲ್ಲಿ ಆರು ಎಲ್‌ಪಿಜಿ ವಾಹಕಗಳು, ನಾಲ್ಕು ಕಚ್ಚಾ ತೈಲ ಟ್ಯಾಂಕರ್‌ಗಳು ಮತ್ತು ಮೂರು ಕಂಟೈನರ್ ಹಡಗುಗಳು ಸೇರಿವೆ. ಎಲ್ಲಾ ಭಾರತೀಯ ನಾವಿಕರು ಸುರಕ್ಷಿತವಾಗಿದ್ದಾರೆ ಮತ್ತು ಕಳೆದ 24 ಗಂಟೆಗಳಲ್ಲಿ ಯಾವುದೇ ಅಹಿತಕರ ಘಟನೆಗಳು ಸಂಭವಿಸಿಲ್ಲ, ಎಂದು ಅಧಿಕಾರಿಗಳು ತಿಳಿಸಿದ್ದಾರೆ.

### ಪೂರೈಕೆ ಮೇಲೆ ಒತ್ತಡ

ಅಮೆರಿಕ-ಇಸ್ರೇಲ್ ಮತ್ತು ಇರಾನ್ ನಡುವಿನ ಪ್ರತೀಕಾರ ದಾಳಿಗಳಿಂದಾಗಿ ಹಾರ್ಮುಜ್ ಜಲಸಂಧಿ ಪ್ರಸ್ತುತ ಮುಚ್ಚಲ್ಪಟ್ಟಿದೆ. ಪರ್ಯಾಯ ಮೂಲಗಳಿಂದ ತೈಲ ಆಮದಿನ ವ್ಯತ್ಯಯವನ್ನು ಭಾಗಶಃ ಸರಿದೂಗಿಸಲಾಗಿದ್ದರೂ, ಅನಿಲ ಮತ್ತು ಎಲ್‌ಪಿಜಿ ಪೂರೈಕೆ ಮೇಲೆ ಒತ್ತಡ ಮುಂದುವರಿದಿದೆ. ಈ ಬಿಕ್ಕಟ್ಟಿನ ಸಮಯದಲ್ಲಿ ಹಡಗು ಕಾರ್ಯಾಚರಣೆ ಸುಗಮಗೊಳಿಸಲು ಪ್ರಮುಖ ಭಾರತೀಯ ಬಂದರುಗಳು ಶೇಖರಣೆ ಮತ್ತು ಲಂಗರು ಹಾಕುವ ಶುಲ್ಕದಲ್ಲಿ ರಿಯಾಯಿತಿಗಳನ್ನು ನೀಡುತ್ತಿವೆ.

## ಲಂಚ ಪಡೆಯುತ್ತಿದ್ದ ಪಿಡಿಒ ಲೋಕಾಯುಕ್ತ ಬಲೆಗೆ

• **ಮೈಸೂರು:** ನೀರುಗಂಟಿಗೆ ಬಾಕಿ ಸಂಬಳ ನೀಡಲು 25 ಸಾವಿರ ರೂ. ಲಂಚ ಪಡೆಯುತ್ತಿದ್ದ ಪಿಡಿಒರೊಬ್ಬರು ಲೋಕಾಯುಕ್ತ ಪೊಲೀಸರ ಬಲೆಗೆ ಸಿಕ್ಕಿ ಬಿದ್ದ ಘಟನೆ ಜಿಲ್ಲೆಯ ಹುಣಸೂರು ತಾಲೂಕಿನಲ್ಲಿ ನಡೆದಿದೆ. ಹುಣಸೂರು ತಾಲೂಕಿನ ಮುಳ್ಳೂರು ಗ್ರಾಮ ಪಂಚಾಯ್ತಿ ಪಿಡಿಒ ಮಂಜುಳಾ ಲೋಕಾಯುಕ್ತ ಬಲೆಗೆ ಸಿಕ್ಕಿಬಿದ್ದವರು. ನೀರುಗಂಟಿಯಾಗಿ ಕೆಲಸ ಮಾಡುತ್ತಿದ್ದ ಸ್ವಾಮಿ ಎಂಬುವರು ಕರ್ತವ್ಯದಲ್ಲಿದ್ದ ವೇಳೆ ಮೃತಪಟ್ಟಿದ್ದಾರೆ. ಅನುಕಂಪದ ಆಧಾರದ ಮೇಲೆ ಸ್ವಾಮಿರವರ ಮಗ ಮಹದೇವ್ ಎಂಬುವರಿಗೆ ಕೆಲಸ ಸಿಕ್ಕಿದೆ. ತಂದೆ ಕರ್ತವ್ಯ ನಿರ್ವಹಿಸಿದ್ದ ಎರಡು ವರ್ಷದ ಸಂಬಳ ಬಾಕಿ ಪಡೆಯಲು ಮಹದೇವ್ ಮುಂದಾಗಿದ್ದಾರೆ. ಸುಮಾರು ನಾಲ್ಕು ಲಕ್ಷ ಸಂಬಳ ನೀಡಲು ಮಂಜುಳಾ 50 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದಾರೆ. ಇವರ ಕಿರುಕುಳದಿಂದ ಬೇಸತ್ತ ಮಹದೇವ್ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದಾರೆ. ಮಹದೇವ್‌ರಿಂದ ತಮ್ಮ ಕಚೇರಿಯಲ್ಲಿ ಮಂಜುಳಾ 25 ಸಾವಿರ ಲಂಚ ಪಡೆಯುತ್ತಿದ್ದ ವೇಳೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ ರೆಡ್ ಹ್ಯಾಂಡಾಗಿ ಹಿಡಿದಿದ್ದಾರೆ. ಈ ವೇಳೆ ಮಂಜುಳಾ ತನ್ನ ಕೈಯನ್ನ ಹರಿತವಾದ ಆಯುಧದಿಂದ ಕೊಯ್ದುಕೊಂಡಿದ್ದಾರೆ. ಗಾಯಗೊಂಡ ಮಂಜುಳಾರನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಕರೆತಂದು ಚಿಕಿತ್ಸೆ ಕೊಡಿಸಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ.

## ವಿದ್ಯುತ್ ತಗುಲಿ ಹುಲಿ ಸಾವು



ಪುಟ ೧➡ ತಾಲೂಕಿನ ಹೆಗ್ಗಡಹಳ್ಳಿ, ಹಕ್ಕಲಪುರ, ಸೋಮಹಳ್ಳಿ, ಸಂಪಿಗೆಪುರ, ಕಲ್ಲಹಳ್ಳಿ ಪಡಗೂರು ಭಾಗದಲ್ಲಿ ಕಾಣಿಸಿಕೊಂಡಿದ್ದು ಕೆಲ ದಿನಗಳ ಹಿಂದೆ ಸಂಪಿಗೆಪುರ ಹಾಗೂ ದೇಪಾಪುರದ ಬಳಿ ಹುಲಿ ಸೆರೆಹಿಡಿಯಲಾಗಿತ್ತು. ಪಡಗೂರು ಗ್ರಾಮದ ಸುತ್ತಮುತ್ತ ಹುಲಿ ಓಡಾಟ ಹೆಚ್ಚಳವಾಗಿದ್ದು ಕಳೆದ ವಾರ ಪಡಗೂರಿನಲ್ಲಿ ಜಾನುವಾರುವಿನ ಮೇಲೆ ದಾಳಿ ಮಾಡಿ ಕೊಂದು ಹಾಕಿತ್ತು. ಇದರಿಂದಾಗಿ ಹುಲಿ ಸೆರೆಗೆ ಅರಣ್ಯ ಇಲಾಖೆಯ ಅಧಿಕಾರಿಗಳು ಬೋನು ಇಟ್ಟು ನಿಗಾ ವಹಿಸಿದ್ದರು.

## ಆರೆಸ್ಸೆಸ್‌ನಿಂದ ಹಿಂದು ಧರ್ಮದ ಪುನರುತ್ಥಾನ, ಸಮಾಜ ಸಂಘಟನೆ

ಪುಟ ೧➡ ಮನೆ ಮನೆಗೆ ಸಂಪರ್ಕ ಮಾಡಿದ ಸಂದರ್ಭದಲ್ಲಿ ಮತಾಂತರ, ಡ್ರಗ್ಸ್, ಜನಸಂಖ್ಯೆಯಲ್ಲಿನ ಅಸಮತೋಲನ ಸೇರಿದಂತೆ ಸಮಾಜದ ಸಮಸ್ಯೆಗಳ ಬಗ್ಗೆ ಜನರು ಬೆಳಕು ಚೆಲ್ಲಿದ್ದರು. ಹಿಂದು ಸಮಾಜೋತ್ಸವದಲ್ಲಿ ಅಧಿಕ ಸಂಖ್ಯೆಯಲ್ಲಿ ಮಹಿಳೆಯರು ಭಾಗಿಯಾಗಿದ್ದು ವಿಶೇಷವಾಗಿತ್ತು ಎಂದು ಹೇಳಿದರು.

### ಶಾಖೆಯಲ್ಲಿ ಹೆಚ್ಚಳ

ದೇಶಾದ್ಯಂತ ಒಟ್ಟು 55,683 ಸ್ಥಾನಗಳಲ್ಲಿ 88,949 ರಾಷ್ಟ್ರೀಯ ಸ್ವಯಂಸೇವಕ ಸಂಘದ ಶಾಖೆಗಳು ನಡೆಯುತ್ತಿದ್ದು, ಕಳೆದ ವರ್ಷಕ್ಕಿಂತ 5820 ಶಾಖೆಗಳು ಹೆಚ್ಚಾಗಿವೆ. ವಾರಕ್ಕೊಮ್ಮೆ ನಡೆಯುವ ಮಿಲನ್ ಸಂಖ್ಯೆ ಕಳೆದ ಬಾರಿಗಿಂತ 459 ಹೆಚ್ಚಾಗಿದ್ದು, ಪ್ರಸ್ತುತ ದೇಶವ್ಯಾಪಿ 32,606 ಮಿಲನ್‌ಗಳು ಜರುಗುತ್ತಿವೆ. ತಿಂಗಳಿಗೊಮ್ಮೆ ನಡೆಯುವ ಮಂಡಲಿಗಳು ಒಟ್ಟು 13,211 ಇವೆ. ಒಟ್ಟಾರೆ ಶಾಖೆ, ಮಿಲನ್ ಮತ್ತು ಮಂಡಲಿಗಳು ಸೇರಿ ಒಟ್ಟು 1,34,766 ಶಾಖೆ ನಡೆಯುತ್ತಿವೆ ಎಂದು ಮಾಹಿತಿ ನೀಡಿದರು.

### ಕಾರ್ಯಕರ್ತ ಪ್ರಶಿಕ್ಷಣ ವರ್ಗ

ದೇಶಾದ್ಯಂತ ಕಾರ್ಯಕರ್ತರ ಪ್ರಶಿಕ್ಷಣ ವರ್ಗಗಳು ನಡೆದಿದ್ದು, ಒಟ್ಟು 63 ಸಂಘ ಶಿಕ್ಷಾ ವರ್ಗಗಳಲ್ಲಿ 14,024 ಶಿಕ್ಷಾರ್ಥಿಗಳು ಭಾಗವಹಿಸಿದ್ದರು. ಈ ವರ್ಷ ಕರ್ನಾಟಕದಲ್ಲೂ ನಾಲ್ಕು ಸಂಘ ಶಿಕ್ಷಾ ವರ್ಗಗಳು ನಡೆಯಲಿದ್ದು, ಘೋಷ್ ವರ್ಗ ಸೇರಿಸಲಾಗುವುದು ಎಂದು ತಿಳಿಸಿದರು.

### ಗಣ್ಯರಿಗೆ ಶ್ರದ್ಧಾಂಜಲಿ ಸಂತಾಪ

ಪ್ರತಿವರ್ಷ ಅಖಿಲ ಭಾರತೀಯ ಪ್ರತಿನಿಧಿ ಸಭಾದಲ್ಲಿ ರಾಷ್ಟ್ರಕ್ಕೆ ಮತ್ತು ಸಮಾಜಕ್ಕೆ ಕೊಡುಗೆ ನೀಡಿ ನಮ್ಮನ್ನಗಲಿದ ನಾಡಿನ ಪ್ರಮುಖರಿಗೆ, ಆರ್‌ಎಸ್‌ಎಸ್ ಹಿರಿಯ ಕಾರ್ಯಕರ್ತರಿಗೆ ಶ್ರದ್ಧಾಂಜಲಿ ಸಲ್ಲಿಸಲಾಗುತ್ತದೆ. ದೇಶದ ಅನೇಕ ಗಣ್ಯರ ಜತೆಗೆ ಕರ್ನಾಟಕದ ವೃಕ್ಷಮಾತೆ ಸಾಲುಮರದ ತಿಮ್ಮಕ್ಕ, ವಿಜ್ಞಾನಿ ಡಾ. ಮಾಧವ ಗಾಡ್ಗೀಲ್, ಸ್ವಾತಂತ್ರ್ಯ ಹೋರಾಟಗಾರ ಮತ್ತು ರಾಜಕಾರಣಿ ಭೀಮಣ್ಣ ಖಂಡ್ರೆ, ಶಾಮನೂರು ಶಿವಶಂಕರಪ್ಪ, ಹಿಂದುಸ್ಥಾನಿ ಗಾಯಕ ಅಶೋಕ ಹುಗ್ಗಣ್ಣವರ್, ಹುಬ್ಬಳ್ಳಿಯ ಉದ್ಯಮಿ ಭರತ್ ಖಿಮ್ಜಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಗಿದೆ ಎಂದು ಹೇಳಿದರು.

### ಕರ್ನಾಟಕದಲ್ಲಿ ನಡೆದ ವಿಶೇಷ ಕಾರ್ಯಕ್ರಮ

ಪುಟ ೧➡ ದೀಪೋತ್ಸವ, ಕಬಡ್ಡಿ ಸ್ಪರ್ಧೆ ಸೇರಿದಂತೆ 17 ವಿವಿಧ ಉಪಕ್ರಮಗಳೊಂದಿಗೆ ಯುವಕರ ಸಂಪರ್ಕ ಮಾಡಲಾಯಿತು. 13 ಸ್ಥಾನಗಳಲ್ಲಿ ಜಾಯ್ನ್ ಆರ್‌ಎಸ್‌ಎಸ್ ಅಭಿಯಾನ ಮತ್ತು 2815 ಸಜ್ಜನಸಭೆಗಳು ನಡೆದವು. ಒಟ್ಟಾರೆ 8799 ವಿದ್ಯಾರ್ಥಿಗಳು ಮತ್ತು 3973 ತರುಣ ಉದ್ಯೋಗಿಗಳು ಕಾರ್ಯಕ್ರಮದಲ್ಲಿ ಸಹಭಾಗಿಗಳಾಗಿದ್ದರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರ ಉಪಸ್ಥಿತಿಯಲ್ಲಿ ಶಿಕ್ಷಣ ಸಂಸ್ಥೆಗಳ ಪ್ರಮುಖರನ್ನು ಆಹ್ವಾನಿಸಲಾಗಿದ್ದ ಬೃಹತ್ ಸಂವಾದ ಕಾರ್ಯಕ್ರಮ ಧಾರವಾಡದ ಗರಗದಲ್ಲಿರುವ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಆಯೋಜಿಸಲಾಗಿತ್ತು. 191 ಸ್ಥಾನಗಳಿಂದ 540 ಸಂಸ್ಥೆಗಳಿಂದ 920 ಪ್ರಮುಖರು ಭಾಗವಹಿಸಿದ್ದರು. ವಿಜಯಪುರದಲ್ಲಿ ಸಹಸರಕಾರ್ಯವಾಹ ಮುಕುಂದ ಸಿ.ಆರ್., ಭೇಟಿಯ ಸಂದರ್ಭದಲ್ಲಿ ಯುವ ಸಾಧು ಸಂತ ಸಂವಾದ ಕಾರ್ಯಕ್ರಮ ಆಯೋಜಿಸಲಾಗಿತ್ತು. ವಿವಿಧ ಪಂಥಗಳ 230 ಸಂತರು ಭಾಗವಹಿಸಿದ್ದರು. ಶತಾಬ್ದಿಯ ನಿಮಿತ್ತ ದೇಶದ 4 ಮಹಾನಗರಗಳಲ್ಲಿ ಸರಸಂಘಚಾಲಕರ ವ್ಯಾಖ್ಯಾನಮಾಲೆ ಮತ್ತು ಸಂವಾದ ಕಾರ್ಯಕ್ರಮ ನಡೆಯಿತು. ಬೆಂಗಳೂರಿನ ಕಾರ್ಯಕ್ರಮದಲ್ಲಿ 13 ವಿವಿಧ ಕ್ಷೇತ್ರಗಳಿಂದ ಗಣ್ಯರನ್ನು ಆಹ್ವಾನಿಸಲಾಗಿತ್ತು. ಒಟ್ಟು 1228 ಜನರು ಭಾಗಿಯಾಗಿದ್ದರು ಎಂದು ತಿಪ್ಪೇಸ್ವಾಮಿ ತಿಳಿಸಿದರು.

## ವಿದ್ಯಾರ್ಥಿಗಳಿಗೆ ಶುಭ ಹಾರೈಸಿದ ಮುಖ್ಯಮಂತ್ರಿ

• **ವಿಧಾನಸಭೆ:** ರಾಜ್ಯದಲ್ಲಿ 2026 ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆ ಬುಧವಾರದಿಂದ ಪ್ರಾರಂಭವಾಗುತ್ತಿದ್ದು, ಪರೀಕ್ಷೆಗೆ ಹಾಜರಾಗುವ ಎಲ್ಲಾ ಅಭ್ಯರ್ಥಿಗಳಿಗೆ ಕರ್ನಾಟಕ ವಿಧಾನಸಭೆ ಶುಭಾಶಯ ಕೋರಿದೆ.

ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರು, ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯುವ ಅಭ್ಯರ್ಥಿಗಳಿಗೆ ಶುಭ ಹಾರೈಸಲು ಅವಕಾಶ ನೀಡಿದರು. ಈ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿ, ಪ್ರಸ್ತುತ ಸಾಲಿನಲ್ಲಿ 8,65,968 ಮಕ್ಕಳು ಪರೀಕ್ಷೆಗೆ ಹಾಜರಾಗುತ್ತಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಸುಧಾರಣೆಗಳನ್ನು ತರಲಾಗಿದ್ದು, ಮೂರು ಹಂತದಲ್ಲಿ ಪರೀಕ್ಷೆಗಳು ನಡೆಯುತ್ತವೆ. ಒಂದು ವೇಳೆ ಮೊದಲ ಹಂತದ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿದ್ದಾಗ್ಯೂ ಎರಡನೇ ಹಂತ, ಮೂರನೇ ಹಂತದಲ್ಲಿ ಪರೀಕ್ಷೆಗೆ ಅವಕಾಶ ಇರುವುದರಿಂದ ಯಾವುದೇ ವಿದ್ಯಾರ್ಥಿಗಳು ಆತಂಕಗೊಳ್ಳದೆ ಪರೀಕ್ಷೆಯನ್ನು ಎದುರಿಸುವಂತೆ ತಿಳಿಸಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಧೈರ್ಯವಾಗಿ ಪರೀಕ್ಷೆ ಬರೆಯಲು ತಿಳಿಸಿದರು. ಅದಕ್ಕೂ ಮೊದಲು ಮಾತನಾಡಿದ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು ಈ ಹಿಂದೆ ಒತ್ತಡದಿಂದ ಪರೀಕ್ಷೆಗೆ ಹಾಜರಾಗುತ್ತಿದ್ದರು.

### ಸುಳ್ಳು ಸುದ್ದಿ ಹರಡುವವರಿಗೆ ಎಚ್ಚರಿಕೆ ಕೊಡಿ

ಪ್ರತಿಪಕ್ಷದ ನಾಯಕ ಆರ್. ಅಶೋಕ ಮಾತನಾಡಿ, ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯುವ ಮಕ್ಕಳಿಗೆ ಪೋಷಕರು ಮಾನಸಿಕ ಹಿಂಸೆ ನೀಡಬಾರದು. ವರ್ಷಪೂರ್ತಿ ಸುಮ್ಮನಿದ್ದು, ಈಗ ಒತ್ತಡದಿಂದ ಪರೀಕ್ಷೆ ಬರೆಯುವಂತೆ ಮಾಡಬೇಡಿ ಎಂದು ಕಿವಿಮಾತು ಹೇಳಿದರು. ಇತ್ತೀಚೆಗೆ ಸಾಮಾಜಿಕ ಜಾಲತಾಣದಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ ಆಗುತ್ತಿದೆ ಎಂದು ಸುಳ್ಳು ಸುದ್ದಿಗಳು ಬರುತ್ತಿವೆ. ಅಂತಹ ಸುದ್ದಿ ಹರಡುವವರನ್ನು ಜೈಲಿಗೆ ಹಾಕುವ ಎಚ್ಚರಿಕೆಯನ್ನು ನೀಡಬೇಕು ಎಂದು ತಿಳಿಸಿದರು.

ಸಭೆ




ದೆಹಲಿಯ ಕರ್ನಾಟಕ ಭವನದಲ್ಲಿ ಮಂಗಳವಾರ ನಡೆದ ರಾಜ್ಯದ ಸಂಸದರ ಜೊತೆ ಸಭೆಯಲ್ಲಿ ಯುಕೆಪಿ, ಮೇಕೆದಾಟು, ಮಹದಾಯಿ ಸೇರಿದಂತೆ ರಾಜ್ಯದ ಪ್ರಮುಖ ನೀರಾವರಿ ಅಡೆತಡೆ ನಿವಾರಣೆ ಸಂಬಂಧ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರುವ ಸಂಬಂಧ ಚರ್ಚೆ ನಡೆಸಲಾಯಿತು. ಡಿಸಿಎಂ ಡಿ.ಕೆ. ಶಿವಕುಮಾರ್,ಸಚಿವರಾದ ಎಚ್.ಕೆ.ಪಾಟೀಲ್, ಭೋಸರಾಜು, ಎಂ.ಬಿ.ಪಾಟೀಲ್ ಹಾಗೂ ಸಂಸದರಾದ ಜಗದೀಶ್ ಶೆಟ್ಟರ್, ಬಸವರಾಜ ಬೊಮ್ಮಾಯಿ ಇದ್ದರು.

## ಉದ್ದಿಮೆದಾರರಿಗೆ ಜಮೀನು

• **ವಿಧಾನ ಪರಿಷತ್:** ಕಳೆದ 2 ವರ್ಷಗಳಲ್ಲಿ ಕೆಐಎಡಿಬಿಯಿಂದ ಅಭಿವೃದ್ಧಿಪಡಿಸಲಾಗುತ್ತಿರುವ ಕೈಗಾರಿಕಾ ಪ್ರದೇಶಗಳಲ್ಲಿ 2,954.52 ಎಕರೆ ಜಮೀನನ್ನು 1,445 ಉದ್ದಿಮೆದಾರರಿಗೆ ಹಂಚಿಕೆ ಮಾಡಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿಯ ರವಿಕುಮಾರ್ ಅವರ ಪ್ರಶ್ನೆಗೆ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಪರವಾಗಿ ಉತ್ತರಿಸಿದ ಸಚಿವರು, ಕೆಐಎಡಿಬಿಯಿಂದ ಅಭಿವೃದ್ಧಿಪಡಿಸುವ ಕೈಗಾರಿಕಾ ಪ್ರದೇಶಗಳಲ್ಲಿ ಉತ್ತಮ ಗುಣಮಟ್ಟದ ಮೂಲಭೂತ ಸೌಕರ್ಯಗಳಾದ ರಸ್ತೆ, ಸಂಪರ್ಕ ವ್ಯವಸ್ಥೆ, ನೀರು, ಚರಂಡಿ, ವಿದ್ಯುತ್ ಇತ್ಯಾದಿಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ತಿಳಿಸಿದರು. 2022-23 ರಿಂದ ಫೆಬ್ರವರಿ 2026ರ ಅಂತ್ಯದವರೆಗೆ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಹಾಗೂ ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಗಳಲ್ಲಿ 2,028 ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ ಎಂದು ಹೇಳಿದರು.

## ರೈತರ ಸಮಸ್ಯೆಗಳಿಗೆ ಪರಿಹಾರ ನೀಡಲಿ

• **ವಿಧಾನ ಪರಿಷತ್:** ಅಡಿಕೆ ಬೆಳೆಗಾರರಿಗೆ ಒಂದೆಡೆ ಎಲೆಚುಕ್ಕೆ ರೋಗ, ಹಳದಿ ರೋಗದ ಬಾಧೆಯಾದರೆ, ಮತ್ತೊಂದೆಡೆ ಈಶಾನ್ಯ ರಾಜ್ಯಗಳಿಂದ ಅಡಿಕೆ ರಾಜ್ಯದ ಮಾರುಕಟ್ಟೆಗೆ ಬರುತ್ತಿರುವುದರಿಂದ ಅಡಿಕೆ ಬೆಲೆ ಪಾತಾಳಕ್ಕೆ ಕುಸಿಯುತ್ತಿದೆ. ಅಡಿಕೆ ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ ತಕ್ಷಣ ರಾಜ್ಯ ಸರ್ಕಾರ ಮಧ್ಯ ಪ್ರವೇಶಿಸಬೇಕು ಎಂದು ಜೆಡಿಎಸ್ ಸದಸ್ಯ ಭೋಜೇಗೌಡ ಒತ್ತಾಯಿಸಿದರು.

ಬಜೆಟ್ ಚರ್ಚೆ ಕಲಾಪದ ವೇಳೆ ಈ ವಿಷಯ ಪ್ರತಿಪಾದಿಸಿದ ಅವರು, ರಾಜ್ಯದಲ್ಲಿ ಮಲೆನಾಡು/ಅರೆ ಮಲೆನಾಡು ಸೇರಿದಂತೆ ರಾಣೆಬೆನ್ನೂರುವರೆಗೆ ಅಡಿಕೆ ಬೆಳೆ ವಿಸ್ತರಿಸಿದೆ. ಸುಮಾರು 6.75 ಲಕ್ಷ ಹೆಕ್ಟೇರು ಅಡಿಕೆ ಬೆಳೆಯಿದೆ. ವಾರ್ಷಿಕ ಬೆಳೆ 10 ಲಕ್ಷ ಟನ್ ಉತ್ಪಾದನೆಯಾಗುತ್ತದೆ. 50 ಹೆಕ್ಟರ್ ಪ್ರದೇಶದಲ್ಲಿ ಹಳದಿ ಎಲೆ ಚುಕ್ಕಿ ರೋಗ, 15 ಸಾವಿರ ಹೆಕ್ಟೇರ್ ಪ್ರದೇಶಕ್ಕೆ ಕೊಳೆ ರೋಗ ವ್ಯಾಪಿಸಿದೆ ಎಂದರು.

## ಕಿರುಸುದ್ದಿ

### ಕುಡಿಯುವ ನೀರಿಗೆ 490 ಕೋಟಿ ರೂ. ಮೀಸಲು

• **ವಿಧಾನಸಭೆ:** ಹನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಅಂತರ್ಜಲ ಮಟ್ಟವನ್ನು ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಹಾಗೂ ಕುಡಿಯುವ ನೀರಿನ ಯೋಜನೆಗೆ ಸಣ್ಣ ನೀರಾವರಿ ಇಲಾಖೆಯಿಂದ 490 ಕೋಟಿ ರೂ.ಗಳನ್ನು ಪ್ರಸ್ತುತ ವರ್ಷದ ಆಯವ್ಯಯದಲ್ಲಿ ಮೀಸಲಿಟ್ಟಿದೆ ಎಂದು ಸಚಿವ ಡಾ. ಎಂ.ಸಿ.ಸುಧಾಕರ್ ತಿಳಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಶಾಸಕ ಮಂಜುನಾಥ್ ಎಂ.ಆರ್. ಅವರ ಪ್ರಶ್ನೆಗೆ ಸಣ್ಣ ನೀರಾವರಿ ಸಚಿವರ ಪರವಾಗಿ ಉತ್ತರಿಸಿದ ಅವರು, ಅಂತರ್ಜಲ ಮಟ್ಟವನ್ನು ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ನೀರಾವರಿ ಕೆರೆಗಳು, ಪಿಕಪ್ ಚೆಕ್ ಡ್ಯಾಂ ನಿರ್ಮಾಣ, ಕೆರೆಗಳಿಗೆ ಕುಡಿಯುವ ನೀರು ತುಂಬಿಸುವ ಯೋಜನೆ ಹಾಗೂ ಇತ್ಯಾದಿ ಯೋಜನೆಗಳನ್ನು ಕೈಗೊಳ್ಳಲಾಗಿದೆ ಎಂದರು. ಕಳೆದ ನಾಲ್ಕು ವರ್ಷಗಳಲ್ಲಿ 9 ಕೋಟಿ ರೂ.ಗಿಂತ ಹೆಚ್ಚು ಅನುದಾನವನ್ನು ಹನೂರು ವಿಧಾನಸಭಾ ಕ್ಷೇತ್ರಕ್ಕೆ ನೀಡಲಾಗಿದೆ. ಅಲ್ಲದೇ ಪ್ರಸ್ತುತ ಆಯವ್ಯಯದಲ್ಲಿ 490 ಕೋಟಿ ರೂ. ಅನುದಾನವನ್ನು ಮೀಸಲಿರಿಸಿದೆ ಎಂದು ಮಾಹಿತಿ ನೀಡಿದರು.

### ಹೊಸ ಕೆಎಸ್‌ಆರ್‌ಪಿ ಪಡೆ ಸ್ಥಾಪನೆ ಪರಿಶೀಲನೆ

• **ವಿಧಾನಸಭೆ:** ರಾಯಚೂರು ಜಿಲ್ಲೆಯಲ್ಲಿ ಹೊಸದಾಗಿ ಕೆಎಸ್‌ಆರ್‌ಪಿ ಪಡೆಯನ್ನು ಸ್ಥಾಪಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. ಅಗತ್ಯತೆ ಆಧಾರದ ಮೇಲೆ ರಾಯಚೂರು ಜಿಲ್ಲೆಯಲ್ಲಿ ಕೆಎಸ್‌ಆರ್‌ಪಿ ಪಡೆ ಸ್ಥಾಪಿಸಲಾಗುವುದು ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ ತಿಳಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಶಾಸಕ ಬಸನಗೌಡ ತುರುವಿಹಾಳ್ ಅವರು, ಕಲ್ಯಾಣ ಕರ್ನಾಟಕ ಭಾಗದಲ್ಲಿ ಕೆಎಸ್‌ಆರ್‌ಪಿ ಪಡೆ ಅಗತ್ಯವಿದ್ದು, 175 ಎಕರೆ ಜಾಗವನ್ನು ಹಾಗೂ ಕೆ.ಕೆ. ಆರ್.ಡಿ.ಬಿ.ಯ ಅನುದಾನವನ್ನು ಸಹ ನೀಡಲಾಗುವುದು ಎಂದು ತಿಳಿಸಿ ಕಲ್ಯಾಣ ಕರ್ನಾಟಕ ಭಾಗದ ಎಲ್ಲಾ ಶಾಸಕರು ಗೃಹ ಸಚಿವರಿಗೆ ಈಗಾಗಲೇ ಮನವಿ ಸಲ್ಲಿಸಿದ್ದಾರೆ ಎಂದರು. ಇದಕ್ಕೆ ಉತ್ತರಿಸಿದ ಸಚಿವರು, ರಾಯಚೂರು ಭಾಗದ 30 ಶಾಸಕರು ಸಹ ಮಾಡಿ ರಾಯಚೂರು ಭಾಗಕ್ಕೆ ಕೆಎಸ್‌ಆರ್‌ಪಿ ಪಡೆ ಸ್ಥಾಪಿಸುವ ಬಗ್ಗೆ ಮನವಿ ಸಲ್ಲಿಸಿದ್ದಾರೆ. ಈಗಾಗಲೇ ಬೆಂಗಳೂರು ಸೇರಿದಂತೆ ರಾಜ್ಯದಲ್ಲಿ 12 ಕೆಎಸ್‌ಆರ್‌ಪಿ ಪಡೆಗಳು ಕಾರ್ಯನಿರ್ವಹಿಸುತ್ತಿವೆ. ರಾಯಚೂರು ಭಾಗದಲ್ಲಿ ವಿಶ್ವಪ್ರಸಿದ್ಧ ಧಾರ್ಮಿಕ ಕ್ಷೇತ್ರಗಳು, ಅಣೆಕಟ್ಟೆಗಳು, ಗಡಿಭಾಗಗಳು ಇರುವುದರಿಂದ ಈ ಕುರಿತು ಪರಿಶೀಲಿಸಿ, ಶಾಸಕರ ಮನವಿಯನ್ನಾಧರಿಸಿ ಆರ್ಥಿಕ ಇಲಾಖೆಗೆ ಈಗಾಗಲೇ ಪ್ರಸ್ತಾವನೆ ಸಲ್ಲಿಸಲಾಗಿದೆ. ಅಗತ್ಯತೆ ಅನುಸಾರ ಆರ್ಥಿಕ ಇಲಾಖೆ ಅನುಮೋದನೆ ಪಡೆದು ಕೆಎಸ್‌ಆರ್‌ಪಿ ಪಡೆ ಸ್ಥಾಪನೆ ಬಗ್ಗೆ ಕ್ರಮ ವಹಿಸಲಾಗುವುದು ಎಂದು ಹೇಳಿದರು.

### ಜಾಲತಾಣಗಳ ದುರ್ಬಳಕೆಗೆ ಭಾರತಿ ಶೆಟ್ಟಿ ಆಗ್ರಹ

• **ವಿಧಾನ ಪರಿಷತ್:** ಸಾಮಾಜಿಕ ಜಾಲತಾಣಗಳ ದುರ್ಬಳಕೆಯ ಫಲವಾಗಿ ಅನೇಕರು ಆತಂಕ, ಬ್ಲ್ಯಾಕ್‌ಮೇಲ್, ನಿದ್ರಾಹೀನತೆಯಂತಹ ಗಂಭೀರ ಸಮಸ್ಯೆಗೆ ಎದುರಿಸುತ್ತಿದ್ದು, ಇದನ್ನು ತಡೆಗಟ್ಟಲು ಸರ್ಕಾರ ಗಂಭೀರ ಹೆಜ್ಜೆ ಇರಿಸಬೇಕು ಎಂದು ಬಿಜೆಪಿ ಸದಸ್ಯೆ ಭಾರತಿ ಶೆಟ್ಟಿ ಸದನದಲ್ಲಿ ಗಮನ ಸೆಳೆದರು. ಶೂನ್ಯವೇಳೆಯಲ್ಲಿ ವಿಷಯವನ್ನು ಮಂಡಿಸಿದ ಅವರು, ಸಾಮಾಜಿಕ ಜಾಲತಾಣಗಳ ದುರುಪಯೋಗದಿಂದ ಆಗುತ್ತಿರುವ ಪರಿಣಾಮಗಳ ಕುರಿತು ಸ್ವಯಂ ಸೇವಾ ಸಂಸ್ಥೆಯೊಂದು 11 ಸಾವಿರಕ್ಕೂ ಹೆಚ್ಚು ಜನರನ್ನು ಸಂದರ್ಶಿಸಿ ಸಮೀಕ್ಷಾ ವರದಿ ಒದಗಿಸಿದೆ.

### ನವೀನ್ ಹೋಟೆಲ್ಸ್ ವಿರುದ್ಧದ ಭೂ ಹಗರಣ ಆರೋಪ

# ವಂಚನೆ ನಡೆದಿಲ್ಲ

• **ವಿಧಾನ ಪರಿಷತ್:** ಹುಬ್ಬಳ್ಳಿ-ಧಾರವಾಡದಲ್ಲಿ ನವೀನ್ ಹೋಟೆಲ್ಸ್ ಲಿಮಿಟೆಡ್‌ಗೆ 114.17 ಎಕರೆ ಜಮೀನು ಸಂಬಂಧ ಯಾವ ರೀತಿಯ ಹಗರಣ ನಡೆದಿಲ್ಲ, ಶುದ್ಧ ಕ್ರಯ ಪತ್ರ ನೆರವೇರಿಸುವ ಸಮಯದಲ್ಲಿ ಮಾರುಕಟ್ಟೆ ಬೆಲೆ ಅಥವಾ ಉಪನೋಂದಣಾಧಿಕಾರಿಗಳ ಮಾರ್ಗಸೂಚಿ ದರವನ್ನು ಮಂಡಳಿ ಪಡೆಯುವುದಿಲ್ಲ, ಹೀಗಾಗಿ ಇಲ್ಲಿ ಮುದ್ರಾಂಕ ಶುಲ್ಕದ ವಂಚನೆ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ತಿಳಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಸದಸ್ಯ ಜಕ್ಕಪ್ಪನವರ್ ಕೇಳಿದ ಪ್ರಶ್ನೆಗೆ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಪರವಾಗಿ ಉತ್ತರಿಸಿದ ಸಚಿವರು, ಗಾಲ್ಫ್ ಕ್ಲಬ್ ಎಂದರೆ ಗ್ರೀನ್ ಬೆಲ್ಟ್, ಅಲ್ಲಿ ಯಾವ ವಿಶೇಷವಾಗಿ ಗಾಲ್ಫ್ ಕೋರ್ಸ್, ಗಾಲ್ಫ್ ಕ್ಲಬ್ ಚಟುವಟಿಕೆ ಹೊರತುಪಡಿಸಿ ಉಳಿದ ಯಾವ ಚಟುವಟಿಕೆಗಳನ್ನು ನಡೆಸುವುದಿಲ್ಲ, ಆದರೆ, ಒಂದು ವೇಳೆ ಅಲ್ಲಿ ಅನ್ಯ ವಾಣಿಜ್ಯಕ ಚಟುವಟಿಕೆಗಳು ನಡೆಯುತ್ತಿರುವ ದೂರು ಬಂದಿದ್ದರೆ ಅದನ್ನು ಇಲಾಖಾ ಕಾರ್ಯದರ್ಶಿಯ ಮಟ್ಟದಲ್ಲಿ ತನಿಖೆ ನಡೆಸಲು ಆದೇಶಿಸಲಾಗುವುದು, ಒಂದು ವೇಳೆ ಹೋಟೆಲ್ ಗಾಲ್ಫ್ ಚಟುವಟಿಕೆ ಹೊರತುಪಡಿಸಿ ಅನ್ಯ ವಾಣಿಜ್ಯಕ ಉದ್ದೇಶಗಳಿಗೆ ಜಮೀನು ಬಳಕೆ ಮಾಡಿಕೊಳ್ಳುತ್ತಿದ್ದರೆ ಅದನ್ನು ಮುಟ್ಟುಗೋಲು ಹಾಕಿಕೊಳ್ಳಲು ಸರ್ಕಾರ ಬದ್ಧವಾಗಿದೆ ಎಂದು ಸ್ಪಷ್ಟವಾಗಿ ಹೇಳಿದರು.



### ಅತ್ಯಂತ ಕಡಿಮೆ ಬೆಲೆಗೆ ಹಂಚಿಕೆ

ಇದಕ್ಕೂ ಮೊದಲು ಕಾಂಗ್ರೆಸ್ ಸದಸ್ಯ ಎಫ್.ಎಚ್. ಜಕ್ಕಪ್ಪನವರ್ ಮಾತನಾಡಿ, ಹುಬ್ಬಳ್ಳಿ-ಧಾರವಾಡದಲ್ಲಿ ನವೀನ್ ಹೋಟೆಲ್ ಲಿಮಿಟೆಡ್ಗೆ 114.17 ಎಕರೆ ಜಮೀನನ್ನು ಅಂದಿನ ಮಾರುಕಟ್ಟೆ ಮೌಲ್ಯಕ್ಕೆ ನೊಂದಾಯಿಸದೇ ಕೇವಲ 97.61,433 ರೂ.ಗಳಿಗೆ ನೊಂದಾಯಿಸಿ 150 ಕೋಟಿ ರೂ. ಮುದ್ರಾಂಕ ಹಾಗೂ ನೊಂದಣಿ ಶುಲ್ಕ ವಂಚನೆಯಾಗಿದೆ. ಯಾವುದೇ ದೇಶದಲ್ಲೂ 114 ಎಕರೆ ಜಮೀನು ಗಾಲ್ಫ್ ಕ್ಲಬ್‌ಗೆ ನೀಡಿರುವ ಉದಾಹರಣೆ ಇಲ್ಲ, ಕೋಟ್ಯಂತರ ರೂ. ಬೆಲೆ ಬಾಳುವ ಜಮೀನನ್ನು ಅತ್ಯಂತ ಕಡಿಮೆ ಬೆಲೆಗೆ ಹಂಚಿಕೆ ಮಾಡಲಾಗಿದೆ. ಅಲ್ಲಿ ಯಾವ ಗಾಲ್ಫ್ ಕ್ಲಬ್ ಸಹ ನಿರ್ಮಾಣಗೊಂಡಿಲ್ಲ, ಒಂದು ರೀತಿಯಲ್ಲಿ ಅಲ್ಲಿ ಖಾಸಗಿ ಲೇಔಟ್ ಮಾಡುವ ದೊಡ್ಡಮಟ್ಟದ ಪ್ರಯತ್ನ ನಡೆದಿದೆ, ಇದೊಂದು ದೊಡ್ಡ ಭೂ-ಹಗರಣ, ಹೀಗಾಗಿ ಈ ಬಗ್ಗೆ ಉನ್ನತ ಮಟ್ಟದ ತನಿಖೆಯಾಗಬೇಕು ಎಂದು ಒತ್ತಾಯಿಸಿದರು. ಇದಕ್ಕೆ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ ಸಹ ದನಿಗೂಡಿಸಿ ತನಿಖೆಗೆ ಒತ್ತಾಯಿಸಿದರು.

### ಜಿಲ್ಲೆಗಳಲ್ಲಿ ವಿಶೇಷ ಪಡೆ: ಸಚಿವ ಆರ್.ಬಿ. ತಿಮ್ಮಾಪುರ

# ಅಕ್ರಮ ಮದ್ಯ ತಡೆಗೆ ಕಾಯ್ದೆ?

• **ವಿಧಾನಸಭೆ:** ರಾಜ್ಯದಲ್ಲಿ ಅಕ್ರಮ ಮದ್ಯ ಮಾರಾಟ ತಡೆಗಟ್ಟಲು ಕರ್ನಾಟಕ ಅಬಕಾರಿ ಕಾಯ್ದೆಯನ್ನು ಪರಿಷ್ಕರಿಸಿ ಹೊಸ ಕಾಯ್ದೆ ತರುವುದಕ್ಕೆ ಸರ್ಕಾರ ಚಿಂತನೆ ನಡೆಸುತ್ತಿದೆ ಎಂದು ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಶಾಸಕ ಬಸನಗೌಡ ದದ್ದಲ್ ಅವರು ವಿಷಯ ಪ್ರಸ್ತಾಪಿಸಿ, ರಾಯಚೂರು ಜಿಲ್ಲೆಯಲ್ಲಿ ಸ್ವಲಾಭಕ್ಕಾಗಿ ಅನಧಿಕೃತ ಸ್ಥಳಗಳು ಹಾಗೂ ಕಿರಾಣಿ ಅಂಗಡಿಗಳಲ್ಲೂ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ. ಕರ್ನಾಟಕ ಅಬಕಾರಿ ಕಾಯ್ದೆ 1965ರ ರೀತ್ಯಾ ಯಾವುದೇ ಕ್ರಮ ಆಗುತ್ತಿಲ್ಲ, ಈ ಬಗ್ಗೆ ಸರ್ಕಾರ ರಾಯಚೂರು ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ವಿಶೇಷ ಪಡೆಗಳನ್ನು ರಚಿಸಬೇಕು ಎಂದು ಮನವಿ ಮಾಡಿದರು.



ಇದಕ್ಕೆ ಉತ್ತರಿಸಿದ ಸಚಿವರು, ಕರ್ನಾಟಕ ಅಬಕಾರಿ ಕಾಯ್ದೆ 1965ರ ರೀತ್ಯಾ ಯಾವುದೇ ಕ್ರಮವು ಹಳೆಯದಾಗಿದ್ದು, ಅಕ್ರಮ ಮದ್ಯ ಮಾರಾಟವನ್ನು ಮಾದಕ ವಸ್ತು ನಿಯಂತ್ರಣ ಕಾಯ್ದೆಯಡಿ ಸೇರಿಸಲು ಸರ್ಕಾರ ಪರಿಶೀಲನೆ ನಡೆಸುತ್ತಿದೆ. ಮದ್ಯ ಅಕ್ರಮ ಮಾರಾಟ ತಡೆಗಟ್ಟಲು ಕರ್ನಾಟಕ ಅಬಕಾರಿ ಕಾಯ್ದೆಯನ್ನು ಪರಿಷ್ಕರಿಸಿ ಹೊಸ ಕಾಯ್ದೆ ತರುವುದಕ್ಕೆ ಸರ್ಕಾರ ಚಿಂತನೆ ನಡೆಸುತ್ತಿದೆ ಎಂದು ತಿಳಿಸಿದರು.

### ಸೇಂದಿ ಮಾರಾಟ

ರಾಯಚೂರು ಜಿಲ್ಲೆಯಲ್ಲಿ ಅಕ್ರಮವಾಗಿ ಕ್ಲೋರಲ್ ಹೈಡ್ರೇಟ್ ಪೌಡರ್‌ನಿಂದ ಕೃತಕವಾಗಿ ಸೇಂದಿಯನ್ನು ತಯಾರಿಸಿ ಮಾರಾಟ ಮಾಡಲಾಗುತ್ತಿದೆ. ಜಿಲ್ಲೆಯ ಗಡಿ ಭಾಗಗಳಿಗೆ ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳಿಂದ ಸೇಂದಿ ಅಥವಾ ಕೃತಕ ಸೇಂದಿಯು ರಸ್ತೆ ಹಾಗೂ ರೈಲು ಮಾರ್ಗವಾಗಿ ಕಳ್ಳಸಾಗಾಣಿಕೆಯಾಗುತ್ತಿದೆ. ಈ ರೀತಿ ಅಕ್ರಮವಾಗಿ ಸೇಂದಿ ಅಥವಾ ಕೃತಕ ಸೇಂದಿಯನ್ನು ತಯಾರಿಸುತ್ತಿರುವವರ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು ಸಚಿವರು ಮಾಹಿತಿ ನೀಡಿದರು.

## ಸರ್ಕಾರದಿಂದ ದುಂದುವೆಚ್ಚ: ವಿಶ್ವನಾಥ್

• **ವಿಧಾನ ಪರಿಷತ್:** ಇನ್ಫೋಸಿಸ್ ದಿಗ್ಗಜರಾದ ನಾರಾಯಣಮೂರ್ತಿ, ಸುಧಾ ನಾರಾಯಣಮೂರ್ತಿ ಅಂತಹ ಆಗರ್ಭ ಶ್ರೀಮಂತರೇ ಇಂಡಿಗೋ ವಿಮಾನದಲ್ಲಿ ಹೊಸದಿಲ್ಲಿಗೆ ಹೋಗುತ್ತಾರೆ. ಆದರೆ, ನಮ್ಮ ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಗಳೂರಿನಿಂದ ಮೈಸೂರು, ಹುಬ್ಬಳ್ಳಿ ಹಾಗೂ ಹೊಸದಿಲ್ಲಿಗೆ ವಿಶೇಷ ವಿಮಾನದಲ್ಲಿ ಹಾರುತ್ತಾರೆ. ಅವರ ಸಂಪುಟ ಸಹೋದ್ಯೋಗಿಗಳೂ ಇದೇ ಹಾದಿಯನ್ನು ಅನುರಿಸುತ್ತಿದ್ದಾರೆ. ಪರಿಣಾಮ ರಾಜ್ಯ ಸರ್ಕಾರದ ದುಂದುವೆಚ್ಚ ಹೆಚ್ಚುತ್ತಿದೆ ಎಂದು ಹಿರಿಯ ಸದಸ್ಯ ಎಚ್. ವಿಶ್ವನಾಥ್ ತರಾಟೆಗೆ ತೆಗೆದುಕೊಂಡರು.

ಮೇಲ್ಮನೆಯಲ್ಲಿ ಬಜೆಟ್ ಮೇಲಿನ ಚರ್ಚೆ ವೇಳೆಯಲ್ಲಿ ಮಾತನಾಡಿದ ಅವರು, ಬೆಂಗಳೂರಿನಿಂದ - ಮೈಸೂರಿಗೆ ಕೇವಲ ಒಂದೂವರೆ ಗಂಟೆಯಲ್ಲಿ ತಲುಪಬಹುದು. ಬೆಂಗಳೂರಿನಿಂದ ಹೊಸದಿಲ್ಲಿಗೆ ಸಾಮಾನ್ಯ ವಿಮಾನದಲ್ಲಿ ಹೋಗಬಹುದು. ಆದರೆ, ಮೈಸೂರು, ದಿಲ್ಲಿಗೂ ಸಿಎಂ ವಿಶೇಷ ವಿಮಾನದಲ್ಲೇ ಪ್ರಯಾಣಿಸುತ್ತಾರೆ. ಇದಕ್ಕಾಗಿ ಸರ್ಕಾರ 38 ಕೋಟಿ ರೂ. ಖರ್ಚು ಮಾಡಿದೆ. ಇದು ಯಾರ ಹಣ, ಜನತೆ ಬೆವರು ಸುರಿಸಿ ಸರ್ಕಾರಕ್ಕೆ ಕಟ್ಟಿದ ತೆರಿಗೆ ಹಣ ಪೋಲಲ್ಲವೇ? ಈ ಸರ್ಕಾರದಲ್ಲಿ ದುಂದು ವೆಚ್ಚಗಳು ನಾಗಾಲೋಟದಲ್ಲಿದೆ.

## ಒಳಚರಂಡಿ ಕಾಮಗಾರಿ ನಗರಸಭೆಗೆ ಹಸ್ತಾಂತರ

• **ವಿಧಾನ ಪರಿಷತ್:** ಭದ್ರಾವತಿ ನಗರದಲ್ಲಿ 16 ಕೋಟಿ ರೂ. ಮತ್ತು ಅಮೃತ್ 1 ರಲ್ಲಿ 40 ಕೋಟಿ ರೂ. ವೆಚ್ಚದಲ್ಲಿ ಒಳಚರಂಡಿ ಕಾಮಗಾರಿಗಳನ್ನು ಕೈಗೊಂಡು ನಗರಸಭೆಗೆ ಹಸ್ತಾಂತರ ಮಾಡಲಾಗಿದೆ. ಅದರಂತೆ ನಗರಸಭೆ ಈ ಒಳಚರಂಡಿ ವ್ಯವಸ್ಥೆಯನ್ನು ನಿರ್ವಹಣೆ ಮಾಡಲಿದೆ ಎಂದು ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವ ಬೈರತಿ ಸುರೇಶ್ ತಿಳಿಸಿದರು.

▸▸ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಹೇಳಿಕೆ

ಪ್ರಶ್ನೋತ್ತರ ವೇಳೆಯಲ್ಲಿ ಕಾಂಗ್ರೆಸ್ ಸದಸ್ಯೆ ಬಲ್ಕಿಸ್ ಬಾನು ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಭದ್ರಾವತಿ ನಗರಸಭೆ ವ್ಯಾಪ್ತಿಯಲ್ಲಿ ಕೈಗೊಂಡಿದ್ದ ಒಳಚರಂಡಿ ಯೋಜನೆ ಕಾಮ ಗಾರಿಯಲ್ಲಿ ಲೋಪದೋಷಗಳ ಬಗ್ಗೆ ಮೂರನೇ ಸಂಸ್ಥೆಯಿಂದ ತನಿಖೆ ನಡೆಸಿ ತಪ್ಪಿತಸ್ಥರ ಗುತ್ತಿಗೆದಾರರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗುತ್ತದೆ. ವಿಶ್ವಬ್ಯಾಂಕ್ ನೆರವಿನ ಅಡಿಯಲ್ಲಿ ಕೆಎಂಆರ್‌ಪಿ ಯೋಜನೆಯಲ್ಲಿ ಭದ್ರಾವತಿ ಸೇರಿದಂತೆ 32 ನಗರ/ ಪಟ್ಟಣಗಳಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

### ಕುಡಿಯುವ ನೀರು ಪೂರೈಕೆಗೆ ತಾತ್ಕಾಲಿಕ ವ್ಯವಸ್ಥೆ

• **ವಿಧಾನ ಪರಿಷತ್ :** ರಾಯಚೂರು ಜಿಲ್ಲೆಯ ಮುದಗಲ್ ಪಟ್ಟಣದಲ್ಲಿ ಕುಡಿಯುವ ನೀರಿನ ಪೂರೈಕೆ ಯೋಜನೆಯ ಬಾಕಿ ಇರುವ ಕಾಮಗಾರಿಗಳಿಗೆ ಇನ್ನೂ 35.45 ಕೋಟಿ ರೂ. ಅಗತ್ಯವಿದೆ ಎಂದು ಸಚಿವ ಬೈರತಿ ಸುರೇಶ್ ಮಾಹಿತಿ ನೀಡಿದರು. ಪ್ರಶ್ನೋತ್ತರ ಕಲಾಪದಲ್ಲಿ ಸದಸ್ಯ ಶರಣಗೌಡ ಬಯ್ಯಾಪುರ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಬೇಸಿಗೆ ಆರಂಭವಾಗಿರುವ ಹಿನ್ನೆಲೆಯಲ್ಲಿ ರಾಜ್ಯದ ನಗರ /ಪಟ್ಟಣ ಪ್ರದೇಶಗಳಲ್ಲಿ ಕುಡಿಯುವ ನೀರು ಪೂರೈಕೆಗೆ ತಾತ್ಕಾಲಿಕ ವ್ಯವಸ್ಥೆಗಳನ್ನು ಮಾಡಲಾಗುತ್ತಿದೆ. ರಾಯಚೂರು ಜಿಲ್ಲೆಯ ಮುದಗಲ್ ಪಟ್ಟಣದಲ್ಲಿ ಕುಡಿಯುವ ನೀರು ಪೂರೈಕೆಗೆ ಹಣದ ಅಗತ್ಯವಿದ್ದು, ಈ ಹಣವನ್ನು ಕ್ರೋಢೀಕರಿಸಿ ಪುರಸಭೆ ವತಿಯಿಂದಲೇ ಕಾಮಗಾರಿ ಆರಂಭಿಸಿ ಪೂರ್ಣಗೊಳಿಸುವ ಚಿಂತನೆ ಇದೆ ಎಂದು ತಿಳಿಸಿದರು.

## ಅಡಕೆ ಹಾಳೆ ತಟ್ಟೆ ಸುರಕ್ಷಿತ

• **ವಿಧಾನ ಪರಿಷತ್:** ಅಡಕೆ ಹಾಳೆ ತಟ್ಟೆಗಳ ಕುರಿತು ಆತಂಕಕ್ಕೆ ವೈಜ್ಞಾನಿಕ ಸಂಶೋಧನಾ ವರದಿಯು ತೆರೆ ಎಳೆದಿದೆ. ಅಡಿಕೆ ತಟ್ಟೆಗಳಲಗಲಿ ಆಲ್ಕಲಾಯ್ಡ್ ಮಟ್ಟವು ಅತ್ಯಂತ ಅಲ್ಪ ಪ್ರಮಾಣದಲ್ಲಿದ್ದು, ಇದು ಬಲಿತ ಅಡಿಕೆ ಕಾಯಿಗಿಂತಲೂ ಸಾವಿರಾರು ಪಟ್ಟು ಕಡಿಮೆಯಿದೆ. ಇದು ಸಂಪೂರ್ಣ ಸುರಕ್ಷಿತ ಎಂಬುದು ಅಧ್ಯಯನದಿಂದ ಸಾಬೀತಾಗಿದೆ.

ಸದಸ್ಯ ಪ್ರತಾಪ್ ಸಿಂಹ ನಾಯಕ್ ಅವರು ಕೇಳಿದ ಪ್ರಶ್ನೆಗೆ ಮೇಲ್ಮನೆಯಲ್ಲಿ ಅಡಿಕೆ ಕುರಿತು ಎದ್ದಿದ್ದ ಸಂಶಯಗಳಿಗೆ ಕೃಷಿ ಸಚಿವ ಚಲುವರಾಯಸ್ವಾಮಿ ಅವರು ಉತ್ತರಿಸಿದ್ದಾರೆ.

ಅಡಕೆಗೆ ಅಂಟಿರುವ ಕಳಂಕವನ್ನು ವೈಜ್ಞಾನಿಕವಾಗಿ ತೊಡೆದುಹಾಕುವ ನಿಟ್ಟಿನಲ್ಲಿ ರಾಜ್ಯ ತೋಟಗಾರಿಕೆ ಇಲಾಖೆಯು ಬೆಂಗಳೂರಿನ ಎಂ.ಎಸ್. ರಾಮಯ್ಯ ವಿಶ್ವವಿದ್ಯಾಲಯಕ್ಕೆ ವಿಶೇಷ ಅಧ್ಯಯನದ ಜವಾಬ್ದಾರಿ ವಹಿಸಿತ್ತು. ಈ ಸಂಬಂಧ ಈ ಸಂಸ್ಥೆಯು ಅಡಿಕೆಗಾಗಿ ಫೈಟೋಕೆಮಿಕಲ್ ಮತ್ತು ಕೀಟನಾಶಕ ಘಟಕಗಳ ಮೌಲ್ಯಮಾಪನ - ಆರೋಗ್ಯ, ಸುರಕ್ಷತೆ ಮತ್ತು ಪರಿಣಾಮಕಾರಿತ್ವದ ಮಾಪನ ಎಂಬ ಯೋಜನೆಯನ್ನು ಕೈಗೆತ್ತಿಕೊಂಡು, ಸುಮಾರು 31.80 ಲಕ್ಷ ರೂ. ವೆಚ್ಚದಲ್ಲಿ ಸಂಶೋಧನೆ ಕೈಗೊಂಡಿದ್ದು, ಪಾನ್ ಅಥವಾ ಪಾನ್ ಮಸಾಲದಂತಹ ಪದಾರ್ಥಗಳಲ್ಲಿ ಅಡಿಕೆಯನ್ನು ಕೇವಲ ಒಂದೇ ಅಂಶವಾಗಿ ಬಳಸಿ, ಅದಕ್ಕೆ ತಂಬಾಕು ಸೇರಿಸದೇ ಅಲ್ಪ ಪ್ರಮಾಣದಲ್ಲಿ ಸೇವಿಸಿದರೆ ಅದು ಖಂಡಿತವಾಗಿಯೂ ಹಾನಿಕಾರಕವಲ್ಲ ಎಂದು ಈ ಸಂಸ್ಥೆಯು ತನ್ನ ಸಂಶೋಧನಾ ವರದಿಯಲ್ಲಿ ಸ್ಪಷ್ಟಪಡಿಸಿದೆ ಎಂದು ತಿಳಿಸಿದರು.

ಕೇಂದ್ರ ಸರ್ಕಾರದ ಕೃಷಿ ಮತ್ತು ರೈತ ಕಲ್ಯಾಣ ಇಲಾಖೆಯು ಅಡಿಕೆ ಕುರಿತ ಸಾಕ್ಷ್ಯಾಧಾರಿತ ಸಂಶೋಧನೆಗೆ ದಿಲ್ಲಿಯ ಏಮ್ಸ್, ಹೈದರಾಬಾದ್‌ನ ಸಿಎಸ್‌ಐಆರ್, ಕಾಸರಗೋಡಿನ ಸಿಪಿಸಿಆರ್‌ಐ ಸೇರಿದಂತೆ ಹತ್ತು ಪ್ರತಿಷ್ಠಿತ ರಾಷ್ಟ್ರೀಯ ಸಂಸ್ಥೆಗಳನ್ನು ಒಳಗೊಂಡ ಬೃಹತ್ ಯೋಜನೆಯನ್ನು ರೂಪಿಸಿದೆ. ತೋಟಗಾರಿಕೆ ಆಯುಕ್ತರ ನೇತೃತ್ವದ ಸಮಿತಿಯು ಸಂಶೋಧನೆಯ ಮೇಲ್ವಿಚಾರಣೆ ನಡೆಸುತ್ತಿದೆ ಎಂದರು. ಈ ಎಲ್ಲ ಪ್ರತಿಷ್ಠಿತ ಸಂಸ್ಥೆಗಳಿಂದ ಅಂತಿಮ ವರದಿ ಕೈಸೇರಿದ ತಕ್ಷಣ, ಅಡಿಕೆ ಹಾನಿಕಾರಕವಲ್ಲ ಮತ್ತು ಕ್ಯಾನ್ಸರ್ ಕಾರಕವಲ್ಲ ಎಂಬ ಸತ್ಯವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರ ಅಗತ್ಯ ಎಂದು ಸಚಿವರು ಭರವಸೆ ನೀಡಿದರು.

## ಸರ್ಕಾರಕ್ಕೆ ಸಣ್ಣ ಕೈಗಾರಿಕೆಗಳ ಬಗ್ಗೆ ಕಾಳಜಿ ಇಲ್ಲ: ಶರವಣ

• **ವಿಧಾನ ಪರಿಷತ್:** ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳು ಸಂಕಷ್ಟದಲ್ಲಿದ್ದರೂ ಅವುಗಳ ಬಗ್ಗೆ ದತ್ತಾಂಶವಿಲ್ಲ ಎಂಬುದಾಗಿ ಹೇಳುವ ಈ ಸರ್ಕಾರಕ್ಕೆ ನಾಚಿಕೆಯಾಗಬೇಕು. ಇದೊಂದು ದಪ್ಪ ಚರ್ಮದ ಸರ್ಕಾರ ವಿಧಾನ ಪರಿಷತ್ ಶಾಸಕ ಟಿ.ಎ. ಶರವಣ ತೀವ್ರ ಆಕ್ರೋಶವನ್ನು ವ್ಯಕ್ತಪಡಿಸಿದರು.

ಚುಕ್ಕೆ ಗುರುತಿನ ಪ್ರಶ್ನೆಗೆ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ದಿಮೆಗಳ ಇಲಾಖೆ ಸಮರ್ಪಕ ಮಾಹಿತಿ ನೀಡದ್ದಕ್ಕೆ ಆಕ್ರೋಶ ವ್ಯಕ್ತಪಡಿಸಿದ ಅವರು, ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳು ಸಂಕಷ್ಟದಲ್ಲಿದ್ದರೂ ಅವುಗಳ ಬಗ್ಗೆ ದತ್ತಾಂಶವಿಲ್ಲದ ಸರ್ಕಾರದ ನಡೆಗೆ ಆಕ್ರೋಶ ವ್ಯಕ್ತಪಡಿಸಿದರು. ಎಷ್ಟು ಕೈಗಾರಿಕೆಗಳು ಮುಚ್ಚಿವೆ ಎಂಬ ಪ್ರಶ್ನೆಗೆ ಸಚಿವರು ಮಾಹಿತಿ ಇಲ್ಲ ಎಂದು ನೀಡಿದ ಉತ್ತರಕ್ಕೆ ಆಕ್ರೋಶಗೊಂಡ ಶರವಣ ಅವರು, ಕೆಲಸ ಮಾಡದ ಇಲಾಖೆಗಳು ಮತ್ತು ಸಚಿವ ಸ್ಥಾನಗಳು ಯಾಕೆ ಇರಬೇಕು ಎಂದು ವಾಗ್ದಾಳಿ ನಡೆಸಿದರು. ಇದಕ್ಕೆ ಸಚಿವ ಶರಣ ಬಸಪ್ಪ ದರ್ಶನಾಪೂರ್ ಪ್ರತಿಕ್ರಿಯಿಸಿ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ನೋಂದಣಿ ಕೇಂದ್ರ ಸರ್ಕಾರದ ಉದ್ಯಮ್ ತಂತ್ರಾಂಶದಲ್ಲಿ ನಡೆಯುವುದರಿಂದ, ಮುಚ್ಚಲ್ಪಟ್ಟ ಘಟಕಗಳ ನಿಖರ ಮಾಹಿತಿ ಪಡೆಯುವ ವ್ಯವಸ್ಥೆ ಇಲಾಖೆಯಲ್ಲಿ ಸದ್ಯಕ್ಕೆ ಲಭ್ಯವಿಲ್ಲ ಎಂದರು.

### ಇಲಾಖೆ ವಜಾಕ್ಕೆ ಆಗ್ರಹ

ಎಷ್ಟು ಕೈಗಾರಿಕೆಗಳು ಮುಚ್ಚಿವೆ ಮತ್ತು ಅದಕ್ಕೆ ಕಾರಣಗಳೇನು ಎಂಬ ಕನಿಷ್ಠ ಜ್ಞಾನವೂ ಇಲ್ಲದ ಮೇಲೆ ಸಣ್ಣ ಕೈಗಾರಿಕೆ ಇಲಾಖೆ ಮತ್ತು ಸಣ್ಣ ಕೈಗಾರಿಕೆ ಅಭಿವೃದ್ಧಿ ನಿಗಮಗಳು ಯಾಕೆ ಬೇಕು? ಕೂಡಲೇ ಇಲಾಖೆಯನ್ನು ಮುಚ್ಚಿಬಿಡಿ. ಸಣ್ಣ ಕೈಗಾರಿಕೆಗಳು ಕೇವಲ ವ್ಯಾಪಾರವಲ್ಲ, ಅವು ಲಕ್ಷಾಂತರ ಗ್ರಾಮೀಣ ಯುವಕರ ವೃತ್ತಿಜೀವನ ಮತ್ತು ಘನತೆಯ ಪ್ರಶ್ನೆ. ಸರ್ಕಾರವು ಕೈಗಾರಿಕೆಗಳಿಗೆ ಅಗತ್ಯವಾದ ವಿದ್ಯುತ್ ರಿಯಾಯಿತಿ, ಬಡ್ಡಿ ರಹಿತ ಸಾಲ ಮತ್ತು ಮಾರುಕಟ್ಟೆ ಸೌಲಭ್ಯ ನೀಡುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಇಂತಹ ಬೇಜವಾಬ್ದಾರಿ ನೀತಿಯಿಂದಾಗಿ ಉದ್ಯಮಿಗಳು ಆತ್ಮಹತ್ಯೆಯ ಹಾದಿ ಹಿಡಿಯುವಂತಾಗಿದೆ ಎಂದು ಶರವಣ ಎಚ್ಚರಿಸಿದರು.

### ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಖರ್ಗೆ ಆಶ್ವಾಸನೆ

# ಉದ್ಯೋಗ ಕಲ್ಪಿಸಲು ರಾಜ್ಯ ಸರ್ಕಾರ ಬದ್ಧ

• **ವಿಧಾನಸಭೆ:** ರಾಜ್ಯದ ಎರಡನೇ ರಾಜಧಾನಿಯೆಂದೇ ಘೋಷಣೆಯಾಗಿರುವ ಹಾಗೂ ರಾಜ್ಯದ ಗಡಿ ಜಿಲ್ಲೆಯಾದ ಬೆಳಗಾವಿಯಲ್ಲಿ ಐಟಿ ಪಾರ್ಕ್ ಅಥವಾ ಸೆಮಿ ಕಂಡಕ್ಟರ್ ಪಾರ್ಕ್‌ಗಳನ್ನು ನಿರ್ಮಿಸಿ ಅಭಿವೃದ್ಧಿ ಪರ ರಾಜ್ಯವನ್ನಾಗಿ ಮಾಡುವ ಹಾಗೂ ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸುವ ಉದ್ದೇಶ ಸರ್ಕಾರಕ್ಕಿದೆ ಎಂದು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ ಖರ್ಗೆ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿಯ ಅಭಯ ಪಾಟೀಲ್ ಅವರು ವಿಷಯ ಪ್ರಸ್ತಾಪಿಸಿ, ಬೆಳಗಾವಿಯಲ್ಲಿ ಐಟಿ ಪಾರ್ಕ್ ಮತ್ತು ಸೆಮಿಕಂಡಕ್ಟರ್ ಪಾರ್ಕ್‌ಗಳನ್ನು ನಿರ್ಮಿಸಿ ಅಭಿವೃದ್ಧಿಪರ ರಾಜ್ಯವನ್ನಾಗಿ ಮಾಡಬೇಕು. ದ್ಯಾವಂತ ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಬೇಕೆಂದು ಮನವಿ ಮಾಡಿದರು.

ಇದಕ್ಕುತ್ತರಿಸಿದ ಸಚಿವರು, ಬೆಳಗಾವಿಯಲ್ಲಿ ಐಟಿ ಪಾರ್ಕ್ ಅಥವಾ ಸೆಮಿ ಕಂಡಕ್ಟರ್ ಪಾರ್ಕ್‌ಗಳನ್ನು ನಿರ್ಮಿಸಿ ಅಭಿವೃದ್ಧಿ ಪರ ರಾಜ್ಯವನ್ನಾಗಿ ಮಾಡುವ ಹಾಗೂ ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸುವ ಉದ್ದೇಶದಿಂದ ಸರ್ಕಾರವು ಈಗಾಗಲೇ ಕ್ರಮ ಕೈಗೊಂಡಿದೆ. ಐಟಿ ಪ್ಲಗ್ ಆ್ಯಂಡ್ ಪ್ಲೇ ಮೂಲ ಸೌಕರ್ಯ ಸ್ಥಾಪನೆ, ಸ್ಟಾರ್ಟ್‌ಅಪ್ ಮತ್ತು ನಾವೀನ್ಯತೆ ಪರಿಸರ ವ್ಯವಸ್ಥೆಯನ್ನು ಬಲಪಡಿಸುವುದು. ವೇಗವರ್ಧಕ ಜಾಲಗಳು ಮತ್ತು ಸೀಡ್ ಫಂಡ್ ಬೆಂಬಲ, ಟೆಕ್ಸಿಲರೇಷನ್, ಸಮಗ್ರ ಅಭಿವೃದ್ಧಿ ಹಾಗೂ ಭವಿಷ್ಯದ ತಂತ್ರಜ್ಞಾನ, ನಿಪುಣ ಕರ್ನಾಟಕ, ಐಡಿಯಾ2ಪಿಒಸಿ ಎಲಿವೇಟ್ (ಗ್ರ್ಯಾಂಟ್ ಇನ್ ಏಡ್), ರಾಜೀವ್ ಗಾಂಧಿ ಉದ್ಯಮಶೀಲತೆ ಕಾರ್ಯಕ್ರಮ, ಎಲಿವೇಟ್ ಮಹಿಳಾ ಉದ್ಯಮಶೀಲತೆ, ಗ್ರಾಸ್ ರೂಟ್ ಇನೋವೇಶನ್ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದರು. ಬೆಳಗಾವಿಯ ತಿಲಕವಾಡಿಯಲ್ಲಿರುವ ಕಲಾಮಂದಿರ ಕಟ್ಟಡದಲ್ಲಿ ಜಾಗತಿಕ ತಂತ್ರಜ್ಞಾನ ಕೇಂದ್ರ ಸ್ಥಾಪಿಸಲು ಆ ಕಟ್ಟಡವನ್ನು ಇಲಾಖೆಗೆ ಹಸ್ತಾಂತರಿಸಿಕೊಳ್ಳಲು ಕ್ರಮ ವಹಿಸಲಾಗುತ್ತಿದೆ ಎಂದು ತಿಳಿಸಿದರು.



### ಸೆಮಿಕಂಡಕ್ಟರ್ ಪಾರ್ಕ್ ಸ್ಥಾಪನೆ

ಬೆಳಗಾವಿಯಲ್ಲಿ ಐಟಿ. ಪಾರ್ಕ್ ಅಥವಾ ಸೆಮಿಕಂಡಕ್ಟರ್ ಪಾರ್ಕ್‌ಗಳನ್ನು ಸ್ಥಾಪಿಸುವ ಸಂಬಂಧ ಉದ್ದೇಶಿತ ಜಮೀನನ್ನು ಸರ್ಕಾರಕ್ಕೆ ಪಡೆದು ಜಮೀನನ್ನು ರಾಜ್ಯ ಸರ್ಕಾರಕ್ಕೆ ಹಸ್ತಾಂತರಿಸುವ ಸಲುವಾಗಿ ಭಾರತ ಸರ್ಕಾರದ ರಕ್ಷಣಾ ಸಚಿವರಿಗೆ 2021ರ ಜ.8ರಂದು ಪತ್ರ ಬರೆಯಲಾಗಿದೆ. ಜಮೀನನ್ನು ರಾಜ್ಯ ಸರ್ಕಾರಕ್ಕೆ ಹಿಂದಿರುಗಿಸಲು ರಕ್ಷಣಾ ಇಲಾಖೆಯಿಂದ ಇನ್ನೂ ಕ್ರಮ ಕೈಗೊಂಡಿಲ್ಲವಾದ್ದರಿಂದ ಅದೇ ವರ್ಷ ಸೆ.9ರಂದು ಮತ್ತೆ ಪತ್ರ ಬರೆಯಲಾಗಿದೆ. 2021ರ ಸೆ.21ರಂದು ಮುಖ್ಯಮಂತ್ರಿಗಳು ರಕ್ಷಣಾ ಸಚಿವರಿಗೆ ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ರಕ್ಷಣಾ ಕಾರ್ಯದರ್ಶಿಯವರಿಗೆ ಪತ್ರ ಬರೆದು ಜಮೀನನ್ನು ಕರ್ನಾಟಕ ಸರ್ಕಾರದ ವಶಕ್ಕೆ ನೀಡುವಂತೆ ಕೋರಲಾಗಿದೆ ಎಂದು ವಿವರಿಸಿದರು.

### ಆರೋಗ್ಯ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ಭರವಸೆ

# ಔಷಧ ಕೊರತೆ ಉಂಟಾಗದಂತೆ ಕ್ರಮ

• **ವಿಧಾನ ಪರಿಷತ್:** ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧ ಕೊರತೆ ಉಂಟಾಗದಂತೆ ಕ್ರಮ ಕೈಗೊಳ್ಳಲಾಗಿದ್ದು, ಎಲ್ಲ ಉನ್ನತ ಅಧಿಕಾರಿಗಳು ಪರೀಕ್ಷೆ ನಡೆಸಲು ಅವಕಾಶವಿರುತ್ತದೆ. ಈ ಎಲ್ಲ ಬದಲಾವಣೆಯಿಂದ ಮುಂದಿನ ದಿನದಲ್ಲಿ ಶೇ.80ರಷ್ಟು ಕರ್ನಾಟಕ ರಾಜ್ಯ ಔಷಧ ಸರಬರಾಜು ನಿಗಮ (ಕೆಎಸ್‌ಎಂಎಸ್‌ಸಿಎಲ್)ದಿಂದ ನೇರವಾಗಿ ಔಷಧಿಗಳ ಟೆಂಡರ್ ಕರೆದು ಪೂರೈಸಲಾಗುತ್ತದೆ ಎ ಂದು ಆರೋಗ್ಯ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಮೇಲ್ಮನೆಯಲ್ಲಿ ಅರ್ಧ ಗಂಟೆ ಚರ್ಚೆ ಕಲಾಪದ ವೇಳೆ ಸದಸ್ಯರಾದ ಡಾ.ಧನಂಜಯ ಸರ್ಜಿ ಹಾಗೂ ಪ್ರತಾಪ್ ಸಿಂಹ ನಾಯಕ್ ಅವರು ಈ ಬಗ್ಗೆ ಪ್ರಸ್ತಾಪಿಸಿದಾಗ ಉತ್ತರಿಸಿದ ಸಚಿವರು, ಕೆಎಸ್‌ಎಂಎಸ್‌ಸಿಎಲ್ ಮುಖಾಂತರ ಖರೀದಿ ಮಾಡಬೇಕು ಎನ್ನುವುದು ಮುಖ್ಯ ಉದ್ದೇಶ. ಅವಶ್ಯಕತೆಯಿರುವ ಔಷಧ ಖರೀದಿ ಕಾರ್ಯವೈಖರಿಯಲ್ಲಿ ಲೋಪದೋಷವಿತ್ತು. ಟೆಂಡರ್ ಪ್ರಕ್ರಿಯೆ, ಗುಣಮಟ್ಟ ಹೀಗೆ ಹಲವು ನ್ಯೂನ್ಯತೆಗಳ ಲಾಭವನ್ನು ಕೆಲವು ಸಂಸ್ಥೆಗಳು ಪಡೆದುಕೊಂಡಿರಬಹುದು. ಇದನ್ನು ಸರಿಪಡಿಸಲು ಹಲವು ಕ್ರಮ ಕೈಗೊಂಡಿದ್ದೇವೆ. ಕೆಎಸ್‌ಎಂಎಸ್‌ಸಿಎಲ್ ಸರಿಯಾಗಿ ದಿಕ್ಕಿನಲ್ಲಿ ಸಾಗಬೇಕು ಎನ್ನುವ ಕಾರಣಕ್ಕೆ ಐಎಎಸ್ ಅಧಿಕಾರಿಯನ್ನು ಮುಖ್ಯಸ್ಥರಾಗಿ ನೇಮಕ ಮಾಡಿದ್ದೇವೆ. ನಮ್ಮ ಉದ್ದೇಶ ಎಲ್ಲ ಇಲಾಖೆಗಳ ಔಷಧಿ ಖರೀದಿ ಪ್ರಕ್ರಿಯೆ ಸರಿಯಾಗಿ ಆಗಬೇಕು ಎಂದರು.



ಕಳೆದ ವರ್ಷ 893 ಔಷಧಗಳ ಪೈಕಿ 534 ಔಷಧಗಳಿಗೆ ಟೆಂಡರ್ ಕರೆಯಲಾಗಿದೆ. ಈ ಪೈಕಿ 232 ಔಷಧ ಖರೀದಿಸಲು ಕಾರ್ಯಾದೇಶ ನೀಡಲಾಗಿದೆ. ಇನ್ನುಳಿದ ಔಷಧಗಳನ್ನು ಸ್ಥಳೀಯವಾಗಿ ಖರೀದಿಸಲಾಗುವುದು. ಶೇ.20ರಷ್ಟು ಔಷಧಗಳನ್ನು ಸ್ಥಳೀಯ ಆಸ್ಪತ್ರೆಗಳೇ ಖರೀದಿಸುವಂತೆ ಸೂಚಿಸಲಾಗಿದೆ. ವಾರ್ಷಿಕವಾಗಿ ಔಷಧಿ ಖರೀದಿ ಬದಲು ಎರಡ್ಮೂರು ತಿಂಗಳಿಗೊಮ್ಮೆ ಖರೀದಿಗೆ ಕ್ರಮ ಕೈಗೊಳ್ಳಲಾಗಿದೆ. ಔಷಧಿ ಸರಬರಾಜಿಗೂ ಮುನ್ನ ಅದರ ಗುಣಮಟ್ಟ ಪರೀಕ್ಷಿಸಿದ ಬಳಿಕವಷ್ಟೇ ಆಸ್ಪತ್ರೆಗಳಿಗೆ ವಿತರಿಸಲಾಗುತ್ತಿದೆ. ಸದ್ಯ 270 ಕೋಟಿ ರೂ. ಮೌಲ್ಯದ ಔಷಧ ಖರೀದಿಸಲಾಗಿದೆ. ಉಗ್ರಾಣಗಳಲ್ಲಿ ದಾಸ್ತಾನು ಇರುವ ಔಷಧಗಳ ಪ್ರಮಾಣ, ಔಷಧಗಳ ಸರಬರಾಜು, ವಿತರಣೆ ಮೇಲೆ ನಿಗಾವಹಿಸಲು ರಿಯಲ್ ಟೈಮ್ ಟ್ರ್ಯಾಕಿಂಗ್ ಸಿಸ್ಟಂ ಜಾರಿಗೊಳಿಸಲಾಗಿದೆ ಎಂದರು.

## ಕಿರುಸುದ್ದಿ

### ಕಾಮಗಾರಿಗಳ ಬಗ್ಗೆ ಗ್ರಾಮದ ಮುಖಂಡರುಗಳು ನಿಗಾವಹಿಸಿ

**ಅಜ್ಜಂಪುರ:** ಯಾವುದೇ ಕಾಮಗಾರಿಗಳನ್ನು ಶಾಸಕರು ಪರೀಕ್ಷಿಸಲು ಆಗುವುದಿಲ್ಲ, ಗ್ರಾಮದ ಮುಖಂಡರುಗಳು ನಿಗಾವಹಿಸಿ ಮಾಡಿಸಬೇಕಾಗುತ್ತದೆ ಎಂದು ತರೀಕೆರೆ ಶಾಸಕ ಶ್ರೀನಿವಾಸ್ ಹೇಳಿದರು.

ಅವರು ಶಿವನಿ ಹೋಬಳಿ ಬಂಕನಕಟ್ಟೆ ಗ್ರಾಮದಲ್ಲಿ 30 ಲಕ್ಷದ ಡಾ. ಬಿ.ಆರ್. ಅಂಬೇಡ್ಕರ್ ಭವನ ನಿರ್ಮಾಣದಲ್ಲಿ ಕಾಮಗಾರಿಗೆ ಗುದ್ದಲಿ ಪೂಜೆ ಮಾಡಿ ಮಾತನಾಡಿದರು.

ಬಂಕನಕಟ್ಟೆ ಗ್ರಾಮಕ್ಕೆ ನ್ಯಾಯಬೆಲೆ ಅಂಗಡಿಯನ್ನು ಮಂಜೂರು ಮಾಡಲಾಗುವುದು ಎಂದರು.

ನಮ್ಮ ಅಧಿಕಾರ ಅವಧಿಯಲ್ಲಿ 224 ಹಳ್ಳಿಗಳಿಗೆ ಹಳ್ಳಿಗಳಿಗೆ ರಸ್ತೆ, ಸಿ.ಸಿ. ರಸ್ತೆ ಮುಖ್ಯ ರಸ್ತೆಗಳು, ಕೆರೆಗಳು, ಕೆರೆಗಳಿಗೆ ನೀರು ಹರಿಸಿದ್ದು ಹನಿ ನೀರಾವರಿ ಯೋಜನೆಗೆ 800 ಕೋಟಿಯಲ್ಲಿ ಕೃಷಿ ಅಭಿವೃದ್ಧಿ ಮಾಡಿದ್ದು ಅಜ್ಜಂಪುರ ತಾಲೂಕು ಕೇಂದ್ರಕ್ಕೆ 8 ಕೋಟಿ ವೆಚ್ಚದಲ್ಲಿ ಪ್ರಜಾಸೌಧಕ್ಕೆ ಹಣ ಬಿಡುಗಡೆ ಆಗಿರುತ್ತದೆ. ನಮ್ಮ ಕುಟುಂಬಸ್ಥರು ಸಹ ಜನಸೇವೆಯಲ್ಲಿ ತೊಡಗಿರುತ್ತಾರೆ. ಇನ್ನು ನೋವಿನ ಸಂಗತಿಯೆಂದರೆ ದಲಿತರು ಹನಿನೀರಾವರಿ ಯೋಜನೆಗೆ ಕೊಟ್ಟ ಪೈಪುಗಳನ್ನು ಮಾರಿಕೊಂಡಿರುವುದು ವಿಷಾದನೀಯ.

ಸರ್ಕಾರ ನಿಮಗೆ ಕೃಷಿ ಅಭಿವೃದ್ಧಿಗೆ ಅನೇಕ ಸೌಲಭ್ಯಗಳನ್ನು ಕೊಟ್ಟಿರುತ್ತದೆ. ಇದನ್ನು ಉಪಯೋಗಿಸಿಕೊಂಡು ಕೃಷಿ ಅಭಿವೃದ್ಧಿ ಪಡಿಸಬೇಕೆಂದರು. ಚುನಾವಣೆ ಬಂದಾಗ ಕೆಲವರು ನಾಟಕದ ಮಾತುಗಳನ್ನಾಡಿ ಮತ ಕೇಳುತ್ತಾರೆ.ಆದರೆ ನಾನು ಹಾಗೇ ನಡೆದುಕೊಂಡಿಲ್ಲ, ಜನರ ನೋವು-ನಲಿವಿಗೆ ಕಷ್ಟಕ್ಕೆ ಸ್ಪಂದಿಸಿದ್ದು 2028ರ ಚುನಾವಣೆ ಹಾಗೂ ಜಿಪಂ, ತಾಪಂ ಚುನಾವಣೆಗೆ ಕಾಂಗ್ರೆಸ್ ಪಕ್ಷಕ್ಕೆ ಹೆಚ್ಚು ಮತ ಹಾಕಬೇಕೆಂದು ಹೇಳಿದರು.

ಶಿವನಿ ಹೋಬಳಿ ಬಸ್ ನಿಲ್ದಾಣದಲ್ಲಿ ಆಯೋಜಿಸಿದ್ದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 1 ಕಿ.ಮೀ. ಸುಂದರವಾದ ರಸ್ತೆ ಮತ್ತು ಬೆಳಕಿನ ಸೌಲಭ್ಯವನ್ನು ಮಾಡುವ ಉದ್ದೇಶದಿಂದ 2 ಕೋಟಿ 75 ಲಕ್ಷ ಹಣ ಮಂಜೂರು ಮಾಡಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡ ನಿರಂಜನಾ ನಿವೃತ್ತ ಶಿಕ್ಷಕರಾದ ಶಿವಣ್ಣ ಬಂಕನಕಟ್ಟೆ, ಮಾಜಿ ಅಧ್ಯಕ್ಷೆ ಗೌರಮ್ಮ, ಬಸವರಾಜ್, ಪಿ.ಡಿ.ಒ. ಪಾರ್ವತಿ, ನಟರಾಜ್, ಮಲ್ಲಿಕಾರ್ಜುನ್ ಹಾಜರಿದ್ದರು.



### ಹೊನಲು ಬೆಳಕಿನ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿ

**ಚಿಕ್ಕಮಗಳೂರು:** ಕಳವಾಸೆ ಕಿಂಗ್‌ಪಿನ್ ಮತ್ತು ವೈಲ್ಡ್ ಫ್ರೆಂಡ್ಸ್ ಸಿದ್ದಾಪುರ ಇವರ ನೇತೃತ್ವದಲ್ಲಿ ಗೌಡಾಸ್ ಪ್ರೀಮಿಯರ್ ಲೀಗ್-2026 ಹೊನಲು ಬೆಳಕಿನ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಯನ್ನು ಮಾ.21 ಮತ್ತು 22ರಂದು ಮಲ್ಲಂದೂರು ಕ್ರೀಡಾಂಗಣದಲ್ಲಿ ಆಯೋಜಿಸಿದೆ.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಂಸ್ಥೆಯ ಸದಸ್ಯ ಸುನಿಲ್ ಅವರು, ಜಿಲ್ಲೆಯ ಒಕ್ಕಲಿಗ 182 ಆಟಗಾರರು 14 ತಂಡಗಳಾಗಿ 3ನೇ ಆವೃತ್ತಿಯ ಈ ಪಂದ್ಯಾವಳಿಯಲ್ಲಿ ಭಾಗವಹಿಸಲಿದ್ದಾರೆಂದು ಹೇಳಿದರು.

ಪ್ರತೀ ತಂಡಕ್ಕೆ 30 ಸಾವಿರ ರೂ. ಪ್ರವೇಶ ಶುಲ್ಕವನ್ನು ನಿಗದಿಪಡಿಸಲಾಗಿದ್ದು, ವಿಜೇತ ತಂಡಕ್ಕೆ ಮೊದಲನೇ ಬಹುಮಾನ 1,11,111 ರೂಗಳು, ಎರಡನೇ ಬಹುಮಾನ 77,.777 ರೂಗಳು, ಮೂರನೇ ಬಹುಮಾನ 55,555 ರೂ. ಗಳು ಹಾಗೂ ನಾಲ್ಕನೇ ಬಹುಮಾನ 33,333 ರೂ. ಗಳ ಜೊತೆಗೆ ಆಕರ್ಷಕ ಟ್ರೋಫಿ ನೀಡಲಾಗುವುದೆಂದು ತಿಳಿಸಿದರು.

ಈ ಕ್ರೀಡಾಕೂಟದಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ ಹಾಗೂ ವೀಕ್ಷಕರಿಗೆ ಊಟದ ವ್ಯವಸ್ಥೆಯನ್ನು ಮಾಡಲಾಗಿದ್ದು, ಸಾರ್ವಜನಿಕರು, ಕ್ರೀಡಾಭಿಮಾನಿಗಳು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಪಂದ್ಯಾವಳಿಯನ್ನು ವೀಕ್ಷಿಸಬೇಕೆಂದು ಮನವಿ ಮಾಡಿದರು.

ಈಗಾಗಲೇ ವಿಐಪಿ ಪಾಸ್‌ಗಳನ್ನು ವಿತರಿಸಲಾಗಿದ್ದು, ಸಾರ್ವಜನಿಕರಿಗೆ ಉಚಿತ ಪ್ರವೇಶವಿರುತ್ತದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಕ್ರಿಕೆಟ್ ಪಂದ್ಯಾವಳಿ ಸಮಿತಿಯ ಸದಸ್ಯರುಗಳಾದ ದರ್ಶನ್ ಮಾಡ್ಯ, ಅರ್ಜಿತ್, ನವೀನ್, ಸಂದೀಪ್, ರಂಜಿತ್, ಚಂದನ್ ಮತ್ತಿತರರು ಉಪಸ್ಥಿತರಿದ್ದರು.

## ಬಾಳೆಹೊನ್ನೂರಿನಲ್ಲಿ ಪರೀಕ್ಷೆ ಬರೆಯಲಿರುವ 223 ವಿದ್ಯಾರ್ಥಿಗಳು

**ಬಾಳೆಹೊನ್ನೂರು:** ಶ್ರೀ ಜಗದ್ಗುರು ರೇಣುಕಾಚಾರ್ಯ ಸಂಯುಕ್ತ ಪದವಿ ಪೂರ್ವ ಕಾಲೇಜು ಬಾಳೆಹೊನ್ನೂರು ಇದು ಎಸ್. ಎಸ್. ಎಲ್. ಸಿ. ವಾರ್ಷಿಕ ಪರೀಕ್ಷೆ 18 ಮಾರ್ಚ್ 2026 ಪರೀಕ್ಷಾ ಕೇಂದ್ರವಾಗಿದ್ದು, ಈ ಕೇಂದ್ರದಲ್ಲಿ 223 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ.

ಬಾಲಕರು 112, ಬಾಲಕಿಯರು 111, ಈ ಕೇಂದ್ರಕ್ಕೆ ಎಸ್. ಜೆ.ಆರ್. ಪ್ರೌಢಶಾಲೆ, ನಿರ್ಮಲ ಕಾನ್ವೆಂಟ್, ಬಿಜಿಎಸ್ ಪ್ರೌಢಶಾಲೆ, ಸರ್ಕಾರಿ ಪ್ರೌಢ ಶಾಲೆ ಬಾಳೆಹೊನ್ನೂರು, ಹೋಲಿ ಪ್ರಾಫೆಟ್ ಪ್ರೌಢಶಾಲೆ , ಸರ್ಕಾರಿ ಪ್ರೌಢಶಾಲೆ ಕಟ್ಟಿನಮನೆ, ಸರ್ಕಾರಿ ಪ್ರೌಢಶಾಲೆ ಮಾಗುಂಡಿ ಹಾಗೂ ಸರ್ಕಾರಿ ಪ್ರೌಢಶಾಲೆ ಮೇಲ್ಪಾಲ್‌ಬಟ್ಟು ಎಂಟು ಪ್ರೌಢಶಾಲೆಯ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ.

ಮುಖ್ಯ ಅಧೀಕ್ಷಕರಾಗಿ ಮಾಗುಂಡಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ರಮೇಶ್ ನಾಯಕ್ ಮತ್ತು ಕಚೇರಿ ಅಧೀಕ್ಷಕರಾಗಿ ಜೆರ್ರಿಜೇಮ್ಸ್ ಕಾರ್ಯ ನಿರ್ವಹಿಸಲಿದ್ದಾರೆ ಎಂದು ಕಾಲೇಜಿನ ಪ್ರಾಚಾರ್ಯ ಭೂದೇಶ್ ತಿಳಿಸಿದ್ದಾರೆ.

## ಕಡೂರಿನಲ್ಲಿ ಪರೀಕ್ಷೆ ಬರೆಯಲಿರುವ 2275 ವಿದ್ಯಾರ್ಥಿಗಳು

**ಕಡೂರು:** ಈ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಾಗಿ ಕಡೂರು ಶೈಕ್ಷಣಿಕ ವಲಯದಲ್ಲಿ 10 ಪರೀಕ್ಷಾ ಕೇಂದ್ರಗಳನ್ನು ಮಾಡಲಾಗಿದೆ. ಈಗಾಗಲೇ ಎಲ್ಲಾ ರೀತಿಯ ಸಿದ್ಧತೆಗಳನ್ನು ಆಯಾ ಪರೀಕ್ಷಾ ಕೇಂದ್ರಗಳಲ್ಲಿ ಮಾಡಿಕೊಳ್ಳಲಾಗಿದೆ.

ಫೆ.18ರ ಬುಧವಾರ ಬೆಳಗ್ಗೆ 10.30ರಿಂದ 1.30ರವರೆಗೆ ಕನ್ನಡದ ವಿಷಯದ ಬಗ್ಗೆ 2276 ವಿದ್ಯಾರ್ಥಿಗಳು ಪರೀಕ್ಷೆಯನ್ನು ಬರೆಯಲು ನೋಂದಾಯಿಸಿಕೊಂಡಿದ್ದಾರೆ. ಕಡೂರು ಶೈಕ್ಷಣಿಕ ವಲಯದ ಎಲ್ಲಾ ಪ್ರೌಢಶಾಲೆಗಳಲ್ಲಿ ಫಲಿತಾಂಶವನ್ನು ಹೆಚ್ಚಿಸಲು ವಿಶೇಷ ತರಗತಿಗಳಲ್ಲಿ ತರಬೇತಿ ನೀಡಲಾಗಿದೆ. ವಿದ್ಯಾರ್ಥಿಗಳು ಯಾವುದೇ ಭಯ ಆತಂಕವಿಲ್ಲದೆ ಪರೀಕ್ಷೆಯನ್ನು ಬರೆಯಬೇಕು ಎಂದು ಶಿಕ್ಷಣಾಧಿಕಾರಿ ಎಂ.ಹೆಚ್. ತಿಮ್ಮಯ್ಯ ತಿಳಿಸಿದರು.

ಪಟ್ಟಣದ ಪದವಿಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದಲ್ಲಿ ಕೊಠಡಿಗಳ ಪೂರ್ವಸಿದ್ಧತೆಯನ್ನು ವೀಕ್ಷಿಸಿ ಮಾತನಾಡಿದ ಅವರು ಎಸ್ ಎಲ್ ಸಿ ಪರೀಕ್ಷೆಯ ಫಲಿತಾಂಶವನ್ನು ಹೆಚ್ಚು ಮಾಡಲು ಕ್ಷೇತ್ರದ ಶಾಸಕ ಕೆ. ಎಸ್. ಆನಂದ್ ವಿದ್ಯಾರ್ಥಿಗಳಲ್ಲಿ ಪ್ರೇರಣೆ ಮೂಡಿಸಲು ಕರಪತ್ರಗಳ ಮೂಲಕ ಸಂದೇಶವನ್ನು ನೀಡಿದ್ದರು. ತಹಸೀಲ್ದಾರ್ ಪೂರ್ಣಿಮಾ ಅವರು ಕೆಲವು ಪ್ರೌಢಶಾಲೆಗಳಿಗೆ ಭೇಟಿ ನೀಡಿ ವಿಜ್ಞಾನ ವಿಷಯದ ಬಗ್ಗೆ ಪಾಠ ಮಾಡಿ ಬಂದಿದ್ದರು. ತಾಪಂ ಇಒ ಪ್ರವೀಣ್ ಸೇರಿದಂತೆ ಎಲ್ಲಾ ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳು ಶಿಕ್ಷಣ ಇಲಾಖೆಯೊಂದಿಗೆ ಕೈಜೋಡಿಸಿ ಸಹಕಾರ ನೀಡಿರುತ್ತಾರೆ. ಕಳೆದ ಸಾಲಿನಲ್ಲಿ 10ನೇ ತರಗತಿ ಫಲಿತಾಂಶ ಜಿಲ್ಲೆಯಲ್ಲಿ ಕೊನೆಯ ಸ್ಥಾನದಲ್ಲಿ ಇದ್ದಿತು ಎಂದರು.

ಪಟ್ಟಣದ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದ ಉಪ ಪ್ರಾಂಶುಪಾಲೆ ರೇಖಾ ಮಾತನಾಡಿ, ಎಸ್ ಎಸ್‌ಎಲ್‌ಸಿ ಪರೀಕ್ಷೆಗಾಗಿ ನಮ್ಮ ಶಾಲೆಯಲ್ಲಿ 15 ಕೊಠಡಿಗಳನ್ನು ಎಲ್ಲಾ ರೀತಿಯ ತಯಾರಿ ಮಾಡಿಕೊಳ್ಳಲಾಗಿದೆ. ಈ ಶಾಲೆಯಲ್ಲಿ ಕನ್ನಡದ ವಿಷಯದ ಬಗ್ಗೆ 353 ವಿದ್ಯಾರ್ಥಿಗಳು ಪರೀಕ್ಷೆಯನ್ನು ಬರೆಯಲಿದ್ದಾರೆ. ಎಲ್ಲಾ ಕೊಠಡಿಗಳನ್ನು ಸುಸಜ್ಜಿತಗೊಳಿಸಿ ಕ್ರಮ ಸಂಖ್ಯೆಗಳನ್ನು ಬರೆಯಲಾಗಿದೆ. ಎಲ್ಲಾ 15 ಕೋಣೆಗಳಿಗೂ ಸಿಸಿ ಕ್ಯಾಮೆರಾ ಹಾಗೂ ವಿದ್ಯುತ್ ದೀಪಗಳನ್ನು ಅಳವಡಿಸಲಾಗಿದೆ ಎಂದರು.



## ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಹೆಚ್.ಪಿ. ಮಂಜೇಗೌಡ

# ಯುವ ಜನತೆಗೆ ಪುನೀತ್ ಪ್ರೇರಣೆ

**ಚಿಕ್ಕಮಗಳೂರು:** ಸಣ್ಣ ವಯಸ್ಸಿನಲ್ಲಿಯೇ ಅತಿದೊಡ್ಡ ಸಾಧನೆ ಮಾಡಿದ್ದ ದಿ ನಟ ಪುನೀತ್ ರಾಜ್ ಕುಮಾರ್ ನಾಡಿನ ಯುವ ಜನತೆಗೆ ಪ್ರೇರಣೆ. ಅವರ ಹಾದಿಯಲ್ಲಿ ಯುವ ಸಮೂಹ ಸಾಗುವ ಮೂಲಕ ಆದರ್ಶಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಹೆಚ್ .ಪಿ. ಮಂಜೇಗೌಡ ಹೇಳಿದರು.

ನಗರದ ಆಜಾದ್ ಪಾರ್ಕ್ ವೃತ್ತದಲ್ಲಿ ಮಂಗಳವಾರ ಜಿಲ್ಲಾ ಡಾ. ರಾಜ್‌ಕುಮಾರ್ ಅಭಿಮಾನಿಗಳ ಸಂಘದ ವತಿಯಿಂದ ಆಯೋಜಿಸಿದ್ದ ಕರ್ನಾಟಕ ರತ್ನ, ದಿ. ಪುನೀತ್ ಕುಮಾರ್ ಅವರ 51ನೇ ಜನ್ಮದಿನದ ಪ್ರಯುಕ್ತ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಅವರು ಮಾತನಾಡಿದರು.

ಸಿನಿಮಾ ಕ್ಷೇತ್ರಕ್ಕೆ ಬಾಲ್ಯದಿಂದಲ್ಲೇ ಪಾದಾರ್ಪಣೆ ಮಾಡಿ ಉನ್ನತ ಹೆಸರು ಗಳಿಸಿದ ಶ್ರೇಷ್ಠ ವ್ಯಕ್ತಿ ಪುನೀತ್ ರಾಜ್‌ಕುಮಾರ್. ಆ ವ್ಯಕ್ತಿ ಕೇವಲ ಸಿನಿಮಾ ಜಗತ್ತಿಗೆ ಸೀಮಿತರಾಗಿರಲಿಲ್ಲ, ಎಲೆಮರೆ ಕಾಯಿಯಂತೆ ಸಮಾಮುಖಿ ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದರು. ಈ ಗುಟ್ಟನ್ನು ಎಲ್ಲಿಯೂ ಪ್ರಚಾರಪಡಿಸದೇ ನಿಸ್ವಾರ್ಥ ಸೇವೆ ಸಲ್ಲಿಸಿದವರು ಎಂದರು.

ನಾಡಿನಲ್ಲಿ ಹಿರಿಯರು, ಬಾಲಕಿಯರಿಗೆ ಆಶ್ರಯತಾಣ ನಿರ್ಮಿಸುವ ಮೂಲಕ ವಿದ್ಯಾಭ್ಯಾಸಕ್ಕೆ ಅನುವು ಮಾಡಿಕೊಟ್ಟವರು. ನಟನಾಗಿ ಸಿನಿಮಾ ಕ್ಷೇತ್ರದಲ್ಲಿ ದುಡಿಮೆಯ ಬಹುಪಾಲು ಹಣವನ್ನು ಸಾಮಾಜಿಕ ಕಾರ್ಯಕ್ಕೆ ಬಳಸುವ ಮೂಲಕ ನಿರಾಶ್ರಿತರು, ಅಸಹಾಯಕರ ಧ್ವನಿಯಾಗಿ ಕೆಲಸ ನಿರ್ವಹಿಸಿದವರು ಎಂದರು.

ಬಿಎಸ್ಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಟಿ.ರಾಧಾಕೃಷ್ಣ ಮಾತನಾಡಿ ನಟ ಪುನೀತ್‌ರವರ ಸ್ಮರಣೆಯನ್ನು ಕೇವಲ ಕೇಕ್ ಕತ್ತರಿಸಿ, ಸಿಹಿ ಹಂಚಿಕೊಂಡರೆ ಸಾಲದು. ಅವರಲ್ಲಿರುವ ಸಮಾಜಮುಖಿ ಅಂಶಗಳನ್ನು ಜೀವನದಲ್ಲಿ ಮೈಗೂಡಿಸಿಕೊಳ್ಳಬೇಕು. ಆಗ ಮಾತ್ರ ಪುನೀತ್‌ರವರ ನಿಸ್ವಾರ್ಥ ಕೆಲಸ-ಕಾರ್ಯಗಳಿಗೆ ಅರ್ಥ ಮೂಡಲಿದೆ ಎಂದು ತಿಳಿಸಿದರು.



ಜಿಲ್ಲಾ ಡಾ. ರಾಜ್‌ಕುಮಾರ್ ಅಭಿಮಾನಿ ಸಂಘದ ಜಿಲ್ಲಾಧ್ಯಕ್ಷ ಐ.ಕೆ. ಓಂಕಾರೇಗೌಡ ಮಾತನಾಡಿ, ಅಪರೂಪದ ನಟ ಪುನೀತ್ ರಾಜ್‌ಕುಮಾರ್. ಡಾ. ರಾಜ್‌ನಂತೆ ಕನ್ನಡ ಭಾಷೆ ಹೊರತಾಗಿ ಪರಭಾಷೆಯತ್ತ ಮುಖಮಾಡದೇ ತಮ್ಮ ಸಂಪೂರ್ಣ ಚಿತ್ರರಂಗವನ್ನು ಕನ್ನಡಕ್ಕೆ ಮುಡಿಪಿಟ್ಟ ಮಹಾನ್ ನಟರು ಎಂದು ಬಣ್ಣಿಸಿದರು.

ಈ ಸಂದರ್ಭದಲ್ಲಿ ಸಮಾಜ ಸೇವಕಿ ಪಲ್ಲವಿ ಸಿ.ಟಿ. ರವಿ, ಎಪಿಎಂಸಿ ಮಾಜಿ ಅಧ್ಯಕ್ಷ ವಿಕ್ರಾಂತ್, ಬಿಜೆಪಿ ಜಿಲ್ಲಾಧ್ಯಕ್ಷ ದೇವರಾಜ್ ಶೆಟ್ಟಿ, ಜೈಕರ್ನಾಟಕ ಸಂಘದ ಅಧ್ಯಕ್ಷ ಕೆ.ಆರ್. ಅನಿಲ್ ಕುಮಾರ್, ಕನ್ನಡ ಸೇನೆ ಜಿಲ್ಲಾಧ್ಯಕ್ಷ ಪಿ.ಸಿ. ರಾಜೇಗೌಡ, ಅಪ್ಪು ಬ್ರಿಗೇಡ್ ಮುಖಂಡರಾದ ಪ್ರದೀಪ್, ಶಿವು, ಭೂಮಿಕಾ ಟಿವಿ ಸಂಪಾದಕ ಅನಿಲ್, ಆಟೋ ಚಾಲಕ ಜಗದೀಶ್ ಇತರರು ಇದ್ದರು.

### ಅನ್ನಪೂರ್ಣ ವೃದ್ಧಾಶ್ರಮದಲ್ಲಿ ಅನ್ನದಾನ

**ಚಿಕ್ಕಮಗಳೂರು:** ಪವರ್‌ಸ್ಟಾರ್ ಡಾ.ಪುನೀತ್ ರಾಜ್‌ಕುಮಾರ್ ಜನ್ಮದಿನದ ಪ್ರಯುಕ್ತ ಮಂಗಳವಾರ ಅಪ್ಪು ಯೂತ್ ಬ್ರಿಗೇಡ್ ಚಿಕ್ಕಮಗಳೂರು ಹಾಗೂ ಡಾ. ರಾಜ್‌ಕುಮಾರ್ ಅಭಿಮಾನಿ ಸಂಘದ ವತಿಯಿಂದ ಇಂದಾವರ ಗ್ರಾಮದ ಅನ್ನಪೂರ್ಣ ವೃದ್ಧಾಶ್ರಮದ ನಿವಾಸಿಗಳಿಗೆ ಬೆಳಗ್ಗೆ ಉಪಹಾರದ ವ್ಯವಸ್ಥೆ ಸೇರಿದಂತೆ ಸಾಮಾಜಿಕ ಕಾರ್ಯಗಳನ್ನು ಹಮ್ಮಿಕೊಳ್ಳಲಾಯಿತು.

ಬೆಳಿಗ್ಗೆ ನಗರದ ಮಿಲನ್ ಚಿತ್ರಮಂದಿರದಲ್ಲಿ ಆಕಾಶ್ ಚಲನಚಿತ್ರ ಮರು ಬಿಡುಗಡೆ ಹಿನ್ನಲೆ ಕಟೌಟ್‌ಗೆ ಮಾರ್ಪಾಣೆ ಮಾಡಿ, ಸಿಹಿ ವಿತರಿಸಲಾಯಿತು. ಗೋಶಾಲೆಗೆ ಮೇವು ವಿತರಣೆ ಮಾಡಲಾಯಿತು.

ಈ ವೇಳೆ ಅಪ್ಪು ಬ್ರಿಗೇಡ್‌ನ ಶಿವು, ಜೈಕರ್ನಾಟಕ ಸಂಘದ ಅಧ್ಯಕ್ಷ ಕೆ.ಆರ್.ಅನಿಲ್‌ಕುಮಾರ್ ಮಾತನಾಡಿದರು. ಅಪ್ಪು ಯೂತ್ ಬ್ರಿಗೇಡ್ ಲಾಂಛನವನ್ನು ಬಿಡುಗಡೆಗೊಳಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಡಾ. ರಾಜ್ ಕುಮಾರ್ ಅಭಿಮಾನಿ ಸಂಘದ ಅಧ್ಯಕ್ಷ ಐ.ಕೆ.ಓಂಕಾರೇಗೌಡ, ಎಪಿಎಂಸಿ ಮಾಜಿ ಅಧ್ಯಕ್ಷ ವಿಕ್ರಾಂತ್, ಅಪ್ಪು ಯೂತ್ ಬ್ರಿಗೇಡ್‌ನ ಸದಸ್ಯರಾದ ಪ್ರದೀಪ್, ರಂಜಿತ್ ಇತರರು ಇದ್ದರು.



## ಮಕ್ಕಳ ಸಂತೆಯಿಂದ ಜ್ಞಾನ, ಕೌಶಲ್ಯಕ್ಕೆ ಸಹಕಾರಿ: ಅಣ್ಣೇಗೌಡ

**ಮೂಡಿಗೆರೆ:** ವಿದ್ಯಾರ್ಥಿಗಳಿಗೆ ಶಿಕ್ಷಣದ ಜತೆಗೆ ಬದುಕಿಗೆ ಅಗತ್ಯವಾದ ಅನೇಕ ಕೌಶಲ್ಯ ಕಲಿಯಲು ಮಕ್ಕಳ ಸಂತೆ ಕಾರ್ಯಕ್ರಮ ಸಹಕಾರಿಯಾಗಲಿದೆ ಎಂದು ತಳವಾರ ಗ್ರಾಮದ ಹಿರಿಯ ಮುಖಂಡ ಡಿ.ಎಂ. ಅಣ್ಣೇಗೌಡ ಹೇಳಿದರು.

ಅವರು ತಾಲೂಕಿನ ತಳವಾರ ಗ್ರಾಮದ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ್ದ ಶಾರದ ಪೂಜೆ ಹಾಗೂ ಮಕ್ಕಳ ಸಂತೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.



ಮಕ್ಕಳ ಸಂತೆ ಎಂದರೆ ಕೇವಲ ಖರೀದಿ ಹಾಗೂ ಮಾರಾಟವಲ್ಲ, ಇದು ಮಕ್ಕಳಲ್ಲಿ ವ್ಯವಹಾರ ಜ್ಞಾನ, ಹಣದ ಮೌಲ್ಯ, ಸಂವಹನ ಕೌಶಲ್ಯ ಹಾಗೂ ಆತ್ಮವಿಶ್ವಾಸವನ್ನು ಬೆಳೆಸುವ ಒಂದು ವೇದಿಕೆ. ಸ್ವತಃ ವಸ್ತುಗಳನ್ನು ತಯಾರಿಸಿ, ಅವುಗಳಿಗೆ ಬೆಲೆ ನಿಗದಿ ಮಾಡಿ, ಗ್ರಾಹಕರಿಗೆ ಮಾರಾಟ ಮಾಡುವುದರಿಂದ, ನೈಜಜೀವನದಅನುಭವಪಡೆಯುತ್ತಾರೆಂದು ಹೇಳಿದರು.

ಶಿಕ್ಷಕ ಮೂರ್ತಿ ಮಾತನಾಡಿ, ಮಕ್ಕಳ ಸಂತೆ ಕಾರ್ಯಕ್ರಮ ಮಕ್ಕಳಲ್ಲಿ ಸೃಜನಶೀಲತೆ ಮತ್ತು ಪರಿಶ್ರಮದ ಮಹತ್ವವನ್ನು ತಿಳಿಸುತ್ತದೆ. ಕೆಲವರು ಹಸ್ತಕಲಾ ವಸ್ತುಗಳು,ಆಹಾರ ಪದಾರ್ಥ ತಯಾರಿಸುವುದರಿಂದ ಸ್ವಾವಲಂಬನೆಯ ಅರಿವು ಮೂಡುತ್ತದೆ. ಅಲ್ಲದೇ ಮಕ್ಕಳಲ್ಲಿ ಸಹಕಾರ ಮನೋಭಾವ ಬೆಳೆಯುತ್ತದೆ. ಹೊಣೆಗಾರಿಕೆ ಹಂಚಿಕೊಳ್ಳುವುದು ಹಾಗೂ ತಂಡವಾಗಿ ಯಶಸ್ಸು ಸಾಧಿಸುವುದು ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿದೆ ಎಂದರು.

ಸಂತೆಯಲ್ಲಿ ಹಣ್ಣು, ತರಕಾರಿ, ಪೆನ್ನು, ಪುಸ್ತಕ, ಕಾಳುಗಳು ಮುಂತಾದವುಗಳನ್ನು ಮಾರಾಟ ಮಾಡಲಾಯಿತು. ಗ್ರಾಮಸ್ಥರಾದ ಕಳಸೇಗೌಡ, ನವೀನ್, ಪ್ರಸನ್ನ, ಸಂತೋಷ್, ಎಸ್‌ಡಿಎಂಸಿ ಅಧ್ಯಕ್ಷ ಅಣ್ಣಪ್ಪ, ಸದಸ್ಯರಾದ ಸುರೇಶ್, ದರ್ಮೇಶ್, ಗಂಗಯ್ಯ, ಜಗಣ್ಣ ಶಿಕ್ಷಕಿ ಶೈಲಾರಾಧ್ಯ ಮತ್ತಿತರರಿದ್ದರು.



## ಸಮವಸ್ತ್ರ ವಿತರಣಾ ಕಾರ್ಯಕ್ರಮ

**ಚಿಕ್ಕಮಗಳೂರು:** ಸರ್ಕಾರ ಹಾಗೂ ದಾನಿಗಳು ಒದಗಿಸುವ ಸವಲತ್ತನ್ನು ವಿದ್ಯಾರ್ಥಿಗಳು ಸಮರ್ಪಕವಾಗಿ ಬಳಸಿಕೊಳ್ಳಬೇಕು. ಮುಂದೆ ಈ ರೀತಿಯ ಕಾರ್ಯದಲ್ಲಿ ತಾವು ತೊಡಗಿಸಿಕೊಂಡು ಸಮಾಜಕ್ಕೆ ಮಾದರಿಯಾಗಬೇಕು ಎಂದು ಎ.ಎಸ್.ಎನ್.ಎಂ. ನಾಗಭೂಷಣಮ್ಮ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಎಂ.ಎಲ್.ಮೂರ್ತಿ ಹೇಳಿದರು.

ನಗರದ ಹೌಸಿಂಗ್ ಬೋರ್ಡ್ ಸಮೀಪದ ನಾಯ್ಡು ಸಮುದಾಯ ಭವನದಲ್ಲಿ ಎ.ಎಸ್. ಎನ್.ಎಂ. ನಾಗಭೂಷಣಮ್ಮ ಚಾರಿಟಬಲ್ ಟ್ರಸ್ಟ್ ವತಿಯಿಂದ ಈಚೆಗೆ ಆಯೋಜಿಸಿದ್ದ ಗೃಹ ಮಂಡಳಿಯ ಸ.ಹಿ.ಪ್ರಾ. ಶಾಲೆಯ ವಿದ್ಯಾರ್ಥಿಗಳಿಗೆ ಶಾರದಾಪೂಜೆ, 7ನೇ ತರಗತಿ ವಿದ್ಯಾರ್ಥಿಗಳಿಗೆ ಬೀಳ್ಕೊಡಿಗೆ ಹಾಗೂ ದಾನಿಗಳಿಂದ ಸಮವಸ್ತ್ರ ವಿತರಣಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಾಡು ಹಾಗೂ ರಾಷ್ಟ್ರದ ಅನೇಕ ಗಣ್ಯಮಾನ್ಯರು ಸರ್ಕಾರಿ ಶಾಲೆಗಳಲ್ಲಿ ವಿದ್ಯಾಭ್ಯಾಸ ಪೂರೈಸಿದ ಪರಿಣಾಮ ಇಂದು ಉನ್ನತ ಹುದ್ದೆ ಅಲಂಕರಿಸಿದ್ದಾರೆ. ಹೀಗಾಗಿ ಸರ್ಕಾರಿ ಶಾಲೆಯೆಂಬ ಕೀಳರಿಮೆ ಹೊಂದದೇ ಶ್ರದ್ಧೆ, ವಿನಯ ಹಾಗೂ ಗುರು-ಹಿರಿಯರಿಗೆ ಗೌರವಿಸುವ ರೀತಿಯಲ್ಲಿ ವಿದ್ಯಾರ್ಜನೆ ಮಾಡಬೇಕು ಎಂದು ಕಿವಿಮಾತು ಹೇಳಿದರು.

ಸಮಾಜದ ಪ್ರತಿಯೊಂದು ಮಗು ವಿದ್ಯಾಭ್ಯಾಸದಿಂದ ವಂಚಿತರಾಗಬಾರದೆಂಬ ದೃಷ್ಟಿಯಿಂದ



ಸರ್ಕಾರ ಅನೇಕ ಸವಲತ್ತನ್ನು ಪೂರೈಸುತ್ತಿದೆ. ವಿದ್ಯಾರ್ಥಿಗಳು ಕೇವಲ ಓದಿನತ್ತ ಹೆಚ್ಚು ಗಮನಹರಿಸಬೇಕು. ಇತ್ತೀಚೆಗೆ ಮೊಬೈಲ್ ಹಾವಳಿ ಎಲ್ಲೆಡೆ ಆವರಿಸಿದ್ದು, ಇದರಿಂದ ಹೊರಬಂದು ಪಾಲಕರು, ಶಿಕ್ಷಕರು ಕನಸನ್ನು ಈಡೇರಿಸಲು ಕಲಿಕೆಯತ್ತ ಗಮನಹರಿಸಬೇಕು ಎಂದರು.

ಬಾಲ್ಯದಿಂದಲೇ ನಿಗಧಿತ ಗುರಿ ಹೊಂದಿರಬೇಕು. ನಿರಂತರ ಪರಿಶ್ರಮ, ಅಭ್ಯಾಸವು ಅತ್ಯಗತ್ಯ. ಆ ನಿಟ್ಟಿನಲ್ಲಿ ವಿದ್ಯಾರ್ಥಿ ಗಳು ಧೃತಿಗೆಡದೆ ಶಿಕ್ಷಕರು ಬೋಧಿಸುವ ಪಾಠವನ್ನು ಶ್ರದ್ಧೆಯಿಂದ ಕಲಿಯ ಬೇಕು. ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿ ಕೊಂಡು ಸಾಧನೆ ಮಾಡಬೇಕು ಎಂದು ಸಲಹೆ ಮಾಡಿದರು.

ಟ್ರಸ್ಟ್ ಉಪಾಧ್ಯಕ್ಷ ಸತೀಶ್ ನಾಯ್ಡು ಮಾತನಾಡಿದರು. ಟ್ರಸ್ಟ್ ಖಜಾಂಚಿ ತಿರುಪಾಲಯ್ಯ,ಕಾರ್ಯದರ್ಶಿ ಉಮಾಶಂಕರ್, ನಿರ್ದೇಶಕರು ಗಳಾದ ಲಕ್ಷ್ಮೀಕಾಂತ ನಾಯ್ಡು, ರಮೇಶ್, ವಿಜಯ, ವೆಂಕಟೇಶ್ ನಾಯ್ಡು, ಸದಸ್ಯರಾದ ಸತೀಶ್, ರಮೇಶ್, ಸವಿತಾ, ಮಲ್ಲಮ್ಮ, ಶ್ರೀನಿವಾಸ್ ಇದ್ದರು.

## ಕನ್ನಡದಿಂದ ಬದುಕು ಕಟ್ಟಿಕೊಳ್ಳಬಹುದು: ಶಂಕರನಾರಾಯಣ

**ತರೀಕೆರೆ:** ಕನ್ನಡ ಕಲಿಯುವುದರಿಂದ ನಮ್ಮ ಬದುಕನ್ನು ಕಟ್ಟಿಕೊಳ್ಳಬಹುದು ಎಂಬ ಎಂಬ ಆತ್ಮಸ್ಥೈರ್ಯ ಬರುವ ಹಾಗೆ ಆಗಬೇಕು. ಮಾತೃಭಾಷೆಯಲ್ಲಿ ವ್ಯವಹರಿಸುವುದರ ಅಗತ್ಯ ಈಗ ಹಿಂದೆಂದಿಗಿಂತಲೂ ಸ್ಪಷ್ಟವಾಗಬೇಕಿದೆ. ಕನ್ನಡ ಕಟ್ಟುವ ಕಾಯಕದಲ್ಲಿ ನಿರತವಾಗಿರುವ ಎಲ್ಲಾ ಸಂಘ ಸಂಸ್ಥೆಗಳೂ ಅರ್ಥಪೂರ್ಣವಾಗಿ ಭಾಷೆಯುಪಯೋಗವನ್ನು ಮನನ ಮಾಡಿಸುವ ಪ್ರಯತ್ನ ಮಾಡಬೇಕು ಎಂದು 19ನೇ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಡಾ. ಎ.ಎಸ್. ಶಂಕರನಾರಾಯಣ ಹೇಳಿದರು.

ಅವರು ಪಟ್ಟಣದ ಸಪ್ತಗಿರಿ ಕನ್ವೆನ್ಷನ್ ಹಾಲ್‌ನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ನಡೆದ 19ನೇ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಮಾತನಾಡಿದರು.

ಇಂದು ತಂತ್ರಜ್ಞಾನ ನಮ್ಮ ಬದುಕೆಲ್ಲವನ್ನೂ ಸಂಪೂರ್ಣವಾಗಿ ಆವರಿಸಿಕೊಂಡುಬಿಟ್ಟಿದೆ. ಮೊಬೈಲ್ ನಮ್ಮ ಪ್ರಪಂಚವಾಗಿದೆ. ಅದಿಲ್ಲದೆ ಒಂದು ಕ್ಷಣವೂ ಇರಲಾಗದು ಎಂಬ ಮನೋಸ್ಥಿತಿ ನಿರ್ಮಾಣವಾಗಿದೆ. ಪುಸ್ತಕ ಓದುವ ಹವ್ಯಾಸ ಕಡಿಮೆಯಾಗಿದೆ. ಕುಟುಂಬದಲ್ಲಿಯೇ ವ್ಯಕ್ತಿ ವ್ಯಕ್ತಿ ನಡುವಿನ ಸಂಬಂಧ ತೆಳುವಾಗುತ್ತಿದೆ. ಸ್ನೇಹಿತರು ಬೇಡವಾಗಿದ್ದಾರೆ. ಉತ್ತಮ ಆಲೋಚನೆಗಳು ದೂರವಾಗಿವೆ. ಇದು ತೀರಾ ಅಪಾಯದ ಮುನ್ಸೂಚನೆಯಾಗಿದೆ ಅನ್ನಿಸುತ್ತಿದೆ. ಇದಕ್ಕೆ ಪರಿಹಾರವನ್ನು ನಮ್ಮ ವ್ಯಕ್ತಿಗತ ನೆಲೆಗಟ್ಟಿನಲ್ಲಿಯೇ ಹುಡುಕಿ ಕಂಡುಕೊಳ್ಳಬೇಕಿದೆ. ಮತ್ತೆ ಗ್ರಂಥಾಲಯಗಳ ಕಡೆ ಹೆಜ್ಜೆ ಹಾಕಬೇಕಿದೆ ಎಂದರು.

ಕಲೆ, ಸಾಹಿತ್ಯ ಹಾಗೂ ಪರಂಪರೆಯ ಭವ್ಯತೆಯ ಕುರಿತು ಮನವರಿಕೆ ಮಾಡಿಕೊಡುತ್ತಲೇ, ಕನ್ನಡ ಉಳಿವಿಗೆ, ಬೆಳವಣಿಗೆಗೆ ಬೇಕಾಗುವ ಮಾರ್ಗೋಪಾಯಗಳನ್ನು ಆಲೋಚಿಸಬೇಕು. ಯಾವುದೇ ಭಾಷೆ ಯಾವುದೇ ಭಾಷೆ ಬೆಳೆಯುವುದು ಅದರ ನಿರಂತರ ಉಪಯೋಗದಿಂದ ಮಾತ್ರ. ಕನ್ನಡ ಮನೆ, ಮನದ ಭಾಷೆಯಾಗಬೇಕು. ಇದು ಅನ್ನ ಕೊಡುವ ಭಾಷೆಯಾಗಬೇಕು ಎಂದು ಅವರು ಹೇಳಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಸ್.ಜಿ. ಸಿದ್ದರಾಮಯ್ಯ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ, ಈ ಹಿಂದೆ ತರೀಕೆರೆಯಲ್ಲಿ ಮೈಸೂರು ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ ಭಾಗವಹಿಸಿದ್ದ ವಿಶ್ವಮಾನವ ಸಮ್ಮೇಳನ ನಡೆದು ಅಂದು ಬಿಡುಗಡೆಯಾದ ಹೊನ್ನ ಬಿತ್ತೇವು ಹೊಲಕೆಲ್ಲ ಮಹಾಗ್ರಂಥ ಬಿಡುಗಡೆಯಾದ ಸ್ಥಳದ ಮಹಿಮೆ ಇದು ಎಂದರು.

ಕಸಾಪ ಜಿಲ್ಲಾಧ್ಯಕ್ಷ ಸೂರಿ ಶ್ರೀನಿವಾಸ್, ಸಹಕಾರಿ ದುರೀಣ ಟಿ.ವಿ. ಶಿವಶಂಕರಪ್ಪ, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಮಂಜುನಾಥ್ ಟಿ., ನಿಕಟಪೂರ್ವ ಸಮ್ಮೇಳನಾಧ್ಯಕ್ಷ ಕೆ.ಎಂ. ರೇವಣ್ಣ ಮಾತನಾಡಿದರು.

> ನಾವಿಂದು ಒಂದು ಸಂಕೀರ್ಣ ಕಾಲಘಟ್ಟದಲ್ಲಿದ್ದೇವೆ. ಅನ್ಯ ಭಾಷೆಗಳ ಅಬ್ಬರದಲ್ಲಿ ಕನ್ನಡದ ಧ್ವನಿ ಕ್ಷೀಣಿಸುತ್ತಿದೆ. ನಮ್ಮ ಮುಂದಿನ ಪೀಳಿಗೆಗೆ ಕನ್ನಡ ಭಾಷೆ ಪ್ರಮುಖ ಎನಿಸುತ್ತಿಲ್ಲ. ಕನ್ನಡ ನಿಜವಾಗಿ ಅನ್ನ ಕೊಡುವ ಭಾಷೆ ಎಂಬ ಭರವಸೆಯ ಸ್ಥಿತಿ ನಿರ್ಮಾಣವಾಗದೇ ಇರುವುದೂ ಇದಕ್ಕೆ ಕಾರಣ .
> ■ ಡಾ. ಎ.ಎಸ್. ಶಂಕರನಾರಾಯಣ

ಬಿ.ಎಸ್. ಭಗವಾನ್, ಎಚ್.ಯು. ಫಾರೂಕ್, ಟಿ.ಎಸ್. ರಮೇಶ್, ಟಿ.ಎನ್. ಲೋಕೇಶ್,ಗಿರಿಜಾ ಪ್ರಕಾಶ್,ಸಿ.ಆರ್. ಅನಂತಪ್ಪ, ಎಸ್.ಕೆ. ಶಂಕರಪ್ಪ ವೇದಿಕೆಯಲ್ಲಿದ್ದರು.

ಸ್ವಾಗತ ಸಮಿತಿ ಅಧ್ಯಕ್ಷ ಟಿ.ಜಿ. ಶಶಾಂಕ್ ಸ್ವಾಗತಿಸಿದರು. ಗುರುರಾಜ್ ಹಾಲ್ಬತ್ ನಿರೂಪಿಸಿದರು. ವಿಜಯಪ್ರಕಾಶ್ ಮತ್ತು ತಂಡ ಪ್ರಾರ್ಥಿಸಿದರು. ಲತಾ ಗೋಪಾಲಕೃಷ್ಣ ಮತ್ತು ತಂಡ ನಾಡಗೀತೆ ಹಾಡಿದರು. ಮಿಲ್ಕೀ ಶ್ರೀನಿವಾಸ್ ವಂದಿಸಿದರು.



## ಪಪಂನಿಂದ ಬ್ಯಾನರ್‌ಗಳ ತೆರವು

**ಮೂಡಿಗೆರೆ :** ಪಟ್ಟಣದ ಬಸ್ ನಿಲ್ದಾಣದ ಮುಂಭಾಗದಲ್ಲಿ ಪ್ರತಿಷ್ಠಾಪಿಸಿರುವ ಹುತಾತ್ಮ ಯೋಧರನ್ನು ನೆನಪಿಸುವ ಅಮರ್ ಜವಾನ್ ಪುತ್ಥಳಿಗೆ ಅಡ್ಡವಾಗಿ ಖಾಸಗಿ ವ್ಯಕ್ತಿಯೊಬ್ಬರು ರಂಜಾನ್ ಹಬ್ಬಕ್ಕೆ ಶುಭ ಕೋರಿ ಕಟ್ಟಿದ್ದ ಬ್ಯಾನರನ್ನು ಪಟ್ಟಣ ಪಂಚಾಯಿತಿ ಸಿಬ್ಬಂದಿಗಳು ತೆರವುಗೊಳಿಸಿದ್ದಾರೆ.

ಮಂಗಳವಾರ ಹೊಸದಿಗಂತ ಪತ್ರಿಕೆಯಲ್ಲಿ ಪಟ್ಟಣದಲ್ಲಿ ಬ್ಯಾನರ್ ಹಾವಳಿಯಿಂದ ಹುತಾತ್ಮ ಯೋಧರಿಗೆ ಅಗೌರವ ಕೈಕಟ್ಟಿ ಕುಳಿತ ಪಟ್ಟಣ ಪಂಚಾಯಿತಿ ಅಧಿಕಾರಿಗಳು ಎಂಬ ಸುದ್ದಿ ಪ್ರಕಟವಾಗಿತ್ತು. ಅಮರ್ ಜವಾನ್ ಪುತ್ಥಳಿ ಇರುವುದು ಮೂಡಿಗೆರೆಯ ಪಪಂ ಕಚೇರಿ ಮುಂಭಾಗದಲ್ಲಿ ಇಲ್ಲಿನ ನಿವೃತ್ತ ಯೋಧರು ಹುತಾತ್ಮ ಯೋಧರ ಸವಿನೆನಪಿಗಾಗಿ ಅಮರ್ ಜವಾನ್ ಪುತ್ಥಳಿ ಪ್ರತಿಷ್ಠಾಪಿಸಿದರು. ಇದಕ್ಕೆ ಅಡ್ಡವಾಗಿ ಬ್ಯಾನರ್ ಕಟ್ಟಿ ಹುತಾತ್ಮ ಯೋಧರಿಗೆ ಅಗೌರವ ನೀಡಲಾಗುತ್ತಿದೆ ಎಂಬ ಸುದ್ದಿ ಪ್ರಕಟವಾಗಿತ್ತು.

ಮಂಗಳವಾರ ಮುಂಜಾನೆ ಬ್ಯಾನರ್ ಸುದ್ದಿ ತಿಳಿಯುತ್ತಿದಂತೆಯೇ ತಾಲೂಕು ದಂಡಾಧಿಕಾರಿಗಳು ಹಾಗೂ ಪಟ್ಟಣ ಪಂಚಾಯಿತಿ ಆಡಳಿತ ಅಧಿಕಾರಿ ಆಗಿರುವ ತಹಸೀಲ್ದಾರ್ ಅಶ್ವಿನಿ ಎಸ್., ಅವರು ಪಟ್ಟಣ ಪಂಚಾಯಿತಿ ಸಿಬ್ಬಂದಿಗಳಿಗೆ ತಕ್ಷಣಕ್ಕೆ ತೆರವು ಮಾಡಲು ಸೂಚಿಸಿದರು. ಅಲ್ಲದೆ ಇನ್ನು ಮುಂದೆ ಯಾವುದೇ ಬ್ಯಾನರ್ ಅಮರ್ ಜವಾನ್ ಪುತ್ಥಳಿ ಬಳಿ ಹಾಕದಂತೆ ಅಧಿಕಾರಿಗಳಿಗೆ ಸೂಚಿಸಿದರು.




## ರೋಚಕ ಕುಸ್ತಿ ಸೆಣೆಸಾಟ | ರಾಜ್ಯ ಮಟ್ಟದ ಕುಸ್ತಿ ಪಂದ್ಯಾವಳಿಗೆ ಸಂಭ್ರಮದ ತೆರೆ

# ಬೆಳ್ಳಿಗದೆ ವಿಜೇತರಾದ ಮಹಾರಾಷ್ಟ್ರದ ಪ್ರಥಮೇಶ್ ಪಾಟೀಲ್

**ಬೀರೂರು:** ಶ್ರೀ ವೀರಭದ್ರಸ್ವಾಮಿ ರಥೋತ್ಸವದ ಅಂಗವಾಗಿ ಶಿವಾಜಿ ವ್ಯಾಯಾಮ ಶಾಲೆ ಸೇವಾ ಸಂಘ ಮತ್ತು ಪುರಸಭೆ ಮತ್ತು ಸಾರ್ವಜನಿಕರ ಸಂಯುಕ್ತಆಶ್ರಯದಲ್ಲಿ ಕಳೆದ ಎರಡು ದಿನಗಳಿಂದ ನಡೆಯುತ್ತಿದ್ದ ರಾಜ್ಯ ಮಟ್ಟದ ಹೊನಲು ಬೆಳಕಿನ ಭಾರಿ ಬಹಿರಂಗ ಕುಸ್ತಿ ಪಂದ್ಯಾವಳಿಗಳಿಗೆ ಭಾನುವಾರ ಸಂಜೆ ಸಂಭ್ರಮದ ತೆರೆಗೆ ನೆರೆದಿದ್ದ ಅಪಾರ ಜನಸ್ತೋಮ ಸಾಕ್ಷಿಯಾಯಿತು.

ಕೊನೆಯ ರೋಮಾಂಚಕ ಬೆಳ್ಳಿಗದೆಯ ಪ್ರಶಸ್ತಿಗೆ ರಾಷ್ಟ್ರ ಮತ್ತು ರಾಜ್ಯ ಮಟ್ಟದ ಕುಸ್ತಿ ಸೆಣಸಾಟದಲ್ಲಿ ಪ್ರಮುಖವಾಗಿದ್ದ ಬೆಳ್ಳಿ ಗದೆಯ ಕುಸ್ತಿಯಲ್ಲಿ ಹರಿಯಾಣದ ಅಮಿತ್ ಕುಮಾರ್ ಮತ್ತು ಮಹಾರಾಷ್ಟ್ರದ ಪ್ರಥಮೇಶ್ ಪಾಟೀಲ್ ನಡೆವೆ ರೋಚಕ ಕುಸ್ತಿ ಹಣಾಹಣಿ ನಡೆಯಿತು. ಈ ಕುಸ್ತಿ ನೋಡಲು ಪ್ರೇಕ್ಷಕರು ಯಾರು ಬೆಳ್ಳಿ ಗದೆಯ ಮಾಲೀಕರಾಗುತ್ತಾರೆಂದು ಇವರಿಬ್ಬರ ಕುಸ್ತಿ ನೋಡುತ್ತಲೆ, ಹೊಡೆಯೋ, ಪಲ್ಟಾಯಿಸು, ಹಿಡಿ ಪಟ್ಟು ಎಂದು ಜನ ಕೇಕೆ ಹಾಕುವ ಸಂದರ್ಭದಲ್ಲಿ ತನ್ನ ಕುಸ್ತಿಯ ಚಾಲಾಕಿತನ ಮತ್ತು ವಿವಿಧ ಪಟ್ಟುಗಳನ್ನು



ಹಾಕಿ ಮಹಾರಾಷ್ಟ್ರದ ಪ್ರಥಮೇಶ್ ಬೆಳ್ಳಿಗದೆಯನ್ನು ಪಡೆದುಕೊಂಡರು.

ಪುರಸಭೆ ಹಾಗೂ ಶಿವಾಜಿ ವ್ಯಾಯಾಮ ಶಾಲೆ ಸಹಯೋಗದಲ್ಲಿ ನಡೆದ ಪಂದ್ಯಾವಳಿಯಲ್ಲಿ ವಿವಿಧ ರಾಜ್ಯ ಹಾಗೂ ಜಿಲ್ಲೆಗಳಿಂದ ಆಗಮಿಸಿದ್ದ ಕುಸ್ತಿ ಪಟುಗಳು ತಮ್ಮ ಕಸರತ್ತುಗಳ ಮೂಲಕ ಗಮನಸೆಳೆದರು.

ಕ್ರೀಡಾ ಸ್ಪೂರ್ತಿಯನ್ನು ಬೆಂಬಲಿಸುತ್ತಾ ಬಂದಿರುವ ಸಂಗೊಳ್ಳಿ ರಾಯಣ್ಣ, ಕುಂಬಾರ, ಸವಿತಾಸಮಾಜ, ಆಖಾಡ ಕುಸ್ತಿ, ಪೌರ ಪ್ರಶಸ್ತಿ, ಕಾರ್ಮಿಕ ಸಂಘ, ಶ್ರೀಮೈಲಾರಲಿಂಗಸ್ವಾಮಿ, ಅಂಜುಮಾನ್, ಮದೀನಾ, ಅಂತರಘಟ್ಟಮ್ಮದೇವಿ,ಸ್ನೇಹಬಳಗ, ಗಣಪತಿ ಪೆಂಡಾಲ್, ಭಗೀರಥ, ಆಟೋ ಸಂಘ ಸೇರಿದಂತೆ ಹಲವು ಹೆಸರಿನ ಪ್ರಶಸ್ತಿಗೆ ಕುಸ್ತಿ ನಡೆದವು. ಎರಡು ದಿನಗಳಲ್ಲಿ 150 ಕ್ಕೂ ಹೆಚ್ಚಿನ ಜೊತೆಯ ಕುಸ್ತಿ ಪಂದ್ಯಗಳು ನಡೆದು ಕುಸ್ತಿ ಪ್ರೇಮಿಗಳಿಗೆ ಮುದ ನೀಡಿದರು.

ಶಿವಾಜಿ ವ್ಯಾಯಾಮ ಶಾಲೆ ಸೇವಾ ಸಂಘದ ಅಧ್ಯಕ್ಷ ಕುಮಾರಸ್ವಾಮಿ , ಗೌರವಾಧ್ಯಕ್ಷ ಮಾಜಿ ಜಿ.ಪಂ ಸದಸ್ಯ ಬಿ.ಪಿ.ನಾಗರಾಜ್, ಕಾರ್ಯದರ್ಶಿ ಹೂವಿನ ಬಿ.ಎಂ. ಹರೀಶ್, ಸಹಕಾರ್ಯದರ್ಶಿ ಪ್ರಕಾಶ್, ಹಿರಿಯ ಕುಸ್ತಿ ಶೀರ್ವುಗಾರ ಓಂಕಾರ್ ಹಾಗೂ ಉಪ್ಪಿನ ಮಂಜುನಾಥ್ ಮತ್ತು ಸಮಿತಿಯ ಶಶಿಧರ್, ಪುನೀತ್, ಮಲ್ಲಿಕ್, ಪ್ರವೀಣ್,ಕಾಂತರಾಜ್ ಸ್ನೇಹಿತರು ಇದ್ದರು. ಇದೇ ಸಂದರ್ಭದಲ್ಲಿ ಹಿರಿಯ ಕುಸ್ತಿ ಪಟುಗಳು ಹಾಗೂ ದಾನಿಗಳಿಗೆ ಗೌರವವನ್ನು ಸಮರ್ಪಿಸಲಾಯಿತು.

> ಬಹುತೇಕ ಶಾಲೆ ಮತ್ತು ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಯುವ ಕುಸ್ತಿಪಟುಗಳು ಭಾಗವಹಿಸಿದ್ದು ವಿಶೇಷವಾಗಿತ್ತು. ಪ್ರಾಚೀನ ಕ್ರೀಡೆಗಳು ಮರೆಯಾಗುತ್ತಿದ್ದರೂ ಸಹ ಮಲ್ಲಯುದ್ಧದ ಒಂದು ಭಾಗವಾದ ಕುಸ್ತಿ ಕಲೆ ಇನ್ನೂ ಜೀವಂತವಾಗಿರುವುದಾಗಿ ಸಾರಿತು. ಮೈಸೂರು, ಭದ್ರಾವತಿ, ಶಿವಮೊಗ್ಗ, ಬಾಗಲಕೋಟೆ, ದೂರದ ಬಿಜಾಪುರ, ಬೆಳಗಾಂ, ಜಮಖಂಡಿ ಸೇರಿದಂತೆ ರಾಜ್ಯದ ನಾನಾ ಭಾಗಗಳಿಂದ ನೂರಾರು ಕುಸ್ತಿ ಪಟುಗಳು ಆಗಮಿಸಿ ಅತ್ಯುತ್ತಮ ಪಟುಗಳ ಮೂಲಕ ತಮ್ಮ ಸಾಮರ್ಥ್ಯ ಮತ್ತು ಶಕ್ತಿಯನ್ನು ಪ್ರದರ್ಶಿಸಿದರು.

ಮಾಜಿ ಶಾಸಕ ಬೆಳ್ಳಿ ಪ್ರಕಾಶ್, ಕಾಂಗ್ರೆಸ್ ಮುಖಂಡ ಭಂಡಾರಿ ಶ್ರೀನಿವಾಸ್, ಮಾರ್ಗದ ಮಧು, ಪುರಸಭೆ ಮಾಜಿ ಅಧ್ಯಕ್ಷ ಬಿ.ಕೆ. ಶಶಿಧರ್ ಸೇರಿದಂತೆ ಮತ್ತಿತರ ಗಣ್ಯರು ಇದ್ದರು.

## ಕಿರುಸುದ್ದಿ

### ಮಾ.21ರಂದು ದತ್ತಿ ಉಪನ್ಯಾಸ

• **ತಾವರೆಕೆರೆ:** ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ತಾಲೂಕು ಶರಣ ಸಾಹಿತ್ಯ ಪರಿಷತ್ತು, ಚನ್ನಗಿರಿ ಹಾಗೂ ಪಾಂಡೋಮಟ್ಟಿಯ ವಿರಕ್ತ ಮಠದ ಸಹಯೋಗದಲ್ಲಿ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಮಾ.21ರಂದು ಶನಿವಾರ ಬೆಳಗ್ಗೆ 11 ಗಂಟೆಗೆ ಪಾಂಡೋಮಟ್ಟಿಯ ವಿರಕ್ತ ಮಠದಲ್ಲಿ ಆಯೋಜಿಸಲಾಗಿದೆ ಎಂದು ತಾಲೂಕು ಶ.ಸಾ.ಪ. ಅಧ್ಯಕ್ಷ ಎಂ.ಎನ್.ಮಲ್ಲೇಶಪ್ಪ ತಿಳಿಸಿದರು. ಕಾರ್ಯಕ್ರಮದ ಸಾನಿಧ್ಯವನ್ನು ವಿರಕ್ತ ಮಠದ ಪೀಠಾಧ್ಯಕ್ಷರಾದ ಶ್ರೀ ಡಾ. ಗುರುಬಸವ ಮಹಾಸ್ವಾಮಿಗಳು ವಹಿಸಲಿದ್ದಾರೆ. ತಾಲೂಕು ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ.ಎನ್. ಮಲ್ಲೇಶಪ್ಪ ಅಧ್ಯಕ್ಷತೆ ವಹಿಸುವರು. ನಲ್ಲೂರು ಸರ್ಕಾರಿ ಪದವಿ ಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕ ಬಿ.ಇ. ಪ್ರವೀಣ್ ವಚನ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು ವಿಷಯದ ಕುರಿತು ಉಪನ್ಯಾಸ ನೀಡಲಿದ್ದಾರೆ. ಕಾರ್ಯಕ್ರಮದಲ್ಲಿ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಕೋಶಾಧ್ಯಕ್ಷ ಕೆ. ದೇವರಾಜ್ ಭಾಗವಹಿಸಲಿದ್ದಾರೆ. ಪ್ರಾಸ್ತಾವಿಕ ನುಡಿಯನ್ನು ಬಿ. ಶಿವಲಿಂಗಪ್ಪ ಅವರು ವಹಿಸಲಿದ್ದಾರೆ. ಕಾರ್ಯಕ್ರಮಕ್ಕೆ ಎಲ್ಲ ಶರಣರು, ಭಕ್ತರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಆಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಮೊದಲ ಮಳೆಗೆ ರೈತರ ಸಂತಸ

• **ಬಸವಾಪಟ್ಟಣ :** ಈ ವರ್ಷದ ಮೊದಲ ಮಳೆ ಸೋಮವಾರ ರಾತ್ರಿ ಸುರಿದು, ರೈತರ ಸಂತಸ ತಂದಿದೆ. ರಾತ್ರಿ ವೇಳೆ ಗುಡುಗು-ಸಿಡಿಲು ಸಹಿತ ಸುರಿದ ಮಳೆಯು ಪ್ರದೇಶದ ಭೂಮಿಯನ್ನು ತಂಪಾಗಿಸಿದ್ದು, ಬೇಸಿಗೆ ಬಿಸಿಯಿಂದ ಬಳಲುತ್ತಿದ್ದ ಜನತೆಗೆ ಸಸ ಸ್ವಲ್ಪ ನಿಟ್ಟುಸಿರು ತಂದಿದೆ. ಈ ಮಳೆಯ ಪರಿಣಾಮವಾಗಿ ಭತ್ತದ ಫಸಲು ಮತ್ತು ವಿವಿಧ ತೋಟಗಳಿಗೆ ಉತ್ತಮ ಅನುಕೂಲವಾಗಿದೆ. ಮಣ್ಣಿನಲ್ಲಿ ತೇವಾಂಶ ಹೆಚ್ಚಾಗಿ ತೋಟಗಳಲ್ಲಿ ತಂಪಾದ ವಾತಾವರಣವಿರುತ್ತದೆ. ವರ್ಷದ ಮೊದಲ ಮಳೆ ಬಂದಿರುವುದು ನಮಗೆ ತುಂಬಾ ಖುಷಿಯ ವಿಚಾರ. ಭತ್ತದ ಬೆಳೆ ಮತ್ತು ತೋಟಗಳಿಗೆ ಇದು ಬಹಳ ಸಹಾಯಕ, ಈ ಮಳೆಯಿಂದ ಅಡಿಕೆಯ ಗಿಡದಲ್ಲಿ ಇರುವ ಅಡಿಕೆಯ ಹಕ್ಕು ಉದುರುವುದು ನಿಲ್ಲುತ್ತದೆ ಮತ್ತು ಭತ್ತಕ್ಕೆ ಯಾವುದೇ ರೋಗರುಜನಗಳು ತಗುಲುವುದಿಲ್ಲ ಎಂದು ರೈತ ಹಾಲ ಶಂಕರ ಹೇಳಿದರು. ಆದರೆ ಮಳೆಯ ಜೊತೆಗೆ ಬಂದ ಗುಡುಗು-ಸಿಡಿಲಿನಿಂದ ಕೆಲವೆಡೆ ವಿದ್ಯುತ್ ವ್ಯತ್ಯಯ ಉಂಟಾಗಿ, ಗ್ರಾಮಸ್ಥರಿಗೆ ಅನಾನುಕೂಲ ಉಂಟಾಯಿತು. ರಾತ್ರಿ ಸಮಯದಲ್ಲಿ ಕೆಲ ಗಂಟೆಗಳ ಕಾಲ ವಿದ್ಯುತ್ ಕಡಿತವಾಗಿದ್ದು, ಜನರು ಕತ್ತಲಲ್ಲಿ ಕಾಲ ಕಳೆಯಬೇಕಾಯಿತು.

### ಗೃಹ ಬಳಕೆ ಸಿಲಿಂಡರ್ ಬಳಕೆ: ಹೋಟೆಲ್ ಮೇಲೆ ದಾಳಿ

• **ದಾವಣಗೆರೆ:** ಗೃಹ ಬಳಕೆಯ ಸಿಲಿಂಡರ್ ಬಳಸುತ್ತಿದ್ದ ವಿವಿಧ ಹೋಟೆಲ್, ಆಟೋ ರಿಕ್ಷಾಗಳಿಗೆ ರೀಫಿಲ್ಲಿಂಗ್ ಮಾಡುತ್ತಿದ್ದ ಸ್ಥಳದ ಮೇಲೆ ದಾಳಿ ಮಾಡಿ, 40ಕ್ಕೂ ಹೆಚ್ಚು ಎಲ್.ಪಿ.ಜಿ ಸಿಲಿಂಡರ್‌ಗಳನ್ನು ಜಪ್ತು ಮಾಡಲಾಗಿದೆ. ನಗರದ ವಿವಿಧ ಹೋಟೆಲ್‌ಗಳ ಮೇಲೆ ತಹಶೀಲ್ದಾರ್ ಡಾ.ಅಶ್ವತ್ ನೇತೃತ್ವದಲ್ಲಿ ಡಿಢೀರ್ ಕಾರ್ಯಾಚರಣೆ ಕೈಗೊಳ್ಳಲಾಗಿತ್ತು. ದಾವಣಗೆರೆ ತಾಲೂಕು ಆನಗೋಡು ಬಳಿ ಹೋಟೆಲ್, ಡಾಬಾಗಳ ಮೇಲೆ ಅಧಿಕಾರಿಗಳು ಖಚಿತ ಮಾಹಿತಿ ಆಧರಿಸಿ ದಾಳಿ ನಡೆಸಿದ್ದಾರೆ. ಬಾಸಾಪುರದ ಬಳಿ ಆಟೋ ರಿಕ್ಷಾಗಳಿಗೆ ಗ್ಯಾಸ್ ರೀಫಿಲ್ಲಿಂಗ್ ಮಾಡುತ್ತಿದ್ದ ಸ್ಥಳದ ಮೇಲೆ ದಾಳಿ ಮಾಡಿ, 6 ಸಿಲಿಂಡರ್ ಜಪ್ತು ಮಾಡಲಾಗಿದೆ. ಸದ್ಯಕ್ಕೆ ಗೃಹಬಳಕೆ, ಹಾಸ್ಟೆಲ್, ಬೇಯಿಂಟ, ಖಾಸಗಿ ಹಾಸ್ಟೆಲ್, ವೃದ್ಧಾಶ್ರಮಗಳು, ಅನಾಥಾಶ್ರಮಗಳಿಗೆ ಸಿಲಿಂಡರ್ ಸಮಸ್ಯೆಯಾಗದಂತೆ ಕ್ರಮ ಕೈಗೊಳ್ಳಲಾಗಿದೆ. 3 ದಿನಕ್ಕೆ ಬ್ಯಾಕ್ ಲಾಗ್ ಇದ್ದು, 25-30 ದಿನಕ್ಕೆ ಸಿಲಿಂಡರ್ ಸಮಸ್ಯೆಯಾಗುವುದಿಲ್ಲ. ದಾವಣಗೆರೆ ನಗರ, ಜಿಲ್ಲೆಯ ಯಾವುದೇ ಗ್ಯಾಸ್ ಸ್ಟೇಷನ್ ಗಳಲ್ಲಿ ಮಧ್ಯ ಪ್ರಾಚ್ಯದ ಯುದ್ಧದ ಪರಿಣಾಮ ಬೀರದಂತೆ ಹೇಳಿಕೊಂಡು, ನಿಗದಿತ ದರಕ್ಕಿಂತ ಹೆಚ್ಚು ಹಣ ವಸೂಲು ಮಾಡುತ್ತಿದ್ದರೆ, ಪ್ರಕರಣ ದಾಖಲಿಸಿ ಕಾನೂನು ಕ್ರಮ ಜರುಗಿಸುತ್ತೇವೆ ಎಂದು ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ಎಚ್ಚರಿಸಿದ್ದಾರೆ.

### ಕಾನೂನು ಅರಿವು ಕಾರ್ಯಕ್ರಮ

• **ಮಲೇಬೆನ್ನೂರು:** ಜಮೀನು ಮಾರಾಟ ಹಾಗೂ ಕೊಳ್ಳುವ ಮೊದಲು ದಾಖಲೆಗಳ ಪರಿಶೀಲನೆ ನಡೆಸಬೇಕು' ಎಂದು ನ್ಯಾಯಾಧೀಶೆ ಜ್ಯೋತಿ ಅಶೋಕ ಪತ್ತಾರ್ ಸಲಹೆ ನೀಡಿದರು. ಸಮೀಪದ ಹಿರೆಹಾಲಿವಾಣ ಗ್ರಾಮದಲ್ಲಿ ನೀವು ಕಾನೂನು ತಿಳಿದುಕೊಳ್ಳಿ ಕಾನೂನು ಅರಿವು ಕಾರ್ಯಕ್ರಮದಲ್ಲಿ ಮಾತನಾಡಿ, ಮಹಿಳೆಯರು ವಿದ್ಯಾವಂತರಾಗಿ ಸ್ವಾವಲಂಬಿ ಜೀವನರೂಪಿಸಿ ಕೊಳ್ಳಿ, ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿ. ಬಾಲ್ಯವಿವಾಹ ಪ್ರಕರಣ ತಿಳಿದಲ್ಲಿ ಕಾನೂನು ರಕ್ಷಣೆ ಪಡೆದು ತಡೆಗಟ್ಟಿ ಎಂದರು. ಪಿಎಸ್‌ಐ ಹಾರೂನ್ ಅಖ್ತರ್ ಅಪ್ರಾಪ್ತರಿಗೆ ವಾಹನ ಚಾಲನೆಗೆ ಅವಕಾಶ ಕೊಡಬೇಡಿ ಎಂದರು. ಸಿಡಿಪಿಒ ಪ್ರಿಯದರ್ಶಿನಿ, ವಕೀಲರಾದ ಆನಂದ್, ನಾಗರಾಜ್, ಕೆ.ಪಿ. ನಾಗರಾಜ್, ಸಂಪನ್ಮೂಲ ವ್ಯಕ್ತಿ ಈಶ್ವರೀಯ ವಿಶ್ವವಿದ್ಯಾಲಯದ ಶಕುಂತಲಮ್ಮ, ಗ್ರಾಮಸ್ಥರಾದ ಎಸ್ .ಜಿ. ಪರಮೇಶ್ವರಪ್ಪ, ಗೊಂದೇರ ರೇವಣಸಿದ್ದಪ್ಪ, ಶಿವಕ್ಕಳು ಆಂಜನೇಯ, ಸ್ವಸಹಾಯ ಗುಂಪು, ಸ್ತ್ರೀಶಕ್ತಿ ಗುಂಪು, ಹಾಲು ಉತ್ಪಾದಕರ ಸಂಘಗಳ ಸದಸ್ಯರು ಇದ್ದರು.



ಮಲೇಬೆನ್ನೂರು : ಯುಗಾದಿ ಮತ್ತು ರಂಜಾನ್ ಹಬ್ಬಗಳ ಅಂಗವಾಗಿ ಶಾಂತಿ, ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ಹಾಗೂ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಜನ ಜಾಗೃತಿ ಮೂಡಿಸುವ ಸಲುವಾಗಿ ಪಟ್ಟಣದಲ್ಲಿ ಸೋಮವಾರ ಸಿಪಿಐ ಸುರೇಶ್ ಸಗರಿ ಪಿಎಸ್‌ಐ ಹಾರೂನ್ ಅಕ್ತರ್ ಅವರ ನಿರ್ದೇಶನದಂತೆ ಎಎಸ್‌ಐ ಶ್ರೀನಿವಾಸ್ ನೇತೃತ್ವದಲ್ಲಿ ಪೊಲೀಸ್ ಮತ್ತು ಹೋಮ್ ಗಾರ್ಡ್ಸ್ ಸಿಬ್ಬಂದಿಗಳಿಂದ ಪಥ ಸಂಚಲನ ನಡೆಸಲಾಯಿತು.

## ಬೆಣ್ಣೆನಗರಿಯಲ್ಲಿ ವರ್ಷಧಾರೆ

• **ದಾವಣಗೆರೆ:** ಜಿಲ್ಲೆಯ ವಿವಿಧೆಡೆ ಸೋಮವಾರ ತಡರಾತ್ರಿ ಸುರಿದ ಭಾರೀ ಮಳೆಯಿಂದ ಜನಜೀವನ ಅಸ್ತವ್ಯಸ್ತಗೊಂಡಿತು.

ಯುಗಾದಿ ಮುನ್ನವೇ ಬೆಣ್ಣೆನಗರಿ ದಾವಣಗೆರೆಯಲ್ಲಿ ವರ್ಷಧಾರೆಯಾಗಿದ್ದು, ರಾತ್ರಿ ಮಳೆಯ ಹನಿಗಳೊಂದಿಗೆ ಬಿದ್ದ ಆಲಿಕಲ್ಲುಗಳನ್ನು ಆರಿಸಿಕೊಂಡು ಯುವಕರು, ಮಕ್ಕಳು ಖುಷಿಪಟ್ಟರು. ಏಕಾಏಕಿ ಗುಡುಗು- ಮಿಂಚಿನೊಂದಿಗೆ ಸುರಿಯತೊಡಗಿದ ಮಳೆಯು ಅಲ್ಲಲ್ಲಿ ಸಿಡಿಲ ಅಬ್ಬರದ ಸದ್ದು ಮಾಡಿತು. ಬೇಸಿಗೆಯ ತೀವ್ರ ಬಿಸಿಲಿನಿಂದ ತತ್ತರಿಸಿದ್ದ ಜನರು ಸುಮಾರು 2 ಗಂಟೆಗೂ ಅಧಿಕ ಕಾಲ ಸುರಿದ ಮಳೆಯಿಂದಾಗಿ ತಣ್ಣನೆಯ ಅನುಭವ ಪಡೆದರು.

ಯುಗಾದಿ ಹಬ್ಬಕ್ಕೂ ಮುನ್ನವೇ ವರುಣನ ಆಗಮನದಿಂದ ಜನರಲ್ಲಿ ಸಂತಸ ಮೂಡಿದೆ. ಆಲಿಕಲ್ಲು ಮಳೆಯೂ ಆಗಿದ್ದರಿಂದ ನಗರದ ನಿವಾಸಿಗಳು ಆಶ್ಚರ್ಯದಿಂದ ಮನೆಗಳಿಂದ ಹೊರಗೆ ಬಂದು ಮಳೆಯನ್ನು ಆನಂದಿಸಿದರು. ಮಳೆಯಿಂದ ಹೆಚ್ಚಿನ ಹಾನಿಯಾದ ಬಗ್ಗೆ ವರದಿಯಾಗಿಲ್ಲ.



ದಾವಣಗೆರೆ- ನಗರದ ರೈಲ್ವೆ ನಿಲ್ದಾಣದಲ್ಲಿ ನಿಟ್ಟುವಳ್ಳಿ ರಾಷ್ಟ್ರೋತ್ಥಾನ ಶಾಲೆ ವಿದ್ಯಾರ್ಥಿಗಳು ಮತ್ತು ಪ್ರಯಾಣಿಕರಿಗೆ ಸುರಕ್ಷತೆ ಬಗ್ಗೆ ರೈಲ್ವೆ ರಕ್ಷಣಾ ಪಡೆಯ ಅಧಿಕಾರಿಗಳು ಜಾಗೃತಿ ಮೂಡಿಸಿದರು. ಪಡೆಯ ಅಧಿಕಾರಿ ಭಾರದ್ವಾಜ್, ರೈಲ್ವೆ ರಕ್ಷಣಾ ದಳದ ಪಿಐ ಎ.ಕೊಂಡರೆಡ್ಡಿ, ಎಎಸ್ಐ ಬಸವರಾಜ ವಠಾರ, ಮಹಿಳಾ ಮುಖ್ಯಪೇದೆ ಸವ್ಯ ಕೆ.ಎಲ್.ಗೌಡ ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

### ಚುನಾವಣಾಧಿಕಾರಿ ಸಂತೋಷ್ ಕುಮಾರ್ ಮಾಹಿತಿ

# ಮುಕ್ತ ಚುನಾವಣೆಗೆ ಸಿದ್ಧತೆ

• **ದಾವಣಗೆರೆ:** ಮುಕ್ತ ಮತ್ತು ನ್ಯಾಯ ಸಮ್ಮತವಾಗಿ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆ ನಡೆಸಲು ಸಂಪೂರ್ಣ ಸಿದ್ಧತೆ ಮಾಡಿಕೊಂಡಿದ್ದೇವೆ ಎಂದು ಕ್ಷೇತ್ರದ ಚುನಾವಣಾಧಿಕಾರಿ ಹಾಗೂ ದಾವಣಗೆರೆ ಉಪ ವಿಭಾಗಾಧಿಕಾರಿ ಸಂತೋಷ್ ಕುಮಾರ್ ತಿಳಿಸಿದರು.



ಇಲ್ಲಿನ ಮಹಾನಗರ ಪಾಲಿಕೆ ಆವರಣದಲ್ಲಿರುವ ಚುನಾವಣಾಧಿಕಾರಿ ಕಚೇರಿಯಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಲೋಕೋಪಯೋಗಿ ಇಲಾಖೆ, ಸಾರಿಗೆ ಇಲಾಖೆಯ ಅಧಿಕಾರಿಗಳು ಸ್ಟ್ರಾಂಗ್ ರೂಮ್ ಹಾಗೂ ಮತಗಟ್ಟೆ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ವಿಶೇಷವಾಗಿ ಡಿ.ಆರ್.ಆರ್ ಪ್ರೌಢಶಾಲೆಯನ್ನು ಪ್ರಮುಖ ಕೇಂದ್ರವನ್ನಾಗಿ ಆಯ್ಕೆಮಾಡಲಾಗಿದ್ದು, ಅಲ್ಲಿನ ಸುರಕ್ಷತೆ ಮತ್ತು ಎಸ್.ಒ.ಪಿ ಅನುಷ್ಠಾನದ ಬಗ್ಗೆ ಅಧಿಕಾರಿಗಳು ತೃಪ್ತಿ ವ್ಯಕ್ತಪಡಿಸಿದ್ದಾರೆ ಎಂದರು.

ಚುನಾವಣಾ ಪ್ರಚಾರ, ವಾಹನ ಪರವಾನಗಿ ಹಾಗೂ ರಾಜಕೀಯ ಕಾರ್ಯಕ್ರಮಗಳಿಗೆ ಅನುಮತಿ ಪಡೆಯಲು ಅನುಕೂಲವಾಗುವಂತೆ ಏಕಗವಾಕ್ಷಿ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಇದರಿಂದಾಗಿ ವಿವಿಧ ಇಲಾಖೆಗಳ(ಅರಣ್ಯ, ಅಗ್ನಿಶಾಮಕ, ಪೊಲೀಸ್, ಕಾರ್ಪೊರೇಷನ್) ಅನುಮತಿಯನ್ನು ಒಂದೇ ಕಡೆ ಮತ್ತು ತ್ವರಿತವಾಗಿ ಪಡೆಯಬಹುದಾಗಿದೆ. ಸೂಕ್ಷ್ಮ ಹಾಗೂ ಅತಿ ಸೂಕ್ಷ್ಮ ಮತಗಟ್ಟೆಗಳನ್ನು ಗುರುತಿಸ ಲಾಗಿದೆ. ಅಂತಹ ಕಡೆಗಳಲ್ಲಿ ಕಡ್ಡಾಯವಾಗಿ ಸಿಸಿ ಕ್ಯಾಮೆರಾಗಳನ್ನು ಅಳವಡಿಸುವ ಜೊತೆಗೆ ಮತದಾನದ ಪ್ರಕ್ರಿಯೆ ಯನ್ನು ನೇರ ಪ್ರಸಾರ ಮಾಡುವ ವ್ಯವಸ್ಥೆ ಇರಲಿದೆ ಎಂದು ಅವರು ವಿವರಿಸಿದರು.

ಮತದಾನದ ಪ್ರಮಾಣವನ್ನು ಹೆಚ್ಚಿಸಲು ಸ್ವೀಪ್ ಸಮಿತಿಯ ಮೂಲಕ ವಿವಿಧ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಜಿಲ್ಲಾ ಪಂಚಾಯತ್ ಸಿಇಒ ನೇತೃತ್ವದಲ್ಲಿ ಮತದಾನ ಜಾಗೃತಿ ಅಭಿಯಾನ ನಡೆಯುತ್ತಿದೆ. ಚುನಾವಣಾ ಅಕ್ರಮಗಳನ್ನು ತಡೆಗಟ್ಟಲು ಸಿ-ವಿಜಿಲ್ ಆಪ್ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದ್ದು, ಸಾರ್ವಜನಿಕರು ಯಾವುದೇ ದೂರುಗಳನ್ನು ಈ ಆಪ್ ಮೂಲಕ ಸಲ್ಲಿಸಬಹುದು. ದೂರು ಬಂದ ಕೂಡಲೇ ಸಂಬಂಧಪಟ್ಟ ಫ್ಲೈಯಿಂಗ್ ಸ್ಕ್ವಾಡ್ ಸ್ಥಳಕ್ಕೆ ಭೇಟಿ ನೀಡಿ ಕ್ರಮ ಕೈಗೊಳ್ಳಲಿದೆ ಎಂದು ಅವರು ತಿಳಿಸಿದರು.

ಚುನಾವಣಾ ಸಿಬ್ಬಂದಿಗಳು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

**ಚುನಾವಣೆ ಅಕ್ರಮ ತಡೆಗೆ 12 ಚೆಕ್ ಪೋಸ್ಟ್**

**ಚುನಾವಣೆ ಅಕ್ರಮಗಳನ್ನು ತಡೆಯಲು ಒಟ್ಟು 12 ಚೆಕ್ ಪೋಸ್ಟ್ ತೆರೆಯಲಾಗಿದೆ. ಆಜಾದ್ ನಗರ ಪೊಲೀಸ್ ಠಾಣೆ ವ್ಯಾಪ್ತಿಯ ಮಾಗಾನಹಳ್ಳಿ ರಸ್ತೆಯಲ್ಲಿರುವ ಚೌಡಮ್ಮ ದೇವಸ್ಥಾನ, ಬೇತೂರು ಹಳ್ಳ, ಗಾಂಧಿನಗರ ಪೊಲೀಸ್ ಠಾಣೆಯ ಶಿವಪುರ ಕೊಂಡಜ್ಜಿ ರಸ್ತೆ, ಹಳೇ ಪಿ.ಬಿ ರಸ್ತೆಯ ಸಾಯಿ ಇಂಟರ್ ನ್ಯಾಷನಲ್, ಆರ್.ಎಂ.ಸಿ ಪೊಲೀಸ್ ಠಾಣೆಯ ಬಾಡಾ ಕ್ರಾಸ್ ಗಾಣಿಗಿತ್ತಿ ಕಲ್ಲು, ಕೆ.ಟಿ.ಜೆ ನಗರ ಪೊಲೀಸ್ ಠಾಣೆಯ ಲೋಕಿಕೆರೆ ರಸ್ತೆ, ಭೂಮಿಕ ನಗರ, ವಿದ್ಯಾ ನಗರ ಪೊಲೀಸ್ ಠಾಣೆಯ ಶಾಮನೂರು ರಸ್ತೆ, ದಾವಣಗೆರೆ ಗ್ರಾಮಾಂತರ ಪೊಲೀಸ್ ಠಾಣೆಯ ದೊಡ್ಡ ಬೂದಿಹಾಳ್ ರಸ್ತೆ ಹಾಗೂ ಹದಡಿ ಪೊಲೀಸ್ ಠಾಣೆಯ ಕಾರಿಗನೂರು ಕ್ರಾಸ್ ಬಳಿ ಚೆಕ್ ಪೋಸ್ಟ್ ಕಾರ್ಯ ನಿರ್ವಹಿಸುತ್ತಿವೆ ಎಂದು ಅವರು ಮಾಹಿತಿ ನೀಡಿದರು.**

# ದಯಾಮರಣಕ್ಕೆ ಸುಪ್ರೀಂ ತೀರ್ಪು; ಕಾನೂನು ಸರಳೀಕರಣಕ್ಕೆ ಮನವಿ




• **ದಾವಣಗೆರೆ:** ದಯಾಮರಣಕ್ಕೆ ಸಹಕಾರಿಯಾಗುವಂತೆ ಸುಪ್ರೀಂ ಕೋರ್ಟ್ ತೀರ್ಪು ನೀಡಿರುವ ಹಿನ್ನೆಲೆಯಲ್ಲಿ ಏಪ್ರಿಲ್ ತಿಂಗಳಿನಿಂದ ಕೈಗೊಳ್ಳಲುದ್ದೇಶಿಸಿದ್ದ ಉಪವಾಸ ಸತ್ಯಾಗ್ರಹ ಕೈಬಿಟ್ಟಿರುವುದಾಗಿ ದಯಾಮರಣ ಹೋರಾಟ ಗಾರ್ತಿ ಹೆಚ್.ಬಿ.ಕರಿಬಸಮ್ಮ ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹರೀಶ್ ರಾಣಾ ಎಂಬುವರ ಪ್ರಕರಣದಲ್ಲಿ ಜೀವನಾಧಾರ ವ್ಯವಸ್ಥೆ ತೆರವುಗೊಳಿಸಿ, ಕಾನೂನಾತ್ಮಕ ದಯಾಮರಣಕ್ಕೆ ಅನುಮತಿಸುವ ಮೂಲಕ ಸುಪ್ರೀಂ ಕೋರ್ಟ್ ಐತಿಹಾಸಿಕ ತೀರ್ಪು ನೀಡಿದೆ. ದೇಶದ ಮೊದಲ ಪ್ರಕರಣವೆನ್ನಲಾದ ಈ ತೀರ್ಪಿನ ಮೂಲಕ ದಯಾಮರಣದ ಕಾನೂನು ಜಾರಿಗೊಳಿಸಿದ ನ್ಯಾಯಾಧೀಶರು ಅಭಿನಂದನಾರ್ಹರು. ದಯಾಮರಣದ ಕುರಿತು ಸಮಗ್ರ ಕಾನೂನು ರೂಪಿಸುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸೂಚಿಸಿರುವುದರಿಂದ ಏ.22ರಿಂದ ಆರಂಭಿಸಬೇಕಿದ್ದ ಉಪವಾಸ ಸತ್ಯಾಗ್ರಹದ ನಿರ್ಧಾರವನ್ನು ಹಿಂಪಡೆಯುತ್ತಿದ್ದೇನೆ ಎಂದರು.

ಪ್ರತಿ ಸರ್ಕಾರಿ ಆಸ್ಪತ್ರೆಯಲ್ಲೂ ದಯಾಮರಣ ಘಟಕ ಎಂಬ ನಾಮಫಲಕವಿರಬೇಕು. ಅಲ್ಲೇ ನಿವೃತ್ತ ನ್ಯಾಯಾಧೀಶರು, ವಕೀಲರು, ಪೊಲೀಸ್ ಅಧಿಕಾರಿಗಳು ಹಾಗೂ ಸಮಾಜ ಸೇವಕರಿರುವ ನ್ಯಾಯಪೀಠ ಸ್ಥಾಪಿಸಿ, ದಯಾಮರಣ ಬಯಸುವವರಿಗೆ ಮತ್ತವರ ಕುಟುಂಬದವರಿಗೆ ಕಾನೂನಿನ ಸಂಪೂರ್ಣ ಮಾಹಿತಿ ಸಿಗುವಂತಾಗಬೇಕು. ದಯಾಮರಣದ ಪ್ರಕ್ರಿಯೆಗಳು ಬಡವರ ದೇಗುಲದಂತಿರುವ ಸರ್ಕಾರಿ ಆಸ್ಪತ್ರೆಗಳಲ್ಲೇ ನಡೆಯಬೇಕು. ಈ ಕಾನೂನು ಕೇವಲ ಶ್ರೀಮಂತರಿಗೆ ಸೀಮಿತವಾಗದೆ, ಸಾಮಾನ್ಯ ಜನರಿಗೂ ಲಭ್ಯವಿರಬೇಕು. ಜನರು ಕೋರ್ಟ್ ಗೆ ಅಲೆಯುವಂತಿರಬಾರದು ಎಂದು ಅವರು ಇದೇ ವೇಳೆ ಒತ್ತಾಯಿಸಿದರು.

ನನಗೆ ಈಗ 86 ವರ್ಷ ವಯಸ್ಸಾಗಿದ್ದು, ಎಲ್ಲಾ ಜವಾಬ್ದಾರಿ ಮುಗಿಸಿಕೊಂಡು ಅಸಹನೀಯ ವೇದನೆಯಿಂದ ನರಳುತ್ತಿದ್ದೇನೆ. ನನ್ನಂತೆ ಅಸಂಖ್ಯಾತ ಜನರು ಇಂತಹ ನರಳಾಟದಲ್ಲಿದ್ದಾರೆ. ಅಲ್ಪಸ್ವಲ್ಪ ಶಕ್ತಿ ಇರುವಾಗಲೇ ಕಾನೂನಾತ್ಮಕವಾಗಿ ಮರಣ ಹೊಂದಲು ಬಯಸುತ್ತೇನೆ. ಈಗಾಗಲೇ ನನ್ನ ಅನಾರೋಗ್ಯಕ್ಕೆ ಸಂಬಂಧಿಸಿದ ವೈದ್ಯಕೀಯ ದಾಖಲೆಗಳನ್ನು ನ್ಯಾಯಾಲಯ, ಸರ್ಕಾರ ಹಾಗೂ ದಾವಣಗೆರೆ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದ್ದು, ನನಗೆ ದಯಾ ಮರಣಕ್ಕೆ ಅನುಮತಿ ನೀಡಬೇಕು. ದಯಾಮರಣ ಕಾನೂನಿಗೆ ದಾವಣಗೆರೆ ಜಿಲ್ಲೆಯ ಮೊದಲನೆಯವಳಾಗಿ ಆತ್ಮಸಂತೋಷದಿಂದ ಒಳಗಾಗಲು ನಾನು ಸಿದ್ಧಳಿದ್ದೇನೆ. ಈಗಾಗಲೇ ನನ್ನ ಕಣ್ಣು ಹಾಗೂ ದೇಹವನ್ನು ದಾನ ಮಾಡಿದ್ದು, ನನ್ನ ಮರಣದ ನಂತರದ ಪ್ರಕ್ರಿಯೆಗಳಿಗೆ ಯಾವುದೇ ಅಡೆತಡೆ ಇಲ್ಲದಂತೆ ಸರ್ಕಾರ ಸಹಕರಿಸಬೇಕೆಂದು ಅವರು ಮನವಿ ಮಾಡಿದರು.

ಶಹನಾಜ್, ಡಾ.ಹೆಚ್.ಬಿ.ವೆಂಕಟೇಶ್, ವಿಜಯಕುಮಾರಿ, ರೇಖಾ, ಮುತ್ತಮ್ಮ ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.

### ಆರೋಪಿಗಳ ವಿರುದ್ಧ ಕ್ರಮಕ್ಕೆ ರೈತ ಸಂಘ ಒತ್ತಾಯ

# ನೌಕರಿ ಕೊಡಿಸುವುದಾಗಿ ವಂಚನೆ




• **ದಾವಣಗೆರೆ:** ಸರ್ಕಾರಿ ನೌಕರಿ ಕೊಡಿಸುವುದಾಗಿ ನೂರಾರು ನಿರುದ್ಯೋಗಿಗಳಿಗೆ ಸುಮಾರು 50-60 ಕೋಟಿ ರೂ. ವಂಚಿಸಿರುವ ಚನ್ನಗಿರಿ ತಾಲೂಕು ಹಿರೇಉಡ ತಾಂಡಾದ ನಾಲ್ವರ ವಿರುದ್ಧ ಇನ್ನು 15 ದಿನಗಳಲ್ಲಿ ಕ್ರಮ ಕೈಗೊಳ್ಳದಿದ್ದರೆ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸುವುದಾಗಿ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ, ರಾಜ್ಯ ರೈತ ಮಿತ್ರ ಸಂಘ ಎಚ್ಚರಿಸಿವೆ.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ರೈತ ಸಂಘದ ಜಿಲ್ಲಾ ಕಾರ್ಯಾಧ್ಯಕ್ಷ ಚಿನ್ನಸಮುದ್ರ ಶೇಖರನಾಯ್ಕ ಮಾತನಾಡಿ, ಮಂಜಾನಾಯ್ಕ, ರಾಘವೇಂದ್ರ ನಾಯ್ಕ, ಸುನಿತಾ, ಸಚಿನ್ ಎಂಬುವರ ವಿರುದ್ಧ ಚನ್ನಗಿರಿ ಪೊಲೀಸ್ ಠಾಣೆಯಲ್ಲಿ ವಂಚನೆ ದೂರು ದಾಖಲಿಸಿದ್ದು, ಆರೋಪಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಸ್ವತಃ ಜಿಲ್ಲಾ ಪೊಲೀಸ್ ಅಧೀಕ್ಷಕರೇ ಭರವಸೆ ನೀಡಿದ್ದರೂ ಈವರೆಗೆ ತಪ್ಪಿತಸ್ಥರನ್ನು ಬಂಧಿಸಿಲ್ಲ, ವಂಚಕರ ಗಾಡ್ ಫಾದರ್ ರೀತಿ ವರ್ತಿಸುತ್ತಿರುವ ಚನ್ನಗಿರಿ ವೃತ್ತ ನಿರೀಕ್ಷಕ ರವೀಶ್ ಪಾತ್ರದ ಬಗ್ಗೆಯೂ ಸಮಗ್ರ ತನಿಖೆಯಾಗಬೇಕು ಎಂದು ಒತ್ತಾಯಿಸಿದರು.

ನೂರಾರು ಅಮಾಯಕ ನಿರುದ್ಯೋಗಿಗಳಿಗೆ ನೌಕರಿ ಕೊಡಿಸುವುದಾಗಿ ವಂಚಿಸಿರುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮವಾಗಬೇಕು. ನಾಲ್ವರೂ ಆರೋಪಿಗಳು ಅಮಾಯಕರಿಗೆ ಸರ್ಕಾರಿ ನೌಕರಿ ಕೊಡಿಸುವುದಾಗಿ, ವಿವಿಧ ಇಲಾಖೆಗಳ ಹೆಸರಿನಲ್ಲಿ ತಾವೇ ಸೃಷ್ಟಿಸಿದ ನಕಲಿ ನೇಮಕಾತಿ ಆದೇಶ ನೀಡಿದ್ದಾರೆ. ಒಂದು ವೇಳೆ ಕೆಲ ಕೊಡಿಸದಿದ್ದರೆ ಹಣ ವಾಪಾಸ್ಸು ಕೊಡುವುದಾಗಿ ಚೆಕ್ ಗಳನ್ನೂ ನೀಡಿದ್ದಾರೆ. ವಂಚನೆಗೆ ಒಳಗಾದವರು ದೂರು ನೀಡಿದಾಗ ಸ್ವತಃ ಹಿರಿಯ ಅಧಿಕಾರಿಗಳ ಮುಂದೆ ಆರೋಪಿಗಳು ತಪ್ಪೊಪ್ಪಿಕೊಂಡಿದ್ದರೂ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ಪೊಲೀಸ್ ಅಧಿಕಾರಿ, ಸಿಬ್ಬಂದಿ ಮೀನಾಮೇಷ ಎಣಿಸುತ್ತಿರುವುದು ಸರಿಯಲ್ಲ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ರೈತ ಸಂಘದ ರಾಜ್ಯ ಕಾರ್ಯದರ್ಶಿ ಮಲ್ಲಶೆಟ್ಟಿಹಳ್ಳಿ ಚೆನ್ನಬಸಪ್ಪ, ರೈತ ಮಿತ್ರ ಸಂಘಟನೆಯ ರಾಜ್ಯ ಸಂಚಾಲಕ ವಸಂತಕುಮಾರ, ಮುಖಂಡರಾದ ಹರಪನಹಳ್ಳಿ ಹೆಚ್.ವೆಂಕಟೇಶ, ಹರಿಹರ ಸಂತೋಷಕುಮಾರ, ಚನ್ನಗಿರಿ ಕಾಳೇಶ ಯಲೋದಹಳ್ಳಿ, ಎಂ.ಪ್ರದೀಪಕುಮಾರ, ಶ್ರೀನಿವಾಸ ಆಂಜನೇಯ ಮಿಲ್, ಶಿವಮೂರ್ತಿ, ಗಾಳೆಪ್ಪ, ರವಿಗೌಡ ಸುದ್ದಿಗೋಷ್ಠಿಯಲ್ಲಿದ್ದರು.

# ಮಹಿಳೆ ಸಾಮರ್ಥ್ಯದಿಂದಲೇ ಗೌರವ ಪಡೆಯುತ್ತಿದ್ದಾಳೆ: ಲೇಖಕಿ ಸುನೀತ

• **ಚನ್ನಗಿರಿ:** ಪುರಾಣಗಳ ಕಾಲದಿಂದಲೂ ಸ್ತ್ರೀಶೋಷಣೆ ಎಂಬುದಿದೆ. ನಮ್ಮ ಮನಸ್ಥಿತಿಗಳು ಬದಲಾಗದ ಹೊರತು ಸ್ತ್ರೀಸಮಾನತೆ ತರಲು ಸಾಧ್ಯವಿಲ್ಲ ಎಂದು ಲೇಖಕಿ ಸುನೀತರಾಜು ಹೇಳಿದರು.



ಸಂತೆಬೆನ್ನೂರು ಸರ್ಕಾರಿ ಪದವಿ ಕಾಲೇಜಿನಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು.

ಆದುನಿಕ ಕಾಲದಲ್ಲಿ ಮಹಿಳೆ ತನ್ನ ಸಾಮರ್ಥ್ಯದಿಂದ ತಾನೆ ತನ್ನ ಸಾಮಾಜಿಕ ಗೌರವ ಪಡೆಯುತ್ತಿದ್ದಾಳೆ. ಅಂದರೆ ಸಮಾಜದಲ್ಲಿ ಮಹಿಳೆಗೆ ನೀಡಬೇಕಿರುವ ಸ್ಥಾನಮಾನ ಗೌರವ ನೀಡುವ ಮನೋಭಾವ ಇನ್ನು ಕಾಣುತ್ತಿಲ್ಲ, ಸಾಧನೆ ಮಾಡಿರುವ ಕೆಲವೇ ಮಹಿಳೆಯರ ಉದಾರಣೆಗಳನ್ನು ಕೊಟ್ಟು ಮಹಿಳಾ ಸಬಲೀಕರಣವಾಗಿದೆ ಎನ್ನುವುದರಲ್ಲಿ ಎಷ್ಟು ಅರ್ಥವಿದೆ. ಶಿವನೇ ತನ್ನ ದೇಹದ ಅರ್ಧ ಭಾಗವನ್ನು ಪಾರ್ವತಿಗೆ ಕೊಟ್ಟು ಸ್ತ್ರೀಸಮಾನತೆ ಸಂದೇಶವನ್ನು ಸಾರಿದ್ದಾನೆ. ಪ್ರತೀ ದೇವರ ಹೆಸರನ್ನು ಅವರ ಮಡದಿಯರ ಮೂಲಕವೇ ಹೇಳುತ್ತೇವೆ. ಆದರೆ ನಮ್ಮ ಸಮಾಜದಲ್ಲಿ ಸ್ತ್ರೀಯರಿಗೆ ಗೌರವ ಇವತ್ತಿಗೂ ಸಿಗುತ್ತಿಲ್ಲ, ಸ್ತ್ರೀಯರನ್ನು ಗೌರವಿಸಿದರೆ ದೇವರನ್ನು ಗೌರವಿಸಿದಂತೆ ಎಂದು ನಮ್ಮ ಪುರಾಣಗಳು ಹೇಳಿವೆ. ಎಲ್ಲರೂ ಸ್ತ್ರೀಯರನ್ನು ಗೌರವಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ 130 ವಿದ್ಯಾರ್ಥಿನಿಯರಿಗೆ ಹಿಮೊಗ್ಲೋಬಿನ್ ತಪಾಸಣೆ ಮಾಡಲಾಗಿದ್ದು, 35 ವಿದ್ಯಾರ್ಥಿನಿಯರಲ್ಲಿ ಕನಿಷ್ಟಕಿಂತ ಕಡಿಮೆ ಇರುವುದು ಕಂಡು ಬಂದಿದ್ದು, ವೈದ್ಯದ ಸಲಹೆ ಪಡೆಯಲು ಸುಚಿಸಲಾಯಿತು. ಪ್ರಾಂಶುಪಾಲ ಡಾ.ಎಸ್.ಸುರೇಶ್, ಡಾ.ಸುಚಿತ್ರ, ತಿಪ್ಪೇ ಸ್ವಾಮಿ, ಚಂದ್ರಕಲಾ, ಪ್ರಾಧ್ಯಾಪಕಿ ಪ್ರೊ.ಟಿ.ಬಿ.ಜ್ಯೋತಿ, ಡಾ. ರಾಜ ಶೇಖರ್ ಮೂಲಿಮನಿ, ಮೃತ್ಯುಂಜಯ, ಸ್ವಾಮಿ, ಡಾ.ಪುನೀತ್ ಪಾಲ್ಗೊಂಡಿದ್ದರು.

# ಸುರಹೊನ್ನೆ ಗ್ರಾಮದ ಪಿಎಂಶ್ರೀ ಸರ್ಕಾರಿ ಶಾಲೆಗೆ ಸಮಗ್ರ ಪ್ರಶಸ್ತಿ

• **ನ್ಯಾಮತಿ:** ದಾವಣಗೆರೆ ಜಿಲ್ಲೆಯ ತೋಳಹುಣಸೆಯಲ್ಲಿ ನಡೆದ ಜಿಲ್ಲಾ ಮಟ್ಟದ ಪಿಎಂಶ್ರೀ ಶಾಲೆಗಳ ಕ್ರೀಡಾಕೂಟದಲ್ಲಿ ನ್ಯಾಮತಿ ತಾಲೂಕಿನ ಸುರಹೊನ್ನೆ ಗ್ರಾಮದ ಪಿಎಂಶ್ರೀ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕನ್ನಡ ಮತ್ತು ಆಂಗ್ಲ ಮಾಧ್ಯಮದ ಕ್ರೀಡಾಪಟುಗಳು ಸಮಗ್ರ ಪ್ರಶಸ್ತಿ ಪಡೆಯುವ ಮೂಲಕ ಶಾಲೆಗೆ ಕೀರ್ತಿ ತಂದಿದ್ದಾರೆಂದು ಶಾಲೆಯ ಮುಖ್ಯೋಪಾಧ್ಯಾಯ ಡಿ.ರಾಮಪ್ಪ ತಿಳಿಸಿದ್ದಾರೆ.



ಜಿಲ್ಲಾ ಮಟ್ಟದ ಕ್ರೀಡಾ ಕೂಟದಲ್ಲಿ ಸುಹಾಸ್ 100 ಮೀ.ಓಟ ಪ್ರಥಮ, ಗುಂಡು ಎಸೆತ ಪ್ರಥಮ, 400 ಮೀ ಓಟ ಬಾಲಕರ ರಿಲೇ ಪ್ರಥಮ, ಕಬ್ಬಡಿ ಬಾಲಕರ ವಿಭಾಗದಲ್ಲಿ ಪ್ರಥಮ, ಬಾಲಕಿಯರ ಕಬ್ಬಡಿ ದ್ವಿತೀಯ ಸ್ಥಾನಗಳಿಸಿ ಸಮಗ್ರ ಪ್ರಶಸ್ತಿಯನ್ನು ಪಡೆದಿದ್ದಾರೆ.

ಸುರಹೊನ್ನೆ ಗ್ರಾಮದ ಪಿಎಂಶ್ರೀ ಶಾಲೆಯ ವಿದ್ಯಾರ್ಥಿಗಳು ಕ್ರೀಡಾಕೂಟದಲ್ಲಿ ಸಮಗ್ರ ಪ್ರಶಸ್ತಿಯನ್ನು ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆಂದು ಕ್ಷೇತ್ರ ಶಿಕ್ಷಣಾಧಿಕಾರಿ, ಕ್ಷೇತ್ರ ಸಂಪನ್ಮೂಲ ಅಧಿಕಾರಿ, ದಾವಣಗೆರೆ ಶಿಕ್ಷಣ ಇಲಾಖೆಯ ಉಪನಿರ್ದೇಶಕರು, ಡಿವೈಪಿಸಿ, ಎಪಿಸಿಯವರು ಮಕ್ಕಳ ಪ್ರತಿಭೆಯನ್ನು ನೋಡಿ ಸಂತೋಷದಿಂದ ಬಹುಮಾನ ನೀಡುವುದರೊಂದಿಗೆ ಅಭಿನಂದಿಸಿದ್ದಾರೆ.

### ವಚನಾನಂದ ಶ್ರೀಗಳಿಗೆ ಪಂಚಮಸಾಲಿ ಮುಖಂಡರ ತಾಕೀತು

# ರೆಸಾರ್ಟ್ ಮಾಡ್ತೀರ, ಮಠವಾಗಿ ಉಳಿಸ್ತೀರ? ಆಯ್ಕೆ ನಿಮ್ಮದು

• **ದಾವಣಗೆರೆ:** ಹರಿಹರ ಪಂಚಮಸಾಲಿ ಪೀಠದ ವಿಚಾರದಲ್ಲಿ ಇನ್ನೂ ಸಹ ಕಾಲ ಮಿಂಚಿಲ್ಲ, ಶ್ರೀಮಠದ ಧಾರ್ಮಿಕ ಆಚರಣೆ, ಅನುಷ್ಠಾನ, ಪರಂಪರೆ ಉಳಿಸಿಕೊಂಡು, ಸಮಾಜ ಮುನ್ನಡೆಸುವ ಆಯ್ಕೆಯನ್ನು ಶ್ರೀ ವಚನಾನಂದ ಸ್ವಾಮೀಜಿಗೆ ಬಿಟ್ಟಿದ್ದೇವೆ ಎಂದು ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ಮುಖಂಡರು, ಶ್ರೀಪೀಠದ ಧರ್ಮದರ್ಶಿಗಳು ಸ್ಪಷ್ಟಪಡಿಸಿದ್ದಾರೆ.



ನಗರದ ಪಂಚಮಸಾಲಿ ಸಮಾಜದ ಜಿಲ್ಲಾ ಕಚೇರಿಯಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಶ್ರೀಪೀಠದ ಪ್ರಧಾನ ಧರ್ಮದರ್ಶಿ ಬಿ.ಸಿ.ಉಮಾಪತಿ, ಹರಿಹರ ಪೀಠವು ಗೆಸ್ಟ್ ಹೌಸ್ ರೀತಿ ಆಗಿರದೇ, ಪಂಚಮಸಾಲಿ ಸಮಾಜದ ಮಠವಾಗಿರಬೇಕು. ಪಂಚಮಸಾಲಿ ಆಚಾರ, ವಿಚಾರ, ಸಂಪ್ರದಾಯಗಳನ್ನು ಮುನ್ನಡೆಸಿಕೊಂಡು ಹೋಗುವ ಕೆಲಸವು ಶ್ರೀಗಳಿಂದ ಆಗಬೇಕು. ಯಾವುದನ್ನು ಮಾಡಬೇಕೆಂಬ ಆಯ್ಕೆ ಸ್ವಾಮೀಜಿಗಳದ್ದಾಗಿದೆ ಎಂದರು.

ಶ್ರೀಪೀಠದ ಗುರುಗಳಾಗಿ ಶ್ರೀ ವಚನಾನಂದ ಸ್ವಾಮೀಜಿ ಏನು ಮಾಡುತ್ತಾರೋ, ಅಂತಹದ್ದು ಆಗಬೇಕಾಗಿದೆ. ಆದರೆ, ಶ್ರೀಮಠದಲ್ಲಿ ಶ್ರೀಗಳನ್ನು ಪೀಠದಿಂದ ತೆಗೆಯಲು ಸಭೆ ಕರೆದಿದ್ದಾರೆಂದು ಸುಳ್ಳು ಸುದ್ದಿ ಹರಡಿ, ಗದ್ದಲ ಎಬ್ಬಿಸಿದ್ದು ಸರಿಯಲ್ಲ, ಶ್ರೀ ವಚನಾನಂದ ಸ್ವಾಮೀಜಿಗಳನ್ನು ಪೀಠದಿಂದ ತೆಗೆಯುವುದಲ್ಲ, ತಿದ್ದುವ ಕೆಲಸ ಆಗಬೇಕಾಗಿದೆ. ವಿವಿಧ ಮಠಾಧೀಶರು ಹೇಗೆ ತಮ್ಮ ಸಮುದಾಯಗಳನ್ನು ಮುನ್ನಡೆಸುತ್ತಾರೋ, ಆಚಾರ, ವಿಚಾರ, ಸಂಪ್ರದಾಯವನ್ನು ಕಲಿಸುತ್ತಾರೋ, ಅಂತಹ ಕೆಲಸವೂ ಶ್ರೀಗಳಿಂದ ಆಗಬೇಕು ಎಂದು ಅವರು ತಿಳಿಸಿದರು.

ಶ್ರೀಮಠದಲ್ಲಿ ನಯಾಪೈಸೆಯೂ ವ್ಯತ್ಯಾಸವಾಗಿಲ್ಲ, ಪಂಚಮಸಾಲಿ ಪೀಠ ನಮ್ಮಂತಹ ಲಕ್ಷಾಂತರ ಜನರ ಕನಸು. ಸಮಾಜದ ಋಣ ತೀರಿಸುವ ಕೆಲಸವನ್ನು ನಾವೆಲ್ಲರೂ ಮಾಡುತ್ತಿದ್ದೇವೆ. ಶ್ರೀಗಳು ಹಿರಿಯರನ್ನು ದೂರ ಇಡುತ್ತಿದ್ದರು. ಟ್ರಸ್ಟಿಗಳನ್ನೇ ಬದಲಿಸಲು ಹೇಳುತ್ತಿದ್ದರು. ಸೋಲ್ ಟ್ರಸ್ಟ್ ಮಾಡಿದರೆ, ತಾವು ಮುನ್ನಡೆಸುವುದಾಗಿ ಹೇಳುತ್ತಿದ್ದರು. ಪಂಚಮಸಾಲಿ ಪೀಠವನ್ನು 1994ರಿಂದ ಎಲ್ಲರೂ ಪ್ರಯತ್ನಪಟ್ಟು, ಸಾಕಷ್ಟು ಪರಿಶ್ರಮದಿಂದ ಕಟ್ಟಿದ್ದೇವೆ. ಅಂತಹ ಮಠದ ಟ್ರಸ್ಟಿಗಳನ್ನು ಬದಲಿಸುವಂತೆ ಹೇಳುವುದು, ಸೋಲ್ ಟ್ರಸ್ಟ್ ಮಾಡುವಂತೆ ಹೇಳುವುದೆಂದರೆ ಏನರ್ಥ? ಎಂದು ಅವರು ಪ್ರಶ್ನಿಸಿದರು.

ನಮ್ಮದು ರಾಜಕೀಯವಾಗಲೀ, ಸ್ವಾರ್ಥದ ಕೆಲಸವಾಗಲಿ ಅಲ್ಲ, ಶ್ರೀ ವಚನಾನಂದ ಸ್ವಾಮೀಜಿ 10 ದಿನವೆಂದು 40 ದಿನಗಳ ವಿದೇಶ ಪ್ರವಾಸಕ್ಕೆ ಹೋದರು. ಪ್ರಯಾಗರಾಜಗೂ ಹೋಗಿ ಬಂದರು. ಯಾರೂ ಸಹ ಸ್ವಾಮೀಜಿಯನ್ನು ಇಲ್ಲಿ ಕಪಿಮುಷ್ಟಿಯಲ್ಲಿಟ್ಟಿಲ್ಲ, ಸಮಾಜವನ್ನು ಕಟ್ಟಿದವರು ನಾವು. ಹರಜಾತ್ರೆಯನ್ನು ಸರಳವಾಗಿ ಮಾಡುವಂತೆ ಹೇಳಿದ್ದೆವು. ಆದರೆ, ತಮಗೆ ತಿಳಿದಂತೆ ಸ್ವಾಮೀಜಿ ಮಾಡಿದರು. ಡಿಸಿಎಂ ಡಿ.ಕೆ.ಶಿವಕುಮಾರ, ಸಚಿವ ಸಂತೋಷ ಲಾಡ್ ವೇದಿಕೆಯಲ್ಲಿಲ್ಲದಿದ್ದರೂ ಅಂತಹವರಿಗೆ ಹೊಗಳಿ, ಚಪ್ಪಾಳೆ ತಟ್ಟುವಂತೆ ಸಮಾಜಕ್ಕೆ ಕರೆ ನೀಡುತ್ತಾರೆಂದರೆ ಇದನ್ನು ಸಮಾಜ ಸಂಘಟನೆ ಎನ್ನಬೇಕೆ? ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ಹಿರಿಯ ಮುಖಂಡ ಬಾವಿ ಬೆಟ್ಟಪ್ಪ ಮಾತನಾಡಿ, 2008ರಿಂದಲೂ ಪೀಠ, ಸಮಾಜದ ಏನೇ ಸಮಸ್ಯೆ ಇದ್ದರೂ ನಾಲ್ಕು ಗೋಡೆ ಮಧ್ಯೆ ಕುಳಿತು ಸಮಸ್ಯೆ ಪರಿಹರಿಸುತ್ತಿದ್ದೆವು. ಸ್ವಾಮೀಜಿಯನ್ನು ಪಂಚಮಸಾಲಿ ಪೀಠಕ್ಕೆ ಕರೆತರುವಾಗಲೇ ಶ್ವಾಸಪೀಠ ತ್ಯಜಿಸಬೇಕು. ನಮ್ಮ ಸಮಾಜದ ಅನುಷ್ಠಾನ, ಆಚರಣೆ, ಸಂಘಟನೆ, ಸಮಾಜದ ಕೆಲಸದಲ್ಲಿ ತೊಡಗಬೇಕೆಂದು ಹೇಳಿದ್ದೆವು. ಶ್ರೀಮಠದಲ್ಲಿ ಪೂಜೆ, ಪುರಸ್ಕಾರ ನಿರಂತರ ನಡೆಯಬೇಕೆಂದು ಎಲ್ಲರೂ ಹೇಳಿದ್ದೆವು. ಸ್ವಾಮೀಜಿ ವರ್ತನೆಯಲ್ಲಿ ವ್ಯತ್ಯಾಸವಾದರೆ ಬೈಲಾ ಪ್ರಕಾರ ಬದಲಾವಣೆಗೆ ಅವಕಾಶವಿದೆ. ಸ್ವಾಮೀಜಿ ಏನೇನೋ ಪದ ಬಳಸಿ, ಅವಾಚ್ಯವಾಗಿ ಮಾತನಾಡುವುದು ಸರಿಯಲ್ಲ, ಸ್ವಾಮೀಜಿ ಬಾಯಿಯಿಂದ ಇಂತಹ ಪದ ಬರಬಾರದು. ನಿಮ್ಮ ನಡವಳಿಕೆ, ನಡತೆ ಬದಲಿಸಿಕೊಳ್ಳಿ ಎಂದು ಸಲಹೆ ನೀಡಿದರು.

ಸಮಾಜದ ಮುಖಂಡರಾದ ಪಿ.ಡಿ.ಶಿರೂರು, ಜ್ಯೋತಿಪ್ರಕಾಶ, ಕಳಸನಗೌಡ, ನಾಗಣ್ಣ ಚಿತ್ರದುರ್ಗ, ಹಾವೇರಿ ಮಹೇಶ, ನಿಡೋಣಿ, ಬಾಬಣ್ಣ, ಪರಮೇಶ ಪಟ್ಟಣಶೆಟ್ಟಿ, ವಸಂತ, ಪುಷ್ಪಾ ಹುಲ್ಮನಿ, ರಶ್ಮಿ ಕುಂಕೋದ್, ಕೊಟ್ರೇಶ, ಕಕ್ಕರಗೊಳ್ಳ ಮಂಜುನಾಥ ಪುರವಂತರ, ರವಿಕುಮಾರ ಬಾತಿ ಇತರರು ಸುದ್ದಿಗೋಷ್ಠಿಯಲ್ಲಿದ್ದರು.

**ಜನರ ಮಧ್ಯೆ ಬಾಳುವುದು ಸಾಧ್ಯವೇ**

ಧರ್ಮದರ್ಶಿ ಚಂದ್ರಶೇಖರ ಪೂಜಾರ ಮಾತನಾಡಿ, ನನ್ನ ಬಳಿ 25 ಲಕ್ಷ ರೂ. ಚೆಕ್ ಕೊಟ್ಟಿದ್ದೇನೆಂದವರು ಅದನ್ನು ಸಾಬೀತು ಪಡಿಸಬೇಕಲ್ಲವೇ? ಹೀಗೆ ಸುಳ್ಳು ಹೇಳಿ ಹೋದರೆ, ನಾವು ಜನರ ಮಧ್ಯೆ ಬಾಳುವುದಕ್ಕೆ ಸಾಧ್ಯವೇ? ಸ್ಥಳೀಯವಾಗಿ ನಮಗೆಷ್ಟು ಕಷ್ಟವಾಗುತ್ತದೆಂಬ ಅರಿವು ಅಂತಹವರಿಗೆ ಇಲ್ಲವೇ? ಮಾಜಿ ಶಾಸಕ ಅರುಣಕುಮಾರ 1.60 ಕೋಟಿ ರೂ. ಕೊಟ್ಟಿದ್ದರೆ ಅದನ್ನೇನಾದರೂ ಲಿಖಿತವಾಗಿ ನೀಡಿದ್ದಾರಾ? ಯಾರೇ ಆಗಲಿ ಗಾಳಿಯಲ್ಲಿ ಗುಂಡು ಹೊಡೆಯು ವುದು ಬೇಡ. ನಿಮ್ಮ ಸ್ವಾರ್ಥಕ್ಕಾಗಿ ಸಮಾಜವನ್ನು ಬೀದಿಗೆ ತರಬೇಡಿ. 120 ಕೆಜಿ ಅಲ್ಲ, 174 ಕೆಜಿ ಬೆಳ್ಳಿ ನಮ್ಮ ಮಠದ್ದು ಇರುವುದು. ಅದನ್ನು ಸುರಕ್ಷಿತವಾಗಿ ಬ್ಯಾಂಕ್ ಲಾಕರ್‌ನಲ್ಲಿ ಬಿ.ಸಿ.ಉಮಾಪತಿ ಇತರೆ ಧರ್ಮದರ್ಶಿಗಳು ಇಟ್ಟಿದ್ದಾರೆ ಎಂದು ತಿರುಗೇಟು ನೀಡಿದರು.

**ಶ್ವಾಸ ಪೀಠ ತ್ಯಜಿಸಲಿ**

ಸಮಾಜದ ಹಿರಿಯ ಮುಖಂಡ ಬಸವರಾಜ ದಿಂಡೂರು ಮಾತನಾಡಿ, 2018ರಲ್ಲಿ ಪಂಚಮಸಾಲಿ ಪೀಠಕ್ಕೆ ಬಂದ ಒಂದು ವರ್ಷದಲ್ಲಿ ಶ್ರೀ ವಚನಾನಂದ ಸ್ವಾಮೀಜಿ ಶ್ವಾಸ ಪೀಠವನ್ನು ತ್ಯಜಿಸಬೇಕೆಂಬ ಒಪ್ಪಂದವಾಗಿತ್ತು. ಸಮುದಾಯದ ಆಶೋತ್ತರಕ್ಕೆ ಸ್ಪಂದಿಸಿ, ಕೆಲಸ ಮಾಡಲು ಹೇಳಿದ್ದೆವು. ಇನ್ನೂ ಸಹ ಕಾಲ ಮಿಂಚಿಲ್ಲ, ವಚನಾನಂದ ಸ್ವಾಮೀಜಿ ಶ್ವಾಸ ಪೀಠ ತ್ಯಜಿಸಿ, ಪಂಚಮಸಾಲಿ ಪೀಠದಲ್ಲಿ ಮುಂದುವರಿಯಲಿ. ಸಮಾಜದ ಧಾರ್ಮಿಕ ಸ್ವಾತಂತ್ರ್ಯಕ್ಕಾಗಿ ನಾವು ಈ ಪೀಠ ಸ್ಥಾಪಿಸಿದ್ದೆವು ಎಂಬುದನ್ನು ಸ್ವಾಮೀಜಿ ಅರಿಯಲಿ ಎಂದರು.

## ಕಿರುಸುದ್ದಿ

### ಗೋಮಾಳದ ಭೂಮಿಯಲ್ಲಿ ಅಕ್ರವಾಗಿ ಮಣ್ಣು ಸಾಗಣೆ

• **ಚಳ್ಳಕೆರೆ:** ತಾಲೂಕಿನ ರೇಣುಕಾಪುರ ಗ್ರಾಮದಲ್ಲಿ ಸರ್ಕಾರಿ ಗೋಮಾಳ ಜಮೀನಿನಲ್ಲಿ ಅಕ್ರಮ ಮಣ್ಣು ಸಾಗಾಟ ಪ್ರಕರಣ ಬೆಳಕಿಗೆ ಬಂದಿದ್ದು, ಸಾರ್ವಜನಿಕರಿಂದ ಬಂದ ದೂರಿನ ಮೇರೆಗೆ ಕಂದಾಯ ಇಲಾಖೆ ಅಧಿಕಾರಿಗಳು ತಕ್ಷಣ ಸ್ಥಳಕ್ಕೆ ದೌಡಾಯಿಸಿ, ಅಕ್ರಮ ಮಣ್ಣು ಸಾಗಾಟಕ್ಕೆ ಬ್ರೇಕ್ ಹಾಕಿದ್ದಾರೆ. ಗ್ರಾಮದಲ್ಲಿ ರೈತರ ಜಮೀನಿಗೆ ಸಂಪರ್ಕ ಕಲ್ಪಿಸುವ ರಸ್ತೆ ನಿರ್ಮಾಣ ಕಾಮಗಾರಿ ಮಂಜೂರಾಗಿದ್ದು, ನೂರಾರು ರೈತರು ಹಾಗೂ ಜಾನುವಾರುಗಳಿಗೆ ಕುಡಿಯುವ ನೀರು ಒದಗಿಸುವ ಚೆಕ್ ಡ್ಯಾಂಗೆ ಈ ರಸ್ತೆ ಸಂಪರ್ಕ ಕಲ್ಪಿಸುವ ಉದ್ದೇಶ ಹೊಂದಿದೆ. ಈ ರಸ್ತೆ ಕಾಮಗಾರಿಗಾಗಿ ಸರ್ಕಾರದ ಅನುಮತಿ ಇಲ್ಲದೆ ಗೋಮಾಳದ ಮಣ್ಣನ್ನು ತೆಗೆದು ಸಾಗಾಟ ಮಾಡಿರುವುದು ಕಾನೂನುಬಾಹಿರವಾಗಿರುವ ಹಿನ್ನೆಲೆಯಲ್ಲಿ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದಾರೆ. ಇದರಿಂದ ಕಾಮಗಾರಿ ತಾತ್ಕಾಲಿಕವಾಗಿ ಸ್ಥಗಿತಗೊಂಡಿದ್ದು, ಗ್ರಾಮಸ್ಥರು ಹಾಗೂ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಅಗತ್ಯ ಮಣ್ಣು ಸಾಗಾಟಕ್ಕೆ ಅನುಮತಿ ನೀಡುವಂತೆ ಅವರು ತಾಲೂಕು ಕಚೇರಿಗೆ ಮನವಿ ಸಲ್ಲಿಸಿದ್ದಾರೆ. ತಾಲೂಕು ದಂಡಾಧಿಕಾರಿ ರೆಹನ್ ಪಾಶಾ ಸ್ಪಷ್ಟಪಡಿಸಿ, ಗೋಮಾಳ ಜಾಗವು ಸರ್ಕಾರಿ ಭೂಮಿ ಆಗಿದ್ದು, ಯಾವುದೇ ಕಾರಣಕ್ಕೂ ಅಕ್ರಮವಾಗಿ ಮಣ್ಣು ತೆಗೆಯಲು ಅವಕಾಶ ನೀಡುವುದಿಲ್ಲ ಎಂದು ತಿಳಿಸಿದ್ದಾರೆ.

### ಇಂದು ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ

• **ಚಿತ್ರದುರ್ಗ:** ಚಿತ್ರದುರ್ಗ ದಿಂದ ಅಮೃತಾಪುರ ರೈಲ್ವೇ ನಿಲ್ದಾಣದವರಗೆ ಮಾರ್ಚ್ 18 ರಂದು ವಿದ್ಯುತ್ ಮಾರ್ಗದ ಕಾಮಗಾರಿ ನಡೆಯುವ ಹಿನ್ನೆಲೆಯಲ್ಲಿ, ಚಿತ್ರದುರ್ಗ ವಿಭಾಗದ ವ್ಯಾಪ್ತಿಯಲ್ಲಿರುವ ಅರಸನಘಟ್ಟ ಮತ್ತು ಚಿಕ್ಕಜಾಜೂರು ಮಾರ್ಗಗಳಲ್ಲಿ ವಿದ್ಯುತ್ ಮಾರ್ಗ ಮುಕ್ತತೆ ನೀಡಲಾಗಿದೆ. ಸದರಿ ಮಾರ್ಗದಲ್ಲಿ ಮಧ್ಯಾಹ್ನ 2 ಗಂಟೆಯಿಂದ ಸಂಜೆ 5 ಗಂಟೆಯವರಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಾಯವಾಗಲಿದೆ. ನಗರದ ಆಂಜನೇಯ ದೇವಸ್ಥಾನ ಪ್ರದೇಶ, ಬಸವೇಶ್ವರ ದೇವಸ್ಥಾನ ಪ್ರದೇಶ, ಮೇಕೇನಹಟ್ಟಿ, ಕಾಟಯ್ಯನಕೆರೆ ಪ್ರದೇಶ, ನರಸಿಂಹಸ್ವಾಮಿ ದೇವಸ್ಥಾನ(ಗರಗ), ಅರಸನಘಟ್ಟ, ಗರಗ ಕಾವಲು, ಸಾದರಹಳ್ಳಿ, ಚಿಕ್ಕಂದವಾಡಿ, ಕರಿಮಟ್ಟಿ, ಚಿಕ್ಕನಕಟ್ಟೆ, ಚಿಕ್ಕಹೆಮ್ಮಿಗನೂರು, ಕೆ.ಎನ್.ಹಳ್ಳಿ, ತನಿಗೆಹಳ್ಳಿ, ಹೆರೇಕಂದವಾಡಿ, ಗುಂಜಿಗನೂರು, ರಂಗವ್ವನಹಳ್ಳಿ, ಬಿ.ದುರ್ಗ, ಐಯನಹಳ್ಳಿ, ಕಡೂರು, ಕೋಟೇಹಾಳು, ಎಸ್.ಹೆಚ್.ಹಳ್ಳಿ, ಚಿಕ್ಕಂದವಾಡಿ, ಚಿಕ್ಕಜಾಜೂರು, ಕವಲಹಟ್ಟಿ, ಹೋಸಹಳ್ಳಿ, ಸಾವೇರಮ್ಮ, ಗುಂಜಿಗನೂರು, ಗಾಲೀಮಾರಮ್ಮ ದೇವಸ್ಥಾನ ಪ್ರದೇಶ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯವಾಗಲಿದೆ. ಗ್ರಾಹಕರು ಸಹಕರಿಬೇಕು ಎಂದು ಬೆಸ್ಕಾಂ ಕಾರ್ಯನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ.

### 23ರಂದು ದೇವರ ದಾಸಿಮಯ್ಯ ಜಯಂತಿ

• **ಚಿತ್ರದುರ್ಗ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಸಂಯುಕ್ತಾಶ್ರಯದಲ್ಲಿ ಮಾ.23 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ದೇವರ ದಾಸಿಮಯ್ಯ ಜಯಂತಿ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಯೋಜನಾ ಮತ್ತು ಸಾಂಖ್ಯಿಕ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್ ಉದ್ಘಾಟಿಸುವರು. ಶಾಸಕ ಕೆ.ಸಿ.ವೀರೇಂದ್ರ ಅಧ್ಯಕ್ಷತೆ ವಹಿಸುವರು. ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ಅಧ್ಯಕ್ಷ ಹಾಗೂ ಚಳ್ಳಕೆರೆ ಶಾಸಕ ಟಿ.ರಘುಮೂರ್ತಿ, ಆಹಾರ ಮತ್ತು ನಾಗರೀಕ ಸರಬರಾಜು ನಿಗಮದ ಅಧ್ಯಕ್ಷ ಹಾಗೂ ಹೊಸದುರ್ಗ ಶಾಸಕ ಬಿ.ಜಿ. ಗೋವಿಂದಪ್ಪ ಹಾಗೂ ಸಂಸದ ಗೋವಿಂದ ಎಂ ಕಾರಜ ೋಳ ಉಪಸ್ಥಿತಿ ವಹಿಸುವರು. ಗೌರವಾನ್ವಿತ ಅತಿಥಿಗಳಾಗಿ ಕರ್ನಾಟಕ ದ್ರಾಕ್ಷಾರಸ ಮಂಡಳಿ ಅಧ್ಯಕ್ಷ ಡಾ.ಬಿ. ಯೋಗೇಶ್ ಬಾಬು, ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಿ.ಎಸ್. ಮಂಜುನಾಥ್, ಕರ್ನಾಟಕ ಸಫಾಯಿ ಕರ್ಮಚಾರಿ ಆಯೋಗ ಅಧ್ಯಕ್ಷ ಪಿ.ರಘು, ಬಯಲುಸೀಮೆ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಹೆಚ್.ಬಿ.ಮಂಜಪ್ಪ, ಮೊಳಕಾಲ್ಮುರು ಶಾಸಕ ಎನ್.ವೈ.ಗೋಪಾಲಕೃಷ್ಣ, ಹೊಳಲ್ಕೆರೆ ಶಾಸಕ ಎಂ.ಚಂದ್ರಪ್ಪ, ವಿಧಾನ ಪರಿಷತ್ ಸದಸ್ಯರಾದ ಚಿದಾನಂದ ಎಂ.ಗೌಡ, ಕೆ.ಎಸ್.ನವೀನ್, ಡಿ.ಟಿ.ಶ್ರೀನಿವಾಸ್ ಉಪಸ್ಥಿತರಿರುವರು. ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಎಂ.ಕೆ.ತಾಜ್‌ಪೀರ್, ಜಿಲ್ಲಾ ಗ್ಯಾರಂಟಿ ಯೋಜನಾ ಪ್ರಾಧಿಕಾರ ಅಧ್ಯಕ್ಷ ಆರ್.ಶಿವಣ್ಣ ಗಂಜಿಗಟ್ಟೆ, ಎಂ.ಗೋವಿಂದಪ್ಪ ಭಾಗವಹಿಸುವರು.

### ಜಗದೀಶ್ ನಿಧನ

• **ಹೊಸದುರ್ಗ:** ನಗರದ ಕಪ್ಪಗೆರೆ ರಸ್ತೆಯ ಟಿ.ಕೆ. ಜಗದೀಶ್ ತೀವ್ರ ಹೃದಯಾಘಾತದಿಂದ ನಿಧನ ಹೊಂದಿದ್ದಾರೆ. ಮೃತರಿಗೆ ಪತ್ನಿ, ಕೆಎಸ್‌ಆರ್‌ಟಿಸಿ ಡ್ರೈವರ್ ಲೋಹಿತ್ ಸೇರಿ ಇಬ್ಬರು ಗಂಡು ಮಕ್ಕಳಿದ್ದಾರೆ. ಮೃತರ ಅಂತ್ಯಕ್ರಿಯೆ ಹೊಸದುರ್ಗ ನಗರದ ರುದ್ರ ಭೂಮಿಯಲ್ಲಿ ದೇವಾಂಗ ಸಮಾಜದ ವಿಧಿ ವಿಧಾನಗಳಂತೆ ನೆರವೇರಿತು.





ಹೊಳಲ್ಕೆರೆ ತಾಲ್ಲೂಕು ತಾಳ್ಯ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಎಚ್‌ಪಿವಿ ಲಸಿಕೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಈ ಸಂದರ್ಭದಲ್ಲಿ ಆಡಳಿತ ವೈದ್ಯಾಧಿಕಾರಿ ಡಾ. ದರ್ಶನ್, ಸಿಬ್ಬಂದಿ ಅನಿತಾ, ಸುಧಾ, ಅರುಣ್, ರಂಗಸ್ವಾಮಿ, ಆಶಾ ಕಾರ್ಯಕರ್ತೆಯರು, ಗ್ರಾಮಸ್ಥರು ಹಾಜರಿದ್ದರು.

# ಚಿಕ್ಕಜಾಜೂರು ಸುತ್ತಮುತ್ತ ಆಲಿಕಲ್ಲು ಮಳೆ

• **ಚಿಕ್ಕಜಾಜೂರು:** ಗ್ರಾಮದ ಸುತ್ತಮುತ್ತ ಸೋಮವಾರ ರಾತ್ರಿ ಆಲಿಕಲ್ಲು ಮಳೆಯಾಗಿದೆ. ಮಳೆಯ ಅರ್ಭಟಕ್ಕೆ ಭಾಗದ ಜನರು ತತ್ತರಿಸಿದ್ದಾರೆ. ಸೋಮವಾರ ರಾತ್ರಿ 9ಕ್ಕೆ ಆರಂಭವಾದ ಮಳೆ ಸುಮಾರು ಒಂದು ಗಂಟೆಗೂ ಹೆಚ್ಚು ಸುರಿಯಿತು. ಕಳೆದ ಕೆಲವು ದಿನಗಳಿಂದ ಬಿಸಿಲಿನಿಂದ ಕಂಗೆಟ್ಟಿದ್ದ ಜನರಿಗೆ ಮಳೆ ತಂಪು ನೀಡಿತು. ಆಲಿಕಲ್ಲುಗಳ ಅಬ್ಬರಕ್ಕೆ ಮಾವು ಹಾಗೂ ಅಡಿಕೆ ಬೆಳೆಗಾರರಿಗೆ ವಿಪರೀತ ನಷ್ಟವಾಗಿದೆ. ಹೂವುಬಿಟ್ಟ ಮಾವಿನ ಗಿಡಗಳಿಗೆ ಆಲಿಕಲ್ಲಿನ ಏಟು ಬಿದ್ದು ಹೂವು ಹಾಗೂ ಕಾಯಿ ಉದುರಿವೆ. ಬಿ.ದುರ್ಗ ಹೋಬಳಿಯ ನೂರಾರು ಎಕರೆ ಪ್ರದೇಶದಲ್ಲಿ ಮಾವು ಬೆಳೆದಿದ್ದು ರೈತರಿಗೆ ಸಾಕಷ್ಟು ನಷ್ಟವಾಗಿದೆ. ಗ್ರಾಮದ ಕೆನರಾ ಬ್ಯಾಂಕ್ ಮುಂಭಾಗದಲ್ಲಿರುವ ಮರ ಮುರಿದು ಬಿದ್ದಿದೆ.





ನಿಯಮಾನುಸಾರ ಆನ್‌ಲೈನ್ ಬುಕ್ಕಿಂಗ್ | ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಮಾಹಿತಿ

# ಸಿಲಿಂಡರ್ ಕೊರತೆ ಇಲ್ಲ



• **ಚಿತ್ರದುರ್ಗ:** ಜಿಲ್ಲೆಯಲ್ಲಿ ಗೃಹ ಬಳಕೆ ಎಲ್‌ಪಿಜಿ ಸಿಲಿಂಡರ್‌ಗಳ ಕೊರತೆಯಿಲ್ಲ, ನಿಯಮಾನುಸಾರವೇ ಆನ್‌ಲೈನ್‌ನಲ್ಲಿ ಸಿಲಿಂಡರ್ ಬುಕ್ಕಿಂಗ್ ಮಾಡಬಹುದಾಗಿದೆ ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ತಿಳಿಸಿದ್ದಾರೆ.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಹಾರ ಇಲಾಖೆ ಹಾಗೂ ಎಲ್.ಪಿ.ಜಿ ಸರಬರಾಜುದಾರರೊಂದಿಗೆ ಸಭೆ ನಡೆಸಿ ಮಾತನಾಡಿದ ಅವರು, ಸಾರ್ವಜನಿಕರು ಆತಂಕಕ್ಕೆ ಒಳಗಾಗಿ ಅನಗತ್ಯ ಬುಕ್ಕಿಂಗ್ ಮಾಡುವ ಮೂಲಕ ಕೃತಕ ಅಭಾವ ಸೃಷ್ಟಿಸಬಾರದು ಎಂದು ಜಿಲ್ಲಾಧಿಕಾರಿಗಳು ಮನವಿ ಮಾಡಿದರು.

ಪ್ರಸ್ತುತ ಮಧ್ಯ ಪ್ರಾಚ್ಯ ರಾಷ್ಟ್ರಗಳಲ್ಲಿನ ಯುದ್ಧದ ಪರಿಣಾಮವಾಗಿ ಉದ್ಭವಿಸಿರುವ ಎಲ್‌ಪಿಜಿ ಸರಬರಾಜು ವ್ಯತ್ಯಯವನ್ನು ನಿವಾರಿಸಲು ರಾಜ್ಯ ಸರ್ಕಾರ ಅಗತ್ಯ ಕ್ರಮ ಕೈಗೊಂಡಿದೆ. ಜಿಲ್ಲೆಯಲ್ಲಿ ಒಟ್ಟು 4,14,512 ಗ್ರಾಹಕರಿದ್ದು, ಜಿಲ್ಲೆಗೆ ಅಗತ್ಯವಿರುವಷ್ಟು ದಾಸ್ತಾನು ಲಭ್ಯವಿದೆ ಎಂದು ತೈಲ ಕಂಪನಿಗಳ ಅಧಿಕಾರಿಗಳು ಖಚಿತಪಡಿಸಿದ್ದಾರೆ.

**ಬುಕ್ಕಿಂಗ್ ನಿಯಮಗಳು:** ಒಂದು ಸಿಲಿಂಡರ್ ಡೆಲಿವರಿ ಪಡೆದ ನಂತರದಲ್ಲಿ ಮತ್ತೊಂದು ಸಿಲಿಂಡರ್ ಬುಕ್ಕಿಂಗ್ ಮಾಡಲು ನಗರ ಪ್ರದೇಶದಲ್ಲಿ 25 ದಿನ ಹಾಗೂ ಗ್ರಾಮೀಣ ಪ್ರದೇಶದಲ್ಲಿ 45 ದಿನಗಳ ಕಾಲಾವಧಿ ನಿಗದಿಪಡಿಸಲಾಗಿದೆ. ಗ್ರಾಹಕರು ನೋಂದಾಯಿತ ಮೊಬೈಲ್ ಸಂಖ್ಯೆಯಿಂದ ಮಿಸ್ಡ್ ಕಾಲ್, ಕಂಪನಿ ಆಪ್‌ಗಳು, ವಾಟ್ಸಾಪ್ ಅಥವಾ ಐವಿಆರ್‌ಎಸ್ ಮೂಲಕ ಮಾತ್ರ ಬುಕ್ಕಿಂಗ್ ಮಾಡಬೇಕು. ಆನ್‌ಲೈನ್ ಬುಕ್ಕಿಂಗ್ ಆಗದ ಹೊರತು ನೇರವಾಗಿ ಏಜನ್ಸಿಗಳು ಸಿಲೆಂಡರ್ ನೀಡುವುದಿಲ್ಲ, ವಿನಾಕಾರಣ ಸಾರ್ವಜನಿಕರು ಏಜೆನ್ಸಿಗಳ ಮುಂದೆ ಕ್ಯೂ ನಿಲ್ಲಬಾರದು ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಕೋರಿದ್ದಾರೆ.

**ಅಕ್ರಮಗಳ ವಿರುದ್ಧ ಎಚ್ಚರಿಕೆ:** ಗೃಹ ಬಳಕೆ ಸಿಲಿಂಡರ್‌ಗಳನ್ನು ವಾಣಿಜ್ಯ ಉದ್ದೇಶಕ್ಕೆ ಬಳಸುವುದು ಅಥವಾ ಅನಧಿಕೃತವಾಗಿ ರೀಫಿಲ್ಲಿಂಗ್ ಮಾಡುವುದು ಶಿಕ್ಷಾರ್ಹ ಅಪರಾಧವಾಗಿದೆ. ಅಂತಹ ಪ್ರಕರಣಗಳು ಕಂಡುಬಂದಲ್ಲಿ ಲಿಕ್ವಿಫೈಡ್ ಪೆಟ್ರೋಲಿಯಂ ಗ್ಯಾಸ್ ಆರ್ಡರ್ 2000 ಅಡಿಯಲ್ಲಿ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಎಚ್ಚರಿಸಿದ್ದಾರೆ.

ಸಭೆಯಲ್ಲಿ ಆಹಾರ ಇಲಾಖೆ ಜಂಟಿ ನಿರ್ದೇಶಕ ಶಿದ್ರಾಮ ಮಾರಿಹಾಳ, ಬಿಪಿಸಿಎಲ್ ಕಂಪನಿಯ ಸುಶ್ರೀಮ ಬೇಹರಾ, ಹೆಚ್‌ಪಿಸಿಎಲ್ ಕಂಪನಿಯ ಮ್ಯಾನೇಜರ್‌ಗಳಾದ ಪ್ರಸೂನ್ ಮಾಲ್, ಭರತ್ ಚಂದ್ರ, ಆಹಾರ ಶಿರಸ್ತೆದಾರರು, ಆಹಾರ ನಿರೀಕ್ಷಕರು ಹಾಜರಿದ್ದರು.

### ಅಧಿಕಾರಿಗಳ ನಂಬರ್

ಎಲ್‌ಪಿಜಿ ಸರಬರಾಜಿನಲ್ಲಿ ಸಮಸ್ಯೆ ಕಂಡುಬಂದಲ್ಲಿ, ಸಾರ್ವಜನಿಕರು ಈ ಕೆಳಕಂಡ ಆಹಾರ ಇಲಾಖೆ ಅಧಿಕಾರಿಗಳನ್ನು ಸಂಪರ್ಕಿಸಬಹುದು. ಚಿತ್ರದುರ್ಗ ತಾಲ್ಲೂಕಿಗೆ ಸಂಬಂಧಿಸಿದಂತೆ ರಚನಾ ಎಂ. (9591381329), ಶಬಾನಾ ಪರ್ವೀನ್ (8792244006), ನಿರಂಜನ್ (9164488263) ಹಾಗೂ ಶಿವ್ವೇಸ್ವಾಮಿ, (8618966123). ಹೊಸದುರ್ಗ ತಾಲ್ಲೂಕಿಗೆ ಸಂಬಂಧಿಸಿದ ಗಂಗಾಧರ್, (7760084045), ಲಿಂಗರಾಜ್ (8904806637), ಮತ್ತು ಉಮಾದೇವಿ (8722544472). ಹಿರಿಯೂರು ತಾಲ್ಲೂಕಿಗೆ ಸಂಬಂಧಿಸಿದಂತೆ ನಾಗೇಂದ್ರ.ಜಿ (7411462337), ಚಳ್ಳಕೆರೆ ತಾಲ್ಲೂಕಿಗೆ ಸಂಬಂಧಿಸಿದಂತೆ ಶ್ರೀನಿವಾಸ್ (9448566953), ಹಾಗೂ ಗಿರೀಧರ್ (9880186797), ಮೊಳಕಾಲ್ಮೂರು ತಾಲ್ಲೂಕಿಗೆ ಸಂಬಂಧಿಸಿದಂತೆ ಗೀತಾಂಜನೇಯ (9880649688) ಹಾಗೂ ಜಿಲ್ಲಾ ಮಟ್ಟದ ಮಾಹಿತಿಗಾಗಿ ಜಂಟಿ ನಿರ್ದೇಶಕರ ದೂರವಾಣಿ ಸಂಖ್ಯೆ 08194-222408 ಇಲ್ಲಿಗೆ ಕರೆ ಮಾಡಬಹುದು.

ಜಿಕೆವಿಕೆ ನಿವೃತ್ತ ಡೀನ್ ಸ್ವಾಮಿ ಅಭಿಮತ

# ಗೋಡಂಬಿಗೆ ಜಿಲ್ಲೆ ಸೂಕ್ತ



• **ಚಿತ್ರದುರ್ಗ:** ಗೋಡಂಬಿ ಬೆಳೆಗೆ ಮಧ್ಯ ಕರ್ನಾಟಕದ ಬಯಲುಸೀಮೆ ಚಿತ್ರದುರ್ಗ ಜಿಲ್ಲೆಯ ನೆಲ ಸೂಕ್ತವಾಗಿದೆ ಎಂದು ತೋಟಗಾರಿಕೆ ಮಹಾವಿದ್ಯಾಲಯ ಜಿ.ಕೆ.ವಿ.ಕೆ. ಬೆಂಗಳೂರಿನ ನಿವೃತ್ತ ಡೀನ್ ಡಾ.ಕೆ.ಜಿ.ಎಸ್.ಸ್ವಾಮಿ ತಿಳಿಸಿದರು.

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟೆ, ತೋಟಗಾರಿಕೆ ಮಹಾವಿದ್ಯಾಲಯ ಬೆಂಗಳೂರು, ಗೋಡಂಬಿ ಮತ್ತು ಕೋಕೋ ಅಭಿವೃದ್ಧಿ ನಿರ್ದೇಶನಾಲಯ ಕೊಚಿನ್ ಹಾಗೂ ಕೃಷಿ ತಂತ್ರಜ್ಞರ ಸಂಸ್ಥೆ ಪ್ರಾದೇಶಿಕ ಘಟಕ ಇವುಗಳ ಸಹಯೋಗದೊಂದಿಗೆ ಎಪಿಎಂಸಿ ಆವರಣದಲ್ಲಿರುವ ಕೃಷಿ ತಂತ್ರಜ್ಞರ ಸಂಸ್ಥೆಯಲ್ಲಿ ಇತ್ತೀಚೆಗೆ ಏರ್ಪಡಿಸಲಾಗಿದ್ದ ಜಿಲ್ಲಾ ಮಟ್ಟದ ಗೋಡಂಬಿ ಬೆಳೆಯ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

ವಾಣಿಜ್ಯ ಬೆಳೆಗಳಾದ ಶೇಂಗಾ, ಸೂರ್ಯಕಾಂತಿ, ಮೆಕ್ಕೆಜೋಳ, ಈರುಳ್ಳಿ ಇವುಗಳನ್ನೆ ಹೆಚ್ಚು ಬೆಳೆಯುವ ರೈತರು ಗೋಡಂಬಿ ಬೆಳೆಯತ್ತ ಗಮನ ಕೊಡಬೇಕು. ಇದೊಂದು ಲಾಭದಾಯಕ ಬೆಳೆ. ಬರಪೀಡಿತ ಪ್ರದೇಶ ಚಿತ್ರದುರ್ಗದ ಹವಾಗುಣ ಗೋಡಂಬಿ ಬೆಳೆಗೆ ಚೆನ್ನಾಗಿದೆ ಎಂದು ಹೇಳಿದರು.

ಶಿವಮೊಗ್ಗ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ನಿವೃತ್ತ ಸಂಶೋಧನಾ ನಿರ್ದೇಶಕರಾದ ಡಾ.ಬಿ.ಸತ್ಯನಾರಾಯಣ ರೆಡ್ಡಿ ಮಾತನಾಡಿ ಗೋಡಂಬಿ ಚಿತ್ರದುರ್ಗ ಜಿಲ್ಲೆಯ ರೈತರಿಗೊಂದು ಪರ್ಯಾಯ ಬೆಳೆಯಾಗಿ ರೂಪುಗೊಳ್ಳುತ್ತ ಬರುತ್ತಿದೆ. ಕಡಿಮೆ ಖರ್ಚಿನಲ್ಲಿ ಬೆಳೆಯುವ ಗೋಡಂಬಿಗೆ ಹೆಚ್ಚಿನ ಕೂಲಿಕಾರರ ಅವಶ್ಯಕತೆಯೂ ಇಲ್ಲ. ಕೇವಲ ವಾಣಿಜ್ಯ ಬೆಳೆಗಳಿಗೆ ಮಾರು ಹೋಗುವ ಬದಲು ಗೋಡಂಬಿ ಬೆಳೆಯನ್ನು ಆಯ್ಕೆ ಮಾಡಿಕೊಳ್ಳುವಂತೆ ಮನವಿ ಮಾಡಿದರು.

ಗೋಡಂಬಿ ತಜ್ಞ ಬೆಂಗಳೂರಿನ ಡಾ.ಗುರುಪ್ರಸಾದ್, ಗೋಡಂಬಿ ಸಂಶೋಧನಾ ನಿರ್ದೇಶನಾಲಯದ ಹಿರಿಯ ವಿಜ್ಞಾನಿ ಡಾ.ರಾಜಶೇಖರ್, ಚಿತ್ರದುರ್ಗ ಕೃಷಿ ತಂತ್ರಜ್ಞರ ಸಂಸ್ಥೆ ಉಪಾಧ್ಯಕ್ಷ ಡಿ.ಟಿ.ಶಿವಾನಂದಪ್ಪ, ಕಾರ್ಯದರ್ಶಿ ಜಿ.ಟಿ.ವೀರಭದ್ರರೆಡ್ಡಿ, ಡಾ.ಸುರೇಶ್, ಅಶೋಕ್ ಇದ್ದರು.

## ನಿಲ್ದಾಣದ ಒಳಗೆ ಪ್ರವೇಶಿಸದ ಬಸ್‌ಗಳು: ಕ್ರಮಕ್ಕೆ ಮನವಿ

• **ಹಿರಿಯೂರು:** ಹಿರಿಯೂರು ನಗರ ಬಸ್ ನಿಲ್ದಾಣದಲ್ಲಿ ನಾಲ್ಕು ವಿಭಾಗಗಳಿಂದ ಸುಮಾರು 800ಕ್ಕೂ ಹೆಚ್ಚು ಬಸ್ಸುಗಳು ಸಂಚಾರ ಮಾಡುತ್ತಿದ್ದು, ಸರ್ಕಾರದ ಶಕ್ತಿ ಯೋಜನೆ ಜಾರಿಗೆ ಬಂದ ನಂತರ ಮಹಿಳಾ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿದೆ. ಆದರೆ ರಾತ್ರಿ 7 ಗಂಟೆಯ ನಂತರ ಹಲವು ಬಸ್ಸುಗಳು ಹಿರಿಯೂರು ನಗರದ ಬಸ್ ನಿಲ್ದಾಣದ ಒಳಗೆ ಪ್ರವೇಶಿಸದೇ ಬೈಪಾಸ್ ಮೂಲಕ ಸಂಚರಿಸುತ್ತಿರುವುದರಿಂದ ಪ್ರಯಾಣಿಕರಿಗೆ ತೊಂದರೆ ಉಂಟಾಗುತ್ತಿದೆ.

7 ಗಂಟೆಯ ನಂತರ ಬೆಂಗಳೂರಿನ ಕೆಂಪೇಗೌಡ ಬಸ್ ನಿಲ್ದಾಣದಿಂದ ದಾವಣಗೆರೆ ಮತ್ತು ಬಳ್ಳಾರಿ ಜಿಲ್ಲೆಯ ಮುಖಾಂತರ ಸಂಚಸುವ ಬಸ್ಸುಗಳು ಹಿರಿಯೂರು ನಗರದ ಒಳಗೆ ಸಂಚರಿಸದೆ ಬೈಪಾಸ್ ಮೂಲಕ ಸಂಚರಿಸುವುದಾಗಿ



ಪ್ರಯಾಣಿಕರಿಗೆ ತೊಂದರೆ ಕೊಡುತ್ತಿರುವ ಬಗ್ಗೆ ಸಾಕಷ್ಟು ದೂರುಗಳು ಬಂದ ಹಿನ್ನೆಲೆಯಲ್ಲಿ ಹಿರಿಯೂರು ನಗರದ ಒಳಗೆ ಕಡ್ಡಾಯವಾಗಿ ಸಂಚರಿಸುವಂತೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ರವರಿಗೆ ಸಚಿವ ಡಿ.ಸುಧಾಕರ್ ಮನವಿ ಮಾಡಿದ್ದಾರೆ. ಇದಕ್ಕೆ ಸ್ಪಂದಿಸಿದ ಸಚಿವರು ಇದನ್ನು ಗಮನಿಸಿ ತುರ್ತಾಗಿ ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

## ದೇವದಾಸಿ ಪದ್ಧತಿ ನಿರ್ಮೂಲನೆಗೆ ಜಾಗೃತಿ

• **ಚಿತ್ರದುರ್ಗ:** ದೇವದಾಸಿ ಪದ್ಧತಿ ನಿರ್ಮೂಲನೆ ಕುರಿತು ಕುಂಚಿಗನಾಳ್ ಗ್ರಾಮದಲ್ಲಿ ಮಾರುತಿ ಸಾಂಸ್ಕೃತಿಕ ಕಲಾ ತಂಡದವರು ಬೀದಿ ನಾಟಕ ಪ್ರದರ್ಶಿಸಿದರು. ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಬೆಂಗಳೂರು, ದೇವದಾಸಿ ಪುನರ್ವಸತಿ ಯೋಜನೆ ಚಿತ್ರದುರ್ಗ ಇವುಗಳ ಸಂಯುಕ್ತಾಶ್ರಯದಲ್ಲಿ ಪ್ರದರ್ಶನಗೊಂಡ ಬೀದಿ ನಾಟಕ ಉದ್ಘಾಟಿಸಿ ಮಾತನಾಡಿದ ಯೋಜನಾಧಿಕಾರಿ ಷಣ್ಮುಖಪ್ಪ ದೇವದಾಸಿಯರ ಬಗ್ಗೆ ಇನ್ನು ಜೀವಂತವಾಗಿರುವ ಮೂಢನಂಬಿಕೆ, ಕಂದಾಚಾರಗಳನ್ನು ತೊಡೆದು ಹಾಕಬೇಕಾಗಿರುವುದರಿಂದ ಜನತೆ ಜಾಗೃತರಾಗಬೇಕೆಂದು ಹೇಳಿದರು.



ಕಲಾವಿದರಾದ ಜೆ.ವಿ.ಮಾರುತೇಶ್, ಸುಕನ್ಯಾ, ವಿರುಪಾಕ್ಷಪ್ಪ, ಜೆ.ಎನ್. ಗೊಂಡಾಳಪ್ಪ, ಮಹಾಂತೇಶ್, ಹೇಮಂತ್, ದೇವದಾಸಿ ಪುನರ್ವಸತಿ ಯೋಜನೆಯ ದ್ಯಾಮಣ್ಣ ಹಾಗೂ ಸಿಬ್ಬಂದಿಗಳು ಈ ಸಂದರ್ಭದಲ್ಲಿ ಹಾಜರಿದ್ದರು.



ಬೆಂಗಳೂರಿನ ನ್ಯಾಷನಲ್ ಇಂಟಿಗ್ರೇಟೆಡ್ ಫೋರಮ್ ಆಫ್ ಆರ್ಟಿಸ್ಟ್ಸ್ ಆಕ್ಟಿವಿಸ್ಟ್ಸ್ ಸಂಸ್ಥೆಯು ಚಿತ್ರದುರ್ಗ ನಗರದ ಎಸ್‌ಜೆಎಂ ತಾಂತ್ರಿಕ ಮಹಾವಿದ್ಯಾಲಯದ ಎನ್‌ಎಸ್‌ಎಸ್ ಅಧಿಕಾರಿ ಡಾ.ಇ.ನಿರಂಜನ್ ಅವರಿಗೆ ಸಂವೇದನಾ-2 ರಾಷ್ಟ್ರಮಟ್ಟದ ಪ್ರಶಸ್ತಿ ನೀಡಿ ಗೌರವಿಸಿದೆ. ಬೆಂಗಳೂರಿನಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

## ಉತ್ತಮ ಆರೋಗ್ಯವಿದ್ದವರು ನಿಜವಾದ ಶ್ರೀಮಂತರು

• **ಚಿತ್ರದುರ್ಗ:** ಚಿತ್ರದುರ್ಗ ನಗರದ ಹೊರವಲಯದ ಕವಾಡಿಗರಹಟ್ಟಿಯಲ್ಲಿನ ಮಂಗಳವಾರ ಬಿಎಸ್‌ಎಸ್ ಮೈಕ್ರೋ ಫೈನಾನ್ಸ್ ಲಿಮಿಟೆಡ್ ಮತ್ತು ಅಪೋಲೋ ಟೆಲಿಮೆಡಿಸನ್ ನೆಟ್‌ವರ್ಕಿಂಗ್ ಫೌಂಡೇಷನ್ ವತಿಯಿಂದ ವಿಶೇಷ ಆರೋಗ್ಯ ಶಿಬಿರ ನಡೆಸಲಾಯಿತು.

ಆರ್ಥೋಪೆಡಿಕ್ ಡಾ.ಶ್ರೀಧರ್ ಈ ಸಂದರ್ಭದಲ್ಲಿ ಮಾತನಾಡಿ, ಇಂದಿನ ದಿನಗಳಲ್ಲಿ ಹಣ, ಐಶ್ವರ್ಯ, ಅಂತಸ್ತು, ಕಾರು ಬಂಗಲೆ ಇದ್ದವರು ಶ್ರೀಮಂತರಲ್ಲ, ಆರೋಗ್ಯವನ್ನು ಚನ್ನಾಗಿ ಇಟ್ಟುಕೊಂಡವರು ಶ್ರೀಮಂತರು. ಹಣಕ್ಕಿಂತ ಆರೋಗ್ಯ ಮುಖ್ಯವಾಗಿದೆ. ಹಣವನ್ನು ಹೇಗೆ ಬೇಕಾದರೂ ಸಂಪಾದನೆ ಮಾಡಬಹುದು. ಆದರೆ ಆರೋಗ್ಯವನ್ನು ಸಂಪಾದನೆ



ಮಾಡಲು ಸಾಧ್ಯವಿಲ್ಲ, ಇದಕ್ಕೆ ಉತ್ತಮ ಆಹಾರ, ವ್ಯಾಯಾಮ, ಯೋಗ, ಧ್ಯಾನ ಮಾಡಬೇಕು. ಜೊತೆಗೆ ಕಾಲ ಕಾಲಕ್ಕೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವ ಮೂಲಕ ಉತ್ತಮ ಆರೋಗ್ಯ ಪಡೆಯಬಹುದು ಎಂದರು.

ಅಪೋಲೋ ಫೌಂಡೇಷನ್ ಡಾ.ಚಂದ್ರಶೇಖರ್ ಮಾತನಾಡಿ, ಇಂದಿನ ದಿನಗಳಲ್ಲಿ ಸರ್ಕಾರ ಮತ್ತು ಸಂಘ ಸಂಸ್ಥೆಗಳು ಈ ರೀತಿಯಾದ ಆರೋಗ್ಯ ಶಿಬಿರಗಳನ್ನು ನಡೆಸುವ ಮೂಲಕ ಜನರ ಆರೋಗ್ಯ ನಿರ್ವಹಣೆಗೆ ಸಹಕರಿಸುತ್ತಿವೆ. ಜನರಿಗೆ ಉಚಿತ ಆರೋಗ್ಯ ತಪಾಸಣೆ ಶಿಬಿರ ನಡೆಸುವ ಮೂಲಕ ಜನರ ಆರೋಗ್ಯವನ್ನು ಉತ್ತಮ ಸ್ಥಿತಿಯಲ್ಲಿ ಇಡುವುದಕ್ಕೆ ಮುಂದಾಗಿವೆ. ಜನರು ಇದರ ಸದುಪಯೋಗ ಪಡೆದುಕೊಳ್ಳಬೇಕಿದೆ. ಈ ರೀತಿಯಾದ ಶಿಬಿರವನ್ನು ಸರಿಯಾದ ರೀತಿಯಲ್ಲಿ ಬಳಕೆ ಮಾಡಿಕೊಳ್ಳಬೇಕಿದೆ ಎಂದು ಕರೆ ನೀಡಿದರು.

ಬೆಳಿಗ್ಗೆ 9 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ವಿಶೇಷ ಆರೋಗ್ಯ ಶಿಬಿರ ನಡೆಸಲಾಯಿತು. ಕವಾಡಿಗರಹಟ್ಟಿಯಲ್ಲಿನ ಸುಮಾರು 150 ಜನ ಇದರ ಪ್ರಯೋಜನ ಪಡೆದುಕೊಂಡರು.

ನಗರಸಭೆ ಅಧಿಕಾರಿಗಳ ವಿರುದ್ಧ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಅಸಮಾಧಾನ

# ಕುಡಿಯುವ ನೀರು ಸರಬರಾಜಿನಲ್ಲಿ ವ್ಯತ್ಯಯ

• **ಚಿತ್ರದುರ್ಗ:** ಚಿತ್ರದುರ್ಗ ನಗರದಲ್ಲಿ 15 ದಿನಗಳಿಗೊಮ್ಮೆ ಕುಡಿಯುವ ನೀರು ಸರಬರಾಜು ಮಾಡುತ್ತಿರುವುದಕ್ಕೆ ನಗರಸಭೆ ಅಧಿಕಾರಿಗಳ ಬಗ್ಗೆ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಈ ಕುರಿತು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಗರಸಭೆ ಮತ್ತು ಬೆಸ್ಕಾಂ ಅಧಿಕಾರಿಗಳ ಜಂಟಿ ಸಭೆ ನಡೆಸಿ ಮಾತನಾಡಿದ ಅವರು, ನಗರಕ್ಕೆ ಕುಡಿಯುವ ನೀರು ಪೂರೈಕೆಯಾಗುವ ಮೂಲಗಳಲ್ಲಿ ಯಾವುದೇ ತೊಂದರೆಯಿಲ್ಲ, ಸಾಕಷ್ಟು ನೀರಿನ ಪ್ರಮಾಣವೂ ಲಭ್ಯವಿದೆ. ನೀರಿನ ಸಮಸ್ಯೆಗೆ ತಾಂತ್ರಿಕ ಕಾರಣಗಳಿಗಿಂತ ಅಧಿಕಾರಿಗಳ ಬೇಜವಾಬ್ದಾರಿಯೇ ಮುಖ್ಯ ಕಾರಣವಾಗಿದೆ ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಕಿಡಿಕಾರಿದರು.

ನಗರಸಭೆ ಅಧಿಕಾರಿಗಳು ಪದೇ ಪದೇ ವಿದ್ಯುತ್ ವ್ಯತ್ಯಯದಿಂದಾಗಿ ವಿ.ವಿ.ಸಾಗರದಿಂದ ನೀರು ಎತ್ತಲು ಸಾಧ್ಯವಾಗುತ್ತಿಲ್ಲ ಎಂಬುದಾಗಿ ನೆಪ ಹೇಳುತ್ತಿದ್ದಾರೆ. ಆದರೆ ತಿಂಗಳಿನಲ್ಲಿ ಕೆಲ ದಿನಗಳು ಮಾತ್ರ ದಿನಕ್ಕೆ ಅರ್ಧ ಗಂಟೆ ಅಥವಾ ಒಂದು



ಗಂಟೆಯಷ್ಟೇ ವಿದ್ಯುತ್ ವ್ಯತ್ಯಯವಾಗಿದೆ. ಇದು ನಗರದಲ್ಲಿ 15 ದಿನಗಳ ಕಾಲ ನೀರು ಸಬರಾಜು ಮಾಡದೇ ಇರಲು ಕಾರಣವಾಗಲು ಸಾಧ್ಯವಿಲ್ಲ, ನಗರ ಸಭೆಯಲ್ಲಿ ಅಧಿಕಾರಿಗಳು ಯಾರು ಹಣ ನೀಡುತ್ತಾರೋ ಅವರಿಗೆ ಮಾತ್ರ ಸರಿಯಾಗಿ ನೀರು ಬಿಡುತ್ತಾರೆ ಎಂಬ ದೂರುಗಳು ಕೇಳಿಬರುತ್ತಿವೆ. ಇಂತಹ ತಾರತಮ್ಯ ಎಸಗುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ರೈಸಿಂಗ್ ಮೇನ್ ಪೈಪ್‌ಲೈನ್‌ಗಳಿಗೆ ಅಕ್ರಮವಾಗಿ ಕನೆಕ್ಷನ್ ಪಡೆದಿರುವುದು ಮತ್ತು ರೈತರು ನೇರವಾಗಿ ಮೋಟಾರ್ ಹಚ್ಚಿ ನೀರು ಪಡೆಯುತ್ತಿರುವುದು ನಗರಕ್ಕೆ ನೀರು ತಲುಪಲು ಅಡ್ಡಿಯಾಗುತ್ತಿದೆ ಎಂಬ ವಿಷಯ ಸಭೆಯಲ್ಲಿ ಚರ್ಚೆಗೆ ಬಂತು. ಅಕ್ರಮ ಕನೆಕ್ಷನ್ ಕಡಿತಗೊಳಿಸಲು ಪೊಲೀಸ್ ಬಂದೋಬಸ್ತ್‌ನೊಂದಿಗೆ ತಹಶೀಲ್ದಾರ್ ಹಾಗೂ ನಗರಸಭೆ ಅಧಿಕಾರಿಗಳು ಜಂಟಿ ಕಾರ್ಯಾಚರಣೆ ನಡೆಸಬೇಕು. ರಾತ್ರಿ ವೇಳೆ ಕಳ್ಳತನದಿಂದ ನೀರು ಪಡೆಯುವವರ ಮೇಲೆ ನಿಗಾ ಇಡಬೇಕು ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಸೂಚಿಸಿದರು.

ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾದಾಗ ಅದನ್ನು ಸರಿಪಡಿಸಲು ನಿರಂತರವಾಗಿ ಕೆಲಸ ಮಾಡಬೇಕು. ವಿದ್ಯುತ್ ಸಮಸ್ಯೆಯಿಂದ ಕುಡಿಯುವ ನೀರಿನ ಪೂರೈಕೆಯಲ್ಲಿ ವ್ಯತ್ಯಯವಾದರೆ, ಇನ್ನು ಮುಂದೆ ತಕ್ಷಣವೇ ವಿದ್ಯುತ್ ಸಂಪರ್ಕವನ್ನು ಪುನಸ್ಥಾಪಿಸಿ ನೀರು ಸರಬರಾಜು ಮಾಡಬೇಕು ಎಂದು ಹೇಳಿದರು.

ಸಭೆಯಲ್ಲಿ ಬಿ.ಟಿ.ಕುಮಾರಸ್ವಾಮಿ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ರೇಷ್ಮಾ ಹಾನಗಲ್, ನಗರಸಭೆ ಆಯುಕ್ತ ಲಕ್ಷ್ಮೀ, ಕುಡಿಯುವ ನೀರು ಪೂರೈಕೆ ಸಂಬಂಧಿಸಿದ ಎಇಇ ರಾಜು ಸೇರಿದಂತೆ ಮತ್ತಿತರರು ಹಾಜರಿದ್ದರು.

ಬಿಸಿಎಂ ಇಲಾಖೆ ಅಧಿಕಾರಿ ಪುಷ್ಪಲತಾ ಭವಿಮಠ ಸಲಹೆ

# ಮಹಿಳೆಯರು ಆರ್ಥಿಕ ಸ್ವಾವಲಂಬಿಗಳಾಬೇಕು

• **ಚಿತ್ರದುರ್ಗ:** ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾದಾಗ ಮಾತ್ರ ಜೀವನದಲ್ಲಿ ಎದುರಾಗುವ ಸಮಸ್ಯೆ ಸವಾಲುಗಳನ್ನು ಸಮರ್ಥವಾಗಿ ನಿಭಾಯಿಸಬಹುದು ಎಂದು ಬಿ.ಸಿ.ಎಂ. ಇಲಾಖೆ ಅಧಿಕಾರಿ ಪುಷ್ಪಲತಾ ಭವಿಮಠ ಕರೆ ನೀಡಿದರು.

ಸರಸ್ವತಿ ಕಾನೂನು ಕಾಲೇಜು, ಮಹಿಳಾ ಸಬಲೀಕರಣ ಕೋಶ, ಐಕ್ಯುಎಸಿ ವತಿಯಿಂದ ಕಾಲೇಜಿನ ಡೈಮಂಡ್ ಜ್ಯೂಬಿಲಿ ಆಡಿಟೋರಿಯಂನಲ್ಲಿ ನಡೆದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ಕುಟುಂಬ ನಿರ್ವಹಣೆ ಜೊತೆ ಮಹಿಳೆ ಹೊರಗಡೆಯೂ ದುಡಿಯುವಂತ ಪರಿಸ್ಥಿತಿ ನಿರ್ಮಾಣವಾಗಿದೆ. 21 ನೇ ಶತಮಾನದಲ್ಲಿ ಮಹಿಳೆ ಎಲ್ಲಾ ರಂಗದಲ್ಲಿಯೂ ಪುರುಷರಿಗೆ ಸರಿಸಮಾನಳಾಗಿದ್ದಾಳೆ. ಮಹಿಳೆ ಅಡುಗೆ ಮನೆಗೆ ಮಾತ್ರ ಸೀಮಿತ ಎನ್ನುವ ಕೀಳರಿಮೆ ಬೇಡ. ಆರ್ಥಿಕ ಸಂಕಷ್ಟಗಳನ್ನು ಎದುರಿಸಿ ಯಶಸ್ಸು ಸಾಧಿಸಿರುವ ಅನೇಕ ವಿದ್ಯಾರ್ಥಿಗಳು ಕಣ್ಣ ಮುಂದಿದ್ದಾರೆಂದು ಹೇಳಿದರು.

ಸರಸ್ವತಿ ಕಾನೂನು ಕಾಲೇಜು ಪ್ರಾಂಶುಪಾಲರಾದ ಡಾ.ಎಂ.ಎಸ್. ಸುಧಾದೇವಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಸದೃಢ ಸಮಾಜ ನಿರ್ಮಾಣವಾಗಬೇಕಾದರೆ ಮಹಿಳೆಯರ ಪಾತ್ರವು ಮುಖ್ಯ. ಇತ್ತೀಚಿನ ದಿನಗಳಲ್ಲಿ ಎಲ್ಲಾ ರಂಗಗಳಲ್ಲಿಯೂ ಮಹಿಳೆ ಮುಂಚೂಣಿಯಲ್ಲಿದ್ದಾಳೆ. ಪುರುಷ-ಮಹಿಳೆ ಎನ್ನುವ ವ್ಯತ್ಯಾಸ ಸರಿಯಲ್ಲ, ಇಬ್ಬರು ಸಮಾನರು ಎಂದರು.



ಐಕ್ಯೂಎಸಿ ಸಂಯೋಜಕರು ಹಾಗೂ ಸಹಾಯಕ ಪ್ರಾಧ್ಯಾಪಕರಾದ ಡಾ.ಎನ್.ಡಿ.ಗೌಡ, ಸಹಾಯಕ ಪ್ರಾಧ್ಯಾಪಕಿ ಹರ್ಷ ಎಸ್.ಎಂ. ಇವರುಗಳು ವೇದಿಕೆಯಲ್ಲಿದ್ದರು.

ಕಾನೂನು ವಿದ್ಯಾರ್ಥಿನಿ ಮಾನಸ ಮತ್ತು ತಂಡದವರು ಪ್ರಾರ್ಥಿಸಿದರು. ಮೇಘನಾ ಬಿ.ಸಿ. ಸ್ವಾಗತಿಸಿದರು. ಮಾನಸ ಬಿ.ಎಂ. ವಂದಿಸಿದರು. ಸಹಾಯಕ ಪ್ರಾಧ್ಯಾಪಕಿ ಅಭಿನೇತ್ರಿ ಪಟವರ್ಧನ್ ಕಾರ್ಯಕ್ರಮ ನಿರೂಪಿಸಿದರು. ದೈಹಿಕ ಶಿಕ್ಷಣ ನಿರ್ದೇಶಕ ಪಿ.ಸಿ.ಮುರುಗೇಶ್ ಪ್ರತಿಜ್ಞಾವಿಧಿ ಬೋಧಿಸಿದರು.

## ಕಿರುಸುದ್ದಿ

### ಅಡಿಕೆ ಧಾರಣೆ

| ಶಿವಮೊಗ್ಗ | ಸಾಗರ |
|---|---|
| ಸರಕು-53,100-95, 410 | ರಾಶಿ-34,989-51,689 |
| ರಾಶಿ-41,366-58,009 | ಚಾಲಿ-41,877-41,877 |
| ಬೆಟ್ಟೆ-46,166-63,300 | ಕೆಂಪುಗೋಟು-23,999-37,199 |
| ಗೊರಬಲು-19,000-40,089 | ಬಿಳಿಗೋಟು-29,899-30,266 |
| | ಸಿಪ್ಪೆಗೋಟು-21,319-21,515 |



ಶಿವಮೊಗ್ಗ ವಿದ್ಯಾನಗರದ ದುರ್ಗಮ್ಮ ಜಾತ್ರೆ ನಿಮಿತ್ತ ಆಯೋಜಿಸಿದ್ದ ರಾಜ್ಯಮಟ್ಟದ ಕುಸ್ತಿ ಪಂದ್ಯಾವಳಿಯ ಫೈನಲ್ ಪಂದ್ಯದಲ್ಲಿ ವಿದ್ಯಾನಗರದ ಕುಸ್ತಿ ಪಟು ವರುಣ್ ಮತ್ತು ಪಂಜಾಬಿನ ವಿಶ್ವಜಿತ್ ನಡುವೆ ಪಂದ್ಯದಲ್ಲಿ ಶಿವಮೊಗ್ಗ ವಿದ್ಯಾನಗರದ ವರಣ್ ವಿಜೇತರಾಗಿ ಬೆಳ್ಳಿ ಗದೆಯನ್ನು ಗೆದ್ದರು. ಸಮಿತಿಯ ಪ್ರಮುಖರಿದ್ದರು.

## ದೇವರ ದಾಸಿಮಯ್ಯ ಜಯಂತಿ

• **ಶಿವಮೊಗ್ಗ:** ಜಿಲ್ಲಾಡಳಿತ, ಜಿಪಂ, ಮಹಾನಗರಪಾಲಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನೇಕಾರ ಸಮುದಾಯಗಳ ಒಕ್ಕೂಟ ಇವರ ಸಂಯುಕ್ತಾಶ್ರಯದಲ್ಲಿ ಮಾ. 23 ರ ಬೆಳಿಗ್ಗೆ 11 ಗಂಟೆಗೆ ನಗರದ ಕುವೆಂಪು ರಂಗಮಂದಿರದಲ್ಲಿ ದೇವರ ದಾಸಿಮಯ್ಯ ಜಯಂತಿ ಏರ್ಪಡಿಸಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಎಸ್. ಮಧುಬಂಗಾರಪ್ಪ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಎಸ್. ಎನ್. ಚನ್ನಬಸಪ್ಪ ಅಧ್ಯಕ್ಷತೆ ವಹಿಸುವರು. ಜನಪ್ರತಿನಿಧಿಗಳು, ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಜಿ.ಪಂ ಸಿಇಓ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಹಾಗೂ ಮಹಾನಗರ ಪಾಲಿಕೆ ಆಯುಕ್ತರು ಮತ್ತು ಇನ್ನಿತರ ಗಣ್ಯರು, ಅಧಿಕಾರಿಗಳು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.



**ಶಿವಮೊಗ್ಗ : ನಗರದ ದುರ್ಗಿಗುಡಿ ಪಾರ್ಕ್ ಬಡಾವಣೆ ಅಧ್ಯಯನ ಕೇಂದ್ರದ ಯುವಕರು ಪುನೀತ್‌ರಾಜ್‌ಕುಮಾರ್ ಹುಟ್ಟುಹಬ್ಬವನ್ನು ಮಂಗಳವಾರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಆಚರಿಸಿದರು. ಬಳಿಕ ನೂರಾರು ಜನರಿಗೆ ಮಧ್ಯಾಹ್ನದ ಉಪಹಾರದ ವ್ಯವಸ್ಥೆ ಮಾಡಿದ್ದರು. ಈ ಸಂದರ್ಭದಲ್ಲಿ ಬಸವರಾಜ್, ದೀಪಕ್, ವೀರೇಶ್, ರಾಮು, ಲಿಂಗರಾಜು, ನಾಗರಾಜ್, ಚಂದ್ರು, ಮನೋಜ್ ಮತ್ತಿತರರಿದ್ದರು.**

## ವಾಹನಗಳ ಬಹಿರಂಗ ಹರಾಜು

• **ಶಿವಮೊಗ್ಗ :** ಜಿಲ್ಲಾ ಅಬಕಾರಿ ನಿರೀಕ್ಷಕರ ಕಚೇರಿ ವತಿಯಿಂದ ಮಾ.23 ರ ಬೆಳಿಗ್ಗೆ 11 ಗಂಟೆಗೆ ಒಂದನೇ ವಲಯದ ಅಬಕಾರಿ ಭವನ ಆವರಣದಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡಿರುವ 1 ದ್ವಿ ಚಕ್ರ ವಾಹನ, 1 ನಾಲ್ಕು ಚಕ್ರದ ವಾಹನವನ್ನು ಯಥಾಸ್ಥಿತಿಯಾಗಿ ಬಹಿರಂಗ ಹರಾಜು ಮಾಡಲಾಗುವುದು. ಆಸಕ್ತರು ನಿಗದಿತ ಅವಧಿಯಲ್ಲಿ ಬಹಿರಂಗ ಹರಾಜು ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಂತೆ ಹಾಗೂ ಕಚೇರಿ ವೇಳೆಯಲ್ಲಿ ವಾಹನವನ್ನು ವೀಕ್ಷಿಸಬಹುದು ಎಂದು ಅಬಕಾರಿ ನಿರೀಕ್ಷಕರು ತಿಳಿಸಿದ್ದಾರೆ.

## ಮಾ. 27: ನಿಧಿ ಆಪ್ಕೆ ನಿಕಟ್ ಕಾರ್ಯಕ್ರಮ

• **ಶಿವಮೊಗ್ಗ :** ಪ್ರಾದೇಶಿಕ ಭವಿಷ್ಯ ನಿಧಿ ಕಚೇರಿ ವತಿಯಿಂದ ನಿಧಿ ಆಪ್ಕೆ ನಿಕಟ್ 2.0 ಕಾರ್ಯಕ್ರಮವನ್ನು ಶಿವಮೊಗ್ಗ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಮಾ. 27 ರಂದು ಆಯೋಜಿಸಲಾಗಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ತೀರ್ಥಹಳ್ಳಿ ತಾಲೂಕು ಪಟ್ಟಣ ಪಂಚಾಯತ್ ಸಭಾಂಗಣದಲ್ಲಿ ಹಾಗೂ ದಾವಣಗೆರೆ ಜಿಲ್ಲೆಯಲ್ಲಿ ಅಧಿಕಶ್ರೀ ಕಾರ್ಸ್ ಅವರಗೆರೆ, ಓಲ್ಡ್ ಪಿಬಿ ರಸ್ತೆ, ದಾವಣಗೆರೆ ಇಲ್ಲಿ ನಿಧಿ ಆಪ್ಕೆ ನಿಕಟ್ ಕಾರ್ಯಕ್ರಮ ನಡೆಯಲಿದೆ. ಉದ್ಯೋಗದಾತರು ಮತ್ತು ಉದ್ಯೋಗಿಗಳಿಗೆ ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ಗಂಟೆ ಹಾಗೂ ಪಿಂಚಣಿದಾರರಿಗೆ ಮಧ್ಯಾಹ್ನ 2.30 ರಿಂದ ಸಂಜೆ 4 ಗಂಟೆವರೆಗೆ ನಿಧಿ ಆಪ್ಕೆ ನಿಕಟ್ ಕಾರ್ಯಕ್ರಮ ನಡೆಯಲಿದ್ದು ಉದ್ಯೋಗದಾತರು ಮತ್ತು ಉದ್ಯೋಗಿಗಳು ಮತ್ತು ಪಿಂಚಣಿದಾರರು ಈ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳುವಂತೆ ಪ್ರಾದೇಶಿಕ ಕಚೇರಿಯ ಸಹಾಯಕ ಭವಿಷ್ಯ ನಿಧಿ ಆಯುಕ್ತರು ತಿಳಿಸಿದ್ದಾರೆ.

## ಹೆಜ್ಜೇನು ದಾಳಿ: ಹಲವರಿಗೆ ಗಾಯ

• **ರಿಪ್ಪನ್ ಪೇಟೆ:** ಸಾಗರ ರಸ್ತೆಯ ಎಸ್‌ಬಿಐ ಸಮೀಪ ಮಂಗಳವಾರ ಹೆಜ್ಜೇನು ದಾಳಿ ನಡೆಸಿದ ಘಟನೆ ಸಂಭವಿಸಿದೆ. ಶಾಲಾ, ಕಾಲೇಜು ವಿದ್ಯಾರ್ಥಿಗಳು ಸೇರಿದಂತೆ ಹಲವರಿಗೆ ಚುಚ್ಚಿದ್ದು, ಎಸ್‌ಎಸ್‌ಎಲ್‌ಸಿ ಹಾಲ್ ಟಿಕೆಟ್ ಪಡೆಯಲು ಹೋಗುತ್ತಿದ್ದವರೂ ಒಳಗೊಂಡಿದ್ದಾರೆ. ಎಸ್ಬಿಐ ಬ್ಯಾಂಕ್ ಉದ್ಯೋಗಿ ತೌಸಿಫ್ ಅವರಿಗೆ ಗಂಭೀರ ಗಾಯವಾಗಿದ್ದು ಪ್ರಾಥಮಿಕ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆಗೆ ರವಾನಿಸಲಾಗಿದೆ.

## ಮಾ.21 ರಿಂದ ನಾಟಕ ಪ್ರದರ್ಶನ

• **ತೀರ್ಥಹಳ್ಳಿ :** ಸಮಾಜವಾದಿ ಚಿಂತಕ ಹಾಗೂ ಮೇರು ಸಮಾಜವಾದಿ ಶಾಂತವೇರಿ ಗೋಪಾಲಗೌಡರ ಗುರು ರಾಮಮನೋಹರ ಲೋಹಿಯಾ ಅವರ ಚಿಂತನೆಗಳನ್ನು ಆಧರಿಸಿದ ರಾಮ - ಕೃಷ್ಣ - ಶಿವ ನಾಟಕ ಮಾರ್ಚ್ 20ರಂದು ಇಲ್ಲಿನ ಶಾಂತವೇರಿ ಗೋಪಾಲಗೌಡ ರಂಗಮಂದಿರದಲ್ಲಿ ಪ್ರದರ್ಶನಗೊಳ್ಳಲಿದೆ. ಈ ನಾಟಕವನ್ನು ಗಣೇಶ್ ಮಂದಾರ್ತಿ ನಿರ್ದೇಶಿಸಿದ್ದು, ನಟ ಹಾಗೂ ರಂಗಕರ್ಮಿ ಪ್ರಕಾಶ್ ರೈ ನೇತೃತ್ವದ ನಿರ್ದಿಗಂತ ತಂಡ ಅಭಿನಯಿಸಲಿದೆ. 21ರಂದು ನಟಮಿತ್ರರು ತಂಡದ ಹುಲುಗಪ್ಪ ಕಟ್ಟೀಮನಿ ನಿರ್ದೇಶನದ ಆ ಊರು ಈ ಊರು ನಾಟಕದ 15ನೇ ಪ್ರದರ್ಶನವನ್ನು ಆಯೋಜಿಸಲಾಗಿದೆ. 22 ರಂದು ಬೆಂಗಳೂರಿನ ರಾಷ್ಟ್ರೀಯ ನಾಟಕಶಾಲೆಯ ವೀಣಾ ಶರ್ಮಾ ಭೂಸನೂರುಮಠ ನಿರ್ದೇಶನದ ಈ ಕೆಳಗಿನವರು ನಾಟಕ ಪ್ರದರ್ಶನವಾಗಲಿದೆ. ಎಲ್ಲಾ ನಾಟಕಗಳು ಪ್ರತಿದಿನ ಸಂಜೆ 6.30ಕ್ಕೆ ಸರಿಯಾಗಿ ಆರಂಭಗೊಳ್ಳಲಿದೆ ಎಂದು ಮಾಜಿ ರಂಗಾಯಣ ನಿರ್ದೇಶಕ, ನಟಮಿತ್ರರು ಹವ್ಯಾಸಿ ಕಲಾ ಸಂಘದ ಅಧ್ಯಕ್ಷ ಸಂದೇಶ ಜವಳಿ ಹೇಳಿದ್ದಾರೆ.

## ಗರ್ತಿಕೆರೆ ಬಳಿ ಕಾರು-ಬೈಕ್ ಡಿಕ್ಕಿ: ಸವಾರನ ತಲೆಗೆ ಗಂಭೀರ ಗಾಯ

• **ರಿಪ್ಪನ್ಪೇಟೆ:** ಪಟ್ಟಣದ ಸಮೀಪದ ಗರ್ತಿಕೆರೆ ಕಾಲೇಜು ಮುಂಭಾಗದಲ್ಲಿ ಕಾರು ಹಾಗೂ ಬೈಕ್ ನಡುವೆ ಸಂಭವಿಸಿದ ಅಪಘಾತದಲ್ಲಿ ಬೈಕ್ ಸವಾರನೊಬ್ಬ ಗಂಭೀರವಾಗಿ ಗಾಯಗೊಂಡ ಘಟನೆ ನಡೆದಿದೆ. ಗರ್ತಿಕೆರೆ ಸಮೀಪದ ಹೊಳೆಕೇವಿ ಗ್ರಾಮದ ನಿವಾಸಿ ರಾಜು ಗಾಯಗೊಂಡ ವ್ಯಕ್ತಿ ಎಂದು ತಿಳಿದುಬಂದಿದೆ. ಅವರು ಬೈಕ್ನಲ್ಲಿ ಸಾಗುತ್ತಿದ್ದ ವೇಳೆ ಎದುರು ದಿಕ್ಕಿನಿಂದ ಬರುತ್ತಿದ್ದ ಸಾಗರ ಮೂಲದ ಕ್ರೇಟಾ ಕಾರು ಹಾಗೂ ಬೈಕ್ ನಡುವೆ ಡಿಕ್ಕಿ ಸಂಭವಿಸಿದೆ ಎನ್ನಲಾಗಿದೆ. ಡಿಕ್ಕಿ ಪರಿಣಾಮ ರಾಜು ರಸ್ತೆ ಮೇಲೆ ಬಿದ್ದು ತಲೆಗೆ ಗಂಭೀರ ಪೆಟ್ಟಾಗಿದ್ದು, ಅಪಘಾತದ ಸುದ್ದಿ ತಿಳಿದು ಸ್ಥಳೀಯರು ಕೂಡಲೇ ಸಹಾಯಕ್ಕೆ ಧಾವಿಸಿ ಗಾಯಾಳುವಿನ ರಕ್ಷಣೆಗೆ ಮುಂದಾದರು. ಪ್ರಾಥಮಿಕ ಚಿಕಿತ್ಸೆ ಬಳಿಕ ತಲೆಗೆ ಗಂಭೀರ ಗಾಯವಾಗಿರುವ ಹಿನ್ನೆಲೆ ಗಾಯಾಳುವನ್ನು ಹೆಚ್ಚಿನ ಚಿಕಿತ್ಸೆಗಾಗಿ ಆಂಬುಲೆನ್ಸ್ ಮೂಲಕ ಶಿವಮೊಗ್ಗದ ಆಸ್ಪತ್ರೆಗೆ ರವಾನಿಸಲಾಗಿದೆ. ಘಟನೆಯ ಸಂಬಂಧ ರಿಪ್ಪನ್ಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಅಪಘಾತದ ಕುರಿತು ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

### ಏಪ್ರಿಲ್ 4ರವರೆಗೆ ಪರೀಕ್ಷೆ | ಒಟ್ಟು 23,262 ವಿದ್ಯಾರ್ಥಿಗಳು | 79 ಸ್ಥಾನಿಕ ಜಾಗೃತ ದಳದ ಅಧಿಕಾರಿಗಳ ನೇಮಕ

# ಇಂದಿನಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಆರಂಭ

• **ಶಿವಮೊಗ್ಗ :** ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬುಧವಾರದಿಂದ ಆರಂಭವಾಗಲಿದ್ದು, ಜಿಲ್ಲೆಯಲ್ಲಿ ಒಟ್ಟು 79 ಪರೀಕ್ಷಾ ಕೇಂದ್ರಗಳನ್ನು ಗುರುತಿಸಲಾಗಿದೆ.

ಬುಧವಾರದಿಂದ ಆರಂಭವಾಗಿ ಏಪ್ರಿಲ್ 04 ರವರೆಗೆ ಜಿಲ್ಲೆಯ ಒಟ್ಟು 79 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯುತ್ತದೆ. ಭದ್ರಾವತಿ 15, ಹೊಸನಗರ 07, ಸಾಗರ 09, ಶಿಕಾರಿಪುರ 11, ಶಿವಮೊಗ್ಗ 20, ಸೊರಬ 10 ಮತ್ತು ತೀರ್ಥಹಳ್ಳಿ 07 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆಯಲಿವೆ. ಒಟ್ಟು 23,262 ವಿದ್ಯಾರ್ಥಿಗಳು ಪರೀಕ್ಷೆ ಬರೆಯುತ್ತಿದ್ದಾರೆ.

ಮಂಗಳವಾರ ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳ ಪ್ರವೇಶಪತ್ರ ಸಂಖ್ಯೆಯನ್ನು ನಮೂದಿಸುವ ಪ್ರಕ್ರಿಯೆ ನಡೆಯಿತು. ಪರೀಕ್ಷಾ ಅವ್ಯವಹಾರವನ್ನು ತಡೆಗಟ್ಟಲು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ, ವಿಚಕ್ಷಣ ದಳದ 3 ತಂಡಗಳನ್ನು ರಚನೆ ಮಾಡಲಾಗಿದೆ. ಡಯಟ್ ನಿಂದ ಜಾಗೃತದಳ ನೇಮಕ ಮಾಡಲಾಗಿದೆ. ಪ್ರತಿಯೊಂದು ಕೇಂದ್ರಕ್ಕೂ ಇತರ ಇಲಾಖೆಗಳಿಂದ ವೀಕ್ಷಕರನ್ನು ನಿಯೋಜಿಸಿದೆ.

ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳಿಗೆ ಕುಡಿಯುವ ನೀರು, ಸೂಕ್ತ ಆಸನ ವ್ಯವಸ್ಥೆ ಮಾಡಬೇಕು. ಹಾಗೂ ಒತ್ತಡ ರಹಿತ ವಾತಾವರಣ ನಿರ್ಮಿಸಬೇಕು ಎಂದು ಜಿಲ್ಲಾಧಿಕಾರಿ ಪ್ರಭುಲಿಂಗ ಕವಳಿಕಟ್ಟಿ ಸೂಚಿಸಿದ್ದಾರೆ. ಎಲ್ಲಾ ಕೇಂದ್ರಗಳಲ್ಲಿ ಸಿಸಿ ಕ್ಯಾಮರಾ ಅಳವಡಿಸಲಾಗಿದೆ.

ವೆಬ್ ಕ್ಯಾಸ್ಟಿಂಗ್ ಪ್ರಕ್ರಿಯೆ ಸಮರ್ಪಕವಾಗಿ ನಡೆಯಲು ಪೂರ್ವಭಾವಿಯಾಗಿ ಡ್ರೈ ರನ್ ನಡೆಸಲಾಗಿದ್ದು, ಮತ್ತೊಮ್ಮೆ ಇಂಟರ್‌ನೆಟ್ ವ್ಯವಸ್ಥೆ ಯುಪಿಎಸ್ ಬಗ್ಗೆ ಖಾತ್ರಿ ಪಡಿಸಿಕೊಳ್ಳಬೇಕೆಂದು ಜಿಲ್ಲಾಧಿಕಾರಿಗಳು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಪರೀಕ್ಷೆಗೆ 31 ಮಾರ್ಗ ರಚಿಸಲಾಗಿದೆ. ಈ ಮಾರ್ಗಗಳಿಗೆ ಮಾರ್ಗಾಧಿಕಾರಿಗಳನ್ನು ನೇಮಿಸಲಾಗಿದೆ. 79 ಸ್ಥಾನಿಕ ಜಾಗೃತ ದಳದ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ. ವಿದ್ಯಾರ್ಥಿಗಳು ಸುಸೂತ್ರವಾಗಿ ಪರೀಕ್ಷಾ ಕೇಂದ್ರಗಳಿಗೆ ಹಾಜರಾಗಲು ಸಾರಿಗೆ ವ್ಯವಸ್ಥೆ ಮಾಡಲಾಗಿದೆ.



- » ಪರೀಕ್ಷಾ ಕೇಂದ್ರಗಳ ಸುತ್ತ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿ
- » ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ಸೈಬರ್ ಮತ್ತು ಜೆರಾಕ್ಸ್ ಅಂಗಡಿ ಬಂದ್‌ಗೆ ಆದೇಶ
- » ವಿದ್ಯಾರ್ಥಿಗಳು ಯಾವುದೇ ರೀತಿಯ ಎಲೆಕ್ಟ್ರಾನಿಕ್ ವಸ್ತುಗಳನ್ನು ಪರೀಕ್ಷಾ ಕೇಂದ್ರಗಳಿಗೆ ತರುವಂತಿಲ್ಲ.

ಪರೀಕ್ಷಾ ಕೇಂದ್ರಗಳಿಗೆ ನಿರಂತರ ವಿದ್ಯುತ್ ಸಂಪರ್ಕವನ್ನು ಮೆಸ್ಕಾಂ ಒದಗಿಸುವಂತೆ ಹಾಗೂ ಪರೀಕ್ಷಾ ಕೇಂದ್ರಗಳಿಗೆ ಅಗತ್ಯ ಪೊಲೀಸ್ ಬಂದೋಬಸ್ತ್ ಮಾಡಲು ಜಿಲ್ಲಾಧಿಕಾರಿಗಳು ಸೂಚಿಸಿದ್ದಾರೆ. ಪರೀಕ್ಷಾ ಕೇಂದ್ರಗಳ ಸುತ್ತ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿ, ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ಸೈಬರ್ ಮತ್ತು ಜೆರಾಕ್ಸ್ ಅಂಗಡಿಗಳು ಕಾರ್ಯ ನಿರ್ವಹಿಸದಂತೆ ಆದೇಶಿಸಲಾಗಿದೆ.

ವಿದ್ಯಾರ್ಥಿಗಳು ಯಾವುದೇ ರೀತಿಯ ಎಲೆಕ್ಟ್ರಾನಿಕ್ ವಸ್ತುಗಳನ್ನು ಪರೀಕ್ಷಾ ಕೇಂದ್ರಗಳಿಗೆ ತರುವಂತಿಲ್ಲ, ಈ ಬಗ್ಗೆ ಸೂಕ್ತವಾಗಿ ಪರಿಶೀಲನೆ ನಡೆಸಲಿದೆ. ಪರೀಕ್ಷಾ ಕೇಂದ್ರಗಳಲ್ಲಿ ಯಾವುದೇ ರೀತಿಯ ಅವ್ಯವಹಾರ ಆಗದಂತೆ ಪಾರದರ್ಶಕವಾಗಿ ಪರೀಕ್ಷೆ ನಡೆಯುವಂತೆ ಅಧಿಕಾರಿಗಳು ನೋಡಿಕೊಳ್ಳಬೇಕೆಂದು ಡಿಸಿ ಸೂಚಿಸಿದ್ದಾರೆ.

## ತಾಲೂಕಿನ 7 ಕೇಂದ್ರಗಳಲ್ಲಿ ಪರೀಕ್ಷೆಗೆ ಸಕಲ ಸಿದ್ಧತೆ

• **ಹೊಸನಗರ:** ತಾಲೂಕಿನ ನಾಲ್ಕು ಹೋಬಳಿಗಳಲ್ಲಿ ಒಟ್ಟು ಏಳು ಪರೀಕ್ಷಾ ಕೇಂದ್ರಗಳಲ್ಲಿ ಮಾರ್ಚ್ 18ರಿಂದ ಏಪ್ರಿಲ್ 2ರವರೆಗೆ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಗಳು ನಡೆಯಲಿದ್ದು, ಶಿಕ್ಷಣ ಇಲಾಖೆ ಸಮಗ್ರ ಸಿದ್ಧತೆಗಳನ್ನು ಪೂರ್ಣಗೊಳಿಸಿದೆ.

ಈ ಬಾರಿ 1,566 ಹೊಸ ವಿದ್ಯಾರ್ಥಿಗಳು ಹಾಗೂ 41 ಪುನರಾವರ್ತಿತ ವಿದ್ಯಾರ್ಥಿಗಳನ್ನು ಒಳಗೊಂಡು ಒಟ್ಟು 1,607 ಮಂದಿ ಪರೀಕ್ಷೆಗೆ ಹಾಜರಾಗಲಿದ್ದಾರೆ. ವಿದ್ಯಾರ್ಥಿಗಳ ಭವಿಷ್ಯ ನಿರ್ಧರಿಸುವ ಮಹತ್ವದ ಪರೀಕ್ಷೆಯಾಗಿರುವುದರಿಂದ ಯಾವುದೇ ಅಡಚಣೆ ಆಗದಂತೆ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಪ್ರತಿಯೊಂದು ಪರೀಕ್ಷಾ ಕೇಂದ್ರಕ್ಕೂ ತಾಲೂಕು ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಪರೀಕ್ಷಾ ಮೇಲ್ವಿಚಾರಕರಾಗಿ ನೇಮಕ ಮಾಡಲಾಗಿದೆ.

**ಬಿಗಿ ಭದ್ರತೆ :** ಪರೀಕ್ಷೆಗಳು ಪಾರದರ್ಶಕ ಹಾಗೂ ನಿಷ್ಪಕ್ಷಪಾತವಾಗಿ ನಡೆಯುವಂತೆ ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ ಕಣ್ಗಾವಲು ವ್ಯವಸ್ಥೆ ಕಲ್ಪಿಸಲಾಗಿದೆ. ಜೊತೆಗೆ ತಾಲೂಕು ಮಟ್ಟದ ಕ್ಷೇತ್ರ ಸಂಪನ್ಮೂಲ ಕೇಂದ್ರದಿಂದ ಪ್ರತಿಯೊಂದು ಪರೀಕ್ಷಾ ಕೇಂದ್ರದ ವೆಬ್ಕಾಸ್ಟಿಂಗ್ ವ್ಯವಸ್ಥೆಯೂ ಜಾರಿಯಲ್ಲಿದ್ದು, ನಿರಂತರ ನಿಗಾವಹಿಸಲಾಗುತ್ತಿದೆ.

> **ಪರೀಕ್ಷೆಗಳು ಪಾರದರ್ಶಕವಾಗಿ ನಡೆಯಲು ಎಲ್ಲಾ ಸಿದ್ಧತೆ ಪೂರ್ಣಗೊಳಿಸಲಾಗಿದೆ. ವಿದ್ಯಾರ್ಥಿಗಳು ಆತ್ಮವಿಶ್ವಾಸದಿಂದ ಪರೀಕ್ಷೆಗೆ ಹಾಜರಾಗಬೇಕು.**
> ■ ಗಣೇಶ್, ಕ್ಷೇತ್ರ ಶಿಕ್ಷಣಾಧಿಕಾರಿ, ಹೊಸನಗರ

ಪರೀಕ್ಷಾ ಸಮಯದಲ್ಲಿ ನಿಯಮ ಉಲ್ಲಂಘನೆ ಆಗದಂತೆ ಜಾಗೃತಿ ಮೂಡಿಸಲಾಗಿದ್ದು, ವಿದ್ಯಾರ್ಥಿಗಳು ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಲಾಗಿದೆ. ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಸುಸಜ್ಜಿತ ವ್ಯವಸ್ಥೆ ಇರುವುದರಿಂದ ಪರೀಕ್ಷೆಗಳು ಸುಗಮವಾಗಿ ನಡೆಯಲಿವೆ ಎಂಬ ವಿಶ್ವಾಸವನ್ನು ಅಧಿಕಾರಿಗಳು ವ್ಯಕ್ತಪಡಿಸಿದ್ದಾರೆ.

## 9 ಕೇಂದ್ರಗಳಲ್ಲಿ ಪರೀಕ್ಷೆ

• **ಸಾಗರ :** ಮಾ.18ರಿಂದ ಏ.2ರವರೆಗೆ ನಡೆಯುವ ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಯಲಿದ್ದು, ತಾಲ್ಲೂಕಿನಲ್ಲಿ ಒಟ್ಟು 3023 ವಿದ್ಯಾರ್ಥಿಗಳು ಪರೀಕ್ಷೆ ಎದುರಿಸಲಿದ್ದಾರೆ. ಈ ಪೈಕಿ 2920 ಹೊಸ ವಿದ್ಯಾರ್ಥಿಗಳು, 103 ಪುನರಾವರ್ತಿತ ವಿದ್ಯಾರ್ಥಿಗಳು ಇದ್ದಾರೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಸದಾನಂದ ಸ್ವಾಮಿ ತಿಳಿಸಿದ್ದಾರೆ.

ಮಾ. 18ರಂದು ಬೆಳಿಗ್ಗೆ 10ರಿಂದ ಪ್ರಥಮ ಭಾಷೆ, ಮಾ. 23ರಂದು ಬೆಳಿಗ್ಗೆ 10ರಿಂದ ವಿಜ್ಞಾನ, ಮಾ. 25ರಂದು ದ್ವಿತೀಯ ಭಾಷೆ, ಮಾ. 28ರಂದು ಬೆಳಿಗ್ಗೆ 10ರಿಂದ ಗಣಿತ, ಮಾ. 30ರಂದು ತೃತೀಯ ಭಾಷೆ, ಏ. 2ರಂದು ಬೆಳಿಗ್ಗೆ 10ರಿಂದ ಸಮಾಜ ವಿಜ್ಞಾನ ವಿಷಯದಲ್ಲಿ ಪರೀಕ್ಷೆಗಳು ನಡೆಯಲಿದೆ.

ಸಾಗರದ ಸರ್ಕಾರಿ ಪದವಿಪೂರ್ವ ಕಾಲೇಜು ಪ್ರೌಢಶಾಲಾ ಮತ್ತು ಕಾಲೇಜು ವಿಭಾಗ, ಸರ್ಕಾರಿ ಬಾಲಿಕಾ ಪದವಿಪೂರ್ವ ಕಾಲೇಜು, ಪ್ರಗತಿ ಸಂಯುಕ್ತ ಶಾಲೆ, ಸಿರಿವಂತೆ ಸರ್ಕಾರಿ ಪ್ರೌಢಶಾಲೆ, ಕಾರ್ಗಲ್ ಸರ್ಕಾರಿ ಪ್ರೌಢಶಾಲೆ, ತುಮರಿ ಸರ್ಕಾರಿ ಪ್ರೌಢಶಾಲೆ, ತ್ಯಾಗರ್ತಿ ಸರ್ಕಾರಿ ಪ್ರೌಢಶಾಲೆ ಮತ್ತು ಆನಂದಪುರಂ ಕೆ.ಪಿ.ಎಸ್. ಶಾಲೆಯಲ್ಲಿ ಪರೀಕ್ಷಾ ಕೇಂದ್ರಗಳಿವೆ. ಎಲ್ಲಾ 9 ಪರೀಕ್ಷಾ ಕೇಂದ್ರಗಳಲ್ಲೂ ಸಿ.ಸಿ. ಟಿ.ವಿ. ಮತ್ತು ವೆಬ್ ಕಾಸ್ಟಿಂಗ್ ವ್ಯವಸ್ಥೆ ಇರುತ್ತದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿಗಳು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಹಿಂದೂ ಪರ ಸಂಘಟನೆಗಳಿಂದ ತೀವ್ರ ಆಕ್ರೋಶ

## ಸ್ವಚ್ಛತೆ ಹೆಸರಲ್ಲಿ ಡಿಸಿ ಕಚೇರಿ ಮುಂಭಾಗದ ಆಟದ ಮೈದಾನಕ್ಕೆ ಬ್ಯಾರಿಕೇಡ್



• **ಶಿವಮೊಗ್ಗ:** ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿರುವ ಆಟದ ಮೈದಾನದ ವಿಚಾರ ಮತ್ತೊಮ್ಮೆ ಮುನ್ನೆಲೆಗೆ ಬಂದಿದೆ.

ಮೈದಾನದ ಸ್ವಚ್ಛತೆ ಹೆಸರಿನಲ್ಲಿ ಮಂಗಳವಾರದಿಂದ ಬ್ಯಾರಿಕೇಡ್ ಅಳವಡಿಸಲಾಗಿದೆ. ಇದಕ್ಕೆ ಹಿಂದೂ ಪರ ಸಂಘಟನೆಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿವೆ.

ಮಾರ್ಚ್ 20 ರಂದು ರಂಜಾನ್ ಆಚರಣೆ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಮೈದಾನವನ್ನು ಸಿದ್ಧಪಡಿಸಿಕೊಡುವಂತೆ ಮುಸ್ಲಿಂ ಸಂಘಟನೆಗಳು ಮಹಾನಗರ ಪಾಲಿಕೆಗೆ ಮನವಿ ಸಲ್ಲಿಸಿದ್ದವು ಎನ್ನಲಾಗಿದೆ. ಈ ಕೋರಿಕೆ ಮೇರೆಗೆ ಮಹಾನಗರ ಪಾಲಿಕೆ ಪೊಲೀಸ್ ಇಲಾಖೆ ನೆರವಿನೊಂದಿಗೆ ಮೈದಾನದ ಸುತ್ತ ಬ್ಯಾರಿಕೇಡ್ ಹಾಕಿ ಸ್ವಚ್ಛತಾ ಕಾರ್ಯಕ್ಕೆ ಮುಂದಾಗಿತ್ತು. ಆದರೆ ಹಬ್ಬಕ್ಕೆ ಇನ್ನೂ ಮೂರು ದಿನ ಬಾಕಿ ಇರುವಾಗಲೇ ಬ್ಯಾರಿಕೇಡ್ ಹಾಕಿರುವುದರಿಂದ ಸಾರ್ವಜನಿಕ ವಾಹನ ಸವಾರರಿಗೆ ತೊಂದರೆಯಾಗುತ್ತದೆ ಎಂದು ಹಿಂದೂ ಪರ ಸಂಘಟನೆಗಳ ಪದಾಧಿಕಾರಿಗಳು ಸ್ಥಳಕ್ಕಾಗಮಿಸಿ ಅಸಮಾಧಾನ ವ್ಯಕ್ತಪಡಿಸಿದರು.

ಈ ಕುರಿತು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಿಖಿಲ್ ಬಿ., ಪಾರ್ಕಿಂಗ್ ಸಮಸ್ಯೆಯಾಗದಂತೆ ಪಾಲಿಕೆ ಅಧಿಕಾರಿಗಳೊಂದಿಗೆ ಚರ್ಚಿಸಲಾಗಿದೆ. ಯುಗಾದಿ ಹಬ್ಬದ ಕಾರಣ ಕೆಲಸಗಾರರ ಕೊರತೆ ಎದುರಾಗಬಹುದು ಎಂಬ ಹಿನ್ನೆಲೆಯಲ್ಲಿ ಮುಂಚಿತವಾಗಿ ಸ್ವಚ್ಛತೆ ಆರಂಭಿಸಲಾಗಿದೆ. ಸಾರ್ವಜನಿಕರಿಗೆ ತೊಂದರೆ ಆಗದಂತೆ ಕ್ರಮ ಕೈಗೊಳ್ಳಲಾಗುವುದು. ಶಾಂತಿಯುತವಾಗಿ ಹಬ್ಬ ಆಚರಿಸಲು ಎಲ್ಲಾ ಮುಖಂಡರು ಸಹಕರಿಸುವುದಾಗಿ ಭರವಸೆ ನೀಡಿದ್ದಾರೆ ಎಂದು ತಿಳಿಸಿದರು.

## ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಜೆಡಿಎಸ್‌ಗೆ ಬಹುಮತ: ವರ್ತೇಶ್ ವಿಶ್ವಾಸ

• **ಹೊಸನಗರ:** ಒಂದೆರಡು ತಿಂಗಳಲ್ಲಿ ಸ್ಥಳೀಯ ಮಟ್ಟದ ಪಪಂ, ಗ್ರಾಪಂ ಹಾಗೂ ಜಿಪಂ ಚುನಾವಣೆ ನಡೆಯಲಿದ್ದು, ತಾಲೂಕಿನಲ್ಲಿ ಜೆಡಿಎಸ್ ಪಕ್ಷದ ಕಾರ್ಯಕರ್ತರು ಸಂಘಟನೆಗೊಂಡು ಪಕ್ಷದ ಅಭ್ಯರ್ಥಿಗಳ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿ ಶ್ರಮ ವಹಿಸಿದರೆ ಅಧಿಕಾರ ಪಡೆಯಲು ಸಹಕಾರಿಯಾಗಲಿದೆ ಎಂದು ತಾಲೂಕು ಜೆಡಿಎಸ್ ಪಕ್ಷದ ಅಧ್ಯಕ್ಷ ರಿಪ್ಪನ್‌ಪೇಟೆ ವರ್ತೇಶ್ ವಿಶ್ವಾಸ ವ್ಯಕ್ತಪಡಿಸಿದರು.

ಇಲ್ಲಿನ ಗಾಯಿತ್ರಿ ಮಂದಿರದಲ್ಲಿ ನಡೆದ ಕಾರ್ಯಕರ್ತರ ಸಭೆ, ನೂತನ ಪದಾಧಿಕಾರಿಗಳ ಆಯ್ಕೆ ಹಾಗೂ ಜಿಲ್ಲಾಧ್ಯಕ್ಷ ರಾಮಕೃಷ್ಣಗೆ ಹಮ್ಮಿಕೊಂಡಿದ್ದ ಸನ್ಮಾನ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.



ಜೆಡಿಎಸ್ ಪಕ್ಷ ನಿಷ್ಠಾವಂತ ಕಾರ್ಯಕರ್ತರಾಗಿದ್ದು, ಅವರು ಎಂದಿಗೂ ಪಕ್ಷವನ್ನು ತೊರೆಯುವವರಲ್ಲ, ಕೆಲವು ಪಕ್ಷಗಳ ಕಾರ್ಯಕರ್ತರು ಚುನಾವಣೆ ಸಂದರ್ಭದಲ್ಲಿ ಒಂದು ಪಕ್ಷದಿಂದ ಮತ್ತೊಂದು ಪಕ್ಷಕ್ಕೆ ಸೇರ್ಪಡೆಯಾಗುವವರೇ ಹೆಚ್ಚು. ಆದರೇ ಜೆಡಿಎಸ್ ಕಾರ್ಯಕರ್ತರು ಗೆದ್ದರೂ ಸೋತರು ಒಂದೇ ಪಕ್ಷದಲ್ಲಿದ್ದು ಕಷ್ಟ-ಸುಖಗಳಲ್ಲಿ ಎಲ್ಲರೂ ಒಟ್ಟಾಗುತ್ತಾರೆ. ಇಂತಹ ಪಕ್ಷದಲ್ಲಿ ದುಡಿಯುವುತ್ತಿರುವುದಕ್ಕೆ ಹೆಮ್ಮೆಯಾಗುತ್ತದೆ ಎಂದರು.

ಶಿವಮೊಗ್ಗ ಜಿಲ್ಲಾ ಜೆಡಿಎಸ್ ಪಕ್ಷದ ನೂತನ ಅಧ್ಯಕ್ಷ ರಾಮಕೃಷ್ಣ ಸನ್ಮಾನ ಸ್ವೀಕರಿಸಿ ಮಾತನಾಡಿ, ರಾಜ್ಯದ ರೈತರ ಹಿತ ಕಾಪಾಡುವುದು, ಬಡವರ ಶೋಷಣೆ ತಪ್ಪಿಸುವುದು ಹಾಗೂ ಗ್ರಾಮಾಭಿವೃದ್ಧಿಗೆ ಸಂಪೂರ್ಣ ಸಹಕಾರ ನೀಡುವ ದೇಶದ ಏಕೈಕ ರಾಜಕೀಯ ಪಕ್ಷ ಎಂದರೇ ಅದು ಜಾತ್ಯತೀತ ಜನತಾದಳ. ಮುಂಬರುವ ಸ್ಥಳೀಯ ಚುನಾವಣೆಗಳಲ್ಲಿ ಪಕ್ಷವನ್ನು ಬೂತ್ ಮಟ್ಟದಲ್ಲಿ ಸಂಘಟಿಸುವ ಮೂಲಕ ಪಕ್ಷಕ್ಕೆ ಶಕ್ತಿ ತುಂಬುವ ಕೆಲಸವನ್ನು ಕಾರ್ಯಕರ್ತರು ಮಾಡಬೇಕಾಗಿದೆ. ರಾಜ್ಯದಲ್ಲಿ ಮತ್ತೊಮ್ಮೆ ಜೆಡಿಎಸ್ ಪಕ್ಷ ಅಧಿಕಾರದ ಗದ್ದುಗೆ ಏರುವಲ್ಲಿ ಯಾವ ಸಂದೇಹ ಬೇಡವೆಂದರು.

ಪಕ್ಷದ ಪ್ರಧಾನ ಕಾರ್ಯದರ್ಶಿ ಚಾಬುಸಾಬ್, ಮಾಜಿ ಶಾಸಕ ಪ್ರಸನ್ನಕುಮಾರ್, ಮುಖಂಡರಾದ ಕಡಿದಾಳ್ ಗೋಪಾಲ್, ಎಂ.ವಿ. ಜಯರಾಮ್, ವರದರಾಜ್, ಜಿಲ್ಲಾ ಮಹಿಳಾ ಅಧ್ಯಕ್ಷೆ ಗೀತಾ ಸತೀಶ್, ಜಿ.ವಿ ಮಂಜುಳ, ರಿಪ್ಪನ್‌ಪೇಟೆ ಚಾಬುಸಾಬ್, ಜಯನಗರ ಸುಮತಿ ಪೂಜಾರ್, ಮಾಡಬಾಗಿಲು ರಮಾನಂದ, ಜಯನಗರ ಷಣ್ಮುಖಿ, ನರಸಿಂಹ, ರಮೇಶ್ ನಾಯಕ್, ಕಾಯಿ ನಾಗೇಶ್, ಹರೀಶ್, ಜಬಗೋಡು ಹಾಲಪ್ಪಗೌಡ, ವೀಣಾ ಉಪಸ್ಥಿತರಿದ್ದರು.

## ಸಾಹಿತ್ಯ ಸಮ್ಮೇಳನಾಧ್ಯಕ್ಷ ಡಾ.ಎ.ಎಸ್.ಶಂಕರ ನಾರಾಯಣಗೆ ಸನ್ಮಾನ

• **ಶಿವಮೊಗ್ಗ :** ಸಾಹಿತಿ ಹಾಗೂ ಬೆಂಗಳೂರು ಆಕಾಶವಾಣಿ ಕೇಂದ್ರದ ಮುಖ್ಯಸ್ಥ ಡಾ.ಎ.ಎಸ್.ಶಂಕರ ನಾರಾಯಣ ತರೀಕೆರೆ ತಾಲೂಕಿನ 19ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆ ಆಗಿರುವುದಕ್ಕೆ ಶಿವಮೊಗ್ಗ ಜಿಲ್ಲಾ ಸರ್ವೋದಯ ಮಂಡಲ, ಭದ್ರಾವತಿ ಆಕಾಶವಾಣಿ ಕೇಳುಗರ ಬಳಗ, ಆರ್ ಜೆ ಬಳಗ, ನನ್ನ ಕನಸಿನ ಶಿವಮೊಗ್ಗ ಸಂಸ್ಥೆಗಳ ವತಿಯಿಂದ ನಗರದ ಮಥುರಾ ಪ್ಯಾರಡೈಸ್ ಸಭಾಂಗಣದಲ್ಲಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಅಧ್ಯಕ್ಷತೆ ವಹಿಸಿದ್ದ ಹಿರಿಯ ಸಾಹಿತಿ ಎಂ.ಎನ್. ಸುಂದರರಾಜ್ ಮಾತನಾಡಿ,



ಸನ್ಮಾನಿತರಿಗೆ ಈ ಗೌರವ ಸಿಕ್ಕಿರೋದು ತುಂಬಾ ಸಂತೋಷದ ವಿಷಯ. ಅವರಿಂದ ಇನ್ನೂ ಹೆಚ್ಚಿನ ಸಾಹಿತ್ಯವನ್ನು ನಾವೆಲ್ಲ ನಿರೀಕ್ಷಿಸುತ್ತಿದ್ದೇವೆ ಎಂದು ತಿಳಿಸಿದರು.

ಜಿಲ್ಲಾ ಸರ್ವೋದಯ ಮಂಡಲದ ಅಧ್ಯಕ್ಷ ಆರ್.ಮನೋಹರ್ ಮೂಲತಃ ತರೀಕೆರೆಯವರೇ ಆದ ಶಂಕರ ನಾರಾಯಣ ತಮ್ಮ ಬರಹದ ಮೂಲಕ ಆಕಾಶವಾಣಿ ಸಂದರ್ಶನಗಳ ಮೂಲಕ ನಾಡಿಗೆ ಚಿರಪರಿಚಿತರಾಗಿದ್ದಾರೆ. ಅವರ ಸಾಹಿತ್ಯ ಸೇವೆ ಹೀಗೆಯೇ ಮುಂದುವರೆಯಲಿ ಎಂದು ಶುಭ ಹಾರೈಸಿದರು.

ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಉಪಾಧ್ಯಕ್ಷ ಜಿ.ವಿಜಯಕುಮಾರ್ ಮಾತನಾಡಿ, ಶಂಕರ ನಾರಾಯಣ ಅವರ ಸಾಧನೆ ಸಾಕಷ್ಟು ಇದೆ. ಅವರ ಸಾಧನೆಗೆ ಸಿಕ್ಕ ಮನ್ನಣೆ ಇದು. ಅವರ ಸಾಹಿತ್ಯ ಕೃಷಿ ಇನ್ನೂ ಹೆಚ್ಚು ಹೆಚ್ಚು ಆಗಲಿ ಎಂದು ಶುಭ ಹಾರೈಸಿದರು.

ಇದೇ ಸಂದರ್ಭದಲ್ಲಿ ನನ್ನ ಕನಸಿನ ಶಿವಮೊಗ್ಗ ವೇದಿಕೆಯ ಎನ್.ಗೋಪಿನಾಥ್, ಆಕಾಶವಾಣಿ ಕೇಳುಗರ ಬಳಗದ ಚಿಕ್ಕಪ್ಪ ರಾಮೇಶ್ವರ, ಆಕಾಶವಾಣಿ ಆರ್.ಜೆ.ಗಳಾದ ಗಣೇಶ್ ಕೆಂಚನಾಳ, ಸರ್ವೋದಯ ಮಂಡಲದ ಬಸವರಾಜಪ್ಪ, ರುದ್ರಪ್ಪ ಚೀಲೂರ್, ಪ್ರೊಫೆಸರ್ ಸತ್ಯನಾರಾಯಣ, ಬಿಂದು ವಿಜಯ ಕುಮಾರ ಉಪಸ್ಥಿತರಿದ್ದರು.

### ಮೀನುಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಷಡಾಕ್ಷರಿ

## ಹೈಟೆಕ್ ಮೀನು ಮಾರುಕಟ್ಟೆ ನಿರ್ಮಾಣಕ್ಕೆ ಪ್ರಸ್ತಾವನೆ

• **ಭದ್ರಾವತಿ :** ದೊಣಬಘಟ್ಟ ರಸ್ತೆಯ ನಗರಸಭೆ ವ್ಯಾಪ್ತಿಯ ಕವಲಗುಂದಿ ಗ್ರಾಮದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಸಹಭಾಗಿತ್ವದಲ್ಲಿ ಸುಮಾರು 25 ಕೋಟಿ ರೂ. ವೆಚ್ಚದಲ್ಲಿ ಹೈಟೆಕ್ ಮೀನು ಮಾರುಕಟ್ಟೆ ನಿರ್ಮಾಣಕ್ಕೆ ರೂಪುರೇಷೆ ಸಿದ್ಧಪಡಿಸಲಾಗಿದ್ದು, ಈ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಮೀನುಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಷಡಾಕ್ಷರಿ ತಿಳಿಸಿದರು.

ರಾಜ್ಯ ವಲಯ ಯೋಜನೆ-8, ಜಿಲ್ಲಾ ವಲಯ ವಿಶೇಷ ಘಟಕ ಮತ್ತು ಗಿರಿಜನ ಪ್ರಯೋಜನ ಇಲಾಖಾ ವತಿಯಿಂದ ಮಂಗಳವಾರ ಶಾಸಕರ ಗೃಹ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿದ್ದ 33 ಅರ್ಹ ಬಡ ಮೀನುಗಾರರಿಗೆ ಇಲಾಖೆಯ ಕಿಟ್ ವಿತರಿಸಿ ಮಾತನಾಡಿ, ಪ್ರತಿ ವರ್ಷದಂತೆ ಈ ಬಾರಿ ಸಹ



ಸುಮಾರು 10 ಸಾವಿರ ರು. ಮೌಲ್ಯದ ಮೀನು ಬಲೆ, ತೆಪ್ಪ, ಹರಿಗೋಲು ಸೇರಿದಂತೆ ಇನ್ನಿತರ ಸಲಕರಣೆಗಳನ್ನು ಒಳಗೊಂಡ ಒಟ್ಟು 3.30 ಲಕ್ಷ ರು. ಮೌಲ್ಯದ ಕಿಟ್‌ಗಳನ್ನು ವಿತರಿಸಲಾಗಿದೆ ಎಂದರು.

ಶಾಸಕ ಬಿ.ಕೆ ಸಂಗಮೇಶ್ವರ್ ಮಾತನಾಡಿ, ಕ್ಷೇತ್ರದಲ್ಲಿರುವ ಬಡ ಮೀನುಗಾರರಿಗೆ ಸರ್ಕಾರದ ಸೌಲಭ್ಯಗಳನ್ನು ಸಮರ್ಪಕವಾಗಿ ಕಲ್ಪಿಸಿ ಕೊಡುವಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದೇನೆ. ಅಲ್ಲದೆ ನಗರದಲ್ಲಿ ಮುಂದಿನ ದಿನಗಳಲ್ಲಿ ಹೈಟೆಕ್ ಮಾರುಕಟ್ಟೆ ನಿರ್ಮಾಣಗೊಳ್ಳಲಿದ್ದು, ಇದರ ಸದುಪಯೋಗ ಪಡೆದುಕೊಳ್ಳುವಂತೆ ಮನವಿ ಮಾಡಿದರು.

ನಗರಸಭೆ ಹಿರಿಯ ಸದಸ್ಯ ಬಿ.ಕೆ ಮೋಹನ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ತಾಲೂಕು ಅಧ್ಯಕ್ಷ ಬಿ.ಎಸ್ ಗಣೇಶ್, ಮೀನುಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ಮೋಹನ್ ಕುಮಾರ್ ಇತರರಿದ್ದರು,.

## ನಾಳೆಯಿಂದ ಧಾರ್ಮಿಕ ಕಾರ್ಯಕ್ರಮ

• **ಚಂದ್ರಗುತ್ತಿ:** ಸಮೀಪದ ಬೆನ್ನೂರು ಗ್ರಾಮದ ಆರಾಧ್ಯದೈವ ಶ್ರೀ ಕಾಳಿಕಾಂಬಾ ದೇವಸ್ಥಾನದ ನೂತನ ಮೂರ್ತಿ ಪ್ರತಿಷ್ಠಾಪನೆ ಹಾಗೂ ಬ್ರಹ್ಮಕಲಶಾಭಿಷೇಕ ಮಹೋತ್ಸವ ಮಾ.19ರಿಂದ 21 ರವರೆಗೆ ಜರುಗಲಿದೆ ಎಂದು ದೇವಸ್ಥಾನ ಅಭಿವೃದ್ಧಿ ಸಮಿತಿ ಸದಸ್ಯ ಮಾರ್ಯಪ್ಪ ಬೆನ್ನೂರು ತಿಳಿಸಿದರು.

ಶ್ರೀ ಕಾಳಿಕಾಂಬಾ ದೇವಸ್ಥಾನದ ಆವರಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಮಹೋತ್ಸವದ ಪುಣ್ಯಘಟ್ಟವಾದ ನೂತನ ಶ್ರೀ ಕಾಳಿಕಾಂಬಾ ದೇವಿ ಮೂರ್ತಿ ಪ್ರತಿಷ್ಠಾಪನೆಯು ಮಾರ್ಚ್ 20, ಶುಕ್ರವಾರ ಬೆಳಿಗ್ಗೆ 11:20ಕ್ಕೆ ಸಲ್ಲುವ ಶುಭ ವೃಷಭ ಲಗ್ನದಲ್ಲಿ ಶಾಸ್ತ್ರೋಕ್ತವಾಗಿ ಜರುಗಲಿದೆ. ಅಂದು ಬೆಳಿಗ್ಗೆಯಿಂದಲೇ ದೇವಸ್ಥಾನದಲ್ಲಿ ಬಿಂಬಶುದ್ಧಿ ಹವನ, ಪ್ರತಿಷ್ಠಾ ಹವನಗಳಂತಹ ವಿಶೇಷಧಾರ್ಮಿಕ ವಿಧಿವಿಧಾನಗಳು ನಡೆಯಲಿದ್ದು, ಭಕ್ತರದರ್ಶನಕ್ಕೆ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದರು.

**ಮೂರು ದಿನಗಳ ಧಾರ್ಮಿಕ ಕಾರ್ಯಕ್ರಮಗಳು:** ಮಾ.19ರಂದು ಗಣಪತಿ ಪೂಜೆ, ಜಲಾಧಿವಾಸ ಹಾಗೂ ಸಂಜೆ ವಾಸ್ತು ಬಲಿ, ಕಳಶ ಸ್ಥಾಪನೆ, 20ರಂದು ಪ್ರತಿಷ್ಠಾಪನೆ ಹಾಗೂ ಮಹಾಪೂಜೆ ನೆರವೇರಲಿದೆ. 21ರಂದು ಪೂರ್ಣಾಹುತಿ ಹಾಗೂ ಬ್ರಹ್ಮಕಲಶಾಭಿಷೇಕದೊಂದಿಗೆ ಮೂರು ದಿನಗಳ ಧಾರ್ಮಿಕ ಕಾರ್ಯಕ್ರಮಗಳು ಸಂಪನ್ನಗೊಳ್ಳಲಿದ್ದು, ಅಂದೂ ಮಧ್ಯಾಹ್ನ ಅನ್ನಪ್ರಸಾದ ವಿನಿಯೋಗವಿರಲಿದೆ ಎಂದು ವಿವರಿಸಿದರು. ಗ್ರಾಮ ಸಮಿತಿ ಅಧ್ಯಕ್ಷ ಅಶೋಕ್‌ಗೌಡ್ರು, ಶ್ರೀ ಕಾಳಿಕಾಂಬಾ ದೇವಸ್ಥಾನ ಸಮಿತಿಯ ಕೃಷ್ಣ ಶೇಟ್, ಜಯಶೀಲ್, ಮಹೇಶ್, ಕೆ. ಮಂಜು, ಮಾಲ್ತೇಶ್, ರಮೇಶ ಹಾಗೂ ಅರ್ಚಕ ವೀರಭದ್ರ ಭಟ್ ಉಪಸ್ಥಿತರಿದ್ದರು.

### ಜಿಲ್ಲಾ ಲಾರಿ ಮಾಲೀಕರ ಸಂಘದಿಂದ ಜಿಲ್ಲಾಧಿಕಾರಿಗೆ ಮನವಿ

## ಎಫ್‌ಸಿ-ಆರ್‌ಆರ್‌ಸಿ ಶುಲ್ಕ ಏರಿಕೆ ಆದೇಶ ಹಿಂಪಡೆಯಿರಿ

• **ಶಿವಮೊಗ್ಗ:** ಕೇಂದ್ರ ಹಾಗೂ ರಾಜ್ಯ ಸರ್ಕಾರ ಲಾರಿಗಳ ಎಫ್‌ಸಿ ಮತ್ತು ಆರ್‌ಆರ್‌ಸಿಗಳ ಶುಲ್ಕವನ್ನು ಏರಿಸಿದ ಆದೇಶವನ್ನು ಕೂಡಲೇ ವಾಪಸ್ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿ ಜಿಲ್ಲಾ ಲಾರಿ ಮಾಲೀಕರ ಸಂಘ ಜಿಲ್ಲಾಧಿಕಾರಿಗಳಿಗೆ ಸೋಮವಾರ ಮನವಿ ಸಲ್ಲಿಸಿದೆ.

ಈ ಹಿಂದೆ ಲಾರಿಗಳ ಎಫ್‌ಸಿ ಮತ್ತು ಆರ್‌ಆರ್‌ಸಿಗಳ ಶುಲ್ಕ 1400 ರೂ. ಇತ್ತು. ಅದನ್ನು ಈಗ 28 ಸಾವಿರ ರೂ.ಗಳಿಗೆ ಏರಿಸಿದ್ದಾರೆ. ಇದರಿಂದ ಲಾರಿ ಮಾಲೀಕರಿಗೆ ತೀವ್ರ ಸಂಕಷ್ಟ ಎದುರಾಗಿದೆ. ಇಷ್ಟು ಮೊತ್ತವನ್ನು ಭರಿಸಲು ಲಾರಿ ಮಾಲೀಕರಿಂದ ಸಾಧ್ಯವಿಲ್ಲ ಎಂದು ತಿಳಿಸಿದರು.

ಈಗಾಗಲೇ ಲಾರಿ ಮಾಲೀಕರು ಪ್ರತಿ ಮೂರು ತಿಂಗಳಿಗೊಮ್ಮೆ ರಸ್ತೆ ತೆರಿಗೆ, ಇನ್ಸೂರೆನ್ಸ್, ಲಾರಿ ಪರ್ಮಿಟ್, ಟೋಲ್ ಪಾವತಿ, ಜೊತೆಗೆ ವಾಹನದ ನಿರ್ವಹಣೆಗಳನ್ನು ಮಾಡುತ್ತಾ ಬರುತ್ತಿದ್ದಾರೆ. ಹಲವು ಸಮಸ್ಯೆಗಳನ್ನು ಮಾಲೀಕರು ಎದುರಿಸುತ್ತಿದ್ದಾರೆ. ಸಂಪಾದನೆಗಿಂತ ಖರ್ಚೇ ಹೆಚ್ಚಾಗುತ್ತಿದೆ. ಈಗ ಗಾಯದ ಮೇಲೆ ಬರೆ ಎಂಬಂತೆ ಮತ್ತೆ ಶುಲ್ಕವನ್ನು ಹೆಚ್ಚಿಸಲಾಗಿದೆ. ಸುಮಾರು 300 ಲಾರಿಗಳು ಕಾರ್ಯ ನಿರ್ವಹಿಸದೇ ನಿಲ್ಲಿಸಿಬಿಟ್ಟಿದ್ದಾರೆ ಎಂದು ಅಳಲು ತೋಡಿಕೊಂಡರು.

ಇದರಿಂದ ಸ್ವಂತ ಲಾರಿ ಹೊಂದಿರುವ ಡ್ರೈವರ್‌ಗಳೂ ಆಗಿರುವ ಲಾರಿ ಮಾಲೀಕರಿಗೆ ಸಂಕಷ್ಟ ಎದುರಾಗಿದೆ. ಆದ್ದರಿಂದ ಏರಿಕೆ ಮಾಡಿರುವ 28 ಸಾವಿರ ರೂ. ಶುಲ್ಕವನ್ನು 1400 ರೂ. ಗೆ ಇಳಿಸಬೇಕು. ಈಗಿನ ಆದೇಶವನ್ನು ವಾಪಸ್ ಪಡೆಯಬೇಕು. ಇತರೆ ರಾಜ್ಯಗಳಲ್ಲಿ ಕಾಲಾವಧಿ ಮುಗಿದ ಟೋಲ್‌ಗಳನ್ನು ತೆಗೆದು ಹಾಕಲಾಗಿದೆ. ಕರ್ನಾಟಕ ರಾಜ್ಯದಲ್ಲೂ ಕೂಡ ಇಂತಹ ಟೋಲ್‌ಗಳನ್ನು ತೆರವುಗೊಳಿಸುವಂತೆ ಮನವಿ ಮಾಡಿದರು.



ಈ ಸಂದರ್ಭದಲ್ಲಿ ಲಾರಿ ಮಾಲೀಕರ ಸಂಘದ ಗೌರವಾಧ್ಯಕ್ಷ ಎಸ್.ಎಸ್.ಜ್ಯೋತಿಪ್ರಕಾಶ್, ತಸ್ಲೀನ್ ಅಹಮದ್, ಅಧ್ಯಕ್ಷ ಕೆ.ಎನ್.ಭೋಜರಾಜ್, ಕಾರ್ಯಾಧ್ಯಕ್ಷ ವೈ.ಹೆಚ್.ನಾಗರಾಜ್, ಯಶವಂತಕುಮಾರ್, ಎಂ.ಡಿ. ಸಮೀರ್ ಇತರರಿದ್ದರು.

## ಕಿರು ಸುದ್ದಿ

### ಅಲ್ಟಿಮೇಟ್ ಕೋಡಿಂಗ್ ಚಾಲೆಂಜ್ ಕಾರ್ಯಕ್ರಮ

**ಶಿವಮೊಗ್ಗ:** ನಗರದ ಜೆ.ಎನ್.ಎನ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಬೈಟ್ ಬ್ರಿಗೇಡ್ ಕ್ಲಬ್ ವತಿಯಿಂದ ಹ್ಯಾಕ್‌ಫೆಸ್ಟ್ 1.0 -ದ ಅಲ್ಟಿಮೇಟ್ ಕೋಡಿಂಗ್ ಚಾಲೆಂಜ್ ಕಾರ್ಯಕ್ರಮವನ್ನು ಕಾಲೇಜಿನ ಎಂಬಿಎ-ಎಂಸಿಎ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು.

ವಿವಿಧ ಕಾಲೇಜುಗಳ ಸುಮಾರು 150 ತಂಡಗಳ 600 ವಿದ್ಯಾರ್ಥಿಗಳು ಭಾಗವಹಿಸಿದ್ದ ಕಾರ್ಯಕ್ರಮದಲ್ಲಿ, ತಮ್ಮ ನವೀನ ತಾಂತ್ರಿಕ ಯೋಜನೆಗಳನ್ನು ನಿರ್ಮಿಸಿ ಪ್ರಸ್ತುತಪಡಿಸಿದರು.

ಅಂತಿಮ ಸುತ್ತಿನಲ್ಲಿ ತಮಿಳುನಾಡಿನ ನಂದಾ ಕಾಲೇಜ್ ಆಫ್ ಟೆಕ್ನಾಲಜಿ ತಂಡ (ಪ್ರಥಮ), ಮೈಸೂರಿನ ಜೆ.ಎಸ್.ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ಕಾಲೇಜಿನ ತಂಡ (ದ್ವಿತೀಯ), ದಾವಣಗೆರೆಯ ಬಾಪೂಜಿ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಕಾಲೇಜು (ತೃತೀಯ) ಸ್ಥಾನ ಪಡೆದಿದರು. ಬಹುಮಾನ ವಿಜೇತ ತಂಡಕ್ಕೆ 30 ಸಾವಿರ, 20 ಸಾವಿರ, 10 ಸಾವಿರ ರೂ. ಬಹುಮಾನ ನೀಡಿ ಅಭಿನಂದಿಸಲಾಯಿತು.

ಉದ್ಘಾಟನಾ ಸಮಾರಂಭದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಬೆಂಗಳೂರಿನ ವೇಗಾ ಸಂಸ್ಥೆಯ ಹಿರಿಯ ಮೆಷಿನ್ ಲರ್ನಿಂಗ್ ಇಂಜಿನಿಯರ್ ಕಾರ್ತಿಕ್.ಎಲ್.ನಾಗರ್ ಮಾತನಾಡಿ, ಕೃತಕ ಬುದ್ಧಿಮತ್ತೆಯು ಶಿಕ್ಷಣ ಮತ್ತು ತಂತ್ರಜ್ಞಾನಕ್ಕೆ ಕ್ಷೇತ್ರಕ್ಕೆ ಮಹತ್ವದ ಪಾತ್ರ ವಹಿಸುತ್ತದೆ. ಎಐ ಉಪಕರಣಗಳು ವಿದ್ಯಾರ್ಥಿಗಳಿಗೆ ವೇಗವಾಗಿ ಕಲಿಯಲು, ಹೊಸ ಆಲೋಚನೆಗಳನ್ನು ಅನ್ವೇಷಿಸಲು ಹಾಗೂ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಪರಿಹರಿಸಲು ಸಹಕಾರಿಯಾಗಿವೆ ಎಂದು ತಿಳಿಸಿದರು.

ಎನ್‌ಇಎಸ್ ಕಾರ್ಯದರ್ಶಿ ಎಸ್.ಎನ್.ನಾಗರಾಜ ಮಾತನಾಡಿ, ಹ್ಯಾಕಥಾನ್ ಎಂಬುದು ವಿದ್ಯಾರ್ಥಿಗಳಿಗೆ ತಮ್ಮ ಸೃಜನಶೀಲತೆ, ತಾಂತ್ರಿಕ ಪರಿಣತಿ ಮತ್ತು ಸಮಸ್ಯೆ ಪರಿಹಾರ ಸಾಮರ್ಥ್ಯ ಪ್ರದರ್ಶಿಸಲು ಉತ್ತಮ ವೇದಿಕೆ ಒದಗಿಸುತ್ತದೆ ಎಂದು ಹೇಳಿದರು.

ಎನ್‌ಇಎಸ್‌ಸಹ ಕಾರ್ಯದರ್ಶಿ ಡಾ.ಪಿ. ನಾರಾಯಣ್ ಬಹುಮಾನ ವಿವರಿಸಿದರು. ಪ್ರಾಂಶುಪಾಲ ಡಾ.ವೈ. ವಿಜಯಕುಮಾರ್, ಸಂಶೋಧನಾ ಡೀನ್ ಡಾ.ಎಸ್.ವಿ.ಸತ್ಯನಾರಾಯಣ, ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ಇಂಜಿನಿಯರಿಂಗ್ ವಿಭಾಗದ ಸಹ ಪ್ರಾಧ್ಯಾಪಕಿ ಉಜ್ವಲಾ ಬಿ.ಎಸ್, ಸಂಯೋಜಕರಾದ ಹೃಷಿಕೇಶ್ ಕೆಂಭಾವಿ, ಸಹ ಸಂಯೋಜಕ ಮಲ್ಲಿಕಾರ್ಜುನ ಎಸ್ ಸಿಂದಿಗೆರೆ ಮತ್ತು ಬೈಟ್ ಬ್ರಿಗೇಡ್ ಸದಸ್ಯರು ಉಪಸ್ಥಿತರಿದ್ದರು.

### ರೈಲ್ವೇ ಪೊಲೀಸರಿಂದ ಜಾಗೃತಿ ಅಭಿಯಾನ

**ಶಿವಮೊಗ್ಗ:** ಶಿವಮೊಗ್ಗದ ರೈಲ್ವೇ ನಿಲ್ದಾಣ ಸೇರಿದಂತೆ ವಿವಿಧೆಡೆ ರೈಲ್ವೇ ಪೊಲೀಸರು ಪ್ರಯಾಣಿಕರು-ರಸ್ತೆ ಬಳಕೆದಾರರ ಜಾಗೃತಿ ಅಭಿಯಾನ ನಡೆಸಿದರು.

ಲೆವೆಲ್ ಕ್ರಾಸಿಂಗ್ ಗೇಟ್ ನಂ. 56 (ಕೋಟೆಗಂಗೂರು), ಶಿವಮೊಗ್ಗ ಟೌನ್ ಮತ್ತು ಕುಂಸಿ ರೈಲು ನಿಲ್ದಾಣಗಳ ಮಧ್ಯೆ, ಗೇಟ್ ನಂ.50(ಬೊಮ್ಮನಕಟ್ಟೆ), ಶಿವಮೊಗ್ಗ ಟೌನ್ ಮತ್ತು ಭದ್ರಾವತಿ ರೈಲು ನಿಲ್ದಾಣಗಳ ಮಧ್ಯೆ, ಶಿವಮೊಗ್ಗ ಟೌನ್ ರೈಲು ನಿಲ್ದಾಣದಲ್ಲಿ ಅಭಿಯಾನ ನಡೆಸಲಾಯಿತು.

ಶಿವಮೊಗ್ಗ ಟೌನ್ ರೈಲು ನಿಲ್ದಾಣದ ಆರ್‌ಪಿಎಫ್ ಸಬ್ ಇನ್ಸ್‌ಪೆಕ್ಟರ್ ಅನ್ವರ್ ಸಾಧಿಕ್, ಎಎಸ್‌ಐ ಬಸವರಾಜ್ ವಟ್ಟರ್ ಇತರರು ಇದ್ದರು.

ಜಾಗೃತಿ ಅಭಿಯಾನದಲ್ಲಿ ಪ್ರಯಾಣಿಕರ ವಸ್ತುಗಳ ಕಳವು, ಚಲಿಸುತ್ತಿರುವ ರೈಲುಗಳ ಮೇಲೆ ಕಲ್ಲೆಸೆತ ವಿಷಯಕ್ಕೆ ವಿಶೇಷ ಆದ್ಯತೆ ನೀಡಲಾಯಿತು. ಜಾಗೃತಿ ಅಭಿಯಾನವನ್ನು ಸಂಬಂಧಿಸಿದ ಆರ್‌ಪಿಎಫ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳೊಂದಿಗೆ ನಡೆಸಲಾಯಿತು.

ಶಿವಮೊಗ್ಗ ಟೌನ್ ರೈಲು ನಿಲ್ದಾಣದಲ್ಲಿ ಮೇನ್ ಪ್ರವೇಶದ್ವಾರದ ಬಳಿ ಇರುವ ಕೌಂಟರ್ ಮತ್ತು ಪ್ಲಾಟ್ ಫಾರ್ಮ್ ನಂ. 1 ಮತ್ತು 2 ಸಮೀಪ ಕಾರ್ಯಕ್ರಮ ನಡೆಯಿತು. ಇಲ್ಲಿ 500 ಕ್ಕಿಂತ ಹೆಚ್ಚು ಜನರು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಟ್ರೆಸ್‌ಪಾಸಿಂಗ್, ಚಲಿಸುತ್ತಿರುವ ರೈಲುಗಳ ಮೇಲೆ ಕಲ್ಲೆಸೆತ, ಪ್ರಕರಣಗಳು, ರೈಲು ಹಳಿಗಳ ಮೇಲೆ ವಸ್ತುಗಳನ್ನು ಇಡುವುದು, ಹಳಿಗಳ ಮೇಲೆ ಕಸ ಹಾಕುವುದು, ಮಹಿಳೆಯರ ಕೋಚ್‌ನಲ್ಲಿ ಪುರುಷರು ಪ್ರಯಾಣಿಸುವುದು, ರೈಲಿನಲ್ಲಿ ದಹನಶೀಲ ವಸ್ತುಗಳನ್ನು ಸಾಗಿಸುವುದು, ಫುಟ್ ಬೋರ್ಡ್‌ನಲ್ಲಿ ಪ್ರಯಾಣಿಸದಂತೆ ಎಚ್ಚರಿಕೆ, ತುರ್ತು ಟಿಕೆಟಿಂಗ್ ಶಟ್ಟರ್-ಗ್ರಿಲ್ ಮುಚ್ಚುವಿಕೆ, ಮಹಿಳೆಯರು ರೈಲು ಪ್ರಯಾಣದ ಸಮಯದಲ್ಲಿ ದುಬಾರಿ ಆಭರಣಗಳನ್ನು ಧರಿಸದಂತೆ ಜಾಗೃತಿ ಮೂಡಿಸಲಾಯಿತು.

ಸುಮಾರು 300ಕ್ಕಿಂತ ಹೆಚ್ಚು ರಸ್ತೆ ಬಳಕೆದಾರರು (ಎರಡು ಚಕ್ರ, ಮೂರು ಚಕ್ರ ಮತ್ತು ನಾಲ್ಕು ಚಕ್ರ ವಾಹನ ಚಾಲಕರು) ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



ಶಿವಮೊಗ್ಗದ ಜೆ.ಎನ್.ಎನ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಬೈಟ್ ಬ್ರಿಗೇಡ್ ಕ್ಲಬ್ ವತಿಯಿಂದ ಹ್ಯಾಕ್‌ಫೆಸ್ಟ್ 1.0 -ದ ಅಲ್ಟಿಮೇಟ್ ಕೋಡಿಂಗ್ ಚಾಲೆಂಜ್ ಕಾರ್ಯಕ್ರಮ ಆಯೋಜಿಸಲಾಗಿತ್ತು. ಕಾರ್ತಿಕ್.ಎಲ್.ನಾಗರ್, ಡಾ.ಪಿ. ನಾರಾಯಣ್, ಡಾ.ವೈ. ವಿಜಯಕುಮಾರ್, ಡಾ.ಎಸ್.ವಿ.ಸತ್ಯನಾರಾಯಣ, ಉಜ್ವಲಾ ಬಿ.ಎಸ್, ಹೃಷಿಕೇಶ್ ಕೆಂಭಾವಿ, ಮಲ್ಲಿಕಾರ್ಜುನ ಇದ್ದರು.

## ಸುವರ್ಣಕಿರಣ ಪುಸ್ತಕ ಬಿಡುಗಡೆ

**ಬಾಳೆಹೊನ್ನೂರು:** ಸುಮಾರು 800 ವರ್ಷಕ್ಕೂ ಹೆಚ್ಚು ವರ್ಷ ಇತಿಹಾಸವಿರುವ ಶ್ರೀ ಖಾಂಡ್ಯ ಮಾರ್ಕಂಡೇಶ್ವರ ದೇವಸ್ಥಾನದ ಆವರಣದಲ್ಲಿರುವ ಶಿಲಾಶಾಸನಗಳನ್ನು ಶಾಸನ ತಜ್ಞರಿಂದ ತರ್ಜುಮೆ ಮಾಡಿಸಿ ಕನ್ನಡದಲ್ಲಿ ಪುಸ್ತಕ ರಚನೆ ಮಾಡಿರುವುದು ಸಮಯೋಚಿತವಾಗಿದೆ ಎಂದು ಶೃಂಗೇರಿ ಕ್ಷೇತ್ರದ ಶಾಸಕ ರಾಜೇಗೌಡ ತಿಳಿಸಿದರು.

ಖಾಂಡ್ಯ ಮಾರ್ಕಂಡೇಶ್ವರ ದೇವಸ್ಥಾನದ ಆವರಣದಲ್ಲಿ ಇತ್ತೀಚೆಗೆ ಏರ್ಪಡಿಸಿದ್ದ ಸುವರ್ಣಕಿರಣ ಪುಸ್ತಕ ಬಿಡುಗಡೆ ಮಾಡಿ ಮಾತನಾಡಿ, ಖಾಂಡ್ಯ ಕ್ಷೇತ್ರದ ಇತಿಹಾಸವನ್ನು ಜನ ಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿ ಬೆಳಸಿ ರತ್ನಾಕರ್ ಅವರು ಸರಳವಾಗಿ ಯುವ ಪೀಳಿಗೆಗೆ ಅರ್ಥವಾಗುವ ರೀತಿಯಲ್ಲಿ ಸಂಗ್ರಹಿಸಿ ಮುದ್ರಣ ಮಾಡಿಸಿ ಬಿಡುಗಡೆ ಮಾಡಿರುವುದು ಖಾಂಡ್ಯ ಕ್ಷೇತ್ರದ ಹೆಮ್ಮೆಯಾಗಿದೆ ಎಂದು ತಿಳಿಸಿದರು.

ರತ್ನಾಕರ್ ಮಾತನಾಡಿ 1539 ಮಾರ್ಚ್ 3 ರಂದು ವಿಜಯನಗರದ ಅರಸರಾದ ಅಚ್ಯುತ ದೇವರಾಯರು ಶ್ರೀ ಮಾರ್ಕಂಡೇಶ್ವರ ದೇವರ ಸೇವೆಗೆ ದತ್ತಿಕೊಟ್ಟ ಬಗ್ಗೆ ಉಲ್ಲೇಖವಿದ್ದು, ದೇವರಿಗೆ ದಾನಕೊಟ್ಟ ಬಗ್ಗೆ ದೇವದಾನ ಗ್ರಾಮವೆಂಬ ನಾಮಕರಣ ಮಾಡಿದ್ದು, ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಸಂಪುಟ 11ರಲ್ಲಿ ಖಾಂಡ್ಯದ ಶಾಸನಗಳ ಬಗ್ಗೆ ಮಾಹಿತಿ ಇದ್ದು, ಇದನ್ನು ಬಳಸಿಕೊಂಡು ಕಿರು ಪುಸ್ತಕವನ್ನು ಬಿಡುಗಡೆ ಮಾಡಲಾಗಿದೆ ಎಂದು ತಿಳಿಸಿದರು.



ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಎಸ್.ವಿ. ಮಂಜುನಾಥ್, ತಂತ್ರಿ ಗಣಾದ ಲಕ್ಷ್ಮಿ ನಾರಾಯಣ ಸೋಮಯಾಜಿ, ಎ.ಬಿ. ಜಯ ರಾಮ್, ಸನ್ಮಾನಿತ ಪ್ರಕಾಶ ಭಟ್, ಶ್ರೀಧರ್, ಕಾಫಿ ಗಿರೀಶ್, ದೇವೇಂದ್ರ ಇದ್ದರು.

### ಹವಾಮಾನ ಏರುಪೇರು: ಉದುರುತ್ತಿರುವ ಮಾವಿನ ಹೂವು

# ಬಂಪರ್ ಇಳುವರಿ ನಿರೀಕ್ಷೆ ಹುಸಿ

ರಮೇಶ್, ಕರುವಾನೆ

ದಿಗಂತ ವಿಶೇಷ

**ಶೃಂಗೇರಿ:** ಕಳೆದ 7ರಿಂದ 8 ವರ್ಷಗಳಿಗಿಂತ ಈ ವರ್ಷ ತಾಲೂಕಿನಾದ್ಯಂತ ಎಲ್ಲೆಡೆ ಮಾವು ಉತ್ತಮ ಹೂವು ಬಿಟ್ಟಿದೆ. ಆದರೆ ಈಗ ಮಾವಿನ ಮರದಲ್ಲಿ ನೋಡುವಾಗ ಕಾಯಿಯೇ ಕಾಣಿಸುವುದಿಲ್ಲ. ಹವಾಮಾನ ಏರುಪೇರಿನಿಂದಾಗಿ ಹೂವು ಕಪ್ಪಾಗಿ ಉದುರುತ್ತಿದ್ದು ಬಂಪರ್ ಇಳುವರಿ ಎಂದು ನಿರೀಕ್ಷೆ ಇಟ್ಟುಕೊಂಡಿದ್ದ ಬೆಳೆಗಾರರಿಗೆ ನಿರಾಶೆ ಮೂಡಿದೆ.

ಈ ವರ್ಷ ಹೂವು ಬಾರದೇ ಇರುವ ಮರದಲ್ಲಿ ಕೂಡ ಹೂವು ಬಿಟ್ಟಿತ್ತು. ಎಷ್ಟೋ ವರ್ಷಗಳಿಂದ ಹೂವು ಬಿಡದೆ ಇದ್ದ ಮರಗಳು ಈ ವರ್ಷ ಮರದ ತುಂಬಾ ಹೂಗಳು ನಳನಳಿಸುತ್ತಿದ್ದವು. ಈ ವರ್ಷ ಮಂಗಗಳಿಗೆ ಉತ್ತಮ ಆಹಾರ ಎನ್ನಲಾಗುತ್ತಿತ್ತು. ಸ್ವಲ್ಪಮಟ್ಟಿನ ಕಾಟ ತಪ್ಪಿತಲ್ಲ ಎಂದು ಕೃಷಿಕರು ಆಡಿಕೊಳ್ಳುತ್ತಿದ್ದರು.ಆದರೆ ಈಗ ಅದು ಹುಸಿಯಾಗಿದೆ.

**ಕಾಡು ಮರಗಳಲ್ಲೂ ಭರ್ಜರಿ ಹೂವು:** ವಿಶೇಷವೆಂದರೆ ಈ ಬಾರಿ ಕಾಡಿನಲ್ಲಿ ಭರ್ಜರಿಯಾಗಿ ಹೂವು ಬಿಟ್ಟಿರುವ ಮಾವಿನ ಜೊತೆಗೆ ಹೈಗ ಬೋಗಿ ದೂಪ ಮುತ್ತುಗ ಸಳ್ಳೆ ಮುಂತಾದ ಕಾಡಿನ ಗಿಡಮರಗಳು ಸಹ ಹೂ ಬಿಟ್ಟು ಕಂಗೊಳಿಸುತ್ತಿದೆ. ಒಟ್ಟಿನಲ್ಲಿ ಪ್ರಕೃತಿಯ ಸೌಂದರ್ಯದಲ್ಲಿ ಬಣ್ಣ ಬಣ್ಣದ ಸೊಬಗು ಗಿಡಮರಗಳಲ್ಲಿ ಹೂವಿನ ಚೆಲುವು ಜನರ ಕಣ್ಣನ ಸೆಳೆಯುತ್ತಿದೆ.

**ಹವಾಮಾನ ವೈಪರಿತ್ಯ:** ಹವಮಾನ ವೈಪರಿತ್ಯದಿಂದಾಗಿ ಮಾವಿನ ಬೆಳೆಗೆ ಪ್ರತಿಕೂಲ ಪರಿಣಾಮ ಬೀರಿದೆ. ಬೆಳಗ್ಗೆ ಚಳಿ ಇಬ್ಬನಿ ಮಧ್ಯಾಹ್ನದ ವೇಳೆಗೆ ಬಿಸಿ ಗಾಳಿ ನಂತರ ಮೋಡ ಕವಿದ ವಾತಾವರಣ ತುಂತುರು ಮಳೆಯಿಂದಾಗಿ ಮಾವಿನ ಮರದಲ್ಲಿರುವ ಹೂವು ಕಪ್ಪಾಗಿ ಉದುರುತ್ತಿದೆ. ಬಿಟ್ಟ ಹೂವಿನ ಪೈಕಿ ಬಹುತೇಕ ಉದುರುತ್ತಿರುವುದರಿಂದ 20ರಿಂದ 30ರಷ್ಟು ಮಾತ್ರ ಫಸಲು ಸಿಕ್ಕರೆ ಸಿಕ್ಕಿತು ಎನ್ನುತ್ತಾರೆ ಕೃಷಿಕರು.



ಶೃಂಗೇರಿ ತಾಲೂಕಿನ ರೈತರ ತೋಟದಲ್ಲಿನ ಕಾಟು ಮಾವಿನ ಮರದಲ್ಲಿ ಹೂವು ಭರ್ಜರಿಯಾಗಿ ಬಿಟ್ಟಿದೆ.

> ಕಳೆದ ಮೂರು ನಾಲ್ಕು ವರ್ಷಗಳಿಂದ ಮಾವಿನ ಫಸಲು ಕಡಿಮೆ ಇತ್ತು ಮಾವಿನ ಮರದಲ್ಲಿ ಹೂವು ಇಲ್ಲದೆ ಚಿಗುರಿದ ಎಲೆಗಳಿಂದ ಕೂಡಿರುತ್ತಿತ್ತು. ಈ ವರ್ಷ ಎಲ್ಲೆಡೆ ಹೂವಿನ ಪ್ರಮಾಣ ಜಾಸ್ತಿ ಇದೆ. ಆದರೆ ಹವಮಾನ ವೈಪರಿತ್ಯದಿಂದ ಹೂವು ಕಪ್ಪಾಗಿ ಬೀಳುವುದೇ ಜಾಸ್ತಿಯಾಗಿದೆ.
>
> ■ ಎಂ. ಕೃಷ್ಣಮೂರ್ತಿ ರಾವ್, ಹಂಚಲಿ ನಿರ್ದೇಶಕರು, ಕೃಷಿಕ ಸಮಾಜ ಶೃಂಗೇರಿ.

> ಈ ವರ್ಷ ಹೂವು ಚೆನ್ನಾಗಿ ಬಿಟ್ಟಿತ್ತು .ಆರಂಭದಲ್ಲಿ ಮಾವಿನ ಮರ ನೋಡುವಾಗ ಹೂವು ಒಳ್ಳೆದಿತ್ತು. ಈಗ ಸಿಕ್ಕಾಪಟ್ಟೆ ವಿಪರೀತ ಸೆಕೆ ಇಬ್ಬನಿಯೂ ಇರುವುದರಿಂದ ಹೂವು ಕರಟಿ ಹೋಗುವ ಸಾಧ್ಯತೆ ಇದೆ. ಕಸಿಮಾವು ಅಲ್ಲದೆ ಕಾಡು ರಸ್ತೆ ಇನ್ನಿತರ ಕಡೆ ಇರುವ ಕಾಟು ಮಾವಿನ ಪ್ರದೇಶದಲ್ಲೂ ಇದೇ ರೀತಿ ಕಂಡುಬರುತ್ತದೆ ಹವಮಾನ ಏರುಪೇರಿನಿಂದ ರಸ ಹೀರುವ ಕೀಟಗಳ ಬಾಧೆಯು ಜಾಸ್ತಿ ಇರುತ್ತದೆ.
>
> ■ ಶ್ರೀಕೃಷ್ಣ, ಸಹಾಯಕ ನಿರ್ದೇಶಕರು ತೋಟಗಾರಿಕಾ, ಇಲಾಖೆ ಶೃಂಗೇರಿ.

## ಡಾ. ಡಿ.ಎಸ್. ಪೂರ್ಣಾನಂದ

# ಪತ್ರಕರ್ತನೊಳಗೆ ಮನುಷ್ಯತ್ವ ಇರಬೇಕು

**ಶಂಕರಘಟ್ಟ:** ಯಾವುದೇ ಪತ್ರಕರ್ತನೊಳಗೆ ಮನುಷ್ಯತ್ವ ಇಲ್ಲದಿದ್ದರೆ ಆತ ನಿಜವಾದ ಪತ್ರಕರ್ತ ನಾಗಲಾರ. ಮನುಷ್ಯತ್ವ ಇಲ್ಲದಾಗ ಮಾತ್ರ ಪತ್ರಕರ್ತ ಯಾವುದೇ ಸಾವನ್ನು ಸಂಭ್ರಮಿಸಬಹುದು ಎಂದು ಕುವೆಂಪು ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ನಿವೃತ್ತ ಪ್ರಾಧ್ಯಾಪಕ ಡಾ. ಡಿ.ಎಸ್. ಪೂರ್ಣಾನಂದ ಅಭಿಪ್ರಾಯಪಟ್ಟರು.

ಈ ಸಲದ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಹಿನ್ನೆಲೆಯಲ್ಲಿ ವಿಭಾಗವು ಆಯೋಜಿಸಿದ ಸನ್ಮಾನ ಹಾಗೂ 'ವಿಶ್ವದ ಓದು: ವಿಮರ್ಶಾತ್ಮಕ ಪತ್ರಿಕೋದ್ಯಮದ ದೃಷ್ಟಿಕೋನ' ಎಂಬ ವಿಷಯದ ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಈ ಭೂಮಿ ಯಾರಿಗೂ ಸೇರಿಲ್ಲ, ಯಾವುದೇ ಸಮುದಾಯ ಒಂದು ಪ್ರದೇಶ ಅಥವಾ ದೇಶ ತಮಗೆ ಸೇರಿದ್ದು ಎಂದು ಪ್ರತಿಪಾದನೆ ಮಾಡುವುದು ತಪ್ಪು. ಅವರವರ ಅನುಕೂಲಕ್ಕಾಗಿ ಗಡಿಗಳನ್ನು ನಿರ್ಮಿಸಿದ್ದೇವೆಯೇ ಹೊರತು ಅವು ನ್ಯಾಯಯುತ ಗಡಿಗಳಲ್ಲ ಎಂದು ಅವರು ತಿಳಿಸಿದರು.

ಇರಾನ್ ಮತ್ತು ಇಸ್ರೇಲ್, ಅಮೆರಿಕ ನಡುವೆ ನಡೆಯುವುದು ಯದ್ಧವಲ್ಲ, ಅದು ಜನಾಂಗೀಯ ಹತ್ಯೆ. ಇದು ಇತಿಹಾಸದಿಂದಲೂ ನಡೆದು ಬಂದಿದೆ. ನಾಯಕರ ಪ್ರತಿಷ್ಠೆಗಾಗಿ ಸಾಮಾನ್ಯ ಜನರ ಹತ್ಯೆ ನಡೆಯುತ್ತದೆ ಎಂದು ವಿಷಾದ ವ್ಯಕ್ತಪಡಿಸಿದರು.

ಹಿಂದೆ ಯುರೋಪ್ ದೇಶಗಳ ನಿಯಂತ್ರಣದಲ್ಲಿ ವಸಾಹತು ದೇಶಗಳಿದ್ದರೆ, ಇಂದು ಅಮೆರಿಕ ಇಡೀ ವಿಶ್ವವನ್ನು ನಿಯಂತ್ರಿಸಲು ಪ್ರಯತ್ನಿಸುತ್ತಿದೆ. ಅದಕ್ಕಾಗಿ ವಿಶ್ವದ ಹೆಚ್ಚಿನ ರಾಷ್ಟ್ರಗಳಲ್ಲಿ ಅಮೆರಿಕದ ಸೇನಾ ನೆಲೆಗಳಿವೆ ಎಂದರು.

> ಶಸ್ತ್ರಾಸ್ತ್ರ ತಯಾರಿಸುವ ಕಂಪನಿಗಳು ವಿಶ್ವದ ದೊಡ್ಡ ಉದ್ಯಮಿಗಳ ಒಡೆತನದಲ್ಲಿವೆ. ಅವರ ಒಡೆತನದಲ್ಲಿ ಬಹುಭಾಗ ಮಾಧ್ಯಮ ಸಂಸ್ಥೆಗಳಿವೆ. ಆದ್ದರಿಂದ ಮಾಧ್ಯಮಗಳು ಯುದ್ಧವನ್ನು ನಿಲ್ಲಿಸುವ ಬದಲು ಮುಂದುವರಿಸಲು ಪ್ರೋತ್ಸಾಹ ನೀಡುತ್ತಿವೆ.
>
> ■ ಡಾ. ಡಿ.ಎಸ್. ಪೂರ್ಣಾನಂದ, ನಿವೃತ್ತ ಪ್ರಾಧ್ಯಾಪಕ.

ಇಂದು ಮುಖ್ಯವಾಹಿನಿಯ ಮಾಧ್ಯಮಗಳು ವಾಸ್ತವಾಂಶ ವರದಿ ಮಾಡಲು ವಿಫಲರಾದರೂ ಕೆಲವು ಸ್ವತಂತ್ರ ಮಾಧ್ಯಮಗಳು ಆ ಕೆಲಸ ಮಾಡುತ್ತಿವೆ. ಸ್ವತಂತ್ರ ಧ್ವನಿ ದೊಡ್ಡ ಸಂಖ್ಯೆಯಲ್ಲಿ ಬಂದರೆ ಯಾವುದೇ ಬದಲಾವಣೆ ಸಾಧ್ಯ ಎಂದು ಅವರು ಹೇಳಿದರು.

ವಿಭಾಗದ ಅಧ್ಯಕ್ಷರಾದ ಪ್ರೊ. ವರ್ಗೀಸ್ ಪಿ.ಎ., ಪ್ರಾಧ್ಯಾಪಕರಾದ ಪ್ರೊ. ಸತೀಶ್ ಕುಮಾರ್ ಅಂಡಿಂಜೆ, ಪ್ರೊ.ಸತ್ಯಪ್ರಕಾಶ್ ಎಂ.ಆರ್., ಅವರು ಈ ಸಂದರ್ಭದಲ್ಲಿ ಮಾತನಾಡಿದರು. ರುಮಾನ ತನ್ವೀರ್, ವಿಭಾಗದ ಉಪನ್ಯಾಸಕರು, ಸಂಶೋಧನಾರ್ಥಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ವಿದ್ಯಾರ್ಥಿನಿ ಕು.ಪ್ರಗತಿ ವಂದಿಸಿದರು.



## ಎನ್‌ಎಚ್‌ನಲ್ಲಿ ಆಟೋ ಇಮ್ಯೂನ್ ಕಾಯಿಲೆಗೆ ಯಶಸ್ವಿ ಶಸ್ತ್ರಚಿಕಿತ್ಸೆ

**ಶಿವಮೊಗ್ಗ :** ಅಪರೂಪದ ಆಟೋ ಇಮ್ಯೂನ್ (ನರ ಮತ್ತು ಸ್ನಾಯು ಸಂಬಂಧಿ) ಕಾಯಿಲೆಗೆ ಸಂಕೀರ್ಣ ಶಸ್ತ್ರ ಚಿಕಿತ್ಸೆ ನಡೆಸಿ 48 ವರ್ಷದ ರೋಗಿಯನ್ನು ಉಸಿರಾಟದ ವೈಫಲ್ಯದ ಅಂಚಿನಿಂದ ಪಾರು ಮಾಡಲಾಗಿದೆ ಎಂದು ಸಹ್ಯಾದ್ರಿ ನಾರಾಯಣ ಆಸ್ಪತ್ರೆಯ ಮೆದುಳು ಮತ್ತು ನರರೋಗ ತಜ್ಞೆ ಡಾ. ಹಂಸಾ ಕೆ.ಎಂ.ತಿಳಿಸಿದರು.

ನಗರದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಸ್ನಾಯುಗಳ ದೌರ್ಬಲ್ಯ ಮತ್ತು ವಿಪರೀತ ಆಯಾಸದ ಸಮಸ್ಯೆಯೊಂದಿಗೆ ರೋಗಿ ಮೊದಲು ನರರೋಗ ವಿಭಾಗದಲ್ಲಿ ಹೊರರೋಗಿ ಬಂದಿದ್ದರು. ಅವರ ತಪಾಸಣೆ ನಡೆಸಿದವೈದ್ಯರಿಗೆಮೈಯಾಸ್ತೇನಿಯಾಗ್ರಾವಿಸ್ ಇರುವುದು ದೃಢಪಟ್ಟಿತು. ಹೆಚ್ಚಿನ ಸ್ಕ್ಯಾನಿಂಗ್ ನಡೆಸಿದಾಗ ಅವರ ಎದೆಯ ಭಾಗದಲ್ಲಿ 12 ಸೆಂ.ಮೀಗೂ ಉದ್ದದ ಗಡ್ಡೆ ಇರುವುದು ಕಂಡು ಬಂದಿತು. ಮೊದಲಿಗೆ ಔಷಧಗಳ ಮೂಲಕ ರೋಗಿಯನ್ನು ಸ್ಥಿರಗೊಳಿಸಿದ ನಂತರ ಯಶಸ್ವಿಯಾಗಿ ಥೈಮೆಕ್ಟಮಿ ಮಾಡಲಾಯಿತು. ಎದೆಯ ಎಲುಬಿನ ಹಿಂಭಾಗದಲ್ಲಿ ಥೈಮಸ್ ಗ್ರಂಥಿಯನ್ನು ಶಸ್ತ್ರ ಚಿಕಿತ್ಸಾ ತಜ್ಞ ಡಾ. ಬಾಲಸುಬ್ರಮಣಿ ಆರ್. ಸಂಕಿರಣ ಶಸ್ತ್ರ ಚಿಕಿತ್ಸೆ ಮೂಲಕ ಸರಿಪಡಿಸಿದರು ಎಂದು ತಿಳಿಸಿದರು.

ಶಸ್ತ್ರಚಿಕಿತ್ಸೆಯ ಒತ್ತಡದಿಂದಾಗಿ ರೋಗಿಯು ಮೈಯಾಸ್ತೆನಿಕ್ಕ್ರೈಸಿಸ್‌ಗೆ ತುತ್ತಾದರು. ಅವರ ಉಸಿರಾಟದ ಸ್ನಾಯುಗಳು ತೀವ್ರವಾಗಿ ದುರ್ಬಲಗೊಂಡವು. ತಕ್ಷಣವೇ ಚಿಕಿತ್ಸೆ ನೀಡದಿದ್ದರೆ ಪ್ರಾಣಕ್ಕೇ ಕುತ್ತು ತರುವಂತಹ ಉಸಿರಾಟ ವೈಫಲ್ಯದ ಸ್ಥಿತಿ ಎದುರಾಯಿತು. ಪರಿಸ್ಥಿತಿಯ ಗಂಭೀರತೆ ಅರಿತ ವೈದ್ಯರ ತಂಡ ತಕ್ಷಣ ಕಾರ್ಯಪ್ರವೃತ್ತವಾಯಿತು. ಇಲ್ಲಿ ವೇಗವೇ ಮದ್ದು ಎಂದು ಡಾ. ಹಂಸ ಹೇಳಿದರು.

ರೋಗಿಯನ್ನು ತಕ್ಷಣ ಐಸಿಯುಗೆ ದಾಖಲಿಸಿ,ಕೃತಕಉಸಿರಾಟದವ್ಯವಸ್ಥೆಯನ್ನು (ಇಂಟ್ಯೂಬೇಷನ್) ಅಳವಡಿಸಲಾಯಿತು. ಈ ಸಂಘಟಿತ ಪ್ರಯತ್ನಕ್ಕೆ ಫಲ ಸಿಕ್ಕು ಮೂರು ಸುತ್ತಿನ ಪ್ಲಾಸ್ಮಾಫೆರೆಸಿಸ್ ಮತ್ತು ತೀವ್ರ ಘಟಕದ ಆರೈಕೆ ನಂತರ ಉಸಿರಾಟದ ಶಕ್ತಿ ಮರುಳಿತು. ನಾಲ್ಕು ದಿನಗಳ ಬಳಿಕ ರೋಗಿಯನ್ನು ವೆಂಟಿಲೇಟರ್‌ನಿಂದ ಹೊರತೆಗೆಯಲಾಯಿತು. 5ನೇ ದಿನದಂದು ವಾರ್ಡ್‌ಗೆ ಸ್ಥಳಾಂತರಿಸಿ ನಂತರ ಸುಸ್ಥಿತಿಯಲ್ಲಿ ಬಿಡುಗಡೆ ಮಾಡಲಾಯಿತು ಎಂದರು.

ತೀವ್ರ ನಿಗಾ ಘಟಕದ ವೈದ್ಯ ಡಾ.ದೀಪಕ್ ಶೆಟ್ಟಿ ಮಾತನಾಡಿ, ಅತ್ಯಂತ ಸಂಕೀರ್ಣ ವೈದ್ಯಕೀಯ ಸವಾಲುಗಳನ್ನು ನಿಖರತೆ ಮತ್ತು ಕಾಳಜಿಯಿಂದ ನಿಭಾಯಿಸಲು ಬದ್ಧರಾಗಿದ್ದು, ತಕ್ಷಣದ ಮತ್ತು ಉನ್ನತ ಮಟ್ಟದ ಚಿಕಿತ್ಸೆ ಅಗತ್ಯವಿರುವ ಮೈಯಾಸ್ತೇನಿಯಾ ಗ್ರಾವಿಸ್ ಪ್ರಕರಣಗಳನ್ನು ನಿರ್ವಹಿಸುವ ನಮ್ಮ ಸಾಮರ್ಥ್ಯಕ್ಕೆ ಈ ಘಟನೆ ಸಾಕ್ಷಿಯಾಗಿದೆ. ಸುಧಾರಿತ ನರರೋಗ ಚಿಕಿತ್ಸೆ ನೀಡುವಲ್ಲಿ ನಮ್ಮ ಆಸ್ಪತ್ರೆಯೂ ಸಿದ್ಧ ಇದೆ ಎಂಬುದನ್ನು ಇದು ಸಾಬೀತುಪಡಿಸಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಆಸ್ಪತ್ರೆಯ ಮಾರ್ಕೆಟಿಂಗ್ ಮ್ಯಾನೇಜರ್ ಶೈಲೇಶ್ ಎಸ್.ಎನ್, ಹಾಗೂ ಶಸ್ತ್ರಚಿಕಿತ್ಸೆಗೆ ಒಳಗಾದ ರೋಗಿ ಹಾಗೂ ಅವರ ಕುಟುಂಬದವರು ಉಪಸ್ಥಿತರಿದ್ದರು.

## ಶೇ.33 ಮಹಿಳಾ ಮೀಸಲಾತಿ ಮಸೂದೆ ಜಾರಿಗೊಳಿಸಿ

**ಶಿವಮೊಗ್ಗ :** ಕೇಂದ್ರ, ಸರ್ಕಾರ ಜಾರಿಗೊಳಿಸುತ್ತಿರುವ ಶೇ.33 ಮಹಿಳಾ ಮೀಸಲಾತಿ ಮಸೂದೆಯನ್ನು ಬರುವ 2028ರ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಜಾರಿಗೊಳಿಸಬೇಕೆಂದು ಶಾಂತವೇರಿ ಗೋಪಾಲಗೌಡ ಸಮಾಜವಾದಿ ಅಧ್ಯಯನ ಕೇಂದ್ರ ಟ್ರಸ್ಟ್ ಒತ್ತಾಯಿಸಿದೆ.

ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ಕಲ್ಲೂರು ಮೇಘರಾಜ್ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ದೇಶದ ಲೋಕಸಭೆ, ರಾಜ್ಯಸಭೆ ಹಾಗೂ ಎಲ್ಲಾ ರಾಜ್ಯಗಳಲ್ಲಿನ ವಿಧಾನಸಭೆ ಚುನಾವಣೆಗಳಲ್ಲಿ ಶೇ.33 ಸ್ಥಾನವನ್ನು ಮಹಿಳೆಯರಿಗೆ ಸಂವಿಧಾನಿಕವಾಗಿ ಮತ್ತು ಶಾಸನಬದ್ಧವಾಗಿ ನೀಡಬೇಕೆಂಬ ಮಹಿಳಾ ಸಮಾನತೆಯ ಹಾಗೂ ಹಕ್ಕುಗಳ ಪ್ರತಿಪಾದನೆಯನ್ನು ಮಹಿಳಾ ಮೀಸಲಾತಿ ಮಸೂದೆ ಮಾಡುತ್ತದೆ. ಕೂಡಲೇ ಕೇಂದ್ರ ಸರ್ಕಾರ ದೇಶದಲ್ಲಿ ಜನಗಣತಿ ನಡೆಸಿ ಕ್ಷೇತ್ರ ಪುನರ್‌ವಿಂಗಡಣೆ ಪ್ರಕ್ರಿಯೆಯನ್ನು ಕೈಗೊಳ್ಳಲು ಸಂಬಂಧಪಟ್ಟವರಿಗೆ ಸೂಚನೆ ನೀಡಬೇಕೆಂದು ಮನವಿ ಮಾಡಿದರು.

ಶೇ.33ರಷ್ಟು ಮಹಿಳಾ ಮೀಸಲಾತಿಯನ್ನು ಕರ್ನಾಟಕ ರಾಜ್ಯದಲ್ಲಿ ಜಾರಿಗೆ ತಂದಲ್ಲಿ ರಾಜ್ಯದ ಆಡಳಿತ ಶೈಲಿಯಲ್ಲಿ ಹೊಸ ಸಂವೇದನೆ ತರಬಹುದು. ಹೊಸ ನಾಯಕತ್ವದ ಉದಯಕ್ಕೂ ಶೇ.33ರಷ್ಟು ಮೀಸಲಾತಿ ನಾಂದಿ ಹಾಡಲಿದೆ. ಸಾಂಪ್ರದಾಯಿಕ ರಾಜಕೀಯಕ್ಕೆ ವಂಶಾವಳಿಗೆ ದೊಡ್ಡ ಸವಾಲಾಗಲಿದೆ. ಅಲ್ಲದೇ ಲಿಂಗ ಸಮಾನತೆಯನ್ನು ಸಹ ಶೇ.33 ಮಹಿಳಾ ಮೀಸಲಾತಿ ತರಲಿದೆ ಎಂದರು.

ವಿಶೇಷವಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಸಾಮಾನ್ಯ ಕ್ಷೇತ್ರಗಳಲ್ಲೂ ಮಹಿಳಾ ಸ್ಥಾನಗಳು ಸಮರ್ಪಕವಾಗಿ ಹಂಚಿಕೆಯಾಗಿ ಸಾಮಾಜಿಕ ನ್ಯಾಯದ ಹೊಸ ಆಯಾಮವೇ ತೆರೆದುಕೊಳ್ಳಲಿದೆ. ಸಮಾಜದಲ್ಲಿ ಅರ್ಧದಷ್ಟು ಸಂಖ್ಯೆಯಷ್ಟು ಮಹಿಳೆಯರಿದ್ದಾರೆ. ಮಹಿಳೆಯರನ್ನು ನಮ್ಮ ರಾಜಕೀಯ ವ್ಯವಸ್ಥೆ ಕೇವಲ ಚುನಾವಣೆ ವೇಳೆ ಮತ ಚಲಾಯಿಸಲು ಮಾತ್ರ ಬಳಸಿಕೊಂಡು ಶೋಷಣೆ ಮಾಡುತ್ತಿದೆ. ಕರ್ನಾಟಕದಲ್ಲಿ ಶೇ.33 ರಾಜಕೀಯ ಮಹಿಳಾ ಮೀಸಲಾತಿ ತಂದಲ್ಲಿ ಹೊಸ ಹೊಸ ಮಹಿಳಾ ಶಕ್ತಿಯು ಉದಯವಾಗಿ ಹೊಸ ಚಿಗುರು ಅಂದರೆ ಹೊಸ ತಲೆಮಾರು ಆವಿಷ್ಕಾರವಾಗುವುದಂತೂ ನಿಶ್ಚಿತ ಎಂದರು.

ಕರ್ನಾಟಕ ವಿಧಾನಸಭೆಯಲ್ಲಿ 224 ಸ್ಥಾನಗಳ ಪೈಕಿ ಹಾಲಿ ಕೇವಲ 10 ಮಹಿಳಾ ಶಾಸಕರಿದ್ದಾರೆ. ಕರ್ನಾಟಕ ಮಂತ್ರಿ ಮಂಡಲದ 34 ಸಚಿವರ ಪೈಕಿ ಒಬ್ಬರೇ ಮಹಿಳಾ ಸಚಿವರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಎನ್‌ಡಿಎ ಸರ್ಕಾರ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಶೇ.33ರಷ್ಟು ಮಹಿಳಾ ಮೀಸಲಾತಿಯನ್ನು ಜಾರಿಗೆ ತರಬೇಕೆಂದು ಆಗ್ರಹಿಸಿದರು.

ಟ್ರಸ್ಟ್‌ನ ಪ್ರಮುಖರಾದ ಶಂಕ್ರಾ ನಾಯ್ಕ, ಅಲೀಂಖಾನ್, ರಾಮಣ್ಣ, ಬಸವರಾಜ್, ಕೋಡ್ಲು ಶ್ರೀಧರ್, ಸುನೀಲ್‌ಕುಮಾರ್, ಮಂಜುಳಾ ಇದ್ದರು.

## ಸಸ್ಯ ವರ್ಗೀಕರಣ ಮಾಡಿ ಗುರುತಿಸಿ

**ಶೃಂಗೇರಿ:** ಸಸ್ಯ ಶಾಸ್ತ್ರದ ವಿದ್ಯಾರ್ಥಿಗಳಿಗೆ ಸಸ್ಯ ವರ್ಗೀಕರಣ ಮಾಡಿ ಗುರುತಿಸುವ ಸಾಮರ್ಥ್ಯ ಬೆಳಸಿಕೊಳ್ಳಬೇಕು ಎಂದು ಜೆಸಿಬಿಎಂ ಕಾಲೇಜು ಸಸ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಕುಮಾರಸ್ವಾಮಿ ಉಡುಪ ಹೇಳಿದರು.

ನೆಮ್ಮಾರ್ ಗ್ರಾಮ ಪಂಚಾಯಿತಿಯ ಹೊಸದೇವರಹಡ್ಲಿನಲ್ಲಿ ಅಜಸ್ರ ಚಾರಿಟೆಬಲ್ ಟ್ರಸ್ಟ್ ಮಂಗಳೂರು ವಿಶ್ವ ವಿದ್ಯಾನಿಲಯದ ಎಂಎಸ್ಸಿ ವಿದ್ಯಾರ್ಥಿಗಳಿಗೆ ಸಸ್ಯಗಳನ್ನು ಗುರುತಿಸುವಿಕೆ ಕಾರ್ಯಗಾರದಲ್ಲಿ ಮಾತನಾಡಿದರು. ವರ್ಗೀಕರಣವು ಎಲ್ಲಾ ಜೀವ ವಿಜ್ಞಾನಗಳ ಮೂಲವಾಗಿದ್ದು, ಸಸ್ಯಗಳನ್ನು ಸರಿಯಾಗಿ ಗುರುತಿಸುವುದು ಮತ್ತು ದಾಖಲಿಸುವುದು ಸಂರಕ್ಷಣಾ ಹಾಗೂ ಪರಿಸರ ಅಧ್ಯಯನಕ್ಕೆ ಅಗತ್ಯವಾಗಿದೆ ಎಂದರು.

ಡಾ.ಅಭಿಜಿತ್ ಮಾತನಾಡಿ, ಕಾರ್ಯಗಾರದಲ್ಲಿ 53 ಸಸ್ಯ ಪ್ರಬೇಧಗಳ ಅಧ್ಯಯನ ಮಾಡಿರುವುದು ಕೌಶಲ್ಯ ಮತ್ತು ಜೀವ ವೈವಿಧ್ಯ ಮೇಲಿನ ಅಂಶವನ್ನು ಬೆಳಸಲು ಸಹಾಯಕವಾಗುತ್ತದೆ. ಪಶ್ಚಿಮ ಘಟ್ಟದಲ್ಲಿ ಸಾವಿರಾರು ಬಗೆಯ ಸಸ್ಯ ಪ್ರಬೇಧವಿದ್ದು, ಇಲ್ಲಿನ ಮೂಲ ನಿವಾಸಿಗಳಿಗೆ ಸಸ್ಯಗಳ ಗುರುತು ಇರುತ್ತದೆ ಎಂದರು.

### ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಪ್ರಭುಲಿಂಗ ಕವಳಿಕಟ್ಟಿ ಸೂಚನೆ


# ಮಂಗ ಸತ್ತಿರುವ ಹಾಟ್ ಸ್ಪಾಟ್‌ಗಳಲ್ಲಿ ಹೆಚ್ಚಿನ ನಿಗಾವಹಿಸಿ

**ಶಿವಮೊಗ್ಗ :** ಮಲೆನಾಡಿನ ಭಾಗದಲ್ಲಿ ವಿಶೇಷವಾಗಿ ಮಂಗಸತ್ತಿರುವ ಹಾಟ್ ಸ್ಪಾಟ್‌ಗಳಲ್ಲಿ ಹೆಚ್ಚಿನ ನಿಗಾ ವಹಿಸಬೇಕು ಎಂದು ಜಿಲ್ಲಾಧಿಕಾರಿ ಪ್ರಭುಲಿಂಗ ಕವಳಿಕಟ್ಟಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಡಳಿತ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಏರ್ಪಡಿಸಲಾಗಿದ್ದ ಆರೋಗ್ಯ ಇಲಾಖೆಯ ವಿವಿಧ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಯಾವುದೇ ಜ್ವರ ಪ್ರಕರಣಗಳನ್ನು ಶೀಘ್ರವಾಗಿ ಪರಿಗಣಿಸಿ ಚಿಕಿತ್ಸೆ ನೀಡಬೇಕು. ಜ್ವರ ಸರ್ವೆ ಮಾಡಬೇಕು. ಎಲ್ಲಾ ತಾಲ್ಲೂಕು ಆಸ್ಪತ್ರೆಗಳಲ್ಲಿ 10 ಪ್ರತ್ಯೇಕ ಹಾಸಿಗೆಗಳನ್ನು ಮೀಸಲಿಡಬೇಕು ಎಂದು ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜನರು ತಮ್ಮ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು. ಆರೋಗ್ಯ ಇಲಾಖೆ, ಪಶುಪಾಲನೆ ಮತ್ತು ಪಶುವೈದ್ಯಕೀಯ, ಅರಣ್ಯ, ಆರ್ ಡಿಪಿಆರ್ ಸೇರಿದಂತೆ ವಿವಿಧ ಇಲಾಖೆಗಳು ಸಮನ್ವಯ ಸಾಧಿಸಿ ಕೆಎಫ್ ಡಿ ಹರಡದಂತೆ ಕ್ರಮಗಳನ್ನು ಕೈಗೊಳ್ಳಬೇಕು. ಈ ಭಾಗಗಳಲ್ಲಿ ಮಾಹಿತಿ, ಶಿಕ್ಷಣ, ಸಂವಹನ ಚಟುವಟಿಕೆಗಳನ್ನು ಹೆಚ್ಚಿಸಬೇಕು ಎಂದು ಸೂಚನೆ ನೀಡಿದರು.



ಕೆಎಫ್‌ಡಿ ಹರಡುವ ಉಣ್ಣೆಗಳು ನವೆಂಬರ್‌ನಿಂದ ಮೇವರೆಗೆ ಸಕ್ರಿಯವಾಗಿರುತ್ತವೆ. ಜನವರಿಯಿಂದ ಮಾರ್ಚ್‌ವರೆಗೆ ರೋಗ ಹರಡುವ ಅವಧಿಯಾಗಿರುವ ಕಾರಣ ಸಾಗರ, ಸೊರಬ, ಹೊಸನಗರ ಮತ್ತು ತೀರ್ಥಹಳ್ಳಿ ಭಾಗದಲ್ಲಿ ಜನರು ಸಾಕಷ್ಟು ಎಚ್ಚರಿಕೆ ವಹಿಸಬೇಕು. ತೋಟಕ್ಕೆ, ಕಾಡಿಗೆ ಹೋಗುವ ಜನರು ಅತ್ಯಂತ ಜಾಗರೂಕತೆಯಿಂದ ಇರಬೇಕು. ಡೇಪಾ ಎಣ್ಣೆಯನ್ನು ಲೇಪನ ಮಾಡಿಕೊಳ್ಳಬೇಕು ಹಾಗೂ ಜಾನುವಾರುಗಳಿಗೆ ಡೇಪಾ ತೈಲವನ್ನು ಲೇಪನ ಮಾಡಬೇಕೆಂದು ತಿಳಿಸಿದರು.

**ಜಾನುವಾರುಗಳಿಗೆ ಲಸಿಕೆ ಹಾಕಿಸಿ:** ಜಿ.ಪಂ ಸಿಇಓ ಎನ್.ಹೇಮಂತ್ ಮಾತನಾಡಿ, ಜಾನುವಾರುಗಳಿಂದ ಕೆಎಫ್‌ಡಿ ಹರಡುವುದನ್ನು ತಡೆಗಟ್ಟುವ ಸಲುವಾಗಿ ಜಾನುವಾರುಗಳಿಗೆ ಲಸಿಕೆ ನೀಡಬೇಕು. ದಾಸ್ತಾನು ಇಲ್ಲದಿದ್ದರೆ ತಕ್ಷಣ ಲಸಿಕೆ ತರಿಸಿಕೊಳ್ಳಬೇಕು. ಜಾನುವಾರುಗಳಿಗೆ ಎರಡು ಡೋಸ್ ಲಸಿಕೆ ನೀಡಬೇಕು. ಡೇಪಾ ಎಣ್ಣೆಯನ್ನು ಜಾನುವಾರುಗಳಿಗೆ ಲೇಪನ ಮಾಡಲು ನೀಡಬೇಕು ಮತ್ತು ತೋಟಕ್ಕೆ, ಹೊರಗೆ ಕೆಲಸಕ್ಕೆ ಹಾಗೂ ಕಾಡಿಗೆ ಹೋಗುವ ಜನರಿಗೆ ನೀಡಬೇಕು ಎಂದು ಸೂಚನೆ ನೀಡಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಅಭಿಷೇಕ್ ವಿ, ಡಿಹೆಚ್ ಓ ಡಾ.ನಟರಾಜ್, ಆರ್ ಸಿಹೆಚ್ ಅಧಿಕಾರಿ ಡಾ.ಓ.ಮಲ್ಲಪ್ಪ, ಡಾ.ಗುಡುದಪ್ಪ, ಡಾ.ಹರ್ಷವರ್ಧನ್ ಹಾಜರಿದ್ದರು.

### ಸೂಕ್ತ ಕ್ರಮ ಕೈಗೊಳ್ಳಲಾಗಿದೆ

ಡಿಎಚ್‌ಓ ಡಾ.ನಾಗರಾಜ ನಾಯ್ಕ್ ಮಾತನಾಡಿ, ಕೆಎಫ್‌ಡಿ ಪ್ರಕರಣ ಪತ್ತೆಗಾಗಿ ಜಿಲ್ಲೆಯಲ್ಲಿ ಇಲ್ಲಿಯರೆಗೆ 5202 ಆರ್ ಟಿಪಿಸಿ ಆರ್ ಪರೀಕ್ಷೆ ನಡೆಸಲಾಗಿದೆ. 59 ಪಾಸಿಟಿವ್ ಬಂದಿದೆ. 01 ಮರಣ ಸಂಭ ವಿಸಿದೆ. 457 ಉಣ್ಣೆ ಸಂಗ್ರಹಿಸಿದ್ದು, ಯಾವುದೇ ಪಾಸಿಟಿವ್ ಪ್ರಕರಣ ಬಂದಿಲ್ಲ, 114 ಮಂಗಗಳ ಸಾವು ಸಂಭವಿಸಿದೆ. ಅಟಾಪ್ಸಿಯಲ್ಲಿ 31 ಪಾಸಿಟಿವ್ ಬಂದಿದೆ. ಮಂಗಗಳ ಸಾವು ಸಂಭವಿಸಿದ ಸುತ್ತಮುತ್ತಲಿನ ಪ್ರದೇಶವನ್ನು ಹಾಟ್ ಸ್ಪಾಟ್ ಎಂದು ಗುರುತಿಸಿ, ಇಲ್ಲಿ ರಾಸಾಯನಿಕಗಳನ್ನು ಸಿಂಪಡಿಸಿ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದರು.

### 47 ಹಾವು ಕಡಿತ:

ಜಿಲ್ಲೆಯಲ್ಲಿ ಜನವರಿಯಿಂದ ಈವರೆಗೆ 47 ಜನರು ಹಾವು ಕಡಿತಕ್ಕೆ ಒಳಗಾಗಿದ್ದಾರೆ. ಯಾವುದೇ ಸಾವು ಸಂಭವಿಸಿಲ್ಲ, ಎಲ್ಲ ಆಸ್ಪತ್ರೆಗಳಲ್ಲಿ ಹಾವು ಕಡಿತಕ್ಕೆ ಚಿಕತ್ಸೆಗೆ ಅಗತ್ಯ ಔಷಧಗಳನ್ನು ಲಭ್ಯವಿರುವಂತೆ ನೋಡಿ ಕೊಳ್ಳಬೇಕು ಎಂದು ಕವಳಿಕಟ್ಟಿ ತಿಳಿಸಿದರು.

### ನಾಯಿ ಕಡಿತ-ಶೀಘ್ರ ಚಿಕಿತ್ಸೆ

ನಾಯಿ ಕಡಿತದಿಂದ ಉಂಟಾಗುವ ರೇಬಿಸ್ ಕಾಯಿಲೆ ಮಾರಣಾಂತಿಕವಾಗಿದ್ದು, ನಾಯಿ ಕಚ್ಚಿದ ತಕ್ಷಣ ಚಿಕಿತ್ಸೆ ಪಡೆಯಬೇಕು. ಕಡ್ಡಾಯವಾಗಿ ಆಂಟಿ ರೇಬಿಸ್ ಚುಚ್ಚುಮದ್ದು ಪಡೆಯಬೇಕು. ಮನೆ ಮಾಲೀಕರು ಮನೆಯಲ್ಲಿನ ನಾಯಿಗಳಿಗೆ ಹಾಗೂ ಸ್ಥಳೀಯ ಸಂಸ್ಥೆಗಳು, ಪಶುಪಾಲನೆ, ಪಶು ವೈದ್ಯಕೀಯ ಇಲಾಖೆ ಸೇರಿದಂತೆ ಸಂಬಂಧಿಸಿದ ಇಲಾಖೆ ಬೀದಿ ನಾಯಿಗಳಿಗೆ ಆಂಟಿ ರೇಬಿಸ್ ಚುಚ್ಚುಮದ್ದು ನೀಡಲು ಕ್ರಮ ಕೈಗೊಳ್ಳಬೇಕು. ಹೋಟೆಲ್‌ಗಳು, ಬೀದಿ ಬದಿ ತಿಂಡಿ ಅಂಗಡಿ ಉಳಿದ ತ್ಯಾಜ್ಯ ಆಹಾರವನ್ನು ಸಮರ್ಪಕವಾಗಿ ವಿಲೇವಾರಿ ಮಾಡಬೇಕು ಎಂದು ಡಿಸಿ ಸೂಚನೆ ನೀಡಿದರು.

### 14 ಮಂದಿ ಸಾವು

ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಡಾ.ಕಿರಣ್ ಮಾತನಾಡಿ, ಜಿಲ್ಲೆಯಲ್ಲಿ 2025 ರ ಏಪ್ರಿಲ್ ಮಾಹೆಯಿಂದ 2026 ರ ಫೆಬ್ರವರಿವರೆಗೆ 257 ಹೆಚ್‌ಐವಿ ಪ್ರಕರಣಗಳು ದಾಖಲಾಗಿದೆ. 230 ಜನರಿಗೆ ಎಆರ್‌ಟಿ ಚಿಕಿತ್ಸೆ ನೀಡಲಾಗುತ್ತಿದೆ. 14 ಜನ ಮರಣ ಹೊಂದಿದ್ದಾರೆ ಎಂದು ತಿಳಿಸಿದರು.

### ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ನ್ಯಾ.ಎಂ.ವಿಜಯ್ ಅಭಿಮತ

# ಲಿಂಗ ಸಮಾನತೆ ಕಾಯ್ದುಕೊಳ್ಳಬೇಕು



• **ಚಿತ್ರದುರ್ಗ:** ಸಮಾಜದಲ್ಲಿ ಲಿಂಗ ಸಮಾನತೆ ಕಾಯ್ದುಕೊಳ್ಳುವ ಮೂಲಕ ಮಹಿಳೆಯರಿಗೆ ಗೌರವ ಮತ್ತು ಸಮಾನ ಅವಕಾಶ ನೀಡಿದಾಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ಎಂ.ವಿಜಯ್ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ವಿವಿಧ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ನಗರದ ಜಿಲ್ಲಾ ಬಾಲ ಭವನದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ಮಹಿಳೆಯರಿಗೆ ಸಮಾಜದಲ್ಲಿ ಕೇವಲ ಗೌರವ ನೀಡುವುದಷ್ಟೇ ಅಲ್ಲದೆ, ಅವರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಸಮಾನ ಅವಕಾಶ ಕಲ್ಪಿಸಿಕೊಡಬೇಕು. ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರು ಮುಂದೆ ಬರಲು ಅಗತ್ಯವಿರುವ ಸಂಪನ್ಮೂಲಗಳನ್ನು ಒದಗಿಸಬೇಕು. ಉದ್ಯಮಶೀಲತೆ ಸೇರಿದಂತೆ ಎಲ್ಲಾ ವೃತ್ತಿಗಳಲ್ಲಿ ಪುರುಷರಿಗೆ ಸಮಾನವಾಗಿ ಗುರುತಿಸಿಕೊಳ್ಳುವಂತಾಗಬೇಕು. ಲಿಂಗದ ಆಧಾರದ ಮೇಲೆ ನಡೆಯುವ ತಾರತಮ್ಯ ಸಂಪೂರ್ಣವಾಗಿ ನಿಲ್ಲಿಸಬೇಕು ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಕೆ.ಎಚ್.ವಿಜಯಕುಮಾರ್ ಮಾತನಾಡಿ, ಪ್ರಸ್ತುತ ದಿನಗಳಲ್ಲಿ ಎಸ್ ಎಸ್‌ಎಲ್‌ಸಿ, ಪಿಯುಸಿ ಮತ್ತು ಉನ್ನತ ಶಿಕ್ಷಣದ ಫಲಿತಾಂಶಗಳಲ್ಲಿ ಹೆಣ್ಣುಮಕ್ಕಳು ಪುರುಷರಿಗಿಂತ ಉತ್ತಮ ಸಾಧನೆ ಮಾಡುತ್ತಿದ್ದಾರೆ. ಮಹಿಳೆಯರಿಗೆ ರಾಜಕೀಯದಲ್ಲಿ ಮೀಸಲಾತಿ ಹೆಚ್ಚಳವಾಗುತ್ತಿರುವ ಹಿನ್ನೆಲೆಯಲ್ಲಿ ಮುಂದಿನ ದಿನಗಳಲ್ಲಿ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿ ಶಾಸಕರು ಮತ್ತು ಮುಖ್ಯಮಂತ್ರಿಗಳಾಗಿ ಆಡಳಿತ ನಡೆಸುವ ದಿನಗಳು ದೂರವಿಲ್ಲ ಎಂದು ಹೇಳಿದರು.

ಗ್ರಾಮ ಮಟ್ಟದಲ್ಲಿ ಕೆಲಸ ಮಾಡುವ ಅಂಗನವಾಡಿ ಕಾರ್ಯಕರ್ತರು ಮತ್ತು ಶಿಕ್ಷಕರು ಬಾಲ್ಯ ವಿವಾಹದ ದುಷ್ಪರಿಣಾಮಗಳ ಬಗ್ಗೆ ಪೋಷಕರಲ್ಲಿ ಜಾಗೃತಿ ಮೂಡಿಸಬೇಕು. ಬಾಲ್ಯವಿವಾಹದಿಂದ ತಾಯಿ ಮತ್ತು ಮಗುವಿನ ಆರೋಗ್ಯದ ಮೇಲೆ ಗಂಭೀರ ಪರಿಣಾಮಗಳಾಗುತ್ತವೆ. ಮುಖ್ಯವಾಗಿ ಅಪೌಷ್ಟಿಕತೆ ಮತ್ತು ಅಂಗವೈಕಲ್ಯದಂತಹ ಸಮಸ್ಯೆಗಳು ಕಾಡುತ್ತವೆ. ಬಾಲ್ಯವಿವಾಹದ ಬಗ್ಗೆ ಮಾಹಿತಿ ದೊರೆತರೆ ತಕ್ಷಣವೇ 1098 ಸಹಾಯವಾಣಿಗೆ ಕರೆ ಮಾಡುವ ಮೂಲಕ ಬಾಲ್ಯ ವಿವಾಹ ತಡೆದು ಮಗುವಿನ ಶಿಕ್ಷಣಕ್ಕೆ ಒತ್ತು ನೀಡುವಂತೆ ತಿಳಿಸಿದರು.

ಪ್ರಸೂತಿ, ಸ್ತ್ರೀರೋಗ ಮತ್ತು ಬಂಜೆತನ ನಿವಾರಣಾ ತಜ್ಞರಾದ ಡಾ.ಜ್ಯೋತಿ ಶರತ್ ಕುಮಾರ್ ಉಪನ್ಯಾಸ ನೀಡಿ, ಮಕ್ಕಳು ಅಂಗನವಾಡಿಯಿಂದ ಬಂದ ನಂತರ ಅವರೊಂದಿಗೆ ಸಂವಹನ ನಡೆಸುವ ಬದಲು ಅವರಿಗೆ ಟಿವಿ ಅಥವಾ ಮೊಬೈಲ್ ಗಮನಿಸಲು ಅವಕಾಶ ನೀಡುತ್ತಿರುವುದು ಮಕ್ಕಳ ಬೆಳವಣಿಗೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ. ಗಂಡು ಮತ್ತು ಹೆಣ್ಣು ಮಕ್ಕಳ ನಡುವೆ ಯಾವುದೇ ವ್ಯತ್ಯಾಸ ಮಾಡಬಾರದು. ಗಂಡು ಮಕ್ಕಳಿಗೂ ಮನೆಯ ಕೆಲಸಗಳನ್ನು ಕಲಿಸುವ ಮೂಲಕ ಪೇರೆಂಟೆಡ್ ಕಿಡ್ಸ್ ಆಗಿ ಬೆಳೆಸಬೇಕು. ಇದರಿಂದ ಮುಂದಿನ ದಿನಗಳಲ್ಲಿ ಕೌಟುಂಬಿಕ ಸಾಮರಸ್ಯ ಸಾಧ್ಯವಾಗುತ್ತದೆ ಎಂದು ಹೇಳಿದರು.

» ಮಹಿಳೆಯರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಸಮಾನ ಅವಕಾಶ ಕಲ್ಪಿಸಿಕೊಡಬೇಕು.

» ವಿವಿಧ ಕ್ಷೇತ್ರಗಳಲ್ಲಿ ಮುಂದೆ ಬರಲು ಅಗತ್ಯವಿರುವ ಸಂಪನ್ಮೂಲಗಳನ್ನು ಒದಗಿಸಬೇಕು.

ಮಹಿಳೆಗೆ ಭೂಮಿ ತೂಕದ ಅರ್ಥವಿದೆ. ಸಹಜತೆಯಲ್ಲಿ, ಆಕರ್ಷಣೆ, ಸೌಂದರ್ಯ, ಸೊಗಸಿರುತ್ತದೆ. ಮಹಿಳೆ ಸಾಂಸ್ಕೃತಿಕ, ಸಂಘಟನಾತ್ಮಕವಾಗಿ ಬೆಳೆಯಬೇಕು. ಸಾಧನೆಗೆ ಪೂರಕವಾದ ವಾತಾವರಣ ಸೃಷ್ಟಿಯಾಗಬೇಕು. ಹೆಣ್ಣಾದರೆ ಮಾತ್ರ ಶರಣಾಗಲು ಸಾಧ್ಯ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಜಿಲ್ಲಾ ನಿರೂಪಣಾಧಿಕಾರಿ ಡಿ.ಮಂಜುನಾಥ, ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿ ಜೆ.ವೈಶಾಲಿ, ಔಟಲವೆಡ್ ಭಾರತ ಎನ್‌ಜಿಒ ಮಿಮಾನಸ ಸಿಂಗ್ ಹಾಗೂ ಗಾಯಿತ್ರಿ ಶಿವರಾಮ್ ಸೇರಿದಂತೆ ವಿವಿಧ ಇಲಾಖೆಯ ಸಿಬ್ಬಂದಿಗಳು ಹಾಜರಿದ್ದರು.

# ಹಿರಿಯೂರಲ್ಲಿ ರೈತರ ಪ್ರತಿಭಟನೆ



• **ಹಿರಿಯೂರು:** ಭಾರತೀಯ ಕಿಸಾನ್ ಸಂಘದಿಂದ ಬೆಸ್ಕಾಂ ಇಲಾಖೆ ಮುಂದೆ ಪ್ರತಿಭಟನೆ ನಡೆಸಲಾಯಿತು. ಬೆಸ್ಕಾಂ ಇಲಾಖೆಯಿಂದ ರೈತರಿಗೆ ಕೊಡುತ್ತಿರುವ ದುರಸ್ತಿಯಾದ ಪರಿವರ್ತಕಗಳು ಕಳಪೆ ಗುಣಮಟ್ಟದಿಂದ ಕೂಡಿದ್ದು ವಿತರಿಸಿದ ಒಂದು ದಿನದೊಳಗೆ ಸುಟ್ಟು ಹೋಗುತ್ತಿರುವ ವರದಿಗಳು ಹಾಗೂ ಆಯಿಲ್ ಲೀಕೇಜ್ ಆಗಿ ಸುಟ್ಟು ಹೋಗುತ್ತಿರುವ ವರದಿಗಳು ಸಂಘಟನೆ ಮುಖಂಡರಿಗೆ ಹಲವಾರು ರೈತರಿಂದ ಕೇಳಿ ಬಂದಿರುತ್ತವೆ ಆದ್ದರಿಂದ ಇಂದು ಭಾರತೀಯ ಕಿಸಾನ್ ಸಂಘ ಹಾಗೂ ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ರೈತರ ಜೊತೆಗೂಡಿ ಪ್ರತಿಭಟನೆ ನಡೆಸಲಾಯಿತು.

ಕರ್ನಾಟಕ ರಾಜ್ಯ ರೈತ ಸಂಘ ಯುವ ಘಟಕದ ತಾಲ್ಲೂಕು ಅಧ್ಯಕ್ಷ ಚೇತನ್ ಯಳನಾಡು ಮಾತನಾಡಿ, 72 ಗಂಟೆಯ ಯೊಳಗೆ ಸುಟ್ಟು ಹೋದ ಪರಿವರ್ತಕವನ್ನು ಬದಲಾಯಿಸಿಕೊಡುವ ಆದೇಶವಿದ್ದರೂ ಕೂಡ ನೀವು ಅದನ್ನು ಗಾಳಿಗೆ ತೂರಿ ಆಯಿಲ್ ಬಂದಿಲ್ಲ ದುರಸ್ಥಿಯಾದ ಪರಿವರ್ತಕ ಗಳು ಸ್ಟಾಕ್ ಇಲ್ಲವೆಂದು ಸಬೂಬು ಹೇಳಿಕೊಂಡು ರೈತರನ್ನು ಇಲಾಖೆಯ ಮುಂದೆ ಅಲೆದಾಡುಸುತ್ತಿರುವ ವಿಚಾರ ಕಂಡು ಬಂದಿರುತ್ತದೆ. ದೂರದ ಮೊಳಕಾಲ್ಮೂರು, ತಳುಕು, ಚಳ್ಳಕೆರೆಯಿಂದ ರೈತರು ಬಂದು ಅಧಿಕಾರಿಗಳ ಹತ್ತಿರ ಅಲೆದು ಸಾಕಾಗಿ ಕೊನೆಗೆ ಊಟವಿಲ್ಲದೆ ಮರದಡಿ ಮಲಗಿಕೊಂಡಿರುತ್ತಾರೆ. ದುರಸ್ಥಿಯಾದ ಪರಿವರ್ತಕಗಳು ಎಲ್ ಟಿ ಲೈನ್ ಚಾರ್ಜ್ ಆಗದೆ ಸುಟ್ಟು ಹೋಗಿರುವ ವರದಿಗಳಿವೆ. ಹಾಗೂ ಈ ವಿಚಾರವನ್ನು ನೀವು ಮನ ಗಂಡು ಈ ರೀತಿ ಕಳಪೆ ಪರಿವರ್ತಕಗಳನ್ನು ದುರಸ್ಥಿ ಮಾಡಿ ಕೊಡುವ ಕಂಪನಿ ಮಾಲೀಕರ ವಿರುದ್ಧ ಕೂಡಲೇ ಕ್ರಮ ಕೈಗೊಳ್ಳುವ ಬದಲು ರೈತರು ಅಕ್ರಮವಾಗಿ ಅಳವಡಿಸಿಕೊಂಡಿರುತ್ತಾರೆ ಎಂದರು.

ಈ ವಿಚಾರವಾಗಿ ಇಲಾಖೆಯವರು ಕಳಪೆ ಪರಿವರ್ತಕ ದುರಸ್ಥಿ ಮಾಡುವವರ ವಿರುದ್ಧ ಕ್ರಮ ಕೈಗೊಂಡು ರೈತರಿಗೆ ಗುಣಮಟ್ಟದ ವಿದ್ಯುತ್ ನೀಡಿ ಸಮಸ್ಯೆಗಳನ್ನು ಈಡೇರಿಸಬೇಕು. ಇಲ್ಲವಾದಲ್ಲಿ ನಿಮ್ಮ ವಿರುದ್ಧ ದೊಡ್ಡ ಮಟ್ಟದ ಪ್ರತಿಭಟನೆಯನ್ನು ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು. ಭಾರತೀಯ ಕಿಸಾನ್ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಂಜುನಾಥ, ಕಿಸಾನ್ ಸಂಘದ ತಾಲ್ಲೂಕು ಅಧ್ಯಕ್ಷ ಗಡಾರಿ ಕೃಷ್ಣಪ್ಪ ಕಾರ್ಯದರ್ಶಿ ಚಂದ್ರಗಿರಿ, ಸಹ ಕಾರ್ಯದರ್ಶಿ ಜಯಪ್ರಕಾಶ, ನಿಂಗಮ್ಮ, ನಿಂಗಣ್ಣ ಇದ್ದರು.

# ತ್ಯಾವಣಿಗೆಯಲ್ಲಿ ಕವಿಗೋಷ್ಠಿ, ಪುಸ್ತಕ ಬಿಡುಗಡೆ



• **ತ್ಯಾವಣಿಗೆ:** ಪವರ್ ಸ್ಟಾರ್ ಅಪ್ಪು ಟ್ರಸ್ಟ್, ಚುಟುಕು ಸಾಹಿತ್ಯ ಪರಿಷತ್ ತಾಲೂಕು ಘಟಕ ಚನ್ನಗಿರಿ, ಪವರ್ ಸ್ಟಾರ್ ಅಪ್ಪು ಪತ್ತಿನ ಸಹಕಾರ ಸಂಘ ಐವಿನ್ ಕಂಪ್ಯೂಟರ್ ತರಬೇತಿ ಕೇಂದ್ರ ಇವರ ಸಹಯೋಗದಲ್ಲಿ ಪವರ್ ಸ್ಟಾರ್ ಅಪ್ಪು ಜನ್ಮದಿನದ ಅಂಗವಾಗಿ ಕವಿಗೋಷ್ಠಿ, ಶಿಕ್ಷಕ ರುದ್ರಪ್ಪ ಎಸ್ ಕುಂಚೂರು ಇವರ 'ಬದುಕಲು ಏನು ಬೇಕಿದೆ' ಕವನ ಸಂಕಲನ ಬಿಡುಗಡೆ ಹಾಗೂ ಅಭಿನಂದನಾ ಕಾರ್ಯಕ್ರಮವನ್ನು ತ್ಯಾವಣಿಗೆಯ ಪವರ್ ಸ್ಟಾರ್ ಅಪ್ಪು ಪತ್ತಿನ ಸಹಕಾರ ಸಂಘದ ಆವರಣದಲ್ಲಿ ಮಂಗಳವಾರ ಹಮ್ಮಿಕೊಳ್ಳಲಾಗಿತ್ತು

ಪುಸ್ತಕ ಬಿಡುಗಡೆಗೊಳಿಸಿದ ಸಾಹಿತಿ ಓಂಕಾರಯ್ಯ ತವನಿಧಿ ಮಾತನಾಡಿ, ಕಾವ್ಯ ಮತ್ತು ಗದ್ಯಕ್ಕಿರುವ ವ್ಯತ್ಯಾಸದ ಬಗ್ಗೆ ತಿಳಿಸಿದರು. 'ಬದುಕಲು ಏನು ಬೇಕಿದೆ' ಕವನ ಸಂಕಲನ ಓದುಗರ ಹೃದಯವನ್ನು ತಟ್ಟುತ್ತದೆ ಎಂದು ಹೇಳಿದರು.

ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಎಸ್. ವೀರಭದ್ರಪ್ಪ ತೆಲಗಿ ಪುಸ್ತಕ ಕುರಿತು ವಿಮರ್ಶೆ ಮಾಡಿದರು, ಹಿರೇಕೋಗಲೂರಿನ ಡಾ.ಎಂ.ಚಿದಾನಂದಮೂರ್ತಿ ಸಾಹಿತ್ಯ ಪ್ರತಿಷ್ಠಾನದ ಅಧ್ಯಕ್ಷ ಹೆಚ್.ಯು.ಮಲ್ಲಿಕಾರ್ಜುನ ಕವಿಗೋಷ್ಠಿ ಉದ್ಘಾಟನೆ ಮಾಡಿದರು.

ತ್ಯಾವಣಿಗೆಯ ಮಂದಾರ ಶಾಲೆಯ ಮುಖ್ಯ ಶಿಕ್ಷಕಿ ವೀಣಾ ಮಂಜುನಾಥ್, ಬಿ.ಇಡಿಯಲ್ಲಿ ರ‍್ಯಾಂಕ್ ಗಳಿಸಿರುವ ಚನ್ನಗಿರಿಯ ನೂರ್ ಜಬೀಯ ಖಾನಂ, ನಿವೃತ್ತ ದೈಹಿಕ ಶಿಕ್ಷಣ ಶಿಕ್ಷಕ ಹೆಚ್.ಎಂ.ಸಿದ್ದಯ್ಯ ಇವರನ್ನು ಸನ್ಮಾನಿಸಲಾಯಿತು ಹಾಗೂ ಮಾದರಿ ದಾಂಪತ್ಯ ಜೀವನ ನಡೆಸಿರುವ ಸಿದ್ದಮ್ಮ-ರುದ್ರಪ್ಪ ದಂಪತಿಯನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು

ತಾಲೂಕು ಚುಟುಕು ಸಾಹಿತ್ಯ ಪರಿಷತ್ ಗೌರವಾಧ್ಯಕ್ಷ ಹ.ರು.ಗಂಗಾಧರಯ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಆರ್.ನಾಗೇಂದ್ರಪ್ಪ, ಗ್ರಾಪಂ ಮಾಜಿ ಅಧ್ಯಕ್ಷ ಬಿ ಎನ್ ಸಿದ್ದಪ್ಪ, ಸಾಹಿತಿ ನಿಟ್ಟೂರು ಮಹಾಂತೇಶ್, ಪ್ರಮುಖರಾದ ಆರ್.ಜಯರಾಮ್, ಸುಧಾಕರ್, ಶಿಲ್ಪ ಮಂಜುನಾಥ್, ಶಿವಯೋಗಿ ಹಿರೇಮಠ್, ಕೆ.ಎಂ. ಲಿಂಗಾನಂದ, ಎಂ.ಪಿ. ಶ್ರೀನಿವಾಸಮೂರ್ತಿ, ಎಚ್.ಆರ್ .ದೇವೇಂದ್ರಪ್ಪ ಗೌಡ, ಮಹೇಶ್ವರಪ್ಪ ಗೌಡ ಯತ್ತಿಗೆ, ಚೇತನ್ ಕುಮಾರ್, ಮುಖ್ಯ ಶಿಕ್ಷಕ ತಿಪ್ಪೇಸ್ವಾಮಿ, ಶಿಕ್ಷಕ ರವಿಪ್ರಕಾಶ್, ಚನ್ನಗಿರಿಯ ಸತೀಶ್ ಪವಾರ್ ಇದ್ದರು.

# ತಮ್ಮ ಹಕ್ಕುಗಳ ಬಗ್ಗೆ ಜಾಗರೂಕರಾಗಿರಬೇಕು

• **ಚಿತ್ರದುರ್ಗ:** ಮಗು ತಾಯಿಯ ಗರ್ಭದಲ್ಲಿ ಇದ್ದಾಗಿನಿಂದಲೇ ಯಾವುದಾದರೂ ಒಂದು ರೂಪದಲ್ಲಿ ಗ್ರಾಹಕನಾಗಿರುತ್ತದೆ. ಹೀಗಾಗಿ ಪ್ರತಿಯೊಬ್ಬರೂ ತಮ್ಮ ಹಕ್ಕುಗಳ ಬಗ್ಗೆ ಜಾಗೃತಿ ಬೆಳೆಸಿಕೊಳ್ಳಬೇಕು ಎಂದು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷೆ ಬಿ.ಹೆಚ್.ಯಶೋಧ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಕಾನೂನು ಮಾಪನಾಶಾಸ್ತ್ರ ಇಲಾಖೆ, ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆ, ಜಿಲ್ಲಾ ವಕೀಲರ ಸಂಘ, ಜಿಲ್ಲಾ ಅಡುಗೆ ಅನಿಲ ವಿತರಕರು, ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ) ಇವರುಗಳ ಸಂಯುಕ್ತಾಶ್ರಯದಲ್ಲಿ 'ಸುರಕ್ಷಿತ ಉತ್ಪನ್ನಗಳು, ಆತ್ಮವಿಶ್ವಾಸದ ಗ್ರಾಹಕರು' ಎಂಬ ಘೋಷವಾಕ್ಯದೊಂದಿಗೆ ನಗರದ ಸರ್ಕಾರಿ ಕಲಾ ಕಾಲೇಜಿನಲ್ಲಿ ಸೋಮವಾರ ಹಮ್ಮಿಕೊಂಡಿದ್ದ 'ವಿಶ್ವ ಗ್ರಾಹಕರ ದಿನಾಚರಣೆ' ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಯಾವುದೇ ವಸ್ತು ಅಥವಾ ಸೇವೆಯನ್ನು ಹಣ ನೀಡಿ ಪಡೆದಾಗ ಅದಕ್ಕೆ ಸಂಬಂಧಿಸಿದ ಅಧಿಕೃತ ರಶೀದಿಯನ್ನು ಪಡೆಯುವುದು ಅತ್ಯಗತ್ಯ. ರಶೀದಿ ಇಲ್ಲದಿದ್ದರೆ ಗ್ರಾಹಕರು ನ್ಯಾಯಾಲಯದಲ್ಲಿ ಪರಿಹಾರ ಪಡೆಯಲು ಅರ್ಹರಾಗುವುದಿಲ್ಲ ಎಂದು ತಿಳಿಸಿದರು.

ಸರ್ಕಾರಿ ಕಲಾ ಕಾಲೇಜಿನ ಪ್ರಾಂಶುಪಾಲರಾದ ಡಾ.ಜೆ. ಕರಿಯಪ್ಪ ಮಾಳಿಗೆ ಮಾತನಾಡಿ, ನಾವೆಲ್ಲರೂ ಹುಟ್ಟು ಮತ್ತು ಸಾವಿನ ಮಧ್ಯೆ ನಿರಂತರವಾಗಿ ಗ್ರಾಹಕರಾಗಿರುತ್ತೇವೆ. ಆದ್ದರಿಂದ



ಗ್ರಾಹಕ ಹಕ್ಕುಗಳ ಬಗ್ಗೆ ತಿಳುವಳಿಕೆ ಹೊಂದುವುದು ಬದುಕಿನ ಶಿಕ್ಷಣದ ಒಂದು ಭಾಗವಾಗಿದೆ ಎಂದು ತಿಳಿಸಿದರು.

ಗ್ರಾಹಕರ ಹಿತರಕ್ಷಣೆಗಾಗಿ ಜಿಲ್ಲಾ, ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದ ಆಯೋಗಗಳನ್ನು ರಚಿಸಲಾಗಿದ್ದು, ಜಿಲ್ಲಾ ಆಯೋಗದಲ್ಲಿ 50 ಲಕ್ಷ ರೂಪಾಯಿವರೆಗೂ ಪರಿಹಾರ ಪಡೆಯಲು ಅವಕಾಶವಿದೆ. ವಸ್ತು ಅಥವಾ ಸೇವೆಯಲ್ಲಿ ದೋಷ ಕಂಡುಬಂದ ಎರಡು ವರ್ಷದೊಳಗಾಗಿ ದೂರು ಸಲ್ಲಿಸಬೇಕು ಎಂದು ಅವರು ಮಾಹಿತಿ ನೀಡಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ಎಂ. ವಿಜಯ್ ಕಾರ್ಯಕ್ರಮ ಉದ್ಘಾಟಿಸಿದರು. ವಕೀಲರ ಸಂಘದ ಅಧ್ಯಕ್ಷ ಹೆಚ್.ಎಸ್.ಮಹೇಶ್ವರಪ್ಪ, ಆಹಾರ ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ ಜಂಟಿ ನಿರ್ದೇಶಕ ಶಿದ್ರಾಮ ಮಾರಿಹಾಳ, ಕಾನೂನು ಮಾಪನಾ ಶಾಸ್ತ್ರ ಸಹಾಯಕ ನಿಯಂತ್ರಕ ಚನ್ನಬಸಪ್ಪ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಸದಸ್ಯೆ ಯು.ಬಿ.ಗೀತಾ ಹಾಜರಿದ್ದರು.



**ಪುನೀತ್ ರಾಜಕುಮಾರ್ ಅವರ 51ನೇ ವರ್ಷದ ಹುಟ್ಟುಹಬ್ಬವನ್ನು ಚಿಕ್ಕಜಾಜೂರಿನಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಸಮಯದಲ್ಲಿ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರಿಗೆ ಅನ್ನ ಸಂತರ್ಪಣೆ ನೆರವೇರಿತು. ಕಾರ್ಯಕ್ರಮದಲ್ಲಿ ಮಂಜುನಾಥ್, ಚಂದ್ರಣ್ಣ ಇದ್ದರು.**

## ಸಾರಿಗೆ ಸಚಿವಗೆ ಮನವಿ

• **ಹಿರಿಯೂರು:** ಹಿರಿಯೂರು ನಗರ ಬಸ್ ನಿಲ್ದಾಣದಲ್ಲಿ ನಾಲ್ಕು ವಿಭಾಗಗಳಿಂದ ಸುಮಾರು 800ಕ್ಕೂ ಹೆಚ್ಚು ಬಸ್ಸುಗಳು ಸಂಚಾರ ಮಾಡುತ್ತಿದ್ದು, ಸರ್ಕಾರದ ಶಕ್ತಿ ಯೋಜನೆ ಜಾರಿಗೆ ಬಂದ ನಂತರ ಮಹಿಳಾ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿದೆ. ಆದರೆ ರಾತ್ರಿ 7 ಗಂಟೆಯ ನಂತರ ಹಲವು ಬಸ್ಸುಗಳು ಹಿರಿಯೂರು ನಗರದ ಬಸ್ ನಿಲ್ದಾಣದ ಒಳಗೆ ಪ್ರವೇಶಿಸದೇ ಬೈಪಾಸ್ ಮೂಲಕ ಸಂಚರಿಸುತ್ತಿರುವುದರಿಂದ ಪ್ರಯಾಣಿಕರಿಗೆ ತೊಂದರೆ ಉಂಟಾಗುತ್ತಿದೆ. ಸಂಜೆ 7 ಗಂಟೆಯ ನಂತರ ಬೆಂಗಳೂರಿನ ಕೆಂಪೇಗೌಡ ಬಸ್ ನಿಲ್ದಾಣದಿಂದ ದಾವಣಗೆರೆ ಮತ್ತು ಬಳ್ಳಾರಿ ಜಿಲ್ಲೆಯ ಮುಖಾಂತರ ಸಂಚರಿಸುವ ಬಸ್ಸುಗಳು ಹಿರಿಯೂರು ನಗರದ ಒಳಗೆ ಸಂಚರಿಸದೆ ಬೈಪಾಸ್ ಮೂಲಕ ಸಂಚರಿಸುವುದಾಗಿ ಪ್ರಯಾಣಿಕರಿಗೆ ತೊಂದರೆ ಕೊಡುತ್ತಿರುವ ಬಗ್ಗೆ ಸಾಕಷ್ಟು ದೂರುಗಳು ಬಂದ ಹಿನ್ನೆಲೆಯಲ್ಲಿ ಹಿರಿಯೂರು ನಗರದ ಒಳಗೆ ಕಡ್ಡಾಯವಾಗಿ ಸಂಚರಿಸುವಂತೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ರವರಿಗೆ ಸಚಿವ ಡಿ.ಸುಧಾಕರ್ ಮನವಿ ಮಾಡಿದ್ದಾರೆ. ಇದಕ್ಕೆ ಸ್ಪಂದಿಸಿದ ಸಚಿವರು ಇದನ್ನು ಗಮನಿಸಿ ತುರ್ತಾಗಿ ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

# ಡಿವಿಜಿ ಬದುಕು, ಬರಹ ಪತ್ರಕರ್ತರಿಗೆ ಮಾದರಿಯಾಗಲಿ

• **ಹೊಸದುರ್ಗ:** ಆಧುನಿಕ ಕನ್ನಡದ ಸರ್ವಜ್ಞ ಎಂಬ ಹೆಸರಾಗಿರುವ ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪನವರು ಕನ್ನಡ ಸಾರಸ್ವತ ಲೋಕದ ಮೇರು ಸಾಹಿತಿಯಾಗಿ ಪತ್ರಕರ್ತರನ್ನು ಒಗ್ಗೂಡಿಸಲು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘವನ್ನು ಸ್ಥಾಪಿಸಿದ ಕೀರ್ತಿ ಪಡೆದಿದ್ದಾರೆ. ಇವರ ಬದುಕು ಬರಹ ಪತ್ರಕರ್ತರಿಗೆ ಮಾದರಿಯಾಗಲಿ ಎಂದು ತಾಲೂಕು ಕನ್ನಡ ಸಾಹಿತ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ಬಿ.ಪಿ. ಓಂಕಾರಪ್ಪ ಅಭಿಮತ ವ್ಯಕ್ತಪಡಿಸಿದರು.

ಪಟ್ಟಣದ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘ, ತಾಲೂಕು ಕನ್ನಡ ಸಾಹಿತ್ಯ ಪರಿಷತ್, ರಾಜಕುಮಾರ್ ಅಭಿಮಾನಿ ಬಳಗದ ವತಿಯಿಂದ ಮಂಗಳವಾರ ಆಯೋಜಿಸಿದ್ದ ಡಿವಿಜಿಯವರ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಗುಂಡಪ್ಪನವರು ಒಬ್ಬ ಸಾಹಿತಿಯಾಗಿ ಮಾತ್ರವಲ್ಲದೆ, ತತ್ವಜ್ಞಾನಿಯಾಗಿ ಮಂಕುತಿಮ್ಮನ ಕಗ್ಗ ಕೃತಿ ಬರೆದಿದ್ದಾರೆ. ಇದು ಜನಸಾಮಾನ್ಯರ ಬದುಕಿನಲ್ಲಿ ಕನ್ನಡದ ಭಗವದ್ಗೀತೆ ಎಂದೇ ಹೆಸರಾಗಿದ್ದು, ತನ್ನ ಅಂತರ್ಯದಲ್ಲಿ ಸಾರ್ವಕಾಲಿಕ ಸತ್ಯವನ್ನು ಹಾಗೂ ಸರ್ವಾಂಗೀಣ ಸತ್ವವನ್ನು ಗರ್ಭೀಕರಿಸಿಕೊಂಡು, ಮಾನ್ಯರಿಂದ




ಸಾಮಾನ್ಯರೆಲ್ಲರ ಕೈ ದೀವಿಗೆಯಾಗಿ ಅಪಾರ ಸತ್ಪರಿಣಾಮವನ್ನುಂಟು ಮಾಡುತ್ತಿರುವ ಕೃತಿಯಾಗಿ ಹೊರಹೊಮ್ಮಿದೆ ಎಂದು ಹೇಳಿದರು.

ಚಿತ್ರದುರ್ಗ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ನಾಗತಿಹಳ್ಳಿ ಮಂಜುನಾಥ್ ಮಾತನಾಡಿ, ಗುಂಡಪ್ಪನವರು ಕೈಯಾಡಿಸಿದ ವಿಷಯಗಳೇ ಇಲ್ಲ, ಪತ್ರಕರ್ತರಾಗಿ ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳ ಲೋಪ ದೋಷಗಳನ್ನು ಎತ್ತಿ ತೋರಿಸಿ ಅನುಪಮ ಸೇವೆ ಸಲ್ಲಿಸಿದ್ದಾರೆ. ಪ್ರಜಾಪ್ರಭುತ್ವದ ತತ್ವಗಳನ್ನು ಎತ್ತಿ ಹಿಡಿದು ನಾಗರಿಕನ ಕರ್ತವ್ಯ ಏನು ಹಕ್ಕು-ಬಾಧ್ಯತೆಗಳನ್ನು ಬಳಸುವುದು ಹೇಗೆ ಎಂಬುದನ್ನು ತಿಳಿಸಿಕೊಟ್ಟಿದ್ದಾರೆ. ಪತ್ರಕರ್ತರ ಸಂಘವನ್ನು ಸ್ಥಾಪಿಸುವ ಮೂಲಕ ಪತ್ರಕರ್ತರ ಸಂಘಟನೆ ಹಾಗೂ ಅಭ್ಯುದಯಕ್ಕೆ ಶ್ರಮಿಸಿದ್ದರು ಎಂದು ಸ್ಮರಿಸಿಕೊಂಡರು.

ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಶಾಂತಪ್ಪ ಮಾತನಾಡಿ, ಡಿವಿಜಿಯವರಿಗೆ ಡಿವಿಜಿಯವರೇ ಸರಿಸಾಟಿ. ಸಾವಿರಾರು ಕಗ್ಗಗಳ ಮೂಲಕ ಜೀವನ ದರ್ಶನ ಮಾಡಿಸುವ ಮಹತ್ಕಾರ್ಯ ಮಾಡಿದ್ದಾರೆ. ಬದುಕಿಗೆ ಮತ್ತು ಬರಹಕ್ಕೂ ಹತ್ತಿರವಾಗಿ ಬದುಕಿದಂತಹ ಮೇರುವ ವ್ಯಕ್ತಿತ್ವ ಎಂದರು.

ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಮಾನಸ ತುಂಬಿನಕೆರೆ ಬಸವರಾಜ್ ಮಾತನಾಡಿ, 95 ವರ್ಷಗಳ ಹಿಂದೆ ಪತ್ರಕರ್ತರ ಹಿತರಕ್ಷಣೆಗಾಗಿ ಡಿವಿಜಿಯವರು ಸಂಘಟನೆಯನ್ನು ಕಟ್ಟಿದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಇಂದು ಹೆಮ್ಮರವಾಗಿ ಬೆಳೆದಿದೆ. ಡಿವಿಜಿಯವರಲ್ಲಿ ದೂರದೃಷ್ಟಿ ಬಹಳ ಮುಖ್ಯವಾಗಿತ್ತು ಎಂದು ಬಣ್ಣಿಸಿದರು.

ಕಾರ್ಯಕ್ರಮದಲ್ಲಿ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಗೌರವಾಧ್ಯಕ್ಷ ಮಹೇಶ್ ಗೌಡ, ಪ್ರಧಾನ ಕಾರ್ಯದರ್ಶಿ ಲಕ್ಕಿಹಳ್ಳಿ ಸಿದ್ದೇಶ್, ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯ ತುಂಬಿನಕೆರೆ ಬಸವರಾಜ್, ತಾಲೂಕು ಕ.ಸಾ.ಪ ಪ್ರಧಾನ ಕಾರ್ಯದರ್ಶಿಗಳಾದ ರಮೇಶ್ ಮತ್ತು ಚಂದ್ರು, ಕಾರ್ಯಾಧ್ಯಕ್ಷ ರಾಮಚಂದ್ರಪ್ಪ, ಖಜಾಂಚಿ ಶಿವಣ್ಣ ಮತ್ತು ಪತ್ರಕರ್ತರ ಸಂಘದ ಸಂತೋಷ್ ಸೇರಿದಂತೆ ಇತರರಿದ್ದರು.

### ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆಯಲ್ಲಿ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಹೇಳಿಕೆ

# ಸಂತ್ರಸ್ತರ ಅವಲಂಬಿತರಿಗೆ ಪರಿಹಾರ ನೀಡಲು ಪ್ರಸ್ತಾವನೆ

• **ಚಿತ್ರದುರ್ಗ:** ಚಳ್ಳಕೆರೆ ತಾಲ್ಲೂಕಿನ ಕೂನಿಗರಹಳ್ಳಿ, ದೊಡ್ಡ ಬೀರನಹಳ್ಳಿ, ಹಿರಿಯೂರು ತಾಲ್ಲೂಕಿನ ಕಂಭತ್ತನಹಳ್ಳಿ, ಶಿವನಗರ ಹಾಗೂ ಹೊಸದುರ್ಗ ತಾಲೂಕಿನ ದೊಡ್ಡಘಟ್ಟ, ಜಂತಿಕೊಳಲು ಗ್ರಾಮಗಳಲ್ಲಿ 2013-14 ರಲ್ಲಿ ನಡೆದ ಸಾಮಾಜಿಕ ಬಹಿಷ್ಕಾರ ಪ್ರಕರಣದಲ್ಲಿನ ಸಂತ್ರಸ್ತರ ಅವಲಂಬಿತರ ಪಟ್ಟಿ ಸಿದ್ಧಪಡಿಸಲಾಗಿದೆ. ಸೂಕ್ತ ಪರಿಹಾರ ನೀಡುವಂತೆ ಕೋರಿ ಒಂದು ವಾರದ ಒಳಗಾಗಿ ಸರ್ಕಾರಕ್ಕೆ ವರದಿ ಸಲ್ಲಿಸುವುದಾಗಿ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಹೇಳಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಜರುಗಿದ 2026-27ನೇ ಸಾಲಿನ ಮೊದಲನೇ ತ್ರೈಮಾಸಿಕ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಾಮಾಜಿಕ ಬಹಿಷ್ಕಾರದ ಸಂತ್ರಸ್ತರಿಗೆ ಸರ್ಕಾರದ ಸವಲತ್ತುಗಳು ತಲುಪಿಲ್ಲ ಎಂದು ಹಲವು ಸಂಘಟನೆಗಳು ಹೋರಾಟ ನಡೆಸಿ ಮನವಿ ಸಲ್ಲಿಸಿದ್ದವು. ಈ ಹಿನ್ನೆಲೆಯಲ್ಲಿ ಸಂತ್ರಸ್ತರ ಅವಲಂಬಿತರಿಗೆ ಪುನರ್ ವಸತಿ ಕಲ್ಪಿಸಲು ಜಿಲ್ಲೆಯಲ್ಲಿ ಸಮಗ್ರ ಪರಿಶೀಲನೆ ನಡೆಸುವಂತೆ ಸಮಾಜ ಕಲ್ಯಾಣ ಇಲಾಖೆ ಕಾರ್ಯದರ್ಶಿ ಹಾಗೂ ಆಯುಕ್ತರಿಂದ ನಿರ್ದೇಶನ ಬಂದಿತ್ತು ಎಂದರು.

ಉಪವಿಭಾಗಾಧಿಕಾರಿ ನೇತೃತ್ವದಲ್ಲಿ ಆರು ಗ್ರಾಮಗಳಲ್ಲಿ ಮೂರು ತಾಲ್ಲೂಕಿನ ತಹಶೀಲ್ದಾರ್



ಹಾಗೂ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಪರಿಶಿಷ್ಟ ಜಾತಿ ಮನೆಗಳ ಜಂಟಿ ಸಮೀಕ್ಷೆ ನಡೆಸಿದ್ದಾರೆ. ಪೊಲೀಸ್ ದೋಷಾರೋಪಣ ಪಟ್ಟಿ ಆಧರಿಸಿ ಅರ್ಹ ಸಂತ್ರಸ್ತರ ಪಟ್ಟಿ ಸಿದ್ಧಪಡಿಸಲಾಗಿದೆ. ನಂತರ ಸಂತ್ರಸ್ತರ ವಂಶವೃಕ್ಷ ಪಡೆದು, ದೌರ್ಜನ್ಯ ಸಮಯದಲ್ಲಿನ ಗ್ರಾಮದ ಮತದಾರರ ಪಟ್ಟಿಯೊಂದಿಗೆ ತಾಳೆ ಮಾಡಿ 18 ವರ್ಷ ಮೇಲ್ಪಟ್ಟ ಅವಲಂಬಿತರ ಪಟ್ಟಿ ತಯಾರಿಸಲಾಗಿದೆ ಎಂದು ಹೇಳಿದರು.

ಇದರ ಜೊತೆಗೆ, ಘಟನೆ ಸಂದರ್ಭದಲ್ಲಿ ಸಂತ್ರಸ್ತರೊಂದಿಗೆ ಇದ್ದ 18 ವರ್ಷ ತುಂಬದ ಮಕ್ಕಳ ಪ್ರತ್ಯೇಕ ಪಟ್ಟಿ ತಯಾರಿಸಲಾಗಿದೆ. ಒಟ್ಟು 45 ನೈಜ ಸಂತ್ರಸ್ತರು ಇದ್ದು 200 ಅವಲಂಬಿತರನ್ನು ಗುರುತಿಸಲಾಗಿದೆ. ಅವಲಂಬಿತರ ಪಟ್ಟಿಗೆ ಸೇರ್ಪಡೆ ಮಾಡಿದಕ್ಕೆ ಸಕಾರಣಗಳನ್ನು ನೀಡಿ ದೌರ್ಜನ್ಯ ಕಾಯ್ದೆ 1989ರ ಕಾಂಟಿಜೆನ್ಸಿ ಯೋಜನೆ 15(1)ರಡಿ ಪುನರ್ ವಸತಿ ಪರಿಹಾರಕ್ಕೆ ಸರ್ಕಾರಕ್ಕೆ ಕಳುಹಿಸುತ್ತಿರುವುದಾಗಿ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ತಿಳಿಸಿದರು.

ಸಭೆಯಲ್ಲಿ ಜಿ.ಪಂ. ಸಿಇಒ ಡಾ.ಆಕಾಶ್, ಜಿ.ಪಂ. ಯೋಜನಾ ನಿರ್ದೇಶಕಿ ಗಾಯಿತ್ರಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ರೇಣುಪ್ರಸಾದ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕ ವಿಜಯಕುಮಾರ್, ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ದಿವಾಕರ್ ,ಜಾಗೃತಿ ಸಮಿತಿ ಸದಸ್ಯರಾದ ಟಿ.ಡಿ.ರಾಜಗಿರಿ, ಬಿ.ರಾಜಪ್ಪ, ಮುದ್ದಪ್ಪ.ವೈ, ಪ್ರಶಾಂತ್ ಕುಮಾರ್, ಟಿ.ರವೀಂದ್ರ, ಹೇಮೆಗೌಡ, ಜೆ.ಪಿ.ರವಿಶಂಕರ್, ಎಂ.ರಾಮಣ್ಣ, ಕಾನೂನು ಸಲಹೆಗಾರ ಅವಿನಾಶ್ .ಸಿ.ಎಲ್., ಸಾಮಾಜಿಕ ಬಹಿಷ್ಕಾರದ ಮಾಹಿತಿ ಪ್ರತಿನಿಧಿ ಓಂಕಾರಮೂರ್ತಿ, ಅರುಣ್ ಕುಮಾರ್ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

**ಖುಲಾಸೆ ಪ್ರಮಾಣ ಹೆಚ್ಚಳಕ್ಕೆ ಕಳವಳ**

**ದೌರ್ಜನ್ಯ ತಡೆ ಕಾಯ್ದೆಯಡಿ ದಾಖಲಾದ ಪ್ರಕರಣಗಳಲ್ಲಿ ಖುಲಾಸೆ ಪ್ರಮಾಣ ಹೆಚ್ಚಳವಾಗುತ್ತಿರುವುದಕ್ಕೆ ಸಭೆಯಲ್ಲಿ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಕಳವಳ ವ್ಯಕ್ತಪಡಿಸಿದರು. ಜಿಲ್ಲೆಯಲ್ಲಿ 2021 ರಿಂದ ಇಲ್ಲಿಯವರೆಗೆ 300ಕ್ಕೂ ಹೆಚ್ಚು ದೌರ್ಜನ್ಯ ಪ್ರಕರಣ ದಾಖಲಿಸಲಾಗಿದೆ. ಆದರೆ ಬೆರಳೆಣಿಕೆಯಷ್ಟು ಪ್ರಕರಣಗಳಲ್ಲಿ ಮಾತ್ರ ಆರೋಪಿಗಳಿಗೆ ಶಿಕ್ಷೆಯಾಗಿದೆ. ಶಿಕ್ಷೆ ಪ್ರಮಾಣ ಹೆಚ್ಚಿಸುವ ಮುಂದಿನ ಕಾನೂನು ಕ್ರಮಗಳ ಬಗ್ಗೆ ಸರ್ಕಾರಿ ಅಭಿಯೋಜಕರು ಗಮನ ಹರಿಸುವಂತೆ ಜಿಲ್ಲಾಧಿಕಾರಿ ನಿರ್ದೇಶನ ನೀಡಿದರು.**

# ಸಾಹಿತ್ಯ ಸಮ್ಮೇಳನಾಧ್ಯಕ್ಷರಿಗೆ ಸನ್ಮಾನ



• **ಶಿವಮೊಗ್ಗ:** ಸಾಹಿತಿ ಹಾಗೂ ಬೆಂಗಳೂರು ಆಕಾಶವಾಣಿ ಮುಖ್ಯಸ್ಥರಾದ ಡಾ. ಎ.ಎಸ್.ಶಂಕರ ನಾರಾಯಣ ರವರಿಗೆ ಈ ಬಾರಿ ತರೀಕೆರೆ ತಾಲೂಕಿನ 19 ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗಿರುವುದಕ್ಕೆ ಶಿವಮೊಗ್ಗ ಜಿಲ್ಲಾ ಸರ್ವೋದಯ ಮಂಡಲ, ಭದ್ರಾವತಿ ಶಿವಮೊಗ್ಗ ಆಕಾಶವಾಣಿ ಕೇಳುಗರ ಬಳಗ, ಆರ್ ಜೆ ಬಳಗ, ನನ್ನ ಕನಸಿನ ಶಿವಮೊಗ್ಗ ಸಂಸ್ಥೆಗಳ ವತಿಯಿಂದ ನಗರದ ಮಥುರಾ ಪ್ಯಾರಡೈಸ್ ಸಭಾಂಗಣದಲ್ಲಿ ಆತ್ಮೀಯವಾಗಿ ಸನ್ಮಾನಿಸಲಾಯಿತು.

ಸಾಹಿತಿ ಎಂ.ಎನ್.ಸುಂದರರಾಜ್ ಮಾತನಾಡಿ, ಸನ್ಮಾನಿತರಿಗೆ ಈ ಗೌರವ ಸಿಕ್ಕಿರುವುದು ತುಂಬಾ ಸಂತೋಷದ ವಿಷಯ. ಅವರಿಂದ ಇನ್ನೂ ಹೆಚ್ಚಿನ ಸಾಹಿತ್ಯವನ್ನು ನಾವೆಲ್ಲ ನಿರೀಕ್ಷಿಸುತ್ತಿದ್ದೇವೆ ಎಂದು ತಿಳಿಸಿದರು.

ಜಿಲ್ಲಾ ಸರ್ವೋದಯ ಮಂಡಲದ ಅಧ್ಯಕ್ಷರಾದ ಮನೋಹರ ಮೂಲತಃ ತರೀಕೆರೆಯವರೇ ಆದ ಶಂಕರ ನಾರಾಯಣ್ ತಮ್ಮ ಬರಹದ ಮೂಲಕ ಆಕಾಶವಾಣಿ ಸಂದರ್ಶನಗಳ ಮೂಲಕ ನಾಡಿಗೆ ಚಿರಪರಿಚಿತರಾಗಿದ್ದಾರೆ. ಅವರ ಸಾಹಿತ್ಯ ಸೇವೆ ಹೀಗೆಯೇ ಮುಂದುವರೆಯಲಿ ಎಂದು ಶುಭ ಹಾರೈಸಿದರು.

ಶಿವಮೊಗ್ಗ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಉಪಾಧ್ಯಕ್ಷ ಜಿ.ವಿಜಯಕುಮಾರ ಮಾತನಾಡಿ, ಶಂಕರ ನಾರಾಯಣ ಅವರ ಸಾಧನೆ ಸಾಕಷ್ಟು ಇದೆ. ಅವರ ಸಾಧನೆಗೆ ಸಿಕ್ಕ ಮನ್ನಣೆ ಇದು. ಅವರ ಸಾಹಿತ್ಯ ಕೃಷಿ ಇನ್ನೂ ಹೆಚ್ಚು ಹೆಚ್ಚು ಆಗಲಿ ಎಂದು ಶುಭ ಹಾರೈಸಿದರು.

ಎನ್.ಗೋಪಿನಾಥ, ಆಕಾಶವಾಣಿ ಕೇಳುಗರ ಬಳಗದ ಚಿಕ್ಕಪ್ಪ ರಾಮೇಶ್ವರ, ಗಣೇಶ್ ಕೆಂಚನಾಳ, ಬಸವರಾಜಪ್ಪ, ರುದ್ರಪ್ಪ ಚೀಲೂರು, ಪ್ರೊ. ಸತ್ಯನಾರಾಯಣ ಉಪಸ್ಥಿತರಿದ್ದರು.



# ಪರಿಹಾರ ಪ್ರತೀಕಾರ ಪ್ರತಿಜ್ಞೆ

## ಮಧ್ಯಪ್ರಾಚ್ಯ ಸಂಘರ್ಷ; ಕದನ ವಿರಾಮ ಪ್ರಸ್ತಾಪ ತಿರಸ್ಕರಿಸಿದ ಇರಾನ್ ಸರ್ವೋಚ್ಚ ನಾಯಕ ಮೊಜ್ತಬಾ

**ಟೆಹ್ರಾನ್:** ಇರಾನ್‌ನ ಸರ್ವೋಚ್ಚ ನಾಯಕ ಮೊಜ್ತಬಾ ಖಮೇನಿ ಮಧ್ಯಸ್ಥಿಕೆ ರಾಷ್ಟ್ರಗಳ ಕದನ ವಿರಾಮ ಪ್ರಸ್ತಾಪಗಳನ್ನು ತಿರಸ್ಕರಿಸಿದ್ದಾರೆ. ಅಮೆರಿಕ ಮತ್ತು ಇಸ್ರೇಲ್‌ನಿಂದ ಪರಿಹಾರ ಪಡೆಯುವುದು ಅಥವಾ ಅವುಗಳ ಆಸ್ತಿ ನಾಶಪಡಿಸುವ ಇರಾನ್‌ನ ಗುರಿಯನ್ನು ಅವರು ಪುನರುಚ್ಚರಿಸಿದ್ದಾರೆ.

ಎರಡು ಮಧ್ಯಸ್ಥಿಕೆ ರಾಷ್ಟ್ರಗಳ ಮೂಲಕ ರವಾನಿಸಲಾದ ಕದನ ವಿರಾಮ ಮತ್ತು ಉದ್ವಿಗ್ನತೆ ಶಮನದ ಪ್ರಸ್ತಾಪಗಳನ್ನು ಮಂಗಳವಾರ ಅಧಿಕೃತವಾಗಿ ತಿರಸ್ಕರಿಸಲಾಗಿದೆ. ಇರಾನ್‌ನ ಹಿರಿಯ ಅಧಿಕಾರಿಯೊಬ್ಬರ ಪ್ರಕಾರ, ಖಮೇನಿ ತಮ್ಮ ಮೊದಲ ವಿದೇಶಾಂಗ ನೀತಿ ಅಧಿವೇಶನದಲ್ಲಿ ಪ್ರತೀಕಾರಕ್ಕೆ ಸಂಬಂಧಿಸಿದಂತೆ ಅತ್ಯಂತ ಕಠಿಣ ಮತ್ತು ಗಂಭೀರ ನಿಲುವನ್ನು ವ್ಯಕ್ತಪಡಿಸಿದ್ದಾರೆ. ನೇಮಕಗೊಂಡ ನಂತರ ಹೊರಡಿಸಿದ ಮೊದಲ ಹೇಳಿಕೆಯಲ್ಲಿ, ಇರಾನ್ ಎಂದಿಗೂ ಹಿಂದೆ ಸರಿಯುವುದಿಲ್ಲ ಮತ್ತು ಯುದ್ಧದಲ್ಲಿ ಹತರಾದವರ ಸೇಡು ತೀರಿಸಿಕೊಳ್ಳಲು ಸಂಪೂರ್ಣ ಶಕ್ತಿಯೊಂದಿಗೆ ಪ್ರತಿರೋಧ ಒಡ್ಡಲಿದೆ ಎಂದು ಅವರು ಪ್ರತಿಜ್ಞೆ ಮಾಡಿದ್ದಾರೆ.

ದಿವಂಗತ ಅಯತೊಲ್ಲಾ ಅಲಿ ಖಮೇನಿ ಸೇರಿದಂತೆ ಯುದ್ಧದಲ್ಲಿ ಮಡಿದ ಪ್ರತಿಯೊಬ್ಬ ನಾಗರಿಕನಿಗಾಗಿ ಪರಿಹಾರ ಪಡೆಯುವುದು ಪ್ರಾಥಮಿಕ ನೀತಿಯಾಗಿ ಘೋಷಿಸಲಾಗಿದೆ. ಪರಿಹಾರ ನೀಡಲು ನಿರಾಕರಿಸಿದರೆ, ಇರಾನ್ ಶತ್ರು ರಾಷ್ಟ್ರಗಳ ಆಸ್ತಿಗಳನ್ನು ವಶಪಡಿಸಿಕೊಳ್ಳಲಿದೆ ಅಥವಾ ಅದೇ ಪ್ರಮಾಣದಲ್ಲಿ ನಾಶಪಡಿಸಲಿದೆ ಎಂದು ಸರ್ವೋಚ್ಚ ನಾಯಕ ಹೇಳಿದ್ದಾರೆ. ಕೆಲವು ಪ್ರತೀಕಾರ ಕ್ರಮಗಳು ಈಗಾಗಲೇ ಜಾರಿಯಾಗಿದ್ದರೂ, ಸೇಡು ತೀರಿಸಿಕೊಳ್ಳುವ ಆದೇಶ ಇನ್ನೂ ಪೂರ್ಣಗೊಂಡಿಲ್ಲ, ಇದು ಪ್ರಮುಖ ಗುರಿಯಾಗಿ ಮುಂದುವರಿಯಲಿದೆ ಎಂದು ಆಡಳಿತ ಮಂಡಳಿ ತಿಳಿಸಿದೆ.



### ಬಾಗ್ದಾದ್‌ನಲ್ಲಿನ ಅಮೆರಿಕ ರಾಯಭಾರ ಕಚೇರಿ ಮೇಲೆ ದಾಳಿ

ಬಾಗ್ದಾದ್‌ನಲ್ಲಿನ ಅಮೆರಿಕ ರಾಯಭಾರ ಕಚೇರಿ ಪ್ರದೇಶವನ್ನು ಗುರಿಯಾಗಿಸಿಕೊಂಡು ಅನೇಕ ಡ್ರೋನ್ ಮತ್ತು ಕ್ಷಿಪಣಿಗಳ ದಾಳಿ ನಡೆದಿದೆ. ದಾಳಿ ನಡೆದ ಕೂಡಲೇ ಸ್ಫೋಟಗಳ ಶಬ್ದಗಳು ಕೇಳಿಬಂದಿದ್ದು, ಕಚೇರಿ ಆವರಣದ ಸುತ್ತಮುತ್ತ ದಟ್ಟ ಹೊಗೆ ಆವರಿಸಿಕೊಂಡಿದೆ. ಕನಿಷ್ಠ ಮೂರು ಡ್ರೋನ್‌ಗಳು ರಾಯಭಾರ ಕಚೇರಿಯನ್ನು ಗುರಿಯಾಗಿಸಿ ದಾಳಿ ನಡೆಸಲಾಗಿದೆ. ಸಿ-ರಾಮ್ ವಾಯು ರಕ್ಷಣಾ ವ್ಯವಸ್ಥೆಯು ಅದರಲ್ಲಿ ಎರಡನ್ನು ಹೊಡೆದುರುಳಿಸಿದರೆ, ಮೂರನೆಯದು ರಾಯಭಾರ ಕಚೇರಿಯ ಆವರಣದೊಳಗೆ ಅಪ್ಪಳಿಸಿತು, ಇದರಿಂದ ಬೆಂಕಿ ಮತ್ತು ಹೊಗೆ ಕಾಣಿಸಿಕೊಂಡಿದೆ.

### ಜಾಗತಿಕ ಆರ್ಥಿಕತೆಗೆ ಆತಂಕ

ಹಾರ್ಮುಜ್ ಜಲಸಂಧಿಯ ಪ್ರಾಯೋಗಿಕ ಮುಚ್ಚುವಿಕೆ ಜಾಗತಿಕ ಆರ್ಥಿಕತೆಯನ್ನು ಆತಂಕಗೊಳಿಸಿದೆ. ಇದರಿಂದ ಇಂಧನದ ಬೆಲೆಗಳು ಏರಿಕೆ ಕಾಣುತ್ತಿವೆ, ಬಡ ದೇಶಗಳಲ್ಲಿ ಆಹಾರ ಕೊರತೆ ಉಂಟಾಗುವ ಭೀತಿ ಇದೆ, ದುರ್ಬಲ ರಾಷ್ಟ್ರಗಳು ಅಸ್ಥಿರಗೊಳ್ಳುತ್ತಿವೆ ಮತ್ತು ಗ್ರಾಹಕರಿಗೆ ಬೆಲೆಗಳನ್ನು ಕಡಿಮೆ ಮಾಡುವ ಕೇಂದ್ರ ಬ್ಯಾಂಕ್‌ಗಳ ಪ್ರಯತ್ನಗಳನ್ನು ಸಂಕೀರ್ಣಗೊಳಿಸುತ್ತಿದೆ. ಕೆಲವು ಹಡಗುಗಳು ಮಾತ್ರ ಜಲಸಂಧಿಯನ್ನು ದಾಟುತ್ತಿವೆ. ಮುಖ್ಯವಾಗಿ ಇರಾನ್‌ನವು, ಹಾಗೆಯೇ ಭಾರತ ಮತ್ತು ಟರ್ಕಿಯಂತಹ ಇತರ ದೇಶಗಳ ಹಡಗುಗಳೂ ಸೇರಿವೆ. ಇರಾನ್ ಇದನ್ನು ತಾಂತ್ರಿಕವಾಗಿ ತೆರೆದಿಟ್ಟಿದ್ದೇವೆ ಎಂದು ಹೇಳಿದರೂ, ಅಮೆರಿಕ, ಇಸ್ರೇಲ್ ಮತ್ತು ಅವರ ಮೈತ್ರಿಕೂಟದ ರಾಷ್ಟ್ರಗಳಿಗೆ ಮಾತ್ರ ಅವಕಾಶ ಇಲ್ಲ ಎಂದು ಹೇಳಿದೆ. ಇರಾಕ್ ತನ್ನ ಹಡಗುಗಳಿಗೆ ಮಾರ್ಗ ಒದಗಿಸುವ ಕುರಿತು ಇರಾನ್ ಜತೆ ಮಾತುಕತೆ ನಡೆಸುತ್ತಿದೆ ಎಂದು ಮಂಗಳವಾರ ತಿಳಿಸಿದೆ.

### ರಷ್ಯಾಗೆ ಹಾರಿದ ಮೊಜ್ತಬಾ?

ಫೆಬ್ರವರಿ 28 ರಂದು ನಡೆದ ವೈಮಾನಿಕ ದಾಳಿಯಲ್ಲಿ ತಂದೆಯ ಮರಣದ ನಂತರ, ಸರ್ವೋಚ್ಚ ನಾಯಕನ ಆರೋಗ್ಯದ ಬಗ್ಗೆ ವರದಿಗಳು ಹೊರಬಂದಿವೆ. 56 ವರ್ಷದ ಧರ್ಮಗುರು ತೀವ್ರವಾಗಿ ಗಾಯಗೊಂಡಿದ್ದು, ರಷ್ಯಾ ಮಿಲಿಟರಿ ವಿಮಾನದ ಮೂಲಕ ವೈದ್ಯಕೀಯ ಚಿಕಿತ್ಸೆಗಾಗಿ ಮಾಸ್ಕೋಗೆ ವರ್ಗಾಯಿಸಲಾಗಿದೆ ಎಂದು ಕುವೈತ್‌ನ ಅಲ್-ಜರಿದಾ ಪತ್ರಿಕೆ ವರದಿ ಮಾಡಿದೆ. ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ವೈಯಕ್ತಿಕ ಪ್ರಸ್ತಾಪದ ಮೇರೆಗೆ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಲಾಗುತ್ತಿದೆ. ಆದರೆ, ಕ್ರೆಮ್ಲಿನ್ ವಕ್ತಾರ ಡಿಮಿಟ್ರಿ ಪೆಸ್ಕೋವ್, ಈ ವರದಿಗಳನ್ನು ದೃಢಪಡಿಸಿಲ್ಲ, ಆದರೆ ನಿರಾಕರಿಸಿಯೂ ಇಲ್ಲ, ಉಕ್ರೇನ್ ಯುದ್ಧದ ನಂತರ ರಷ್ಯಾ ಮತ್ತು ಇರಾನ್ ನಡುವೆ ಮಿಲಿಟರಿ ಸಹಕಾರ ಹೆಚ್ಚಾಗಿದ್ದು, ಈಗಿನ ಪರಿಸ್ಥಿತಿಯಲ್ಲಿ ಇದು ಪಾಶ್ಚಿಮಾತ್ಯ ದೇಶಗಳಿಗೆ ತಲೆನೋವಾಗಿ ಪರಿಣಮಿಸಿದೆ.

## ಟ್ರಂಪ್‌ಗೆ ಮತ್ತೊಂದು ಮುಖಭಂಗ

ಮಧ್ಯಪ್ರಾಚ್ಯ ಯುದ್ಧದ ಭೀಕರತೆ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಈ ಮಧ್ಯೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಕರೆಗೆ ಮಿತ್ರಪಕ್ಷಗಳು ಓಗೊಡದೆ ಅಮೆರಿಕ ನಗೆಪಾಟಲಿಗೀಡಾಗಿದೆ. ಈ ಬೆನ್ನಲ್ಲೇ ಇರಾನ್ ಮೇಲಿನ ದಾಳಿ ವಿರೋಧಿಸಿ ಅಮೆರಿಕ ರಾಷ್ಟ್ರೀಯ ಭಯೋತ್ಪಾದನಾ ನಿಗ್ರಹ ಕೇಂದ್ರದ ನಿರ್ದೇಶಕ ಜೋ ಕೆಂಟ್ ಅವರು ಮಂಗಳವಾರ ರಾಜೀನಾಮೆ ಘೋಷಿಸಿದ್ದಾರೆ.

**ಅಮೆರಿಕ ಉಗ್ರ ನಿಗ್ರಹ ಕೇಂದ್ರದ ನಿರ್ದೇಶಕ ರಾಜೀನಾಮೆ**



ಇರಾನ್ ಯುದ್ಧವನ್ನು ವಿರೋಧಿಸಿ ರಾಜೀನಾಮೆ ನೀಡಿದ ಮೊದಲ ಮತ್ತು ಅತ್ಯಂತ ಹಿರಿಯ ಟ್ರಂಪ್ ಆಡಳಿತದ ಅಧಿಕಾರಿಯಾಗಿದ್ದಾರೆ. ಫೆ.28ರಂದು ಅಮೆರಿಕ-ಇಸ್ರೇಲ್ ನೇತೃತ್ವದ ವಾಯುದಾಳಿಯಿಂದ ಭುಗಿಲೆದ್ದ ಇರಾನ್‌ನಲ್ಲಿನ ಯುದ್ಧವನ್ನು ತಾನು ಇನ್ನು ಮುಂದೆ ಬೆಂಬಲಿಸಲು ಸಾಧ್ಯವಿಲ್ಲ ಎಂದು ಕೆಂಟ್ ಎಕ್ಸ್‌ನಲ್ಲಿನ ಪೋಸ್ಟ್‌ನಲ್ಲಿ ಹೇಳಿದರು. ಬಹಳ ಚಿಂತನೆಯ ನಂತರ, ನಾನು ಇಂದು ಜಾರಿಗೆ ಬರುವಂತೆ ರಾಷ್ಟ್ರೀಯ ಭಯೋತ್ಪಾದನಾ ನಿಗ್ರಹ ಕೇಂದ್ರದ ನಿರ್ದೇಶಕ ಹುದ್ದೆಗೆ ರಾಜೀನಾಮೆ ನೀಡಲು ನಿರ್ಧರಿಸಿದ್ದೇನೆ. ಇರಾನ್‌ನಲ್ಲಿ ನಡೆಯುತ್ತಿರುವ ಯುದ್ಧವನ್ನು ನನ್ನ ಆತ್ಮಸಾಕ್ಷಿಯಿಂದ ಬೆಂಬಲಿಸಲು ಸಾಧ್ಯವಿಲ್ಲ ಎಂದು ಅವರು ಬರೆದಿದ್ದಾರೆ.



## ಇಸ್ರೇಲ್ ದಾಳಿ: ಇರಾನ್ ಭದ್ರತಾ ಮುಖ್ಯಸ್ಥ ಹತ!

**ಜೆರುಸಲೇಂ:** ಇಸ್ರೇಲ್ ಮಿಲಿಟರಿ ನಡೆಸಿದ ರಾತ್ರಿವೇಳೆಯ ನಿಖರ ದಾಳಿಯಲ್ಲಿ ಇರಾನ್‌ನ ಭದ್ರತಾ ಮುಖ್ಯಸ್ಥ ಅಲಿ ಲಾರಿಜಾನಿ ಹತರಾಗಿದ್ದಾರೆ ಎಂದು ಇಸ್ರೇಲ್ ರಕ್ಷಣಾ ಸಚಿವ ಇಸ್ರೇಲ್ ಕಾಟ್ಜ್ ಹೇಳಿದ್ದಾರೆ. ಇರಾನ್‌ನ ಸುಪ್ರೀಂ ನ್ಯಾಷನಲ್ ಸೆಕ್ಯೂರಿಟಿ ಕೌನ್ಸಿಲ್‌ನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿರುವ ಲಾರಿಜಾನಿ ಮತ್ತು ಬಸಿಜ್ ಪ್ರತಿರೋಧ ಪಡೆಯ ಮುಖ್ಯಸ್ಥ ಗುಲಾಮ್ ರೆಜಾ ಸುಲೈಮಾನಿ ಅವರನ್ನು ಗುರಿಯಾಗಿಸಿಕೊಂಡು ಈ ದಾಳಿಗಳನ್ನು ನಡೆಸಲಾಗಿತ್ತು. ಲಾರಿಜಾನಿ ಮತ್ತು ಸುಲೈಮಾನಿ ಹತ್ಯೆಯಾಗಿದೆ ಎಂದು ಇಸ್ರೇಲಿ ಮಾಧ್ಯಮಗಳು ವರದಿ ಮಾಡಿವೆಯಾದರೂ, ಇರಾನ್ ಅಧಿಕಾರಿಗಳು ಇದನ್ನು ಇನ್ನೂ ದೃಢಪಡಿಸಿಲ್ಲ, ಒಂದು ವೇಳೆ ಇದು ದೃಢಪಟ್ಟರೆ, ಅಯತೊಲ್ಲಾ ಅಲಿ ಖಮೇನಿ ಮರಣದ ನಂತರ ಇರಾನ್ ಆಡಳಿತ ವ್ಯವಸ್ಥೆಯಲ್ಲಿ ಸಂಭವಿಸಿದ ಅತ್ಯಂತ ಉನ್ನತ ಮಟ್ಟದ ಸಾವು ಇದಾಗಲಿದೆ. ಲಾರಿಜಾನಿ ಕಳೆದ ಶುಕ್ರವಾರ ಟೆಹ್ರಾನ್‌ನಲ್ಲಿ ನಡೆದ ಕುದ್ಸ್ ಡೇ ಮೆರವಣಿಗೆಯ ಸಂದರ್ಭದಲ್ಲಿ ಸಾರ್ವಜನಿಕವಾಗಿ ಕಾಣಿಸಿಕೊಂಡಿದ್ದರು. ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್‌ಗೆ ಸಂಬಂಧಿಸಿದ ಹಿರಿಯ ಅಧಿಕಾರಿಗಳ ಮಾಹಿತಿಗಾಗಿ ಅಮೆರಿಕ ಘೋಷಿಸಿದ 10 ಮಿಲಿಯನ್ ಡಾಲರ್ ಬಹುಮಾನದ ಪಟ್ಟಿಯಲ್ಲಿ ಇವರ ಹೆಸರನ್ನು ಇತ್ತೀಚೆಗೆ ಸೇರಿಸಲಾಗಿತ್ತು.



**ಇರಾನ್ ಸರ್ಕಾರಿ ಮಾಧ್ಯಮದ ಪ್ರತಿಕ್ರಿಯೆ:** ದಾಳಿಯ ನಂತರ ಇರಾನ್ ಸರ್ಕಾರಿ ಮಾಧ್ಯಮ, ಲಾರಿಜಾನಿ ಅವರದ್ದೆಂದು ಹೇಳಲಾದ ಹೇಳಿಕೆಯೊಂದನ್ನು ಬಿಡುಗಡೆ ಮಾಡಿದೆ. ಇಸ್ರೇಲ್ ವಿರೋಧಿ ಸಭೆಗಳ ಕುರಿತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೀಡಿದ ಹೇಳಿಕೆಯನ್ನು ಅದರಲ್ಲಿ ಟೀಕಿಸಲಾಗಿದ್ದು, ವಿದೇಶಿ ಆಕ್ರಮಣದ ವಿರುದ್ಧ ಇರಾನ್‌ನ ಬದ್ಧತೆಯನ್ನು ಪುನರುಚ್ಚರಿಸಲಾಗಿದೆ. ಹಿಂದಿನ ಸರ್ವೋಚ್ಚ ನಾಯಕನ ಸಾವಿಗೆ ಕಾರಣವಾದ ಅಮೆರಿಕನ್-ಜಿಯೋನಿಸ್ಟ್ ಆಕ್ರಮಣವನ್ನು ಖಂಡಿಸಿ ಲಾರಿಜಾನಿ ಸೋಮವಾರ ಮುಸ್ಲಿಂ ಜಗತ್ತಿಗೆ ನೀಡಿದ ಸಂದೇಶದ ಬೆನ್ನಲ್ಲೇ ಈ ಬೆಳವಣಿಗೆಗಳು ನಡೆದಿವೆ.

### ಬೈರೂತ್ ಮೇಲೆ ಇಸ್ರೇಲ್ ದಾಳಿ

ಇಸ್ರೇಲಿ ಸೇನೆ ಮಂಗಳವಾರ ಬೆಳಗ್ಗೆ ಟೆಹ್ರಾನ್‌ನ ವಿವಿಧ ಭಾಗಗಳ ಮೇಲೆ ಹೊಸ ದಾಳಿಗಳನ್ನು ನಡೆಸಿರುವುದಾಗಿ ಹೇಳಿದೆ. ಜತೆಗೆ ಲೆಬನಾನ್‌ನ ರಾಜಧಾನಿ ಬೈರೂತ್‌ನಲ್ಲಿ ಹಿಜ್ಬೊಲ್ಲಾ ಉಗ್ರರನ್ನು ಗುರಿಯಾಗಿಸಿ ದಾಳಿಗಳನ್ನು ನಡೆಸಿದೆ. ಇರಾನ್‌ನಲ್ಲಿ, ಕಮಾಂಡ್ ಕೇಂದ್ರಗಳು, ಕ್ಷಿಪಣಿ ಉಡಾವಣೆ ಸ್ಥಳಗಳು ಮತ್ತು ವಾಯು ರಕ್ಷಣಾ ವ್ಯವಸ್ಥೆಗಳನ್ನು ಗುರಿಯಾಗಿಸಲಾಗಿದೆ ಎಂದು ತಿಳಿಸಿದೆ. ಲೆಬನಾನ್‌ನ ಮೇಲಿನ ದಾಳಿಗಳ ಕುರಿತು ಇಸ್ರೇಲ್ ತಕ್ಷಣ ಯಾವುದೇ ವಿವರಗಳನ್ನು ನೀಡಿಲ್ಲ, ಆದರೆ ಲೆಬನಾನ್ ಸೇನೆ ಕಫರ್ ಸಿರ್ ಗ್ರಾಮದಲ್ಲಿ ನಡೆದ ವಾಯು ದಾಳಿಯಲ್ಲಿ ತನ್ನ ಇಬ್ಬರು ಸೈನಿಕರು ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ತಿಳಿಸಿದೆ. ಈ ಸಂಘರ್ಷ ಪ್ರಾರಂಭವಾದ ನಂತರದಿಂದ ಇರಾನ್‌ನಲ್ಲಿ 1,300 ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ ಎಂದು ಇರಾನ್ ರೆಡ್ ಕ್ರೆಸೆಂಟ್ ತಿಳಿಸಿದೆ. ಕೆಲವು ಇಸ್ರೇಲಿ ಪಡೆಗಳು ದಕ್ಷಿಣ ಲೆಬನಾನ್ ಒಳಗೆ ಪ್ರವೇಶಿಸಿವೆ. ಇದರಿಂದ ದೊಡ್ಡ ಮಟ್ಟದ ಆಕ್ರಮಣಕ್ಕೆ ಇಸ್ರೇಲ್ ಸಿದ್ಧವಾಗುತ್ತಿದೆ ಎಂಬ ಆತಂಕ ಇದೆ.

## ಕಿರುಸುದ್ದಿ

### ಐಸಿಸ್ ನಂಟು: ಬಿಡಿಎಸ್ ವಿದ್ಯಾರ್ಥಿ ಸೆರೆ

**ಲಖನೌ:** ಉತ್ತರ ಪ್ರದೇಶದ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ನಿಷೇಧಿತ ಭಯೋತ್ಪಾದಕ ಸಂಘಟನೆ ಐಸಿಸ್‌ನ ಘಟಕದೊಂದಿಗೆ ನಂಟು ಹೊಂದಿದ್ದ ಬಿಡಿಎಸ್ ವಿದ್ಯಾರ್ಥಿಯನ್ನು ಬಂಧಿಸಿದೆ. ಸಹರಾನ್ಪುರ ಜಿಲ್ಲೆಯ ನಿವಾಸಿ ಹ್ಯಾರಿಸ್ ಅಲಿ (19) ಎಂಬ ಆರೋಪಿಯನ್ನು ಮೊರಾದಾಬಾದ್‌ನಿಂದ ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

### ಸಚಿವ ಪುರಿ ಪುತ್ರಿ ವಿಷಯ ಡಿಲೀಟ್‌ಗೆ 24 ಗಂಟೆ ಗಡುವು

**ಹೊಸದಿಲ್ಲಿ:** ಜೆಫ್ರಿ ಎಪ್ಸ್ಟೀನ್ ಕ್ರಿಮಿನಲ್ ಚಟುವಟಿಕೆಗಳಿಗೆ ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿ ಅವರ ಪುತ್ರಿ ಹಿಮಾಯನಿ ಪುರಿ ಅವರಿಗೆ ನಂಟು ಕಲ್ಪಿಸುವ ಮಾನಹಾನಿಕರ ವಿಷಯಗಳನ್ನು 24 ಗಂಟೆಗಳ ಒಳಗೆ ತೆಗೆದುಹಾಕುವಂತೆ ದಿಲ್ಲಿ ಹೈಕೋರ್ಟ್ ನಿರ್ದೇಶನ ನೀಡಿದೆ. ನ್ಯಾಯಮೂರ್ತಿ ಮಿನಿ ಪುಷ್ಕರ್ಣ ಅವರು ಸಾಮಾಜಿಕ ಮಾಧ್ಯಮ ವೇದಿಕೆಗಳಲ್ಲಿ ಅಂತಹ ವಿಷಯವನ್ನು ಯಾವುದೇ ರೀತಿಯಲ್ಲಿ ಪ್ರಕಟಿಸದಂತೆ, ಪ್ರಸಾರ ಮಾಡದಂತೆ ನಿರ್ಬಂಧಿಸಿದ್ದಾರೆ.

## ಸಂಸತ್ತಲ್ಲಿ ಫಲಕ, ಪೋಸ್ಟರ್ ಪ್ರದರ್ಶಿಸುವಂತಿಲ್ಲ: ಬಿರ್ಲಾ

**ಹೊಸದಿಲ್ಲಿ:** ಅನುಚಿತ ವರ್ತನೆಗಾಗಿ ಫೆ.3ರಂದು ಸದನದಿಂದ ಅಮಾನತುಗೊಂಡಿದ್ದ 8 ವಿಪಕ್ಷೀಯ ಸದಸ್ಯರ ಅಮಾನತನ್ನು ಲೋಕಸಭೆಯು ತಕ್ಷಣ ಅನ್ವಯಿಸುವಂತೆ ಮಂಗಳವಾರ ರದ್ದುಗೊಳಿಸಿದೆ. ಏಕಕಾಲಕ್ಕೆ , ಸದನದೊಳಗೆ ಅಥವಾ ಸಂಸತ್ ಭವನದಲ್ಲಿ ಎಲ್ಲೂ ಯಾವುದೇ ಫಲಕಗಳು, ಪೋಸ್ಟರ್‌ಗಳು, ಫೋಟೋಗಳು ಅಥವಾ ಎಐ ಮುಖೇನ ಸೃಜಿಸಿದ ಚಿತ್ರಗಳನ್ನು ಪ್ರದರ್ಶಿಸುವಂತಿಲ್ಲ ಎಂದು ಸಭಾಪತಿ ಓಂ ಬಿರ್ಲಾ ಸ್ಪಷ್ಟ ತಾಕೀತು ಮಾಡಿದ್ದಾರೆ. ವಿಪಕ್ಷಕೂಟದ ಎಂಟು ಸದಸ್ಯರ ವಿರುದ್ಧದ ಅಮಾನತನ್ನು ಹಿಂಪಡೆಯಬೇಕು. ಸಂಸತ್ತಿನಲ್ಲಿ ನಡೆದಿರುವ ಘಟನಾವಳಿಗಳು ದುರದೃಷ್ಟಕರ ಮತ್ತು ಸದನದ ಸುಗಮ ಕಲಾಪಗಳಿಗೆ ಸಹಕರಿಸಲು ತನ್ನ ಪಕ್ಷ ಸಿದ್ಧವಿದೆ ಎಂದು ಕಾಂಗ್ರೆಸ್ ಸದಸ್ಯ ಕೆ.ಸುರೇಶ್ ಆರಂಭದಲ್ಲಿ ಸದನವನ್ನು ವಿನಂತಿಸಿದ್ದರು. ವಿಪಕ್ಷಕೂಟದ ಹಲವು ಸದಸ್ಯರು ಇದೇ ಆಗ್ರಹ ಮುಂದಿಟ್ಟಾಗ, ಸದನದ ಸುಗಮ ಕಲಾಪಗಳಿಗಾಗಿ ಲಕ್ಷ್ಮಣ ರೇಖೆ ಎಳೆಯೋ ಅಗತ್ಯವಿದೆ ಎಂದು ಸಂಸದೀಯ ವ್ಯವಹಾರ ಸಚಿವ ಕಿರಣ್ ರಿಜಿಜು ಅಭಿಪ್ರಾಯಪಟ್ಟರು ಮತ್ತು ಇದಕ್ಕೆ ಆಳುವ ಪಕ್ಷ ಮತ್ತು ವಿಪಕ್ಷ ಕೂಟದ ಸದಸ್ಯರು ಸಮ್ಮತಿಸಿದರು. ಜಗತ್ತಿನ ಅತಿ ದೊಡ್ಡ ಪ್ರಜಾಸತ್ತೆಯಾಗಿರುವ ಭಾರತದ ಸಂಸತ್ತಿನಲ್ಲಿ ಕಲಾಪಗಳು ತೀರಾ ಸುಗಮವಾಗಿ ನಡೆಯಬೇಕು ಮತ್ತು ಪ್ರತಿಯೋರ್ವರೂ ಇದಕ್ಕೆ ಸಹಕರಿಸಬೇಕೆಂದು ಪ್ರತಿಯೋರ್ವರಿಗೂ ಆಶಯವಿರುತ್ತೆ ಎಂದು ಸಭಾಪತಿ ಬಿರ್ಲಾ ಹೇಳಿದರು.

## ಎನ್‌ಎಚ್‌ಆರ್‌ಸಿ ನೋಟಿಸ್ ಕೆಡಿ ಅಶ್ಲೀಲ ಹಾಡು ಸ್ಥಗಿತ

**ಹೊಸದಿಲ್ಲಿ:** ಸರಿಕೆ ಚುನಾರ್ ಹಾಡು ಮತ್ತು ಅದರ ಕನ್ನಡ ಆವೃತ್ತಿಯಾದ ಸರ್ಕೆ ನಿನ್ನ ಸೆರಗ ಸರ್ಕೆ ಹಾಡುಗಳಲ್ಲಿ ಅಶ್ಲೀಲ ಅಂಶಗಳಿವೆ ಎಂಬ ಕಾರಣಕ್ಕೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ (ಎನ್‌ಎಚ್‌ಆರ್‌ಸಿ) ನೋಟಿಸ್ ನೀಡಿದ ಬೆನ್ನಲ್ಲೇ, ಎಲ್ಲಾ ಸ್ಟ್ರೀಮಿಂಗ್ ಪ್ಲಾಟ್‌ಫಾರ್ಮ್‌ಗಳಿಂದ ಈ ಹಾಡನ್ನು ತೆಗೆದುಹಾಕಲಾಗಿದೆ.

ಸಾಮಾಜಿಕ ಕಾರ್ಯಕರ್ತ ವಿನೀತ್ ಜಿಂದಾಲ್ ದಿಲಲಿ ಪೊಲೀಸ್ ಮತ್ತು ಕೇಂದ್ರ ಚಲನಚಿತ್ರ ಪ್ರಮಾಣೀಕರಣ ಮಂಡಳಿಗೆ (ಸಿಬಿಎಫ್‌ಸಿ) ಈ ಬಗ್ಗೆ ಅಧಿಕೃತ ದೂರು ಸಲ್ಲಿಸಿದ್ದರು. ಹಾಡಿನ ಸಾಹಿತ್ಯ ಮತ್ತು ದೃಶ್ಯಗಳು ಲೈಂಗಿಕ ಪ್ರಚೋದಕವಾಗಿದ್ದು, ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 294, ಐಟಿ ಕಾಯ್ದೆ ಮತ್ತು ಪೋಕ್ಸೋ ಕಾಯ್ದೆಯನ್ನು ಉಲ್ಲಂಘಿಸಿವೆ ಎಂದು ದೂರಿನಲ್ಲಿ ಆರೋಪಿಸಲಾಗಿತ್ತು. ಈ ಕಾನೂನು ಪ್ರಕ್ರಿಯೆಯಲ್ಲಿ ನಿರ್ದೇಶಕ ಪ್ರೇಮ್, ಸಂಗೀತ ನಿರ್ದೇಶಕ ಅರ್ಜುನ್ ಜನ್ಯ, ಗೀತರಚನೆಕಾರ ರಕೀಬ್ ಆಲಂ ಮತ್ತು ಗಾಯಕಿ ಮಂಗ್ಲಿ ಅವರ ಹೆಸರನ್ನು ಉಲ್ಲೇಖಿಸಲಾಗಿದೆ. ಹಾಡನ್ನು ತೆಗೆದುಹಾಕುವ ಮುನ್ನ ಸಾರ್ವಜನಿಕ ವಲಯದಿಂದ ತೀವ್ರ ಟೀಕೆಗಳು ವ್ಯಕ್ತವಾಗಿದ್ದವು. ಗಾಯಕ ಅರ್ಮಾನ್ ಮಲಿಕ್ ಈ ಹಾಡಿನ ಸಾಹಿತ್ಯವನ್ನು ಕನಿಷ್ಠ ಮಟ್ಟದ ಬರವಣಿಗೆ ಎಂದು ಕರೆದಿದ್ದರೆ, ಕ್ರಿಕೆಟಿಗ ಹರ್ಭಜನ್ ಸಿಂಗ್, ಈ ಹಾಡಿನಲ್ಲಿ ನೋರಾ ಫತೇಹಿ ಮತ್ತು ಸಂಜಯ್ ದತ್ ಭಾಗವಹಿಸಿರುವುದನ್ನು ಬಹಿರಂಗವಾಗಿ ವಿರೋಧಿಸಿದ್ದರು. ಯೂಟ್ಯೂಬ್ ಸೇರಿದಂತೆ ಇತರೆ ವೇದಿಕೆಗಳಿಂದ ಹಾಡನ್ನು ತೆಗೆದುಹಾಕಲಾಗಿದ್ದರೂ, ಚಿತ್ರತಂಡದಿಂದ ಈವರೆಗೆ ಯಾವುದೇ ಅಧಿಕೃತ ಹೇಳಿಕೆ ಹೊರಬಂದಿಲ್ಲ.

## ಮಕ್ಕಳಿಗೆ ಪೌಷ್ಟಿಕ ಆಹಾರ, ಉತ್ತಮ ಶಿಕ್ಷಣ ಅತ್ಯವಶ್ಯ

**ಹೊಸದಿಲ್ಲಿ:** ದೇಶದ ಭಾವೀ ಭವಿಷ್ಯವಾಗಿರುವ ಪುಟಾಣಿಗಳಿಗೆ ಉತ್ತಮ ಪೌಷ್ಟಿಕಾಂಶಯುಕ್ತ ಆಹಾರ ಮತ್ತು ಉತ್ತಮ ಗುಣಮಟ್ಟದ ಶಿಕ್ಷಣ ನೀಡೋದು ಅತ್ಯವಶ್ಯ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ. ಮಕ್ಕಳಿಗೆ ಸುರಕ್ಷಿತ ಮತ್ತು ಭವ್ಯ ಭವಿಷ್ಯ ಕಲ್ಪಿಸುವುದು ಸರಕಾರಕ್ಕೆ ಸೀಮಿತ ಹೊಣೆಯಲ್ಲ, ಬದಲಾಗಿ ಸಮಸ್ತರ ಪಾಲುದಾರಿಕೆಯ ಹೊಣೆಗಾರಿಕೆಯಾಗಿದೆ ಎಂದವರು ಪ್ರತಿಪಾದಿಸಿದ್ದಾರೆ. ಶಿಕ್ಷಕರು, ಹೆತ್ತವರು, ಸಾಮಾಜಿಕ ಸಂಘಟನೆಗಳು, ಕಾರ್ಪೊರೇಟ್ ರಂಗ ಮತ್ತು ಸಮಾಜದ ಪ್ರತಿಯೊಂದು ಸಂಸ್ಥೆಗಳು ಒಗ್ಗಟ್ಟಾಗಿ ಶ್ರಮಿಸಿದಲ್ಲಿ, ಭಾವೀ ಪೀಳಿಗೆಯ ಭವ್ಯ ಭವಿಷ್ಯಕ್ಕೆ ಭದ್ರ ಬುನಾದಿ ಹಾಕಬಲ್ಲೆವು. ಪ್ರತಿಯೋರ್ವ ಮಗುವಿಗೂ ಉತ್ತಮ ಗುಣಮಟ್ಟದ ಶಿಕ್ಷಣ , ಪೌಷ್ಟಿಕ ಆಹಾರ, ಉತ್ತಮ ಆರೋಗ್ಯ ಹಾಗೂ ಸ್ವಚ್ಛ ಮತ್ತು ಸುರಕ್ಷಿತ ವಾತಾವರಣ ಕಲ್ಪಿಸುವುದು ನಮ್ಮೆಲ್ಲರ ಹೊಣೆ, ಇದನ್ನು ನಾವು ನಿಭಾಯಿಸಲೇಬೇಕು. ಈ ಮೂಲಭೂತ ಅಂಶಗಳಿಂದ ಮಕ್ಕಳ ಸಮಗ್ರ ಬೆಳವಣಿಗೆ ಸಾಧ್ಯ ಎಂದು ರಾಷ್ಟ್ರಪತಿ ಅಭಿಪ್ರಾಯಪಟ್ಟರು. ಅಕ್ಷಯ ಪಾತ್ರ ಪ್ರತಿಷ್ಠಾನದ 5 ಬಿಲಿಯನ್ ಅನ್ನದಾಸೋಹದ ಸಂಸ್ಮರಣಾರ್ಥ ನಡೆದ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ಮುರ್ಮು ಭಾಗಿಯಾಗಿದ್ದರು. ಉತ್ತಮ ಪೋಷಣೆ ಮತ್ತು ಸುಶಿಕ್ಷಿತ ಭಾರತದಿಂದ ಸಂಪನ್ನ ಭಾರತದತ್ತ ಎಂಬ ಕಾರ್ಯಕ್ರಮದ ಪ್ರಧಾನ ವಿಚಾರವು , 2047ರ ವೇಳೆಗೆ ವಿಕಸಿತ ಭಾರತದ ಸಾಕಾರಕ್ಕೆ ಉತ್ತಮ ಪೋಷಣೆಯುಕ್ತ ಸುಶಿಕ್ಷಿತ ಸಮಾಜದ ಅಗತ್ಯವನ್ನು ಎತ್ತಿಹಿಡಿದಿದೆ ಎಂದರು.



## ಗುಜರಾತ್ ಸಿಎಂಗೆ ಏನಾಸಂ ವರದಿ ಸಲ್ಲಿಸಿದ ಸಮಿತಿ

**ಗಾಂಧಿನಗರ:** ಏಕರೂಪ ನಾಗರಿಕ ಸಂಹಿತೆ(ಏನಾಸಂ)ಕರಡು ಮಸೂದೆ ರಚನೆಗೆ ಗುಜರಾತ್ ಸರಕಾರ ರಚಿಸಿದ್ದ ಪಂಚ ಸದಸ್ಯ ಸಮಿತಿ, ತನ್ನ ವಿವರವಾದ ಅಂತಿಮ ವರದಿಯನ್ನು ಮಂಗಳವಾರ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಅವರಿಗೆ ಸಲ್ಲಿಸಿದೆ. ರಾಜ್ಯ ಸರಕಾರ ಪ್ರಸಕ್ತ ಬಜೆಟ್ ಅಧಿವೇಶನದಲ್ಲೇ ಏನಾಸಂ ಕರಡು ಮಸೂದೆಯನ್ನು ವಿಧಾನಸಭೆಯಲ್ಲಿ ಮಂಡಿಸುವ ಸಾಧ್ಯತೆಗಳಿವೆ. ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ನ್ಯಾ.ರಂಜನಾ ಪ್ರಕಾಶ್ ದೇಸಾಯಿ ಅಧ್ಯಕ್ಷತೆಯ ಸಮಿತಿ ಮುಖ್ಯಮಂತ್ರಿಗಳಿಗೆ ತನ್ನ ವರದಿ ಸಲ್ಲಿಸುವ ಸಂದರ್ಭ ವರದಿಯ ಪ್ರಸ್ತುತಿ ಮಾಡಿತು. ಗುಜರಾತ್‌ನಲ್ಲಿ ಏನಾಸಂ ಜಾರಿಗೊಳಿಸುವ ನಿಟ್ಟಿನಲ್ಲಿ ವಿವಿಧ ಅಂಶಗಳನ್ನು ಪರಿಗಣಿಸಿ, ಕರಡು ಮಸೂದೆ ಸಿದ್ಧಪಡಿಸಲು, ಕಳೆದ ವರ್ಷ ಫೆಬ್ರವರಿಯಲ್ಲಿ ಸರ್ಕಾರ ಸಮಿತಿ ರಚಿಸಿತ್ತು. ವರದಿಯಲ್ಲಿ ರಾಜ್ಯದ ಎಲ್ಲಾ ಧರ್ಮ ಮತ್ತು ಸಮುದಾಯಗಳ ಜನರಿಗೆ ಮದುವೆ, ವಿವಾಹ ವಿಚ್ಛೇದನ, ಆಸ್ತಿಯ ಉತ್ತರಾಧಿಕಾರ, ದತ್ತು ಇತ್ಯಾದಿ ವಿಚಾರಗಳಿಗೆ ಸಮಾನ ಕಾನೂನು ಚೌಕಟ್ಟನ್ನು ಅನ್ವಯಿಸಬೇಕೆಂಬ ಸಲಹೆ ಮುಂದಿಡಲಾಗಿದೆ.

### ವಿಶ್ವಸಂಸ್ಥೆ ಸಾಮಾನ್ಯ ಸಭೆಯಲ್ಲಿ ಭಾರತದ ಖಾಯಂ ಪ್ರತಿನಿಧಿ ಹರೀಶ್ ಕಿಡಿ

## ಇಸ್ಲಾಮೊಫೋಬಿಯಾ ಹೆಸರಲ್ಲಿ ಪಾಕ್ ಕಟ್ಟುಕಥೆ

**ವಿಶ್ವಸಂಸ್ಥೆ:** ನೆರೆರಾಷ್ಟ್ರಗಳಲ್ಲಿ ಇಸ್ಲಾಮೊಫೋಬಿಯಾ ಹೆಸರಲ್ಲಿ ತಿರುಚಿದ ಕಾಲ್ಪನಿಕ ಕತೆ ಕಟ್ಟುವುದು ಪಾಕಿಸ್ತಾನದ ಹವ್ಯಾಸವೆಂದು ಆರೋಪಿಸಿರುವ ಭಾರತ, ಅಹ್ಮದೀಯರನ್ನು ಕ್ರೂರವಾಗಿ ದಮನಿಸುತ್ತಿರುವ ಅಥವಾ ರಂಜಾನ್ ಸಂದರ್ಭದಲ್ಲೇ ಅಫಘಾನಿಸ್ತಾನ ವಿರುದ್ಧ ವೈಮಾನಿಕ ಬಾಂಬ್ ದಾಳಿ ನಡೆಸುತ್ತಿರುವ ಪಾಕಿಸ್ತಾನ ತನ್ನ ಈ ಕ್ರೂರ ನಡೆಯನ್ನು ಯಾವ ರೀತಿ ಬಣ್ಣಿಸಲಿದೆ ಎಂದು ಪ್ರಶ್ನಿಸಿದೆ.

ಪಾಕಿಸ್ತಾನ ತನ್ನ ದೇಶದಲ್ಲಿನ ಅಹಮದೀಯರನ್ನು ಅತ್ಯಂತ ಕ್ರೂರವಾಗಿ ನಡೆಸಿಕೊಳ್ಳುತ್ತಿದೆ. ಇಸ್ಲಾಮೊಫೋಬಿಯಾ ಹೆಸರಲ್ಲಿ ಕಟ್ಟುಕಥೆ ಕಟ್ಟೋ ಪಾಕಿಸ್ತಾನ, ಅಹ್ಮದೀಯರ ವಿರುದ್ಧದ ತನ್ನ ಸ್ವಂತ ದೌರ್ಜನ್ಯವನ್ನು ಯಾವ ರೀತಿ ಸಮರ್ಥಿಸಿಕೊಳ್ಳುವುದೆಂದು ಯಾರಿಗೂ ಅಚ್ಚರಿಯಾಗದಿರದು ಎಂದು ವಿಶ್ವಸಂಸ್ಥೆಗೆ ಭಾರತದ ಖಾಯಂ ಪ್ರತಿನಿಧಿಯಾಗಿರುವ ರಾಯಭಾರಿ ಪರ್ವತನೇಣಿ ಹರೀಶ್ ಕುಟುಕಿದ್ದಾರೆ.



ಅಂತಾರಾಷ್ಟ್ರೀಯ ಇಸ್ಲಾಮೊಫೋಬಿಯಾವನ್ನು ಮಟ್ಟಹಾಕುವ ದಿನಾಚರಣೆ ಸಂಸ್ಮರಣಾರ್ಥ ವಿಶ್ವಸಂಸ್ಥೆ ಸಾಮಾನ್ಯ ಸಭೆಯಲ್ಲಿ ಹರೀಶ್ ಪಾಕಿಸ್ತಾನವನ್ನು ಕಟುವಾಗಿ ತರಾಟೆಗೆತ್ತಿಕೊಂಡರು.

ಇಸ್ಲಾಮಿಕ್ ಸಹಕಾರ ಸಂಘಟನೆಯನ್ನು ಭಾರತದ ವಿರುದ್ಧ ಆಯುಧವಾಗಿ ಬಳಸಿಕೊಳ್ಳಲು ವ್ಯವಸ್ಥಿತವಾಗಿ ಪ್ರಯತ್ನಿಸಿರುವ ನೆರೆರಾಷ್ಟ್ರ, ನನ್ನ ತಾಯ್ನಾಡು ಭಾರತದ ವಿರುದ್ಧ ನಿರಂತರವಾಗಿ ಸುಳ್ಳು ಮತ್ತು ಆಧಾರರಹಿತ ಆರೋಪಗಳನ್ನು ಮಾಡುತ್ತಿದೆ. ಮತೀಯ ಅಸ್ಮಿತೆಯನ್ನು ಆಯುಧವಾಗಿ ಬಳಸಿಕೊಳ್ಳುತ್ತಿರುವ ಅಪಾಯಕಾರಿ ಪ್ರವೃತ್ತಿ ಹೆಚ್ಚಾಗುತ್ತಿದೆ. ರಾಷ್ಟ್ರ-ಅರಾಷ್ಟ್ರಗಳು ಮತೀಯ ಅಸ್ಮಿತೆ ಮುಖೇನ ತಮ್ಮ ಸಂಕುಚಿತ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಪ್ರಯತ್ನಿಸುತ್ತಿರುವುದು ಕೂಡ ಗಂಡಾಂತರಕಾರಿ . ಇದನ್ನು ವಿಶ್ವಸಂಸ್ಥೆ ಗಂಭೀರ ಪರಿಗಣಿಸಬೇಕೆಂದು ಹರೀಶ್ ಆಗ್ರಹಿಸಿದ್ದಾರೆ.

### ಶಾಂತಿಯುತ ಸಹಬಾಳ್ವೆಗೆ ಕೊಳ್ಳಿ ಇಡುವ ಪಾಕ್ ತಂತ್ರ

ಜಗತ್ತಿನಲ್ಲೇ ಅತ್ಯಧಿಕ ಸಂಖ್ಯೆಯ ಮುಸಲ್ಮಾನರು ಅಂದರೆ 200 ಮಿಲಿಯನ್ ಮುಸಲ್ಮಾನರಿಗೆ ಭಾರತ ತಾಯ್ನೆಲೆಯಾಗಿದೆ. ಜಮ್ಮು ಕಾಶ್ಮೀರ ಸಹಿತ ಭಾರತಾದ್ಯಂತದ ಮುಸಲ್ಮಾನರು ತಮ್ಮ ಪರ ಧ್ವನಿಯೆತ್ತಲು ತಮ್ಮದೇ ಪ್ರತಿನಿಧಿಗಳನ್ನು ಚುನಾಯಿಸುತ್ತಾರೆ. ಇಂತಹ ಸನ್ನಿವೇಶದಲ್ಲಿ ಮುಸಲ್ಮಾನ ಸಮುದಾಯಗಳ ಸಹಿತ ಭಾರತದಲ್ಲಿ ಎಲ್ಲಾ ಸಮುದಾಯಗಳ ಜನರ ಶಾಂತಿಯುತ ಸಹಬಾಳ್ವೆ ಮತ್ತು ವೈವಿಧ್ಯಮಯ ಬಹುಸಂಸ್ಕೃತಿಯನ್ನು ಹಾಳುಗೆಡಹುವುದೇ ಪಾಕ್ ಪ್ರಚೋದಿತ ಫೋಬಿಯಾ ಹಿಂದಿನ ದುರುದ್ದೇಶವೆಂಬುದು ಸ್ಪಷ್ಟವೆಂದು ಹರೀಶ್ ಆರೋಪಿಸಿದ್ದಾರೆ. ಪಾಕ್‌ನ ತಿರುಚಿದ ಇಸ್ಲಾಮೊಫೋಬಿಯಾವು ಭಾರತದ ಮೂಲಭೂತ ಭಾವನೆಗಳಿಗೆ ತದ್ವಿರುದ್ಧವಾದುದು ಎಂದರು.

### 11 ಸ್ಥಾನಗಳ ಪೈಕಿ 9 ಎನ್‌ಡಿಎಗೆ | 26 ಅಭ್ಯರ್ಥಿಗಳ ಅವಿರೋಧ ಆಯ್ಕೆ

## ರಾಜ್ಯಸಭೆಯಲ್ಲಿ ಬಹುಮತದತ್ತ ಎನ್‌ಡಿಎ

**ಹೊಸದಿಲ್ಲಿ:** ರಾಜ್ಯಸಭೆ ಚುನಾವಣೆಯಲ್ಲಿ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ(ಎನ್‌ಡಿಎ) ಗಮನಾರ್ಹ ಜಯ ಸಾಧಿಸಿದ್ದು, ಮೇಲ್ಮನೆಯಲ್ಲಿ ಬಹುಮತದ ಗಡಿ ತಲುಪುವ ಮೂಲಕ ತನ್ನ ಬಲವನ್ನು ವಿಸ್ತರಿಸಿಕೊಂಡಿದೆ.

ಒಟ್ಟು 37 ಖಾಲಿ ಸ್ಥಾನಗಳ ಪೈಕಿ ಏಳು ರಾಜ್ಯಗಳ 26 ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಉಳಿದ 11 ಸ್ಥಾನಗಳಿಗೆ ಬಿಹಾರ, ಒಡಿಶಾ ಮತ್ತು ಹರ್ಯಾಣದಲ್ಲಿ ಸೋಮವಾರ ಮತದಾನ ನಡೆದಿದ್ದು, ಎನ್‌ಡಿಎಯ 9 ಅಭ್ಯರ್ಥಿಗಳು ಗೆದ್ದಿದ್ದಾರೆ. ಬಿಹಾರದ ಎಲ್ಲಾ ಐದು ಸ್ಥಾನಗಳನ್ನು ಎನ್‌ಡಿಎ ಬಾಚಿಕೊಂಡಿದೆ. ನಿತೀಶ್ ಕುಮಾರ್, ನಿತಿನ್ ನವೀನ್, ರಾಮನಾಥ್ ಠಾಕೂರ್, ಉಪೇಂದ್ರ ಕುಶ್ವಾಹ ಮತ್ತು ಶಿವೇಶ್ ಕುಮಾರ್ ಜಯಗಳಿಸಿದ್ದಾರೆ.

ಒಡಿಶಾದಲ್ಲಿ ಬಿಜೆಪಿ ನಾಲ್ಕು ಸ್ಥಾನಗಳ ಪೈಕಿ ಮೂರನ್ನು ಗೆದ್ದುಕೊಂಡಿದೆ. ಮನಮೋಹನ್ ಸಮಾಲ್, ಸುಜೀತ್ ಕುಮಾರ್ ಮತ್ತು ಬಿಜೆಪಿ ಬೆಂಬಲಿತ ಪಕ್ಷೇತರ ಅಭ್ಯರ್ಥಿ ದಿಲೀಪ್ ರೇ ಇಲ್ಲಿ ಜಯಭೇರಿ ಬಾರಿಸಿದ್ದಾರೆ. ಬಿಜೆಡಿಯ ಸಂತೃಪ್ ಮಿಶ್ರಾ ನಾಲ್ಕನೇ ಸ್ಥಾನ ಪಡೆದಿದ್ದಾರೆ. ಹರ್ಯಾಣದಲ್ಲಿ ಮತದಾನದ ಗೌಪ್ಯತೆ ಉಲ್ಲಂಘನೆಯ ಆರೋಪಗಳ ನಡುವೆಯೇ ಬಿಜೆಪಿಯ ಸಂಜಯ್ ಭಾಟಿಯಾ ಮತ್ತು ಕಾಂಗ್ರೆಸ್‌ನ ಕರಮ್‌ವೀರ್ ಸಿಂಗ್ ಬೌಧ್ ಆಯ್ಕೆಯಾಗಿದ್ದಾರೆ.

**ರಾಜ್ಯಸಭೆಯಲ್ಲಿ ಬಿಜೆಪಿ ಶಕ್ತಿ ವೃದ್ಧಿ:** 245 ಸದಸ್ಯ ಬಲದ ರಾಜ್ಯಸಭೆಯಲ್ಲಿ ಬಹುಮತಕ್ಕೆ 123 ಸ್ಥಾನಗಳ ಅಗತ್ಯವಿದ್ದು, ಎನ್‌ಡಿಎ ಪ್ರಸ್ತುತ 120ರಿಂದ 125 ಸ್ಥಾನಗಳನ್ನು ಹೊಂದಿದೆ. ವಿರೋಧ ಪಕ್ಷಗಳ ಇಂಡಿ ಕೂಟ, 85 ರಿಂದ 95 ಸ್ಥಾನಗಳನ್ನು ಹೊಂದಿದ್ದರೆ, ಉಳಿದ ಸ್ಥಾನಗಳು ಪ್ರಾದೇಶಿಕ ಪಕ್ಷಗಳು, ಪಕ್ಷೇತರರು ಮತ್ತು ನಾಮನಿರ್ದೇಶಿತ ಸದಸ್ಯರ ಬಳಿ ಇವೆ.

**ನಾಟಕೀಯ ಬೆಳವಣಿಗೆಗಳಿಂದ ಗಮನ ಸೆಳೆದ ಮೇಲ್ಮನೆ ಸಮರ:** ರಾಷ್ಟ್ರ ರಾಜಕಾರಣದಲ್ಲಿ ಮತ್ತೆ ಚರ್ಚೆಗೆ ಕಾರಣವಾದ ರಾಜ್ಯಸಭಾ ಚುನಾವಣೆಗಳು ಅಡ್ಡ ಮತದಾನ, ಮತ ಎಣಿಕೆ ವಿಳಂಬ ಮತ್ತು ರಾಜಕೀಯ ನಾಟಕಗಳಿಂದ ಗಮನ ಸೆಳೆದವು. ಈ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿ ಉತ್ತಮ ಸಾಧನೆ ಮಾಡಿದ್ದು, ಒಡಿಶಾ, ಹರ್ಯಾಣ ಮತ್ತು ಬಿಹಾರ ರಾಜ್ಯಗಳಲ್ಲಿ ಒಟ್ಟು 9 ಸ್ಥಾನಗಳನ್ನು ಗೆದ್ದಿದೆ.

ಹರ್ಯಾಣದಲ್ಲಿ ಮತ ಎಣಿಕೆ ವಿಳಂಬವಾಗಿದ್ದು, ರಾಜಕೀಯ ಆರೋಪ-ಪ್ರತ್ಯಾರೋಪಗಳಿಗೆ ವೇದಿಕೆಯಾಯಿತು. ಅಂತಿಮವಾಗಿ ಕಾಂಗ್ರೆಸ್ ಮತ್ತು ಬಿಜೆಪಿ ತಲಾ ಒಂದು ಸ್ಥಾನ ಗೆದ್ದವು.

ಒಡಿಶಾದಲ್ಲಿ ಅಡ್ಡಮತದಾನ ಭಾರೀ ಸಂಚಲನ ಸೃಷ್ಟಿಸಿತು. ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು ಮೂರು ಸ್ಥಾನಗಳನ್ನು ಗೆದ್ದರೆ, ಬಿಜು ಜನತಾ ದಳಕ್ಕೆ ಒಂದು ಸ್ಥಾನ ಮಾತ್ರ ಸಿಕ್ಕಿತು. ಅಡ್ಡ ಮತದಾನ ಕಾರಣ ಕಾಂಗ್ರೆಸ್ ಮೂವರು ಶಾಸಕರನ್ನು ಪಕ್ಷದಿಂದ ಹೊರಹಾಕಲಾಗಿದೆ.

ಬಿಹಾರದಲ್ಲಿ ಎನ್‌ಡಿಎ ಸಂಪೂರ್ಣ ಮೇಲುಗೈ ಸಾಧಿಸಿದೆ. ಸಿಎಂ ನಿತೀಶ್ ಕುಮಾರ್ ಸೇರಿದಂತೆ ಐದು ಅಭ್ಯರ್ಥಿಗಳು ಜಯ ಸಾಧಿಸಿದರು.